ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ವನವಾಣಿ

೧೬ನೇ ವಾರ್ಷಿಕೋತ್ಸವ

KCO Brindavana is certified 501(3)(c) charity organization and promotes Kannada and Karnataka culture in New Jersey, USA www.brindavana.org

ನವಚೈತನ

Best Compliments

from

ಬೃಂದಾವನ ಸಂಕೇತ ಗೀತೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೇ
ಮುನ್ನಡೆಯ ಕನ್ನಡದ ದಾರಿ ದೀವಿಗೆ ನೀಯೆ

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ
ಕಾಮಕ್ರೋಧವನಳಿಸಿ ಕಾಪಾಡು ತಾಯೇ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸಬೆಸುಗೆಯಲಿ ಬಿಗಿದು ಒಂದುಗೂಡಿಸೆ ತಾಯೇ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೇ

ಯಾವೆಣ್ಣೆಯಾದರೂ ಬೆಳಗುವುದೇ ಗುರಿಯೆಂಬ
ತತ್ತ್ವವನು ನೀನೆತ್ತಿ ತೋರು ಬಾ ತಾಯೇ
ಎದೆಯಾಂತರಾಳದಲಿ ಪ್ರತಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡ ಕನ್ನಡಾ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೇ

ರಚನೆ: ಜಿ.ವಿ.ಅಯ್ಯರ್

ಸಂಪಾದಕರು : ರಾಘವೇಂದ್ರ ಕುಂದಲಗುರ್ಕಿ, ನ್ಯೂ ಜೆರ್ಸಿ

ಮುಖ ಪುಟ ವಿನ್ಯಾಸ : ಮುರಳೀಧರ್ ರಾಥೋಡ್, ಬೆಂಗಳೂರು Ph: 94484 80479

ಪುಟ ವಿನ್ಯಾಸ & ಸಂಕಲನ : ಪ್ರಶಾಂತ್ ಮುರುಗೇಂದ್ರಪ್ಪ, ನ್ಯೂ ಜೆರ್ಸಿ

ಪ್ರಕಾಶಕರು : ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಮುದ್ರಣ : ಶ್ರೀವೆಂಕಟೇಶ್ವರ ಮುದ್ರಣಾಲಯ
ಕೋಟೆ, ದೇವನಹಳ್ಳಿ, ಬೆಂಗಳೂರು - 562 110
Ph: 93429 43378

ಬೃಂದಾವನ ಕನ್ನಡ ಸಂಘ
501(3)(c) ಪಡೆದ ಚಾರಿಟಿ ಸಂಸ್ಥೆ
Karnataka Cultural Organization (KCO) Brindavana
New Jersey, USA
www.Brindavana.org

© 2021. All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. 'ನವಚೇತನ' ದಲ್ಲಿ ಪ್ರಕಟವಾಗಿರುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ನವಚೇತನ ತಂಡ ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ.

ಚಿತ್ರ ಕೃಪೆ : ಅಂತರ್ಜಾಲ/ಲೇಖಕರು

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vanavaani2020@brindavana.org

ಪರಿವಿಡಿ

- ಸಂಪಾದಕೀಯ.....೦೬
- ಅಧ್ಯಕ್ಷರ ನುಡಿ.....೦೮
- ಶ್ರದ್ಧಾಂಜಲಿ
  - ಎಂ.ಜಿ.ಪ್ರಸಾದ್ ಚಿರ ನೆನಪುಗಳು.....೧೪
  - ದೊಡ್ಡ ಗುರುಗಳಿಗೊಂದು ಚಿಕ್ಕ ನಮನ.....೧೫
  - ನೀವಾವ ಜನ್ಮದ ಮೈತ್ರಿ ಸಂತೋಷ್.....೧೬
- ಹಿನ್ನೋಟ
  - ಸಾಂಸ್ಕೃತಿಕ ಸೌರಭ.....೨೦
  - ಸೌರಭ ಸಾಹಿತ್ಯ.....೨೭
  - ಸೌರಭದ ವನವಿಹಾರ.....೨೮
  - Sourabha's Yuva Brindavana.....೩೦
  - ಸೌರಭದ ಸಹಾಯಹಸ್ತ.....೩೧
  - ಕನ್ನಡ ಶಾಲೆ.....೩೬
  - 'ನಾವಿಕ'ದಲ್ಲಿ ಬೃಂದಾವನ.....೩೮
  - 'ಅಕ್ಕ'ದಲ್ಲಿ ಬೃಂದಾವನ.....೪೦
- ಲೇಖನಗಳು
  - ಬದುಕಿನ ಸಾರ್ಥಕತೆ.....೪೧
  - ನವಚೇತನ.....೪೨
  - ಆ ಒಂದು ಥರ.....೪೪
  - ನವಮಾಸ.....೪೬
  - ನವ ಚೇತನದ ಬಾಗಿಲುಗಳು.....೪೮
  - ನವ ಜೀವನ.....೫೦
  - ಕೋವಿಡ್ ಲಹರಿ.....೫೨
  - ಬದುಕಿನ ಆಸರೆ.....೫೪
  - ಕೋವಿಡ್ ಕಷ್ಟಗಳು.....೫೬
- ಬೃಂದಾವನದ ಸಾರಥಿಗಳು.....೫೮
- ಕವನಗಳು.....೬೪
- ಕೆನಡಿ ಕಂಡ ಕನಸು.....೬೬
- ನಾವು ಕನ್ನಡಿಗರು!.....೬೮
- ಕವನಗಳು.....೬೯
- ಅಜ್ಜಿ ಮನೆ.....೭೦
- ಕವನಗಳು.....೭೧
- ಗೆಳತಿಯೊಂದಿಗೆ ಬಾಲ್ಯ.....೭೨
- ಪ್ರಾಯೋಜಕರು.....೭೬

ಮಾನವನ ಸ್ವಾಭಾವಿಕವಾದ ಸಾತ್ವಿಕ ಪ್ರವೃತ್ತಿಯೇ ಧರ್ಮ. ಅದುದರಿಂದ ಮನಃಪೂರ್ವಕವಾಗಿ ಎಲ್ಲ ಜೀವಿಗಳಿಗೂ ಒಳ್ಳೆಯದನ್ನೇ ಬಯಸಬೇಕು.

—ಮಹಾಭಾರತ (ಶಾಂತಿ ಪರ್ವ)

ಸಂಪಾದಕೀಯ

ಬೃಂದಾವನ ಕನ್ನಡ ಮಿತ್ರರಿಗೆ ಹಾಗು ವನವಾಣಿಯ ಈ ಆವೃತ್ತಿ 'ನವ ಚೇತನ'ದ ಓದುಗರೊಂದಿಗೆ ಎರಡು ಮಾತುಗಳು.

ನಿಮ್ಮೆಲ್ಲರಿಗೂ ಬೃಂದಾವನ ಕನ್ನಡ ಕೂಟದ 'ಸೌರಭ' ತಂಡದ ಪರವಾಗಿ ಹೃದಯ ಪೂರ್ವಕ ನಮಸ್ಕಾರಗಳು.

ನ್ಯೂ ಜೆರ್ಸಿ ಬೃಂದಾವನ ಕನ್ನಡ ಕೂಟದ 16 ನೇಯ ವಾರ್ಷಿಕೋತ್ಸವದ 'ನವ ಚೇತನ' ಸಂಚಿಕೆಯನ್ನು ಸೌರಭದ ತಂಡದ ಪರವಾಗಿ ನಿಮ್ಮ ಮುಂದಿಡಲು ಅತ್ಯಂತ ಹರ್ಷವೆನಿಸುತ್ತದೆ. ನಿಮಗೆಲ್ಲಾ ಇದು ತುಂಬಾ ಇಷ್ಟವಾಗುವುದೆಂದು ನಮ್ಮೆಲ್ಲರ ಆಶಯ.

ಕಳೆದ ಈ ಎರಡು ವರ್ಷಗಳು ಬೃಂದಾವನದ ಇತಿಹಾಸದಲ್ಲೇ ಒಂದು ರೀತಿಯ ವಿಶೇಷ ಅನ್ನಬಹುದು. ಶತಮಾನದ ಕರೋನ ವೈರಾಣುವಿನ ಸಾಂಕ್ರಾಮಿಕ ರೋಗದಿಂದ ಇಡೀ ಪ್ರಪಂಚವೇ ಒಂದು ರೀತಿ ಸ್ತಬ್ಧವಾಗಿ, ಆಘಾತಕ್ಕೆ ಒಳಗಾದಾಗ ನಮ್ಮ ಸಹಾಯಕ್ಕೆ ಬಂದಿದ್ದು ತಂತ್ರಜ್ಞಾನ. ಕಳೆದ ಮೂರು ದಶಕಗಳಿಂದ ತಂತ್ರಜ್ಞಾನದ ಆವಿಷ್ಕಾರದಿಂದ ವಿಶ್ವದ ಮನುಕುಲದ ಸಂಬಂಧಗಳು ವಿಶೇಷ ರೀತಿಯಲ್ಲಿ ಜಾಗತೀಕರಣಗೊಂಡು, ಒಬ್ಬರಿಗೊಬ್ಬರು ಅವಲಂಬಿತರಾದಾಗ, ಕಣ್ಣಿಗೆ ಕಾಣದ ಈ ವೈರಾಣು ಎಲ್ಲ ಸಂಬಂಧಗಳಿಗೆ ಸವಾಲಾಗಿ ಪರಿಣಮಿಸಿತು. ನಮ್ಮ ಜನಜೀವನಗಳನ್ನು ಅಸ್ತವ್ಯಸ್ತವಾಗಿಸಿದರೂ ಅದನ್ನು ಧೈರ್ಯವಾಗಿ ಎದುರಿಸಲು ಜನರು ಹೊಸ ಆವಿಷ್ಕಾರದೊಂದಿಗೆ ಮುನ್ನುಗ್ಗತೊಡಗಿದರು. 'ಬದಲಾವಣೆ ಜಗದ ನಿಯಮ'. ನಮ್ಮ ಬೃಂದಾವನ ಕನ್ನಡ ಸಾಂಸ್ಕೃತಿಕ ಸಂಘವೂ ಆ ಬದಲಾವಣೆಯ ಮುಂಚೂಣಿಯಲ್ಲಿ ಇದ್ದು, ಬದಲಾದ ಪರಿಸ್ಥಿತಿಯನ್ನು, ಅವಕಾಶವನ್ನಾಗಿ ಪರಿವರ್ತಿಸಿ, ಇದು ಬರೀ ಸಾಂಸ್ಕೃತಿಕ ಸಂಘವಲ್ಲ, ಸಮಾಜದ ಹಿತದೃಷ್ಟಿಯನ್ನು ಬಯಸುವ ಕನ್ನಡಿಗರ ಒಡನಾಡಿ ಸಂಘ ಎಂದು ತಮ್ಮ ೩೫ ಕಾರ್ಯಕ್ರಮಗಳ ಮೂಲಕ ಸಾಬೀತು ಪಡಿಸಿದೆ. ಈಗ ಮೂರು ಕೋವಿಡ್ ವ್ಯಾಕ್ಸೀನ್ ಬಳಕೆಯಲ್ಲಿರುವುದರಿಂದ ಇನ್ನು ಕೆಲವೇ ತಿಂಗಳುಗಳಲ್ಲಿ ಪರಿಸ್ಥಿತಿಯು ತಹಬದಿಗೆ ಬರುವುದೆಂಬ ನಂಬಿಕೆ, ಇದು ನಮ್ಮೆಲ್ಲರ 'ನವ ಜೀವನ' ದ ಆಶಯ.

ಈ ವಿಶೇಷ 'ನವ ಚೇತನ' ವನವಾಣಿಯ ಮುಖಪುಟ ಸುಂದರವಾಗಿ ಉದಯಿಸಿದ ಸೂರ್ಯನ ಬೆಳಕಿನ ಆಹ್ಲಾದತೆಯನ್ನು ಅನುಭವಿಸುವ ನದಿತೀರದ ದೃಶ್ಯ. ಸಕಲ ಜೀವರಾಶಿಗಳಿಗೆ ಚೇತನಕಾರಿಯಾದ ರವಿಯು, ನೀಲಿ ಬಾನಿನಲ್ಲಿ ಪ್ರಕಾಶಿಸಿತ್ತಿರುವ ಮನಮೋಹಕ ಚಿತ್ರ ನಿಮ್ಮೆಲ್ಲರಿಗೂ ಇಷ್ಟವಾಗುತ್ತದೆ ಎಂದು ನಂಬಿದ್ದೇವೆ.

ಸೌರಭ ತಂಡದ ಹಿನ್ನೋಟದಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದ ಹಲವಾರು ಬೃಂದಾವನ ಸಾಂಸ್ಕೃತಿಕ ಚಟುವಟಿಕೆಗಳು, ಸಾಹಿತ್ಯ, ಬೃಂದಾವನ ಶಾಲೆ, ಬೃಂದಾವನ ವಾಣಿ, ಬೃಂದಾವನ ಚಾರಿಟಿ ಹಾಗು ಅಕ್ಕ ಮತ್ತು ನಾವಿಕೋತ್ಸವದಲ್ಲಿ ಬೃಂದಾವನದ ಕೊಡುಗೆ, ಸೌರಭ ತಂಡದ ಕಾರ್ಯಕ್ರಮಗಳ ಒಂದು ಪಕ್ಷಿನೋಟವನ್ನು ಕೊಡುತ್ತದೆ.

ನವಚೇತನ ಸಂಚಿಕೆಯಲ್ಲಿ ಹಲವಾರು ಕಥೆ ಕವನಗಳು ವರ್ಣಮಯವಾಗಿ ಮೂಡಿಬಂದಿದೆ. ಜೀವನದ ವಿವಿಧ ಸ್ವಾದಗಳನ್ನು, ಭಾವಗಳನ್ನು ಗ್ರಹಿಸುವ ಈ ಲೇಖನಗಳನ್ನು ಓದುಗರು ಮೆಚ್ಚುವರು ಎಂದು ನಮ್ಮ ಆಶಯ. 'ಆ ಒಂದು ಥರ' ದಾಂಪತ್ಯ ಜೀವನದ ಮಾರ್ಮಿಕ ರಸಗಳನ್ನು ತಿಳಿಯಾಗಿ ತೋರಿಸಿದರೆ, 'ನವ ಮಾಸ', 'ಬದುಕಿನ ಆಸರೆ' ಮುಂತಾದ ಲೇಖನಗಳು ಕೋವಿಡ್ ಪರಿಸ್ಥಿತಿಯಿಂದ ತಮ್ಮ ಹತ್ತಿರದವರೊಂದಿಗೆ ಸಮಯ ಕಳೆಯುವ ಪ್ರಾಮುಖ್ಯತೆ ಎತ್ತಿತೋರುತ್ತವೆ. 'ನವಚೇತನ' ವಿಷಯವಸ್ತುವಾಗಿಟ್ಟುಕೊಂಡು, 'ನವಚೇತನ', 'ನವಚೇತನದ ಬಾಗಿಲುಗಳು'. 'ನವಜೀವನ', 'ಕೋವಿಡ್ ಲಹರಿ', ಮುಂತಾದ ಬರಹಗಳು ನಮ್ಮ ಈ ಕೋವಿಡೋತ್ತರ ಜೀವನದ ಸ್ಥಿತಿ ಗತಿಗಳನ್ನು ಹಲವು ಅನುಭವಗಳ ದೃಷ್ಟಿಕೋನದಿಂದ ಚಿತ್ರಿಸಿವೆ. 'ಗೆಳತಿಯೊಂದಿಗೆ ಬಾಲ್ಯ', 'ಅಜ್ಜಿ ಮನೆ' ಇತ್ಯಾದಿ ಲೇಖಕರ ಬಾಲ್ಯದ ನೆನಪುಗಳನ್ನು ಬಿಡಿಸಿವೆ. ಏತನ್ಮಧ್ಯೆ, ಬೃಂದಾವನದ ಮಾಜಿ ಆಡಳಿತ ವರ್ಗದ ಹಲವರು, ಈ ಸಂಸ್ಥೆ ನಡೆದು ಬಂದ ದಾರಿಯನ್ನು, ಪ್ರಶ್ನೋತ್ತರದ ರೂಪದಲ್ಲಿ ಸಿಂಹಾವಲೋಕಿಸಿ ಕೊಂಡಿದ್ದಾರೆ. ಅಲ್ಲದೇ, ಬಗೆಬಗೆಯ ಪದ್ಯಗಳು, ವ್ಯಂಗ್ಯ ಚಿತ್ರಗಳು ಓದುಗರ ಮನತಣಿಸುವುದೆಂದು ನಮ್ಮ ನಂಬಿಕೆ.

ಸಂಪಾದಕೀಯ

ಪ್ರತಿಯೊಂದು ಪುಟದಲ್ಲೂ ನಿಮ್ಮ ವಿಶೇಷ ಅನುಭವಕ್ಕಾಗಿ ಸುಂದರವಾದ ಸಮುದ್ರದ ತೀರದಲ್ಲಿ, ಮುತ್ತಿನ 'ಚೇತನ ವಾಣಿ' ನಿಮ್ಮ ಮನಸ್ಸಿಗೆ ಮುದ ಕೊಡುವುದೆಂಬ ನಂಬಿಕೆ. ಈ ವಿಶೇಷ ಅನುಭವದ ನುಡಿ ಮುತ್ತುಗಳು ಓದುಗರ ಅನುಭವವನ್ನು ಹೆಚ್ಚಿಸುವುದೆಂಬ ಆಶಯ.

ನಿಮ್ಮ ಈ 'ನವ ಜೀವನ' ವನವಾಣಿ ಇಷ್ಟು ಸುಂದರವಾಗಿ ಮೂಡಿಬರಲು ಸಂಪಾದಕ ವರ್ಗದವರೆಲ್ಲರೂ ಹಗಲಿರುಳು ಶ್ರಮಿಸಿದ್ದಾರೆ, ನಮ್ಮ ತಂಡದೊಡನೆ ಸೌರಭ ತಂಡದ ಹಲವಾರು ನಿರ್ದೇಶಕರು ಬಹಳವಾಗಿ ಸಹಕರಿಸಿದ್ದಾರೆ. ಹಲವಾರು ಲೇಖನಗಳನ್ನು ವಿಮರ್ಶೆ ಮಾಡಿದ ಭಾಸ್ಕರ್ ತೈಲಗೇರಿ ಅವರಿಗೂ ಧನ್ಯವಾದಗಳು.

ಈ ಸಂಚಿಕೆಯನ್ನು ಸುಂದರವಾಗಿ ರೂಪಿಸಿದ ಪ್ರಶಾಂತ್ ಮುರುಗೇಂದ್ರಪ್ಪ, ಮುಖ ಪುಟವನ್ನು ಚಿತ್ರಿಸಿದ ಮುರಳೀಧರ್ ರಾಥೋಡ್ ಅವರಿಗೂ, ಮುದ್ರಿಸಿಕೊಟ್ಟ ಶ್ರೀ ವೆಂಕಟೇಶ್ವರ ಮುದ್ರಣಾಲಯದವರಿಗೂ ನಾವು ಆಭಾರಿಗಳು

ಈ ಸಂಚಿಕೆಯನ್ನು ಹೊರತರಲು ಅವಕಾಶ ಮಾಡಿಕೊಟ್ಟ ಬೃಂದಾವನ ಸೌರಭ ತಂಡದ ಪದಾಧಿಕಾರಿಗಳಿಗೆ ಹಾಗು ವಿಶ್ವಸ್ಥ ಮಂಡಳಿಗೆ ಸಂಪಾದಕ ಮಂಡಳಿಯಿಂದ ಹೃದ್ಪೂರ್ವಕ ನಮನಗಳು. ಈ ಸಂಚಿಕೆಯಲ್ಲಿ ಶುಭವನ್ನು ಕೋರಿದ ಎಲ್ಲ ಜಾಹಿರಾತುದಾರರಿಗೆ, ಪ್ರಾಯೋಜಕಾರರಿಗೆ ನಮ್ಮ ಹೃದಯಪೂರ್ವಕ ವಂದನೆಗಳು

ಈ ವಿಶೇಷ ವನವಾಣಿಯ 'ನವ ಚೇತನದ' ಬೆಳಕು ನಿಮ್ಮೆಲ್ಲರ ಜೀವನವನ್ನು ಬೆಳಗಲಿ, ನಿಮ್ಮ ಪ್ರೀತಿ ವಿಶ್ವಾಸಗಳು ಇದೇ ರೀತಿಯಲ್ಲಿ ಇರಲಿ , Stay safe & Stay healthy.

ಸಂಪಾದಕರ ತಂಡದ ಪರವಾಗಿ

ರಾಘವೇಂದ್ರ ಕುಂದಲಗುರ್ಕಿ

ಅನಿಲ್ ಭಾರಧ್ವಾಜ್

ಸಂಪಾದಕ ವರ್ಗ

ರಾಘವೇಂದ್ರ ಕುಂದಲಗುರ್ಕಿ

ಅನಿಲ್ ಭಾರಧ್ವಾಜ್

ಶ್ರೀವಿದ್ಯಾ ಪ್ರಶಾಂತ್

ಪ್ರಶಾಂತ್ ಮುರುಗೇಂದ್ರಪ್ಪ

ನರಸಿಂಹ ಮೂರ್ತಿ

ಅಧ್ಯಕ್ಷರ ನುಡಿ

ಸೌರಭ ತಂಡವನ್ನು ಎರಡು ವರ್ಷಗಳ ಕಾಲ ಬೆಳೆಸಿ, ಪೋಷಿಸಿ, ಆರೈಕೆ ಮಾಡಿದ ಎಲ್ಲ ಬಂಧು ಬಾಂಧವರಿಗೆ ಭಾವಪೂರ್ಣ ನಮನಗಳು.

***

ಎರಡು ವರ್ಷಗಳ ಹಿಂದೆ ಬೃಂದಾವನ ಪದಾಧಿಕಾರಿಗಳ ನಾಯಕನಾಗಿ ನನ್ನನ್ನು ಆಯ್ಕೆ ಮಾಡಿದಾಗ ನನ್ನ ಸಂತೋಷ ಮುಗಿಲು ಮುಟ್ಟಿತ್ತು. ನಮ್ಮ ಕನ್ನಡ ಸಮುದಾಯದ ಸೇವೆಯನ್ನು ಸಲ್ಲಿಸುವ ಈ ಅವಕಾಶವನ್ನು ಒಂದು ರೀತಿಯಲ್ಲಿ ದೈವದತ್ತ ಕೊಡುಗೆ ಎಂದು ಹೇಳಬಹುದು. ನಮ್ಮ ಮುಂದಿರುವ ಎರಡು ವರ್ಷಗಳಲ್ಲಿ ಅನೇಕ ಸುಂದರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋದರ ಮೂಲಕ, ಹೊಸ ಹೊಸ ಯೋಜನೆಗಳನ್ನು ಹುಟ್ಟುಹಾಕುವುದರ ಮೂಲಕ, ನಮ್ಮ ಹದಿನಾಲ್ಕು ವರ್ಷದ ಬೃಂದಾವನ ಸಂಸ್ಥೆಯನ್ನು ಬೆಳೆಸಬೇಕಾದ ಸುವರ್ಣ ಅವಕಾಶ ನಮ್ಮದಾಗಿತ್ತು. ನಾವು, ಬೃಂದಾವನ ಸೌರಭ ತಂಡದ ಪದಾಧಿಕಾರಿಗಳೆಲ್ಲರೂ, ನಮಗೆ ಸಿಕ್ಕ ಈ ಒಂದು ವಿಶೇಷ ಅವಕಾಶವನ್ನು ಬಳಸಿಕೊಂಡು ಹೊಸದೊಂದು ಎತ್ತರಕ್ಕೆ ಈ ಸಂಸ್ಥೆಯನ್ನು ಕೊಂಡೊಯ್ದಿದ್ದೇವೆ, ಎನ್ನುವುದು ನಮ್ಮ ನಂಬಿಕೆ. ಈ ನಂಬಿಕೆ ಸಾಕಾರವಾಗುವಲ್ಲಿ ನಮ್ಮ ಕೈ ಹಿಡಿದು ನಡೆಸಿದ ಎಲ್ಲ ಹಿರಿಯರಿಗೂ, ನಮ್ಮ ಯಶಸ್ಸಿಗೆ ಕಾರಣೀಭೂತರಾದ ಕಾರ್ಯಕರ್ತರಿಗೂ ನಾವು ಮನಃಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದ್ದೇವೆ.

ನಾನು ಸೌರಭ ತಂಡದ ಚುಕ್ಕಾಣಿ ಹಿಡಿದ ಮರುವಾರವೇ, ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲ ಒಟ್ಟಿಗೆ ಸೇರಿ ಹಲವಾರು ಕನಸುಗಳನ್ನು ಪೋಣಿಸಿಕೊಂಡೆವು, ಮಹತ್ತರ ಗುರಿಗಳನ್ನು, ಭವ್ಯವಾದ ಯೋಜನೆಗಳನ್ನು ಹಮ್ಮಿಕೊಂಡೆವು. ಈ ಎರಡು ವರ್ಷಗಳ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಯಶಸ್ಸಿನ ಕಾರ್ಯಕ್ರಮಗಳನ್ನು ರೂಪಿಸುವ, ಸಂಸ್ಥೆಯ ಆರ್ಥಿಕ ಬಲವನ್ನು ಸದೃಢಗೊಳಿಸುವ, ಕನ್ನಡವನ್ನು ಎಲ್ಲೆ ಮೀರಿ ವಿಸ್ತಾರವಾಗಿ ಬೆಳೆಸುವ ನಿಟ್ಟಿನಲ್ಲಿ ನಾವು ದೊಡ್ಡದೊಂದು ಪಟ್ಟಿಯನ್ನೇ ಮಾಡಿದೆವು. ಈ ಎರಡು ವರ್ಷಗಳಲ್ಲಿ, ಅದರಲ್ಲೂ ಕೋವಿಡ್ ಮಹಾಮಾರಿಯಿಂದ ಆವೃತವಾದ ನಮ್ಮ ಸೇವೆಯ ಎರಡನೆಯ ವರ್ಷದಲ್ಲೂ ಸಹ, ನಾವೆಂದೂ ಎದೆಗುಂದಲಿಲ್ಲ, ಸೋಲಲಿಲ್ಲ. ನಮ್ಮ ಜಂಘಾಬಲದ ಅವಿಭಾಜ್ಯ ಅಂಗವಾಗಿ, ನಮ್ಮ ಮನಃಶ್ಶಕ್ತಿಯ ಹಿಂದೆ ಅನೇಕ ಹಿತೈಷಿಗಳ ಹಿತನುಡಿಗಳಿವೆ, ಹಿರಿಯರ ಅನುಭವದ ಸಹಯೋಗವಿದೆ, ಜೊತೆಗೆ ಅಮೇರಿಕದ ಉದ್ದಗಲಕ್ಕೂ ಹರಡಿದ ಕನ್ನಡ ಸಂಘಗಳ ಬಂಧು - ಬಾಂಧವರಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸೌರಭ ತಂಡದ ಪದಾಧಿಕಾರಿಗಳು, ನಮ್ಮ ವಿಶ್ವಸ್ಥ ಮಂಡಳಿಯ ಸದಸ್ಯರು ಹಾಗೂ ಅಸಂಖ್ಯಾತ ಕಾರ್ಯಕರ್ತರಿದ್ದಾರೆ. ಇವರೆಲ್ಲರ ವಿಶ್ವಾಸ ಮತ್ತು ಹಾರೈಕೆಯ ಒಲವೇ ನಮ್ಮ ಬಲ. ಅದೇ ಇಂದಿಗೂ ನಮ್ಮನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಶಕ್ತಿ ಎನ್ನಬಹುದು.

ನಮ್ಮ ಈ ಎರಡು ವರ್ಷಗಳ ಅವಧಿಯಲ್ಲಿ ಒಟ್ಟು 44 ಕಾರ್ಯಕ್ರಮಗಳನ್ನು ನಡೆಸಿಕೊಟ್ಟೆವು: 2019ರಲ್ಲಿ ಒಂಭತ್ತು (9), ಮತ್ತು 2020ರಲ್ಲಿ 35. ಈ ಸಮಯದಲ್ಲಿ ವರ್ಷದ ಮೊದಲನೇ ಕಾರ್ಯಕ್ರಮವಾದ ಸಂಕ್ರಾಂತಿಯನ್ನು ಅದ್ದೂರಿಯಾಗಿ ಆಚರಿಸುವ ಒಂದು ಹೊಸ ಸಂಪ್ರದಾಯವನ್ನು ಆರಂಭಿಸಿದೆವು. ಹಾಗೆಯೇ, ಕನ್ನಡ ರಾಜ್ಯೋತ್ಸವವನ್ನು ನವೆಂಬರ್1 ರಂದೇ ಆಚರಿಸಬೇಕು ಎನ್ನುವ ಸಂಕಲ್ಪವನ್ನು ಮಾಡಿಕೊಂಡು, ಅದಕ್ಕೆ ತಕ್ಕಂತೆ ಕನ್ನಡ ಧ್ವಜಾರೋಹಣ ಮತ್ತು ಭುವನೇಶ್ವರಿ ಪೂಜೆ ಕಾರ್ಯಕ್ರಮಗಳನ್ನು ಆರಂಭಿಸಿದೆವು. ಈ ಎರಡು ವರ್ಷಗಳಲ್ಲಿ ಕನ್ನಡ ಶಾಲೆಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿ, ಕನ್ನಡ ಶಾಲೆಗಳಲ್ಲಿ ಹೆಚ್ಚು ಹೆಚ್ಚು ಮಕ್ಕಳು ನೋಂದಾವಣೆ ಮಾಡಿ ಕಲಿಯುವಂತೆ ಮಾಡಿದೆವು. ಚಾರಿಟಿ ಕಾರ್ಯಕ್ರಮಗಳು ಮತ್ತು ದೇಣಿಗೆಯ ವಿಚಾರದಲ್ಲಿ ಆಹಾರ ಮತ್ತು ಅಗತ್ಯವಸ್ತುಗಳ ಪೂರೈಕೆಯ ಜೊತೆಗೆ, ಹಿಂದೆಂದಿಗಿಂತಲೂ ಹೆಚ್ಚು ಹಣವನ್ನು ಸಂಗ್ರಹಿಸಿ ಉತ್ತರ ಅಮೇರಿಕ ಮತ್ತು ಭಾರತದ ವಿವಿಧ ಸಂಸ್ಥೆಗಳಿಗೆ ಸುಮಾರು 25,000 ಡಾಲರ್‌ಗೂ ಹೆಚ್ಚು ದೇಣಿಗೆಯನ್ನು ನೀಡಿದೆವು. ಇಷ್ಟೇ ಅಲ್ಲದೇ, ನಮ್ಮ ಬೃಂದಾವನದ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ, ಮಕ್ಕಳಿಗೆ ಮತ್ತು ಕರ್ನಾಟಕದ ಕಲಾವಿದರಿಗೆಲ್ಲರಿಗೂ ಸಮನಾದ ಅವಕಾಶವನ್ನು ನೀಡಿದೆವು. ಕೋವಿಡ್ ಇರಲಿ, ಇಲ್ಲದಿರಲಿ ನಾವು ನಮ್ಮ ಕನ್ನಡ ಸಮುದಾಯದ ಬಂಧುಗಳಿಗೆಲ್ಲರಿಗೂ ಅಗತ್ಯವಾದ ವೇದಿಕೆಯನ್ನು ಕಲ್ಪಿಸಿಕೊಟ್ಟೆವು. ಕಿರಿಯರು ಮತ್ತು ಹಿರಿಯರನ್ನೊಳಗೊಂಡು ನಾವು ನಡೆಸಿಕೊಟ್ಟ ಅನೇಕ ಕಾರ್ಯಕ್ರಮಗಳು, ಯುವ ಬೃಂದಾವನದ ಚಟುವಟಿಕೆಗಳು ಮತ್ತು ನಾವು ಪ್ರಕಟಿಸಿದ 12 ಸುಂದರ ಬೃಂದಾವನ ದೈಮಾಸಿಕ ಪತ್ರಿಕೆಗಳು ಎಲ್ಲರ ಮನೆ ಮನಗಳನ್ನು ತಲುಪಿದೆ. ಈ ನಿಟ್ಟಿನಲ್ಲಿ, ಕಳೆದೆರಡು ವರ್ಷಗಳಲ್ಲಿ ನೀವೆಲ್ಲರೂ ನಮ್ಮ ಮೇಲೆ ಇಟ್ಟ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಂಡಿದ್ದೇವೆ ಮತ್ತು ಬೆಳೆಸಿಕೊಂಡಿದ್ದೇವೆ ಎನ್ನುವುದು ನನ್ನ ವಿಶ್ವಾಸ. ಈ ಒಂದು ಚಿಕ್ಕ ಪ್ರಯಾಣದಲ್ಲಿ ನಮ್ಮ ಜೊತೆಗೆ ಕೈ ಜೋಡಿಸಿದ ಎಲ್ಲರಿಗೂ ಮತ್ತೊಮ್ಮೆ ನಮನ.

***

ಒಂದು ಸಂಸ್ಥೆ ಉಳಿದು ಬೆಳೆಯಬೇಕು ಎನ್ನುವಲ್ಲಿ ಅದರ ಆರ್ಥಿಕ ಶಕ್ತಿ ಬಹಳ ಮುಖ್ಯವಾದದ್ದು. ಈ ನಿಟ್ಟಿನಲ್ಲಿ ನಾವು ಮಾಡಬೇಕಾದ ಕಾರ್ಯಕ್ರಮಗಳು ಅನೇಕವಿದ್ದವು. ನಮ್ಮ ಕನ್ನಡ ಸಂಘಗಳ ದಶಕಗಟ್ಟಲೇ ಪ್ರಮಾಣೀಕೃತ ಯುಗಾದಿ, ಗಣೇಶೋತ್ಸವ, ವನವಿಹಾರ, ದೀಪಾವಳಿ ಕಾರ್ಯಕ್ರಮಗಳ ಆಳ, ವ್ಯಾಪ್ತಿ ಮತ್ತು ಅವುಗಳ ವಿಸ್ತಾರ ಯಾವುದಕ್ಕೂ ಸಾಲದು ಎನ್ನಿಸಿದ್ದು ನಿಜ. ನಮ್ಮ ಸಂಸ್ಥೆಯ ಕಾರ್ಯಕ್ರಮಗಳ ಪ್ರಾಯೋಜಕತ್ವವನ್ನು ವಿಸ್ತರಣೆ ಮಾಡಬೇಕು, ಹಾಗೂ ನಮ್ಮ ಸಂಸ್ಥೆಯ ಕಾರ್ಯಕ್ರಮಗಳ ಕಾರ್ಯವ್ಯಾಪ್ತಿಯನ್ನು ಅಮೇರಿಕದ ಉದ್ದಗಲಕ್ಕೂ ಹರಡಬೇಕು ಎನ್ನುವ ನಮ್ಮ ಇಚ್ಛೆಯನ್ನು ನಿಜ ಮಾಡಿದ್ದು ನಾವು ನಡೆಸಿಕೊಟ್ಟ ಭಾರತದ ವೀರರ ಯೋಧರ ಸಹಾಯಾರ್ಥ ಕಾರ್ಯಕ್ರಮ. ಖ್ಯಾತ ಗಾಯಕ ವಿಜಯ್ ಪ್ರಕಾಶ್ ನೇತೃತ್ವದಲ್ಲಿ ಕರ್ನಾಟಕದ ಕಲಾವಿದರ 15 ಜನರ ತಂಡವನ್ನು ಉತ್ತರ ಅಮೇರಿಕಕ್ಕೆ ಬರಮಾಡಿಕೊಂಡೆವು. ನಮ್ಮ ಯುಗಾದಿ ಕಾರ್ಯಕ್ರಮವನ್ನು ಹೊರತುಪಡಿಸಿ, ಈಶಾನ್ಯ ಅಮೇರಿಕದ ಇತರ ಏಳು ಕನ್ನಡ ಕೂಟಗಳು ಮತ್ತು ಕನ್ನಡಿಗರ ಸಂಘ ಸಂಸ್ಥೆಗಳ ಸಹಾಯಾರ್ಥದಲ್ಲಿ ವಿಜೃಂಭಣೆಯಿಂದ ಕಾರ್ಯಕ್ರಮವನ್ನು ನಡೆಸಿಕೊಟ್ಟೆವು. ಈ ಕಾರ್ಯಕ್ರಮದ ಹಿಂದೆ ಹಗಲಿರುಳು ಶ್ರಮಿಸಿದ ಹಲವಾರು ಕಾರ್ಯಕರ್ತರನ್ನು ಈ ಸಂದರ್ಭದಲ್ಲಿ ನೆನೆಯಲೇ ಬೇಕು. ಇವರೆಲ್ಲರ ತೋಳ್ಬಲದ ಸಹಾಯದಿಂದ ನಾವು ಭಾರತದ ವೀರ ಸೈನಿಕರಿಗೆ ನಮ್ಮೆಲ್ಲರ ಒಗ್ಗಟಿನ ದೇಣಿಗೆಯನ್ನು ನೀಡಿದೆವು.

ಇದೇ ರೀತಿ ನಮ್ಮ ಸೇವೆಯ ಎರಡನೆಯ ವರ್ಷದಲ್ಲಿ ನಾವು ದೊಡ್ಡ ಮಟ್ಟದ, ಕರ್ನಾಟಕದ ಖ್ಯಾತ ಕಲಾವಿದರನ್ನೊಳಗೊಂಡ, ಕಾರ್ಯಕ್ರಮವನ್ನು ಯೋಜಿಸಿದ್ದೆವು. ಆದರೆ, ಎಲ್ಲೆಡೆ ಕೋವಿಡ್ ಮಹಾಮಾರಿಯ ದೆಸೆಯಿಂದ ಲಾಕ್‌ಡೌನ್ ಆದ ಸಂದರ್ಭದಲ್ಲಿ ಎದೆಗುಂದದೆ, ಕರ್ನಾಟಕದ ಕಲಾವಿದರ

ಕಠಿಣ ಪರಿಶ್ರಮದಿಂದ ಮಾಡಿದ ಕೆಲಸ ಯಾವತ್ತೂ ನಿಮಗೆ ಆಯಾಸ ನೀಡುವುದಿಲ್ಲ. ಬದಲಾಗಿ ಅದು ನಿಮಗೆ ಸಂತೃಪ್ತಿಯನ್ನು ತಂದುಕೊಡುತ್ತದೆ.

—ನರೇಂದ್ರ ಮೋದಿ

ಅಧ್ಯಕ್ಷರ ನುಡಿ

ಸಹಾಯಾರ್ಥ 12 ಕಾರ್ಯಕ್ರಮಗಳ ಒಂದು ಕಾರ್ಯಕ್ರಮವನ್ನು ರೂಪಿಸಿ, ಅಮೇರಿಕದ ಉದ್ದಗಲಕ್ಕೂ ಇರುವ ಎಲ್ಲ ಕನ್ನಡ ಕೂಟಗಳ ಸಹ ಪ್ರಾಯೋಜಕತ್ವದಲ್ಲಿ ನಡೆಸಿಕೊಟ್ಟೆವು. ಇದರಿಂದ ನಾವು, ಕಷ್ಟದ ಕಾಲದಲ್ಲಿ ಕಲಾವಿದರುಗಳಿಗೆ ಸಹಾಯ ಮಾಡುವುದರ ಜೊತೆಗೆ ಸಾಕಷ್ಟು ಉತ್ತಮ ಕಾರ್ಯಕ್ರಮಗಳನ್ನು ಸುಮಾರು ಆರು ವಾರಗಳ ಕಾಲ ನಡೆಸಿಕೊಟ್ಟೆವು. ಇವೆಲ್ಲದರ ಜೊತೆಗೆ, 2020ರ ಮಾರ್ಚ್ ತಿಂಗಳಲ್ಲಿ ಎಲ್ಲ ಕಡೆಗೆ ಲಾಕ್‌ಡೌನ್ ಆದಂತ ಸಂದರ್ಭದಲ್ಲಿ ನಾವು ವಾರದ ಆರೋಗ್ಯ, ಮಾಹಿತಿ, ಮನರಂಜನೆ ಕಾರ್ಯಕ್ರಮಗಳನ್ನು ಆರಂಭಿಸಿದೆವು. ಈ ರೀತಿಯ ಕಾರ್ಯಕ್ರಮ ಸರಣಿಯನ್ನು ರೂಪಿಸಿ ನಡೆಸಿಕೊಟ್ಟವರಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಈ ವಾರದ ಕಾರ್ಯಕ್ರಮಗಳ ಮುಖೇನ ಸ್ಥಳೀಯ ಕಲಾವಿದರು, ಮಕ್ಕಳು ಸಹಿತವಾಗಿ ಅನೇಕ ಕಲಾವಿದರು ನಮ್ಮ ವೇದಿಕೆಯನ್ನು ಹಂಚಿಕೊಂಡು ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು.

2019ರ ಬೇಸಿಗೆಯಲ್ಲಿ ಎರಡು ಅವಿಸ್ಮರಣೀಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟೆವು: ಜುಲೈ ತಿಂಗಳಲ್ಲಿ ನಡೆದ ಬೃಂದಾವನ ವನವಿಹಾರ (ಪಿಕ್‌ನಿಕ್) ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಸಿಕೊಟ್ಟ ಗಣೇಶ ಹಬ್ಬ. ಬೃಂದಾವನ ಪಿಕ್‌ನಿಕ್‌ನಲ್ಲಿ ಈ ವರ್ಷ ಮೊಟ್ಟ ಮೊದಲನೇ ಬಾರಿಗೆ ನಮ್ಮ ಯುವ ಬೃಂದಾವನ ತಂಡದವರು ಫ್ಲ್ಯಾಷ್ ಮಾಬ್ ನಡೆಸಿಕೊಟ್ಟರು. ಸುಮಾರು ಐವತ್ತಕ್ಕೂ ಹೆಚ್ಚು ಯುವಕ - ಯುವತಿಯರು ಸೇರಿ ನಡೆಸಿಕೊಟ್ಟ 'ಯುವ ಫ್ಲಾಶ್ ಮಾಬ್' (Yuva flash mob) ಡ್ಯಾನ್ಸ್ ಕಾರ್ಯಕ್ರಮವನ್ನು ನೋಡುತ್ತಿದ್ದರೆ, ಯಾವುದೋ ಸಿನಿಮಾ ಶೂಟಿಂಗ್‌ನಲ್ಲಿ ಗ್ರೂಪ್ ಡ್ಯಾನ್ಸ್ ನಡೆಯುತ್ತಿದೆಯೇನೋ ಎಂಬ ಭಾವನೆ ಬರುತ್ತಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಗಣೇಶ ಹಬ್ಬದ ಸಮಾರಂಭದ ಜೊತೆಯಲ್ಲಿ ಸಾಹಿತ್ಯ ಬೃಂದಾವನದ ವತಿಯಿಂದ ಪ್ರೊಫೆಸರ್ ಕೆ. ಚಿದಾನಂದ ಗೌಡ ಮತ್ತು ಶ್ರೀಮತಿ ತಾರಿಣಿ ಚಿದಾನಂದ (ಕುವೆಂಪು ಅವರ ಮಗಳು), ಸುಂದರವಾದ ಸಾಹಿತ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಮಾರಂಭದಲ್ಲಿ ನಮಗೆಲ್ಲರಿಗೂ ಕುವೆಂಪು ಅವರ ಕವಿಶೈಲಕ್ಕೆ ಒಮ್ಮೆ ಹೋಗಿ ಬಂದ ಅನುಭವವಾಯಿತು. ಇದರ ಜೊತೆಯಲ್ಲಿ ಸಾಮೂಹಿಕ ಗೌರಿ - ಗಣೇಶ ಪೂಜೆ, ಹೇಮಂತ್ ಮತ್ತು ತಂಡದವರಿಂದ ಲೈವ್ ಸಂಗೀತ ರಸಮಂಜರಿ ಕಾರ್ಯಕ್ರಮ, ರಾಘವೇಂದ್ರ ಹೆಗಡೆ ಅವರಿಂದ ಮರಳು ಕಲೆ ಪ್ರಾತ್ಯಕ್ಷಿಕೆ ಮೊದಲಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಡಲಾಯಿತು.

ಇಂತಹ ಕಷ್ಟಕರವಾದ ಸಮಯದಲ್ಲೂ ನಮ್ಮನ್ನು ಅನೇಕ ಮಂದಿ ಪ್ರೋತ್ಸಾಹಿಸಿದ್ದಾರೆ, ಅವರಲ್ಲಿ ಮುಖ್ಯವಾಗಿ ನಮ್ಮ ಕಾರ್ಯಕ್ರಮಗಳ ಪ್ರಾಯೋಜಕರನ್ನು ನೆನೆಯಲೇ ಬೇಕು. ಎರಡು ವರ್ಷಗಳಲ್ಲಿ ಅನೇಕ ಹೊಸ ಪ್ರಾಯೋಜಕರು ನಮ್ಮೊಂದಿಗೆ ಕೈ ಜೋಡಿಸಿ ನಮ್ಮ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣೀಭೂತರಾಗಿದ್ದಾರೆ. ಈ ಪ್ರಾಯೋಜಿಸುವ ಸಂಸ್ಥೆಗಳ ಜೊತೆ ಜೊತೆಗೆ ನಮ್ಮ ಅನೇಕ ದೇಣಿಗೆಯ ಅಭಿಯಾನಗಳಲ್ಲಿ ಬೃಂದಾವನದ ಸರ್ವ ಸದಸ್ಯರೂ ಒಂದಲ್ಲಾ ಒಂದು ರೀತಿಯಿಂದ ಭಾಗಿಗಳಾಗಿದ್ದಾರೆ ಎಂದು ಹೇಳಲು ಸಂತೋಷವಾಗುತ್ತದೆ.

***

ನಮ್ಮ ಕನ್ನಡ ಶಾಲೆಗಳು ಎಂದಿಗಿಂತಲೂ ಹೆಚ್ಚು ಚಟುವಟಿಕೆಯಿಂದ ಕೂಡಿವೆ. ದಿನೇದಿನೇ ಪೋಷಕರು ಮತ್ತು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿವೆ. ಸೌರಭ ತಂಡದ ಆರಂಭದಲ್ಲಿ ಇದ್ದ ಮೂರು ಶಾಲೆಗಳು ಈ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಆರಂಭವಾದ ನಾರ್ತ್ ಜರ್ಸಿ ಶಾಲೆಯೂ ಸೇರಿದಂತೆ ಒಟ್ಟು ಆರು ಶಾಲೆಗಳು ಕಾರ್ಯನಿರತವಾಗಿವೆ. ನಮ್ಮ ಬೃಂದಾವನದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಹ ಬೃಂದಾವನದ ಮಕ್ಕಳು ಸಕ್ರಿಯ ಪಾತ್ರವನ್ನು ತಳೆಯುತ್ತಿರುವುದು ಬಹಳ ಸಂತೋಷದ ವಿಚಾರ. ನಮ್ಮ ಕನ್ನಡ ಶಾಲೆಯ ಶಿಕ್ಷಕರು ಮತ್ತು ಕಾರ್ಯಕರ್ತರ ಪರಿಶ್ರಮ ಎಷ್ಟು ಚೆನ್ನಾಗಿದೆ ಎಂದರೆ, ನಮ್ಮ ಮಕ್ಕಳು ಒಂದು ಸಂಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಡಬಲ್ಲರು. ಕನ್ನಡದಲ್ಲಿ ಬರೆದು, ಓದಿ, ಮಾತನಾಡುವುದಷ್ಟೇ ಅಲ್ಲ, ಅವರ ದೈನಂದಿನ ಚಟುವಟಿಕೆಗಳಲ್ಲಿ ಹಾಗೂ ಶಿಕ್ಷಣೇತರ ವಿಚಾರಗಳಲ್ಲಿ ಕನ್ನಡ ಹಾಸುಹೊಕ್ಕಾಗಿದೆ. ನಮ್ಮ ಮಕ್ಕಳು ಕನ್ನಡದಲ್ಲಿ ಹಾಡು, ಅಭಿನಯ, ನೃತ್ಯ ಮೊದಲಾದುದನ್ನು ಪ್ರದರ್ಶಿಸುವುದನ್ನು ನೋಡಲು ಎರಡು ಕಣ್ಣು ಸಾಲದು. ಉತ್ತರ ಅಮೇರಿಕದ ಉದ್ದಗಲಕ್ಕೂ ಅನೇಕ ಕನ್ನಡ ಶಾಲೆಗಳಿವೆ. ಈ ನಿಟ್ಟಿನಲ್ಲಿ ಕನ್ನಡ ಅಕ್ಯಾಡೆಮಿಯ ಸಹಯೋಗದೊಂದಿಗೆ ಶಾಲಾ ಸಂಬಂಧಿ ಬೆಳವಣಿಗೆಗಳು ಬಹಳಷ್ಟು ನಡೆದಿವೆ. ಎಲ್ಲರಿಗೂ ಹೊಂದಬಹುದಾದ ಒಂದು ಬೋಧನಾ ವಿಷಯ ಸಂಬಂಧಿ ಯೋಜನೆಗಳಾಗಿರಬಹುದು, ಆಯಾ ವರ್ಗದ ಮಕ್ಕಳಿಗೆ ಬೇಕಾದ ಪಠ್ಯ ಪುಸ್ತಕಗಳಿರಬಹುದು, ಹಾಗೂ ಕನ್ನಡವನ್ನು ಅಧಿಕೃತವಾಗಿ ವಿದೇಶೀ ಭಾಷೆಯಾಗಿ ನಮ್ಮ ಶಾಲೆಗಳಲ್ಲಿ ಕಲಿಸುವ ಒಂದು ವ್ಯವಸ್ಥೆಯಾಗಿರಬಹುದು ಇವುಗಳ ಹಿಂದೆ ಅನೇಕ ಸಕ್ರಿಯ ಕಾರ್ಯಕರ್ತರ ಶ್ರಮವಿದೆ. ಈ ನಿಟ್ಟಿನಲ್ಲಿ ನಮ್ಮ ನ್ಯೂ ಜೆರ್ಸಿಯ ಕಾರ್ಯಕರ್ತರೂ ಕೂಡ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ ಎಂದು ಹೇಳಲು ಸಂತೋಷವಾಗುತ್ತದೆ.

ನಮ್ಮ ಯುವ ಬೃಂದಾವನದ ವಿಚಾರದಲ್ಲಿ ಹೇಳುವುದಾದರೆ ಈ ಎರಡು ವರ್ಷಗಳಲ್ಲಿ ಹಲವಾರು ಕಾರ್ಯಕ್ರಮಗಳು, ಫುಡ್ ಡ್ರೈವ್ ಮೊದಲಾದ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. 2019ರಲ್ಲಿ ಅನೇಕ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಯುವ ಸದಸ್ಯರು, 2020ರಲ್ಲಿ ಕೋವಿಡ್ ಸಂಕಷ್ಟದ ನಡುವೆಯೂ ಎರಡು ವಿಶೇಷ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಬೃಂದಾವನದ ವರ್ಚುವಲ್ ವಾಲಂಟಿಯರ್ ಕಾರ್ಯಕ್ರಮ ಮತ್ತು ವರ್ಚುವಲ್ ಗ್ರಾಜುಯೇಷನ್ ಸೆಲೆಬ್ರೇಷನ್ ಕಾರ್ಯಕ್ರಮಗಳು ಎಲ್ಲರ ಮನ ಸೂರೆಗೊಂಡವು. ಈ ವರ್ಷದ ಯುವ ಬೇಸಿಗೆ ಶಿಬಿರಗಳಲ್ಲಿ ನಾಲ್ಕು ವಾರಗಳ ಕಾಲ ಅನೇಕ ವಿಷಯಗಳಲ್ಲಿ ಮಕ್ಕಳಿಂದ ಮಕ್ಕಳಿಗಾಗಿ ಬೇಸಿಗೆ ಶಿಬಿರದ ವರ್ಚುವಲ್ ತರಗತಿಗಳನ್ನು ನಡೆಸಿಕೊಟ್ಟರು.

ಈ ನಮ್ಮ ಎರಡು ವರ್ಷಗಳ ಅವಧಿಯಲ್ಲಿ ಅನೇಕ ಸಾವು - ನೋವುಗಳು ಸಂಭವಿಸಿದವು. ಈ ನಿಟ್ಟಿನಲ್ಲಿ ನಾವು ಸಂತೋಷ್ ಕಡ್ಲೇಬೇಳೆ, ಪ್ರೊ. ಎಂ.ಜಿ. ಪ್ರಸಾದ್ ಮತ್ತು ಸುಬ್ರಹ್ಮಣ್ಯ ಆಲಂಘಾಟ್ ಅವರನ್ನು ಸ್ಮರಿಸಲೇಬೇಕು.ನಮ್ಮ ಬೃಂದಾವನದ ಮಾಜಿ ಅಧ್ಯಕ್ಷ, ವಿಶ್ವಸ್ಥ ಮಂಡಳಿಯ ಸದಸ್ಯ ಸಂತೋಷ್ ಕುಮಾರ್ ಕಡ್ಲೇಬೇಳೆಯವರು ನಮ್ಮ ಬೆನ್ನೆಲುಬಾಗಿದ್ದರು. ನಮ್ಮ ಎಲ್ಲ ಆಲೋಚನೆಗಳಿಗೂ ಹುರಿದುಂಬಿಸುತ್ತಿದ್ದರು. ಒಂದು ಸಂಘದ ಒಳ ಮತ್ತು ಹೊರಗಿನ ತಲ್ಲಣಗಳನ್ನು ವೈಯಕ್ತಿಕವಾಗಿ ಅರಿತಿದ್ದ ಸಂತೋಷ್ ಅವರ ಮಾರ್ಗದರ್ಶನವನ್ನು ನಮ್ಮ ಎರಡು ವರ್ಷದ ಅವಧಿಯಲ್ಲಿ ಕಳೆದುಕೊಂಡಿದ್ದು ನಮ್ಮ ದುರದೃಷ್ಟ. ಬೃಂದಾವನದ ಮತ್ತೊಬ್ಬ ಹಿರಿಯರಾದ ಪ್ರೊ. ಎಂ. ಜಿ. ಪ್ರಸಾದ್ ಅವರನ್ನೂ ಕಳೆದ ವರ್ಷ ಕಳೆದುಕೊಂಡು ನಾವು ಬಡವರಾದೆವು. ಪ್ರಸಾದ್ ಅವರು ಕೇವಲ ನಮ್ಮ ಕನ್ನಡ ಸಮುದಾಯದವರಿಗಷ್ಟೇ ಗುರುಗಳಾಗಿರಲಿಲ್ಲ, ಉತ್ತರ ಅಮೇರಿಕದ ಉದ್ದಗಲಕ್ಕೂ ಅವರಿಗೆ ಅನೇಕ ವಿದ್ಯಾರ್ಥಿಗಳಿದ್ದರು. ನಮ್ಮ ಯಾವುದೇ ಸಭೆ - ಸಮಾರಂಭಗಳಿಗೂ ಪ್ರಸಾದ್ ಅವರ ಉಪಸ್ಥಿತಿ ಹೆಚ್ಚಿನ ಕಳೆಯನ್ನು ತಂದುಕೊಡುತ್ತಿತ್ತು.

ಅಧ್ಯಕ್ಷರ ನುಡಿ

ಸೌರಭ ತಂಡ ಆರಂಭವಾದಾಗಿನಿಂದಲೂ ನಮ್ಮ ಚಟುವಟಿಕೆಗಳನ್ನು ಕುರಿತಂತೆ ಅವರಿಂದ ಯಾವಾಗಲೂ ನಮಗೆ ಸಲಹೆ - ಸೂಚನೆಗಳು ದೊರೆಯುತ್ತಿದ್ದವು. ಈ ವರ್ಷ ನಮ್ಮ ಆಜೀವ ಸದಸ್ಯರಲ್ಲಿ ಒಬ್ಬರಾದ ಸುಬ್ರಹ್ಮಣ್ಯ ಆಲಂಘಾಟ್ ಅವರನ್ನು ಕಳೆದುಕೊಂಡೆವು. ಸುಬ್ರಹ್ಮಣ್ಯ ಅವರು ಫ್ಲೋರಿಡಾ ನಿವಾಸಿಯಾಗಿದ್ದರೂ ನಮ್ಮ ಸಂಘದ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುತ್ತಿದ್ದರು. ಕಳೆದ ವರ್ಷ ಅವರು ನಮ್ಮ ಕನ್ನಡ ರಾಜ್ಯೋತ್ಸವ ಕಾರ್ಯಕಮವನ್ನು ಪ್ರಾಯೋಜಿಸಿ, ಪ್ರತೀ ವರ್ಷವೂ ನಮಗೆ ಬೆಂಬಲ ನೀಡುವುದಾಗಿ ಭರವಸೆಯನ್ನಿತ್ತಿದ್ದರು. ಅವರನ್ನು ಈ ವರ್ಷದ ರಾಜ್ಯೋತ್ಸವದ ಕಾರ್ಯಕ್ರಮಗಳ ಕೆಲವೇ ದಿನಗಳ ಮೊದಲು ಕಳೆದುಕೊಂಡಿದ್ದು ನಮ್ಮ ದುರದೃಷ್ಟ. ಈ ವರ್ಷ ಕೋವಿಡ್ ಮಹಾಮಾರಿಯಿಂದ ಎಲ್ಲ ಕಡೆ ಅನೇಕ ಸಾವು ನೋವುಗಳು ಸಂಭವಿಸಿವೆ. ಈ ಎಲ್ಲ ಕುಟುಂಬ ವರ್ಗದವರಿಗೂ ಭಗವಂತ ನಷ್ಟವನ್ನು ಭರಿಸುವ ಶಕ್ತಿಯನ್ನು ಕೊಡಲಿ. ನಾವು ಯಾವಾಗಲೂ ಈ ಎಲ್ಲರನ್ನೂ ಸ್ಮರಿಸೋಣ.

***

ಡಿಸೆಂಬರ್ 5ನೇ ತಾರೀಖಿನಂದು ನಡೆದ ವಾರ್ಷಿಕೋತ್ಸವ ಮತ್ತು ಮಕ್ಕಳ ದಿನಾಚರಣೆಯ ಕಾರ್ಯಕ್ರಮ ನಮ್ಮ ಸೌರಭ ತಂಡದ ಕೊನೆಯ ಕಾರ್ಯಕ್ರಮ. ಈ ವರ್ಷ ವರ್ಚುವಲ್ ಮಾಧ್ಯಮದಲ್ಲಿ ನಡೆದ ಕಾರ್ಯಕ್ರಮ ಸುಮಾರು ನಾಲ್ಕು ಘಂಟೆಗಳ ಕಾಲ ನಡೆಯಿತು. ಸರ್ವ ಸದಸ್ಯರ ಸಭೆಯಿಂದ ಆರಂಭವಾಗಿ, ಬೃಂದಾವನ ಮಕ್ಕಳ ವಿವಿಧ ಕಾರ್ಯಕ್ರಮ ಮತ್ತು 'ನಮ್ಮೇರಿಕ' ತಂಡದವರು ಪ್ರಸ್ತುತ ಪಡೆಸಿಕೊಟ್ಟ ನಾಟಕದಿಂದ ಎಲ್ಲರ ಮನಸ್ಸನ್ನು ಸೂರೆಗೊಂಡಿತು. ನಮ್ಮ ಬೃಂದಾವನ ಮಕ್ಕಳ ಪ್ರತಿಭೆ ಅಪರಿಮಿತವಾದುದು, ನಮ್ಮ ಕನ್ನಡ ಶಾಲೆಯ ಶಿಕ್ಷಕರು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಕೊಂಡು ಕೋವಿಡ್ ಸಂಕಷ್ಟದಲ್ಲಿಯೂ ಈ ಮಕ್ಕಳ ಪ್ರತಿಭೆಯನ್ನು ಒರೆ ಹಚ್ಚಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವುದು ಶ್ಲಾಘನೀಯ ವಿಚಾರ.

ಇದೇ ಸಂದರ್ಭದಲ್ಲಿ ಮುಂದಿನ ತಂಡದ ಪದಾಧಿಕಾರಿಗಳನ್ನೂ ಕೂಡ ಪರಿಚಯ ಮಾಡಿ ಕೊಡಲಾಯಿತು. ಮುಂಬರುವ 'ಪ್ರಗತಿ' ತಂಡದ ಕಾರ್ಯಕಾರಿ ಸಮಿತಿಗೆ ನಮ್ಮೆಲ್ಲರ ಶುಭಾಶಯಗಳು ಮತ್ತು ಶುಭ ಹಾರೈಕೆಗಳು. ಮುಂಬರುವ ಹೊಸ ಸಮಿತಿ, ನಮ್ಮ ಬೃಂದಾವನ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಒಯ್ಯುತ್ತದೆ ಎನ್ನುವುದು ನಮ್ಮ ಆಶಯ.

ಮತ್ತೊಮ್ಮೆ, ಈ ಎರಡು ವರ್ಷ ನಮ್ಮ ಸೌರಭ ತಂಡಕ್ಕೆ ಬೃಂದಾವನ ಕಾರ್ಯಕಾರಿ ಸಮಿತಿಯ ಜವಾಬ್ದಾರಿಯನ್ನು ಒಪ್ಪಿಸಿ, ನಮಗೆ ನಮ್ಮ ಬೃಂದಾವನದ ಕಲಾಪಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕೊಟ್ಟು, ಕನ್ನಡ ದೀವಿಗೆಯನ್ನು ಉಜ್ವಲವಾಗಿ ಬೆಳಗಿಕೊಂಡು ಹೋಗುವ ಕಾಯಕದಲ್ಲಿ ನಮ್ಮ ಜೊತೆ ಕೈ ಜೋಡಿಸಿದ ನಿಮಗೆಲ್ಲ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಕನ್ನಡವೇ ಸತ್ಯ, ಕನ್ನಡವೇ ನಿತ್ಯ!

ಮತ್ತೆ ಸಿಗೋಣ!

ನಿಮ್ಮ ವಿಶ್ವಾಸಿ,

ಸತೀಶ್ ಹೊಸನಗರ

ಅಧ್ಯಕ್ಷರು

ಬೃಂದಾವನ ಕನ್ನಡ ಕೂಟ

ಸೌರಭ ತಂಡದ ಪರವಾಗಿ

ಸತ್ಯಪ್ರಸಾದ್ ಸುಬ್ಬರಾವ್, ವ್ಯಸನ್ನ ಕೋರಿ, ಸುಹಾಸ್ ಕುಮಾರ್,
ಶ್ರೀಧರ ಸೂರ್ಯನಾರಾಯಣ, ಸತೀಶ್ ಹೊಸನಗರ, ಅರುಣ್ ಪ್ರಭಾಕರ,
ಗಿರೀಶ್ ಹೊಂಗಲ್, ಸಂಗೀತ ವಿದ್ಯಾಧರ, ಸಂಧ್ಯಾ ಮಲ್ಲಿಕ್, ರಾಮಚಂದ್ರ ಶಾಸ್ತ್ರಿ,
ಅಮೃತಾ ಲಕ್ಷ್ಮೀಕಾಂತ್, ರೂಪಶ್ರೀ ಮೇಲ್ಕೋಟೆ, ಸರಯು ಸಮೀರ,
ಕೇಶವ್ ಜಯರಾಮ್, ಬಾಬು ರಂಗಯ್ಯ.

ಸಾವಿನ ಆಚೆಗೂ ಬದುಕು ಇದೆಯೇ ಎನ್ನುವ ಪ್ರಶ್ನೆ ಅಪ್ರಸ್ತುತ. ಸಾವಿಗೂ ಮುನ್ನ ಇರುವ ಬದುಕಿನಲ್ಲಿ ನೀವು ಜೀವಿಸಿದ್ದೀರಾ ಎನ್ನುವುದೇ ಮುಖ್ಯ ಪ್ರಶ್ನೆ

—ಆಚಾರ್ಯ ರಜನೀಶ್

ವಿಶ್ವಸ್ಥ ಮಂಡಳಿ

ದಿ|| ಸಂತೋಷ ಕಡ್ಲೇಬೇಳೆ

ಬೆನ್ ಕಾಂತರಾಜ್

ಡಾ. ಅಶೋಕ್ ಕಟ್ಟೀಮನಿ

ಡಾ. ರಾಮ್ ಬೆಂಗಳೂರು

ಸೌರಭ ತಂಡ ೨೦೧೯-೨೦೨೦

ಸತೀಶ್ ಹೊಸನಗರ

ಸತ್ಯ ಪ್ರಸಾದ್

ಡಾ. ರಾಮಚಂದ್ರ ಶಾಸ್ತ್ರಿ

ಸಂಧ್ಯಾ ಮಲ್ಲಿಕ್

ಅಮೃತ ಲಕ್ಷ್ಮೀಶನ್

ರೂಪಶ್ರೀ ಮೇರ್ಕೋಟಿ

ಸರಯೂ ಘಟ್ಟು

ಪ್ರಸನ್ನ ಕೋರಿ

ಗಿರೀಶ್ ಹೊಂಗಲ್

ಸುಹಾಸ್ ಕುಮಾರ್

ಅರುಣ್ ಪ್ರಭಾಕರ

ಶೇಕರ್ ಜಯರಾಮ್

ಶ್ರೀಧರ್ ಬಾಣಾವರ

ಸಂಗೀತ ವಿದ್ಯಾಧರ

ಬಾಬು ರಂಗಯ್ಯ

ಶ್ರದ್ಧಾಂಜಲಿ

ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು



ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳು

ಡಾ. ಶ್ರೀ ಗಿರೀಶ್ ಕಾರ್ನಾಡ್

ಪ್ರೋ. ಕೆ.ಎಸ್. ನಿಸ್ಸಾರ್ ಅಹ್ಮದ್



ಡಾ. ಬನ್ನಂಜೆ ಗೋವಿಂದಚಾರ್ಯ

ಶ್ರದ್ಧಾಂಜಲಿ

ಪ್ರೊ. ಎಂ. ಜಿ. ಪ್ರಸಾದ್

ಸಂತೋಷ್ ಕುಮಾರ್ ಕಡ್ಲೇಬೇಳೆ

ನೆನೆ ನೆನೆದು ಕೊರಗಿದರೆ ಬರುವಿರಿ ನೀವು,
ನಮ್ಮ ಕಣ್ಣೊಳಗೆ ಕಣ್ಣೀರಾಗಿ
ಮರೆವೆನೆಂದರೂ ಅಳಿಯದ ನಿಮ್ಮ ನೆನಪು ನಮ್ಮೊಳಗೆ.
ನೀವು ತೋರಿದ ಹಾದಿ,
ನೀವು ಹಾಕಿದ ಮೇಲ್ಪಂಕ್ತಿ,
ನಿಮ್ಮ ನೆನಪುಗಳು ಚಿರ ನೂತನ.

- ಬೃಂದಾವನ ಕನ್ನಡ ಕೂಟ

ಎಂ.ಜಿ.ಪ್ರಸಾದ್ ಚಿರ ನೆನಪುಗಳು

ಉಷಾ ಪ್ರಸನ್ನ, ನ್ಯೂ ಜೆರ್ಸಿ

ನನಗೆ ಪ್ರಸಾದ್ ಸುಮಾರು ೨೦ ವರುಷದಿಂದ ಗೊತ್ತು. ಬಹುಶಃ ನ್ಯೂಯಾರ್ಕ್ ಕನ್ನಡ ಕೂಟದಲ್ಲಿ ನೋಡಿದ್ದೆನೇನೋ, ನನಗೆ ಅವರ ಸರಳತೆ, ನಿಷ್ಕಲ್ಮಶ ನಗು, ಎಲ್ಲರಲ್ಲು ಒಳ್ಳೆಯದನ್ನೇ ಕಾಣುವ ಸದ್ಗುಣ ತುಂಬಾನೇ ಹಿಡಿಸುತಿತ್ತು. ಅವರ ಜೊತೆ ನನ್ನ ಒಡನಾಟ ಅವಿಸ್ಮರಣೀಯ.

೨೦೦೨ನೇ ಇಸವಿಯ ಬೇಸಿಗೆ ರಜೆಗೆ ಪ್ರಸಾದ್ ಹಾಗು ಗೀತಾ, ಬ್ರಿಡ್ಜ್ ವಾಟರಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಮಕ್ಕಳಿಗೆ ಶಿಬಿರ ನಡೆಸುತ್ತಿದ್ದರು. ಆಗ ಪ್ರಸಾದ್ 'ನನ್ನ ಶಿಬಿರದ ಮಕ್ಕಳಿಗೆ ತಿಂಡಿ ಊಟದ ವ್ಯವಸ್ಥೆಗೆ ಸಹಾಯ ಮಾಡುತ್ತೀರ?' ಅಂತ ಕೇಳಿದಾಗ ಖಂಡಿತ ಮಾಡುತ್ತೀನಿ ಅಂದೆ. ನನಗೆ ಸಹಾಯಕ್ಕೆ ನಮ್ಮ ಸ್ನೇಹಿತರಾದ ಕೇಶವ ಮೂರ್ತಿ, ಅವರ ತಾಯಿ, ನನ್ನ ಅತ್ತೆ ಎಲ್ಲಾ ಬಂದರು. ಬಹುಶಃ ಜೀವನದಲ್ಲಿ ಸರಿಯಾದ ಸಮಯಕ್ಕೆ ಹೋಗಿದ್ದು ಅಂದರೆ ಆಗ. ಒಂದು ಶಿಸ್ತು ಅಂತ ನನ್ನಲ್ಲಿ ಬಂದಿದ್ದರೆ ಅದು ಆಗ. ಮಕ್ಕಳಿಗೆ ತಿಂಡಿ, ಅವರೆಲ್ಲ ಪಾಠ ಕಲಿಯುವಾಗ ಮಧ್ಯಾಹ್ನದ ಅಡಿಗೆ, ಸಂಜೆಗೆ ಫಲಾಹಾರ ಅಂತ ವಿಧ ವಿಧವಾಗಿ ಮಕ್ಕಳಿಗೆ ಮಾಡುವಾಗ ಮನಸ್ಸಿನಲ್ಲೆ ಅವರಿಬ್ಬರಿಗೂ ಧನ್ಯವಾದ ಹೇಳಿಕೊಳ್ಳುತ್ತಿದ್ದೆ. ಇವತ್ತಿಗೂ ಅದನ್ನು ನೆನಸಿಕೊಂಡರೆ ತುಂಬಾನೇ ಖುಷಿ ಆಗುತ್ತೆ. ಕೇಶವ ಊಟದ ಮನೆಯ ವ್ಯವಸ್ಥೆ ನೋಡಿಕೊಂಡರೆ, ಅವರ ತಾಯಿ, ನನ್ನತ್ತೆ ಹಾಗು ನಾನು ಅಡಿಗೆ ಮನೆಯನ್ನು ನೋಡಿಕೊಳ್ಳುತ್ತಿದ್ದೆವು. ಆ ಹತ್ತು ದಿನ ಹೇಗೆ ಕಳೆಯಿತೋ ಗೊತ್ತಾಗಲೇ ಇಲ್ಲ. ನಾನು ಮಾಡಿದ ಕೆಲಸ ನೋಡಿ ಅವರಿಗೆ ನನ್ನ ಮೇಲೆ ಎಷ್ಟು ವಿಶ್ವಾಸ ಮೂಡಿತು ಅಂದರೆ ನನಗೆ ನ್ಯೂ ಯಾರ್ಕ್ ಕನ್ನಡ ಕೂಟಕ್ಕೆ ಅಧ್ಯಕ್ಷಳಾಗು ಅಂತ ಅಲ್ಲಿನ ಚುನಾವಣೆಗೆ ನನ್ನ ಹೆಸರು ಸೂಚಿಸಿದರು. ನನಗೆ ನನ್ನ ಮೇಲೆ ನಂಬಿಕೆ ಇರಲಿಲ್ಲ ಆದರೆ ಅವರಿಗೆ ಅಪಾರ ನಂಬಿಕೆ ಇತ್ತು.

೨೦೦೪ರಲ್ಲಿ ನಾವು ನ್ಯೂ ಜೆರ್ಸಿಯಲ್ಲಿ ಬೃಂದಾವನ ಕನ್ನಡ ಕೂಟ ಆರಂಭಿಸಿದಾಗ ಪ್ರಸಾದ್ ಹಾಗು ಗೀತ ನಮಗೆ ಆಧಾರ ಸ್ತಂಭವಾಗಿ ನಿಂತು ಸದಾ ಮಾರ್ಗದರ್ಶನ ಕೊಟ್ಟು, ಮಕ್ಕಳಿಗೆ ಗಣೇಶನ ಪೂಜೆ ಮಾಡಿಸುವುದು, ಚುನಾವಣೆಯನ್ನು ನ್ಯಾಯವಾಗಿ ನಡೆಸಿದ್ದು, ಸರ್ವ ಸದಸ್ಯರ ಸಭೆಗೆ 'ಮಾಡರೇಟರ್' ಆಗಿದ್ದು, ಅಕ್ಕ ಸಮ್ಮೇಳನದಲ್ಲಿ ಪ್ರಸಾದ್ ಹಾಗು ಗೀತ ನಮ್ಮ ಜೊತೆಯಲ್ಲಿ ನಿಂತು ಅದ್ಭುತವಾಗಿ ನಡೆಸಿಕೊಟ್ಟಿದ್ದು, ಅವರು ಮಾಡಿರುವ ಸಹಾಯ ಅಷ್ಟಿಷ್ಟಲ್ಲ, ಅದು ಬೆಟ್ಟದಷ್ಟು.

ಅವರ ಜೊತೆ ಯಾವುದೆ ವಿಚಾರದ ಬಗ್ಗೆ ಚರ್ಚಿಸುವುದು ಅಂದರೆ ತುಂಬಾನೇ ಇಷ್ಟವಾಗುತಿತ್ತು. ವನವಿಹಾರದಲ್ಲಿ ಮಂಕುತ್ತಿಮ್ಮನ ಕಗ್ಗ ಹೇಳುತ್ತಿರುವಾಗ ಇರಬಹುದು, ಅವರು ನಡೆಸುತ್ತಿದ್ದ ಸತ್ಸಂಗದಲ್ಲೇ ಆಗಿರಬಹುದು, ಅಥವಾ ಯಾರದರ ಮನೆಯಲ್ಲಿ ಸಿಕ್ಕಾಗ ಇರಬಹುದು, ನಾವು ಏನೇ ಪ್ರಶ್ನೆ ಕೇಳಿದರೂ ಉತ್ತರ ಸಿಗುತ್ತಿತ್ತು. ಮಕ್ಕಳಿಗೂ ಧರ್ಮದ ಬಗ್ಗೆ, ನಮ್ಮ ಆಚಾರ ವಿಚಾರದ ಬಗ್ಗೆ ಸಾಕಷ್ಟು ಹೇಳೋರು.

ನಾನು ಕೊನೆಯ ಬಾರಿ ಅವರನ್ನು ಭೇಟಿಯಾಗಿದ್ದು ಒಂದು ಸಂಗೀತದ ಕಾರ್ಯಕ್ರಮದಲ್ಲಿ. ಅವರಿಗೆ ನನ್ನನ್ನು ರೇಗಿಸುವುದು ಅಂದರೆ ಬಲು ಇಷ್ಟ. ಅವರ ಕಣ್ಣುಗಳು ಪಳಪಳ ಹೊಳೆಯುತ್ತಿತ್ತು. ಅವರು ನಮ್ಮನ್ನು ಅಗಲುವ ಹಿಂದಿನ ಸಂಜೆ ಸಿಕ್ಕಾಗ ನಾನು ಅವರಿಗೆ ಹೇಳಿದೆ ನನ್ನ ಹೆಸರು ಉಷೆಯಾದರೂ ನಾನು ಸಂಜೆ ಹೊತ್ತಿನಲ್ಲಿ ತುಂಬಾ ಚುರುಕು ಅಂತ, ಆಗ ಪ್ರಸಾದ್ ಸರಿ ಇನ್ಮೇಲೆ ನಿಮ್ಮನ್ನು ನಿಷೆ ಅಂತ ಕರಿಯೋಣ ಎಂದು "ನಿಷೆ" ಅಂತ ನಾಮಕರಣ ಮಾಡಿ, ಎಲ್ಲರಿಗೂ ಹೇಳಿಕೊಂಡು ಬಂದರು. ಪ್ರಸನ್ನನಿಗೂ ಹೋಗಿ ಹೇಳಿದ್ರು. ಕಾರ್ಯಕ್ರಮ ಮುಗಿದ ಮೇಲೆ ಅದೇ ಒಂದು ದೊಡ್ಡ ಸಂಭ್ರಮವಾಗಿತ್ತು ನಮಗೆಲ್ಲ. ಸಾಧಾರಣವಾಗಿ ಅವರಿಬ್ಬರನ್ನು ನೋಡಿದಾಗ ನಾನು ಕಾಲು ಮುಟ್ಟಿ ನಮಸ್ಕರಿಸುತ್ತಿದ್ದೆ, ಅಂದು ಯಾಕೋ ಅವರನ್ನು ತಬ್ಬಿಕೊಳ್ಳಬೇಕು ಅನಿಸಿತು. ಹಾಗೆ ಅವರಿಗೆ ಹೇಳಿ ತಬ್ಬಿಕೊಂಡೆ. ಅದೇ ಕೊನೆಯ ಸ್ನೇಹದ ಅಪ್ಪುಗೆ ಆಗೋಯ್ತು. ನನಗೆ ನಿಷೆ ಅಂತ ನಾಮಕರಣ ಮಾಡಿ ನಮ್ಮನ್ನೆಲ್ಲಾ ಕತ್ತಲಲ್ಲಿ ಬಿಟ್ಟುಹೋದರು. ಅವರು ದೈಹಿಕವಾಗಿ ಇಲ್ಲದಿದ್ದರೂ, ಅವರು ಹೇಳಿಕೊಟ್ಟಿರುವ ನೀತಿಯಲ್ಲಿ, ಪಾಠದಲ್ಲಿ, ಸತ್ಸಂಗದಲ್ಲಿ ಮಾಡಿರುವ ಪ್ರವಚನದಲ್ಲಿ ಸದಾ ನಮ್ಮ ಮನದಲ್ಲಿ ಇರುತ್ತಾರೆ. ನಾನು ಅವರಿಗೆ ಸದಾ ಚಿರಋಣಿಯಾಗಿರುತ್ತೀನಿ. ನನ್ನನ್ನು ಒಬ್ಬ ಮನುಷ್ಯಳಾಗಿರಲು ಹೇಳಿಕೊಟ್ಟಿರುವುದಕ್ಕೆ, ಸದಾ ನಮ್ಮ ಜೊತೆಯಲ್ಲೇ ಇದ್ದು ಮಾರ್ಗ ತೋರಿಸುವ ನಮ್ಮ ಮೆಚ್ಚಿನ ಪ್ರಸಾದ್ ನಿಮಗೆ ನನ್ನ ಸಾಷ್ಟಾಂಗ ನಮನ. ನಿಶೆಯಿಂದ ಉಷೆವರೆಗೂ ನಶಿಸದ ನೆನಪು ಸದಾ ಹಸಿರು !!!

ನಿಮ್ಮ ಕನಸುಗಳು ಮುಗಿದರೆ ಬೆಳವಣಿಗೆಯೂ ಮುಗಿದಂತೆಯೇ. ಹಾಗಾಗಿ ಕನಸು ಕಾಣುವುದನ್ನು ಬಿಡದಿರಿ.—ಬಾಬಾ ಅಮಟೆ

ದೊಡ್ಡ ಗುರುಗಳಿಗೊಂದು ಚಿಕ್ಕ ನಮನ

ವಿ. ಪ್ರಸನ್ನ ಕುಮಾರ್, ನ್ಯೂ ಜೆರ್ಸಿ

ನಮ್ಮನಗಲಿದ ಮಾರೆಹಳ್ಳಿ ಗೋಪಾಲನ್ ಪ್ರಸಾದರು
ನಮಗೆಲ್ಲಾ ಮಾರ್ಗದರ್ಶಕರು ಗುರುಗಳು ಪ್ರಧಾನರು
ತುಂಬಿದ ಕೊಡ ಇವರು ನಗುಮೊಗದ ಪ್ರತಿಭಾನ್ವಿತರು
ಮಕ್ಕಳು ಹಿರಿಯರಿಗೆಲ್ಲಾ ಪಾಠ ಹೇಳಿದ ಪ್ರಾಧ್ಯಾಪಕರು

ಪ್ರವಚನ ಪಾರಾಯಣಗಳಲ್ಲಿ ಎಲ್ಲೆಡೆ ಸದಾ ಉಪಸ್ಥಿತರು
ಮಕ್ಕಳೊಡನೆ ಮಕ್ಕಳ ಮನಸರಿತು ತಿಳಿ ಹೇಳಿದ ಹಿರಿಯರು
ಹಿರಿಯರಿಗೆ ಆಧ್ಯಾತ್ಮವ ಪ್ರೀತಿಯಿಂದ ಉಣಬಡಿಸಿದ ಪಂಡಿತರು
ಸಂತೋಷದಿ ಜೀವನ ನಡೆಸುವ ಕಲೆ ಹೇಳಿಕೊಟ್ಟ ಕಲೆಗಾರರು

ಬೃಂದಾವನ ಕನ್ನಡ ಕೂಟದ ಅಭಿವೃದ್ಧಿಗೆ ಮಾರ್ಗದರ್ಶಕರು
ಪ್ರತಿಯೊಂದು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದವರು
ಗಣೇಶ ಪೂಜೆಯನ್ನು ಮಕ್ಕಳಿಂದ ಪ್ರತಿ ವರುಷ ಮಾಡಿಸಿದವರು
ಸರ್ವ ಸದಸ್ಯರ ಸಭೆಗೆ ಪ್ರತಿ ವರುಷ ಇವರೇ 'ಮಾಡರೇಟರು'

ಕಳೆದ ವಾರಕ್ಕೆ ನೀವು ನಮ್ಮನಗಲಿ ಆಯಿತು ಒಂದು ವರುಷ
ನೀವು ಹಾಕಿಕೊಟ್ಟ ಹಾದಿಯಲ್ಲಿ ನಡೆಯುವುದೇ ಬಲು ಹರುಷ
ನಿಮ್ಮ ಒಡನಾಟ ಸವಿದರು ಪ್ರಪಂಚದ ಸಾವಿರಾರು ಪ್ರಕೃತಿ ಪುರುಷ
ವರುಷಗಳು ಕಳೆದರೂ ನಿಮ್ಮ ನೆನಪು ತರುವುದು ನಮಗೆಲ್ಲಾ ನಿಜ ಹರುಷ

ನೀವು ಬಾರದೂರಿಗೆ ಹೋದರು ನಿಮ್ಮ ತತ್ವ ಮಾತು ಅಳಿಯದೆ
ನೀವು ನಮಗೆ ಕಾಣದಿದ್ದರು ನಿಮ್ಮ ಮಧುರ ಶಂಖನಾದ ತಲುಪಿದೆ
ನಿಮ್ಮ ಪಾಠ ನಿಮ್ಮ ನಗುವು ನಮ್ಮೆಲ್ಲರನ್ನು ಸದಾ ಹರಸಿದೆ
'ಸಂತೃಪ್ತಿ'ಯ ಸದ್ಭಾವ ತುಂಬಿ ಸಂತೋಷವು ಸಂಭ್ರಮಿಸಿದೆ

ನೀವಾವ ಜನ್ಮದ ಮೈತ್ರಿ ಸಂತೋಷ್

ವಿದ್ಯಾ ಮೂರ್ತಿ, ನ್ಯೂ ಜೆರ್ಸಿ

ಏನೆಲ್ಲಾ ನೆನಪುಗಳು....

ನನ್ನ ಮತ್ತು ಬೃಂದಾವನದ ಬಾಂಧವ್ಯ ಬೃಂದಾವನ ಉದ್ಘಾಟನೆಯಾದ ದಿನದಿಂದಲೇ ಆರಂಭವಾದದ್ದು. ಬೃಂದಾವನ ನನ್ನ ತವರೆಂದೇ ನನ್ನ ಭಾವನೆ. ಬೃಂದಾವನದ ಮಡಿಲಲ್ಲೇ ನನ್ನ ಮಕ್ಕಳು ಬೆಳೆದರು, ಬೃಂದಾವನದ ಒಡನಾಟದಲ್ಲೇ ನಮ್ಮ ಭಾಷೆ, ಸಂಸ್ಕೃತಿಯನ್ನು ಕಲಿತರು. ನನ್ನ ಒಡಹುಟ್ಟಿದ ಸಹೋದರ ಸಹೋದರಿಯರನ್ನು ನಾ ಪಡೆದೆ ಬೃಂದಾವನದಿಂದ. ಸಾಕಷ್ಟು ಸ್ನೇಹಿತರನ್ನೂ ಗಳಿಸಿದೆ. ನನ್ನ ಹೃದಯಕ್ಕೆ ಹತ್ತಿರವಾದ ಕೆಲವೇ ಸ್ನೇಹಿತರಲ್ಲಿ ಸಂತೋಷ್ ಒಬ್ಬರು.

ಬೃಂದಾವನದ ಪ್ರತಿ ಕಾರ್ಯಕ್ರಮದಲ್ಲಿಯೂ ಸಂತೋಷದಿಂದ, ತುಂಬು ಉತ್ಸಾಹದಿಂದ ಕೆಲಸಮಾಡುತ್ತಿದ್ದ ಸಂತೋಷ್ ಅವರ ಚಟುವಟಿಕೆಯನ್ನು ನೋಡಿ ನಾನೆಷ್ಟೋ ಸಲ ವಿಸ್ಮಯಳಾಗಿದ್ದೆ. ಆದರೂ ಅವರ್ಯಾರೆಂದು ನನಗೆ ತಿಳಿಯದು, ನಾನ್ಯಾರೆಂದು ಅವರಿಗೆ ತಿಳಿಯದು. ಒಂದು ಪರಿಚಯದ ನಗು, ನಮಸ್ಕಾರದಲ್ಲೇ ಸುಮಾರು ವರುಷಗಳು ಕಳೆದುಹೋದವು. ನನಗವರ ಬಗ್ಗೆ ಸ್ವಲ್ಪ ತಿಳಿದದ್ದು ಸುಮಾರು 2010ರಲ್ಲಿ ಇರಬಹುದು. ಬಹುಶಃ ನ್ಯೂ ಜೆರ್ಸಿಯಲ್ಲಿ ನಡೆದ ಅಕ್ಕ ಸಮ್ಮೇಳನದ ದಿನಗಳಲ್ಲಿರಬಹುದು.

ಮುಂದೆ ಅವರು 2011-2012ರಲ್ಲಿ ಬೃಂದಾವನದ ಅಧ್ಯಕ್ಷರಾಗಿ ಬರುವ ವೇಳೆಗೆ ನನಗೆ ಅವರ ವೈಯಕ್ತಿಕ ಪರಿಚಯ ಸುಮಾರಾಗೇ ಆಗಿತ್ತು. ಒಂದು ಸಂಜೆ ನಾನು ನಿರೀಕ್ಷಿಸದ ಸಂತೋಷ್‌ರಿಂದ ಫೋನ್ ಕಾಲ್ ಬಂತು. ಕುಶಲಗಳ ವಿನಿಮಯವಾದ ಮೇಲೆ, ಅವರ ತಂಡದಲ್ಲಿ ಕೆಲಸ ಮಾಡಲು ಸಾಧ್ಯವೇ ಎಂದು ನನ್ನನ್ನು ಕೇಳಿದಾಗ, ನನಗೆ ಏನುತ್ತರ ಕೊಡಬೇಕೋ ತೋಚಲಿಲ್ಲ. ಒಂದೆರಡು ದಿನಗಳ ಕಾಲಾವಕಾಶ ಕೇಳಿ, ನನ್ನ ನಿರ್ಧಾರವನ್ನು ನಾನೇ ಫೋನ್ ಮಾಡಿ ತಿಳಿಸುತ್ತೇನೆಂದು ಹೇಳಿದ್ದೆ. ನನ್ನ ಮಕ್ಕಳಿನ್ನೂ ಆಗ ಚಿಕ್ಕವರಾಗಿದ್ದರು. ಮನೆ, ಮಕ್ಕಳ ವಿದ್ಯಾಭ್ಯಾಸ, ಇನ್ನಿತರ ಜವಾಬ್ದಾರಿಯ ಜೊತೆಗೆ, ಹೊರಗಿನ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸಲು ನಾನು ಶಕ್ತಳೋ, ಅಶಕ್ತಳೋ ನನಗಿನ್ನೂ ತಿಳಿದಿರಲಿಲ್ಲ. ಏನು ನಿರ್ಧಾರ ಮಾಡಬೇಕೆಂಬ

ಸ್ಪಷ್ಟತೆ ಇನ್ನೂ ನನಗಿರಲಿಲ್ಲ. ಆದರೆ ಅದೇನು ಕಾರಣವೋ ತಿಳಿಯದು, ಅವರಿಗೆ ನಾನು ಇಲ್ಲ ಎನ್ನುವ ಮನಸ್ಸೂ ಇರಲಿಲ್ಲ. ಒಂದೆರಡು ದಿನಗಳ ನಂತರ ನಾನೇ ಅವರಿಗೆ ಫೋನಾಯಿಸಿ ಅವರ ತಂಡದೊಂದಿಗೆ ಕೆಲಸಮಾಡಲು ನನಗೆ ಅಭ್ಯಂತರವಿಲ್ಲವೆಂದು ತಿಳಿಸಿದಾಗ ಅವರ ಧ್ವನಿಯಲ್ಲಿದ್ದ ನಮ್ರತೆ ನನ್ನ ಕಿವಿಗಳಲ್ಲಿ ಇಂದಿಗೂ ಪ್ರತಿಧ್ವನಿಸುತ್ತದೆ. ಸಂತೋಷ್‌ಗೆ ಆದ ಸಂತೋಷ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು. ಆ ತಂಡಕ್ಕೆ ಮೈತ್ರಿ ಎನ್ನುವ ನಾಮಕರಣವಾಯಿತು. ಈ ಮೈತ್ರಿಯಿಂದಲೇ ನಮ್ಮ ಮೈತ್ರಿ ಆರಂಭವಾಯಿತು, ದಿನದಿಂದ ದಿನಕ್ಕೆ ನಮ್ಮ ಮೈತ್ರಿಯೂ ಘನವಾಗತೊಡಗಿತು. ಬಹುಶಃ ಅವರ ಸರಳ, ಸಹಜ ವ್ಯಕ್ತಿತ್ವವೋ ಏನೋ, ಅವರೊಂದಿಗೆ ಕೆಲಸ ಮಾಡುವುದು ಬಹಳ ಸುಲಭವಾಗಿ ತೋರಿತು.

ಅವರ ತಂಡದಲ್ಲಿ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬ ಪದಾಧಿಕಾರಿ, ಸದಸ್ಯರು ಎಲ್ಲರೂ ಸಂಘಟನೆಯಿಂದ ಕೆಲಸ ಮಾಡುತ್ತಿದ್ದೆವು. ಎರಡು ವರ್ಷಗಳು ಹೇಗೆ ಉರುಳಿಹೋದವೋ ತಿಳಿಯಲೇ ಇಲ್ಲ. ತಂಡದ ಪ್ರತಿಯೊಬ್ಬರ ಹೆಸರಿನ ಜೊತೆಗೆ 'ಅವರೆ' ಎನ್ನುವ ಪ್ರತ್ಯಯವಿಲ್ಲದೆ ಯಾರನ್ನೂ ಸಂತೋಷ್ ಸಂಬೋಧಿಸುತ್ತಿರಲಿಲ್ಲ. ತಂಡದ ಪದಾಧಿಕಾರಿಗಳ, ಸದಸ್ಯರ ಸಲಹೆಗಳನ್ನು ಪಡೆದೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು.

ಒಂದು ಸಂಘ, ಸಂಸ್ಥೆ ಅಥವಾ ತಂಡ ಸುಸೂತ್ರವಾಗಿ ಕೆಲಸ ನಿರ್ವಹಿಸಲು ಒಬ್ಬ ದಕ್ಷನಾಯಕನ ಪಾತ್ರ ಬಹಳ ಮುಖ್ಯವಾದುದು. ಅದರಲ್ಲೂ ಲಾಭ ರಹಿತ ಸಂಸ್ಥೆಗಳಿಗೆ ಕೆಲಸ ಮಾಡುವಾಗ ಸೇವಾಮನೋಭಾವವೇ ಜೀವಾಳವಾಗಿರಬೇಕು. ಕೃತಜ್ಞತೆಗಳ ನಿರೀಕ್ಷೆ ಇಲ್ಲಿ ಸಲ್ಲದು. ಕೆಲಸ ಮಾಡುವ ಉತ್ಸಾಹ, ಮನೋಭಾವನೆಗಳು ಇರಬೇಕು, ಯಾವ ಹೊಗಳಿಕೆಗಳ ನಿರೀಕ್ಷೆಗಳೂ ಇಲ್ಲದಿರಬೇಕು. ಸಂತೋಷ್ ಹೀಗಿದ್ದರು ಎನ್ನುವುದರಲ್ಲಿ ಎರಡು ಮಾತಿಲ್ಲ. ಸಂತೋಷ್ ಎಂದೂ ಬಹಳ ಹಿಗ್ಗಿದ್ದಾಗಲೀ, ಕುಗ್ಗಿದ್ದಾಗಲೀ, ಹೊಗಳಿಕೆಗೆ ಬಾಯ್ಬಿಡುವುದಾಗಲೀ ನಾ ಕಂಡಿಲ್ಲ. ಸದಾ ಹಸನ್ಮುಖರಾಗಿರುವುದೇ ಅವರ ಸಹಿ. ಕಾರ್ಯಕ್ರಮಗಳ ಯಶಸ್ವಿಯ ಯಜಮಾನ ತಾನೆಂದು, ಎಂದೂ ಎದೆಯುಬ್ಬಿಸಲಿಲ್ಲ. ಬದಲಾಗಿ ತಂಡವನ್ನು ಅಭಿನಂದಿಸಿ ಎಲ್ಲರನ್ನೂ ಹುರಿದುಂಬಿಸಿ ಮುಂದಿನ ಕಾರ್ಯಾಚರಣೆಗೆ ಹೊಸ ಚೈತನ್ಯ ತುಂಬುತ್ತಿದ್ದರು. **"Leadership is not a role, it is an attitude"** ಎಂಬುದಕ್ಕೆ ಸಂತೋಷ್ ಉದಾಹರಣೆಯಾಗಿದ್ದರು.

ಒಂದು ಸಂಸ್ಥೆಯನ್ನು ನಡೆಸುವ ದಾರಿ ಎಂದೂ ಸುಗಮವಾಗಿರುವುದಿಲ್ಲ. ಅನೇಕ ಅಡೆತಡೆಗಳು ಹುಡುಕಿಕೊಂಡು ನಿರಂತರವಾಗಿ ಬರುತ್ತಲೇ ಇರುತ್ತವೆ. ಎಲ್ಲವನ್ನೂ ಮೀರಿ, ಎಲ್ಲವನ್ನೂ ಸಹಿಸಿಕೊಂಡು ನಮ್ಮ ಪಾಲಿಗೆ ಬಂದಿರುವ ಕೆಲಸವನ್ನು ನಿರ್ವಂಚನೆಯಿಂದ ಮಾಡಿ ಮುಗಿಸಿ, ನಮ್ಮ ಅವಧಿ ಮುಗಿದಮೇಲೆ, ಮುಂದಿನ ತಂಡಕ್ಕೆ ಜವಾಬ್ದಾರಿಗಳನ್ನು ಹಸ್ತಾಂತರಿಸುವ ಹೊತ್ತಿಗೆ, ಒಬ್ಬ ನಾಯಕ ಎಂತಹ ಹೆಸರು ಮಾಡಿ ಬರುತ್ತಾನೆಂಬುದು ಬಹಳ ಮುಖ್ಯ. ಸಂತೋಷ್, ಅವರ ಅವಧಿಯನ್ನು ಸಮರ್ಪಕವಾಗಿ ಮುಗಿಸಿ ಒಬ್ಬ ಸಮರ್ಥ ನಾಯಕನಾಗಿ, ಆಡಳಿತಗಾರನಾಗಿ ಹೊರಬಂದರು. ತಂಡದ ಅವಧಿ ಮುಗಿದ ಮೇಲೂ ಸಹ ನಮ್ಮೆಲ್ಲರ ಮೈತ್ರಿ ಮುಂದುವರೆದಿತ್ತು. ಯಾವುದಾದರೂ ಸಮಾರಂಭಗಳಲ್ಲಿ ಭೇಟಿಯಾದಾಗ, "ವಿದ್ಯಾ ಅವರೆ ನೀವು ಮುಂದಿನ ಬೃಂದಾವನದ ಪ್ರೆಸಿಡೆಂಟ್ ಆಗಬೇಕು" ಎಂದು ಹೇಳದೆ ನಮ್ಮ ಸಂಭಾಷಣೆಗಳು ಮುಗಿಯುತ್ತಿರಲಿಲ್ಲ. ಹಾಗೆ ಅವರೆಂದಾಗಲೆಲ್ಲಾ ನಾನು ಅವರಿಗೆ, "ಸಂತೋಷ್ ಇನ್ನೊಂದು ಟರ್ಮ ನೀವೇ ಏಕೆ ಪ್ರೆಸಿಡೆಂಟ್ ಆಗಬಾರದು ? ನಿಮ್ಮ ಜೊತೆ ಕೆಲಸ ಮಾಡೋದಕ್ಕೆ ನಾನು ಸದಾ ಸಿದ್ಧ"

ಜೋರಾಗಿ ಉರಿಯುವ ದೀಪ ಬಹಳ ಹೊತ್ತು ಬೆಳಗುವುದಿಲ್ಲ. ನಂದಾದೀಪದ ಹಾಗೆ ಸಣ್ಣಗೆ ಮಿನುಗುತ್ತಾ ಬೆಳಕು ನೀಡುತ್ತಾ ಇರಬೇಕು.—ತ. ರಾ. ಸು

ಎಂದು ಅವರನ್ನು ಛೇಡಿಸುತ್ತಿದ್ದೆ. ಆದರೆ ಅವು ಬರಿಯ ಮಾತಾಗಿರುತ್ತಿರಲಿಲ್ಲ. ನನ್ನ ಮನಸ್ಸಿಗೆ ಹಿಡಿಸಿದ ಕೆಲಸಗಳನ್ನು, ನನ್ನ ಮನಸ್ಸಿಗೆ ಹಿಡಿಸಿದವರೊಂದಿಗೆ ನಾನು ಹೃದಯದಿಂದ ಮಾಡುತ್ತೇನೆ. ನನ್ನ ಹೃದಯಕ್ಕೆ ಹಿಡಿಸದವರೊಂದಿಗಾಗಲೀ, ಹಿಡಿಸದ ಕೆಲಸವಾಗಲೀ ಮಾಡಲು ನಾನೆಂದೂ ಮನಸ್ಸು ಕೊಡುವುದಿಲ್ಲ. ಇದು ನನ್ನ ವ್ಯಕ್ತಿತ್ವ. ನನ್ನ ಮನಸ್ಸಿಗೆ ಹಿಡಿಸಿದ ಸಂತೋಷ್ ಅವರ ಜೊತೆ ಕೆಲಸ ಮಾಡಲು ನಿಜಕ್ಕೂ ನಾನು ಸಿದ್ಧಳಿದ್ದೆ. ಅಂದು ಅವರೊಂದಿಗೆ ಮೈತ್ರಿ ತಂಡದಲ್ಲಿ ಕೆಲಸ ಮಾಡಲು ನಾನು ನಿರಾಕರಿಸಿದ್ದಲ್ಲಿ ನಾನು ಎಷ್ಟೆಲ್ಲಾ ಕಳೆದುಕೊಳ್ಳುತ್ತಿದ್ದೆ ಎಂದೆನಿಸದಿಲ್ಲ ನನಗೀಗ. ಒಂದು ಸಂಘ ಸಂಸ್ಥೆಗೆ (ವಿಶೇಷವಾಗಿ ಲಾಭರಹಿತ ಸಂಸ್ಥೆಗಳಿಗೆ) ಕೆಲಸ ಮಾಡುವಾಗ ಒಬ್ಬ ನಾಯಕನಿಗೆ ಏನೆಲ್ಲಾ ಕೌಶಲ್ಯಗಳಿರಬೇಕು, ಯೋಗ್ಯತೆಗಳಿರಬೇಕು, ಸಾಮರ್ಥ್ಯವೇನಿರಬೇಕು, ಸಹನಾಶಕ್ತಿ ಎಷ್ಟಿರಬೇಕು, ಸಂಘಟನಾಶಕ್ತಿ ಹೇಗೆ ಹುಟ್ಟುಹಾಕಬೇಕು ಎಂಬುದನ್ನು ನಾನು ಸಂತೋಷ್ ಅವರಲ್ಲಿ ಕಂಡೆ. ಈ ಸಾಲುಗಳನ್ನು ಬರೆಯುವಾಗ ಡಾ ಡಿ.ವಿ.ಜಿ ಯವರ ಕಗ್ಗದ ಸಾಲುಗಳು ನೆನಪಿಗೆ ಬರುತ್ತವೆ.

ನಗು ಮನದಿ ಲೋಗದ ವಿಕಾರಂಗಳನು ನೋಡಿ
ಬಿಗಿ ತುಟಿಯ ದುಡಿವಂದು, ನೋವಪಡುವಂದು
ಪೊಗು ವಿಶ್ವಜೀವನದ ಜೀವಾಂತರಂಗಲಿ
ನಗುನಗುತ ಬಾಳ್, ತೆರಳ್ ಮಂಕುತಿಮ್ಮ.

ಸಂತೋಷ್ ಯಾರ ಬಗ್ಗೆಯೂ ಎಂದೂ ಹಗುರವಾಗಿ ಮಾತನಾಡಿದವರಲ್ಲ. ಎಷ್ಟೇ ಕಷ್ಟದ ಕೆಲಸವಿದ್ದರೂ, "ಅಯ್ಯೋ!, ಇದೆಲ್ಲಾ ಸಾಕಾಯ್ತು, ಇದೆಲ್ಲ Thankless Jobs" ಎಂದು, ಗೊಣಗುವುದಾಗಲೀ, ಅಲವತ್ತುಕೊಳ್ಳುವುದಾಗಲಿ ನಾ ನೋಡಲಿಲ್ಲ. ಎಲ್ಲರೊಂದಿಗೂ ಸ್ನೇಹದಿಂದ ಬಾಳಿ, ಅವರ ಹೆಸರಿಗೆ ತಕ್ಕಂತೆ ನಗುನಗುತಾ ಬಾಳಿ, ಮೈತ್ರಿ ತಂಡದಿಂದೊಂದೇ ಅಲ್ಲ, ಈ ಲೋಕದಿಂದ ತೆರಳೇಬಿಟ್ಟರಲ್ಲ???

ಫೆಬ್ರವರಿ 10, 2019, ಆಗಷ್ಟೇ ಬೆಂಗಳೂರನ್ನು ತಲುಪಿ, WiFi ಸಿಕ್ಕ ಕೂಡಲೇ ಫೋನ್ ತೆಗೆದೆ. ವಾಟ್ಸಪ್‌ನಲ್ಲಿ ಸಂತೋಷ್ ನಮ್ಮನ್ನೆಲ್ಲಾ ಬಿಟ್ಟು ಅಗಲಿದ ಸಿಡಿಲಿನಂತಹ ಒಂದು ವಾರ್ತೆ ಇರುತ್ತದೆಂದು ನಾನೆಂದೂ ಎಣಿಸಿರಲಿಲ್ಲ. ನಿಂತಲ್ಲೇ ಕುಸಿದಿದ್ದೆ.

ಸಂತೋಷ್:

ನಾನು ನಿಮ್ಮನ್ನು ಕಡೆಯದಾಗಿ ಭೇಟಿಯಾಗಿದ್ದು 2018 ನವಂಬರ್‌ನಲ್ಲಿ ರಾಯಲ್ ಅಲಬರ್ಟ ಪ್ಯಾಲೇಸ್ ನಲ್ಲಿ ನಡೆದ ಯಾವುದೋ ಒಂದು ಸಮಾರಂಭದಲ್ಲಿ. ಭೇಟಿಯಾದಾಗ ನೀವೆಷ್ಟು ಆತ್ಮೀಯತೆಯಿಂದ ಮಾತನಾಡಿಸಿದಿರಿ!

ವಿಜಯ್‌ಪ್ರಕಾಶ್ ಅವರ ಕಾರ್ಯಕ್ರಮ ನಮ್ಮ ನ್ಯೂಜೆರ್ಸಿಯಲ್ಲಿ ಮಾಡಿಸಬೇಕೆಂಬ ನಿಮ್ಮ ಮಹದಾಸೆಯನ್ನು ಎಷ್ಟು ಸಂಭ್ರಮದಿಂದ ನನ್ನೊಂದಿಗೆ ಹಂಚಿಕೊಂಡಿದ್ದಿರಿ!!! ಅವರ ಕಾರ್ಯಕ್ರಮಕ್ಕೆ ನಾನೇ ನಿರೂಪಕಿಯಾಗಬೇಕೆಂದು ನಿಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಿರಿ. ನಾನು ಮುಗುಳ್ನಕ್ಕು ಸುಮ್ಮನಾದೆ, ನೆನಪಿದೆಯಾ? ನಿಮ್ಮ ಆಸೆಯಂತೆಯೇ ವಿಜಯ್‌ಪ್ರಕಾಶ್ ಅವರ ಕಾರ್ಯಕ್ರಮ, ಅನೇಕ ಕನ್ನಡಕೂಟಗಳ ಸಹಕಾರದೊಂದಿಗೆ, ನಿಮ್ಮ ನೆಚ್ಚಿನ ಗೆಳೆಯ ಸತೀಶ್ ಹೊಸನಗರ ಅವರ ನಾಯಕತ್ವದ, ಸೌರಭ ತಂಡದಿಂದ ಯಶಸ್ವಿಯಾಗಿ ಮೂಡಿಬಂತು. ಎಲ್ಲೆಲ್ಲೂ ಸಂತೋಷದ ಹರ್ಷೋದ್ಗಾರ ತುಂಬಿತ್ತು. ಅದನ್ನು ನೋಡಲು ನೀವಿರಲಿಲ್ಲವೆಂಬುದೇ ಎಲ್ಲರ ಮನಸ್ಸಿಗೂ ಖೇದ. ನಿಮ್ಮ ಆಸೆಯಂತೆಯೇ ನನ್ನ ನಿರೂಪಣೆಯ ಅಳಿಲು ಸೇವೆಯೂ ಆಯಿತು. ನಿಮ್ಮನ್ನು ನೆನೆದೇ ನಾನು ವೇದಿಕೆಯನ್ನು ಏರಿದ್ದೆ. ಆ ದಿನದ ನಿರೂಪಣೆಯನ್ನು ನಾನು ನಿಮಗೇ ಅರ್ಪಿಸಿದ್ದೆ. ಮೈತ್ರಿ ಬೆಳೆಸಿ, ಸಂಭ್ರಮದಿಂದ ಎಲ್ಲರೊಂದಿಗೆ ಮಿಲನವಾಗಿ, ಎಲ್ಲರಲ್ಲೂ ಅಭಿಮಾನ ತೋರಿ, ನಿಮ್ಮ ಮುಗುಳ್ನಗೆ, ಹಿತಮಿತವಾದ ನಡೆನುಡಿಯ ಸೌರಭವನ್ನು ಎಲ್ಲಕಡೆ ಬೀರಿದ್ದೀರಿ. ಇಂದು ನೀವು ಬೆಳೆಸಿದ ತೋಟ ವನವಾಗಿ ಪ್ರಗತಿಯೆಡೆ ಸಾಗುತ್ತಿರುವಾಗ, ಇದನ್ನು ನೋಡಲು ನೀವಿಲ್ಲದಿರುವುದು ನ್ಯಾಯವೇ? ನಿಮಗಿದ್ದ ಅವಸರವಾದರೂ ಏನು? ನಿಮ್ಮ ಸ್ಮಿತಮುಖ, ನಾವುಗಳಿಂದೂ ಮರೆಯಲಾರೆವು. ನಿಮ್ಮ ಪ್ರೇರಣಾ ಶಕ್ತಿ ನಮ್ಮೆಲ್ಲರ ಚೈತನ್ಯವಾಗಿರಲಿ. ನೀವೆಲ್ಲಿದ್ದರೂ ಬೃಂದಾವನದ ಏಳ್ಗೆಯನ್ನು ನೋಡುತ್ತಿರುತ್ತೀರಿ ಎಂದು ನಾವೆಲ್ಲರೂ ನಂಬಿದ್ದೇವೆ. ಇದಾವ ಜನ್ಮದ ಮೈತ್ರಿಯೋ, ಈ ಜನ್ಮದಲ್ಲಿ ನಮ್ಮನ್ನೆಲ್ಲಾ ಹೀಗೆ ಬಂಧಿಸಿಟ್ಟಿದೆ ಎನಿಸಿದೆ ನಮ್ಮೆಲ್ಲರಿಗೂ!! ನೀವಿಲ್ಲದಿದ್ದರೂ ನೀವು ನಮ್ಮೆಲ್ಲರ ಮನದಲ್ಲಿ ಶಾಶ್ವತವಾಗಿರುವಿರಿ.

ನಿಮ್ಮ ಮೈತ್ರಿ

ವಿದ್ಯಾಅವರೇ (ಹೀಗೇ ತಾನೇ ನೀವು ನನ್ನನ್ನು ಕರೆಯುತ್ತಿದ್ದುದು?)

ವಿದ್ಯಾ ಮೂರ್ತಿ

ಸೌರಭದ ಹಿನ್ನೋಟ



ನವಚೇತನ

ಸಾಂಸ್ಕೃತಿಕ ಸೌರಭ

ಅಮೃತಾ ಲಕ್ಷ್ಮೀಶನ್ , ನ್ಯೂ ಜೆರ್ಸಿ

ಎಲ್ಲಾ ಕನ್ನಡ ಸ್ನೇಹಿತರಿಗೆ ಅಮೃತಾ ಲಕ್ಷ್ಮೀಶನ್ ಮಾಡುವ ಹೃದಯಪೂರ್ವಕ ವಂದನೆಗಳು. "ಬೃಂದಾವನ ಕನ್ನಡ ಕೂಟ" ಎಂದರೆ ಕನ್ನಡಿಗರಿಗೆ ದೂರದ ದೇಶದಲ್ಲೂ ಮನೆಯೆನಿಸುವ ಒಂದು ಸುಂದರ ಕುಟುಂಬ. ಮೌಲ್ಯಗಳನ್ನು ಕಲಿಸುವ, ಪ್ರೋತ್ಸಾಹಿಸುವ, ನಮ್ಮಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಸಹಾಯ ಮಾಡುವ ಕುಟುಂಬ. ೨೦೧೮-೨೦೨೦ ರ ಸೌರಭ ತಂಡದ ಮುಖಾಂತರ ಈ ಪ್ರತಿಷ್ಠಿತ ಸಂಸ್ಥೆಯ ಸಾಂಸ್ಕೃತಿಕ ವಿಭಾಗದ ನಿರ್ದೇಶಕಿಯಾಗಿ ಸೇವೆ ಸಲ್ಲಿಸುವ ಭಾಗ್ಯ ದೊರೆತದ್ದು ನನ್ನ ಅದೃಷ್ಟ ಎಂದು ಭಾವಿಸುತ್ತೇನೆ.

ಈ ಎರಡು ವರ್ಷಗಳಲ್ಲಿ ಬೃಂದಾವನದೊಳಗಿನ ಅನೇಕ ಪ್ರತಿಭೆಗಳನ್ನು ಗುರುತಿಸುವುದು ಮತ್ತು ಉದಯೋನ್ಮುಖ ಕಲಾವಿದರಿಗೆ ಒಂದು ವೇದಿಕೆಯನ್ನು ಕಲ್ಪಿಸಿ ಉತ್ತೇಜಿಸುವುದು ಮುಖ್ಯ ಪ್ರಯತ್ನವಾಗಿತ್ತು. ೨೦೧೯-೨೦೨೦ ಒಂದು ದೊಡ್ಡ ಕಷ್ಟಕರವಾದ ವರ್ಷವಾಗಿತ್ತು, ಆದರೆ ಅದನ್ನು ನಾವು ಒಂದು ಸದಾವಕಾಶವನ್ನಾಗಿ ಉಪಯೋಗಿಸಿ, ಬೃಂದಾವನ ಸದಸ್ಯರನ್ನು ಸಂಪರ್ಕಿಸಲು ಮತ್ತು ಅವರ ಪ್ರತಿಭೆಯನ್ನು ಗುರುತಿಸಲು ಉದ್ದೇಶಿಸಿದೆವು. ಈ ೨ ವರ್ಷಗಳ ನನ್ನ ಪ್ರಯಾಣದಲ್ಲಿ ಹಲವಾರು ನಿಸ್ವಾರ್ಥ ಶ್ರಮಶೀಲ ಸ್ವಯಂಸೇವಕರನ್ನು ಸಂಪರ್ಕಿಸುವ ಅವಕಾಶ ದೊರೆಕಿ, ಅವರು ನಮಗೆಲ್ಲರಿಗೂ ನಿರಂತರವಾಗಿ ಸ್ಫೂರ್ತಿ ನೀಡುತ್ತಾ ಬಂದರು.

ಈ ಎರಡು ವರ್ಷಗಳ ಬೃಂದಾವನದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಾರಾಂಶ ನಿಮ್ಮ ಮುಂದಿಡುತ್ತಿದ್ದೇವೆ:

೧. ಜನವರಿ ೨೬-೨೭, ೨೦೧೯ : ಸ್ನೇಹಾ ಕಪಣ್ಣ ಅವರಿಂದ "ಜನಪದ ವೈಭವ" — ಜಾನಪದ ಕಾರ್ಯಾಗಾರ: ಸೌರಭ ತಂಡವು ಡಿಸೆಂಬರ್ ೨೦೧೮ರಲ್ಲಿ ಜವಾಬ್ದಾರಿಯನ್ನು ತೆಗೆದುಕೊಂಡಿತು. ಕೂಡಲೇ ಕಾರ್ಯಗತವಾದ ನಾವು, ನಮ್ಮ ಮೊದಲ ಕಾರ್ಯಕ್ರಮವಾಗಿ ಸ್ನೇಹಾ ಕಪ್ಪಣ್ಣ ಅವರ "ಜನಪದ ವೈಭವ" ಎಂಬ ಜಾನಪದ ಕಾರ್ಯಾಗಾರ ಏರ್ಪಡಿಸಿದೆವು. ಸ್ನೇಹಾ ಅವರು ಕರ್ನಾಟಕದ ಜಾನಪದ ಕಲೆಗಳ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿ ಅಂತಾರಾಷ್ಟ್ರೀಯ ಮೆಚ್ಚುಗೆ ಪಡೆದ ಕಲಾವಿದೆ. ಅವರು ಹಿರಿಯರು ಹಾಗು ಕಿರಿಯರಿಗೆ ಕೆಲವು ವಿಶಿಷ್ಟ ಜಾನಪದ ನೃತ್ಯಗಳನ್ನು ಕಲಿಸುವ ೨ ದಿನಗಳ ಕಾರ್ಯಾಗಾರವನ್ನು ನಡೆಸಿದರು. ಜಾನಪದ ನೃತ್ಯಗಳ ಮೂಲ ಮತ್ತು ಅವುಗಳನ್ನು ರಕ್ಷಿಸುವ ಮತ್ತು ಉತ್ತೇಜಿಸುವ ಅಗತ್ಯವನ್ನು ಕಲಿಸಿದರು. ನಮ್ಮ ಮರೆತುಹೋದ ಕಲೆಗಳ ಬಗ್ಗೆ ಅವರು ನಮ್ಮ ಸದಸ್ಯರಿಗೆ ಕಲಿಸುವುದನ್ನು ನೋಡುವುದು ಬಹಳ ಸ್ಫೂರ್ತಿದಾಯಕವಾಗಿತ್ತು. ನಮ್ಮ ಬೃಂದಾವನ ಸದಸ್ಯರು ಕೆಲವು ನೃತ್ಯಗಳನ್ನು ಉತ್ಸಾಹದಿಂದ ಕಲಿತರು.

೨. ಏಪ್ರಿಲ್ ೭, ೨೦೧೯ : ಯುಗಾದಿ/ವಸಂತೋತ್ಸವ: ಆರು ನೂರಕ್ಕೂ ಹೆಚ್ಚು ಜನರು ಭಾಗವಹಿಸಿದ ನಮ್ಮ ವಸಂತೋತ್ಸವ ಭರ್ಜರಿಯಾಗಿ ಮೂಡಿ ಬಂತು. ಹೈಟ್ಸ್‌ಟೌನ್ ಹೈಸ್ಕೂಲ್ ಸಭಾಂಗಣದಲ್ಲಿ ಆಯೋಜಿಸಲಾದ ಈ ಸಂಭ್ರಮದಲ್ಲಿ ನೂರೈವತ್ತಕ್ಕೂ ಹೆಚ್ಚು ಜನರು ಹಲವಾರು ಕಾರ್ಯಕ್ರಮಗಳನ್ನು, ಅದ್ಭುತ ಪ್ರದರ್ಶನಗಳನ್ನು ನೀಡಿದರು. ಪ್ರತಿ ತಂಡದ ಪ್ರದರ್ಶನ ನಮ್ಮ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿತು. ಬೃಂದಾವನ ಮಕ್ಕಳ ಅಪಾರ ಪ್ರತಿಭೆ ಪ್ರೇಕ್ಷಕರನ್ನು ಆಕರ್ಷಿಸಿತು. ನಮ್ಮ ಮಕ್ಕಳ ಸಂಗೀತ ಪ್ರದರ್ಶನ, ನಮ್ಮ ಕನ್ನಡ ಶಾಲೆಯ ಮಕ್ಕಳ ಪ್ರದರ್ಶನ, ಬೃಂದಾವನದ ಮಹಿಳೆಯರ ಜಾನಪದ ನೃತ್ಯ ಪ್ರದರ್ಶನ, ನಮ್ಮ ನಾಟಕ ತಂಡ 'ನಮ್ ಕಂಪನಿ' ನಾಟಕ, ನಂತರ ಯುವ ತಂಡದಿಂದ ಒಂದು ಅದ್ಭುತ ಪ್ರದರ್ಶನ ಹೀಗೆ ಅನೇಕ ಬಗೆ ಬಗೆಯ ಕಾರ್ಯಕ್ರಮಗಳು ಪ್ರೇಕ್ಷಕರಿಗೆ ರಸದೌತಣ ಬಡಿಸಿತ್ತು. ಅಂದಿನ ದಿನದ ಮುಖ್ಯ ಅತಿಥಿಯಾಗಿ ಬೆಂಗಳೂರಿನ ಪ್ರಖ್ಯಾತ ಭರತನಾಟ್ಯ ನರ್ತಕಿ ಶ್ರೀಮತಿ ಶುಭಾ ಧನಂಜಯ್ ಅವರು ಉಪಸ್ಥಿತರಿದ್ದರು. ಅವರು ನೃತ್ಯ ಕಾರ್ಯಾಗಾರವನ್ನು ನಿರ್ವಹಿಸಿ ನಮ್ಮ ಬೃಂದಾವನ ಮಕ್ಕಳಿಗೆ ೩ ವಿವಿಧ ನೃತ್ಯಗಳನ್ನು ಕಲಿಸಿದರು, ಅಲ್ಲಿ ಕಲಿತ ನೃತ್ಯಗಳನ್ನು ವೇದಿಕೆಯ ಮೇಲೆ ಅವರೊಂದಿಗೆ ಪ್ರದರ್ಶಿಸಿದರು. ತಮ್ಮ ಮಗಳೊಂದಿಗೆ ಕಥಕ್, ಒಡಿಸ್ಸಿ ಮತ್ತು ಭರತನಾಟ್ಯಗಳನ್ನು ಒಳಗೊಂಡ ಮೂರು ಶೈಲಿಯ ನೃತ್ಯಗಳ ಸಮ್ಮಿಲನವನ್ನು ಸಹ ಪ್ರದರ್ಶಿಸಿದರು. ಈ ಕಾರ್ಯಕ್ರಮವನ್ನು ಆಶೀರ್ವದಿಸಲು ಶ್ರೀ ಎಂ.ಜಿ.ಪ್ರಸಾದ್ ನಮ್ಮೊಂದಿಗೆ ಇದ್ದಿದ್ದು ನಮ್ಮ ಅದೃಷ್ಟ.

ನಿದ್ರೆಯಲ್ಲಿ ಕಂಡಿದ್ದು ಕನಸಲ್ಲ. ಯಾವುದು ನಿಮ್ಮನ್ನು ನಿದ್ದೆ ಮಾಡಲು ಬಿಡುವುದಿಲ್ಲವೋ ಅದು ಕನಸು. -ಅಬ್ದುಲ್ ಕಲಾಂ

ಸಾಂಸ್ಕೃತಿಕ ಸೌರಭ

೩. ಸೆಪ್ಟೆಂಬರ್ ೧೫, ೨೦೧೯ : ಗಣೇಶೋತ್ಸವ: ಗಣೇಶೋತ್ಸವವನ್ನು ವಿಭಿನ್ನ ರೀತಿಯ, ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಬಹಳ ಉತ್ಸಾಹದಿಂದ ರೂಪಿಸಲಾಯಿತು. ಇದನ್ನು ಕೂಡ ಹೈಟ್ಸ್‌ಟೌನ್ ಶಾಲಾ ಸಭಾಂಗಣದಲ್ಲಿ ನಡೆಸಲಾಯಿತು. ಸಾಹಿತ್ಯ ಬೃಂದಾವನ ಕಾರ್ಯಕ್ರಮದಲ್ಲಿ ತಾರಿಣಿ ಚಿದಾನಂದ (ರಾಷ್ಟ್ರ ಕವಿ ಕುವೆಂಪು ಅವರ ಪುತ್ರಿ) ಮತ್ತು ಪ್ರೊ.ಚಿದಾನಂದ ಗೌಡ ಅವರು ಮುಖ್ಯ ಅತಿಥಿಗಳಾಗಿದ್ದರು. ಅವರೊಂದಿಗಿನ ಮುಕ್ತ ಸಂವಾದ ಅದ್ಭುತವಾಗಿ ಮೂಡಿಬಂತು. "ಆರೋಗ್ಯ ಬೃಂದಾವನ" ಸೌರಭ ತಂಡದ ಒಂದು ಹೊಸ ಉಪಕ್ರಮ. ಇದರ ಅಂಗವಾಗಿ, ಡಾ. ಯೋಗಿ ದೇವರಾಜ್ ಅವರ ವಿಶಿಷ್ಟ ಕಾರ್ಯಾಗಾರದಲ್ಲಿ, ಹೆಚ್ಚು ಸರಳವಾದ ಜೀವನವನ್ನು ನಡೆಸಲು ಮನೆಯಲ್ಲಿ ಅನುಸರಿಸಬೇಕಾದ ಸರಳ ಸಂಪ್ರದಾಯಗಳ ಬಗ್ಗೆ ಅವರು ತಿಳಿಸಿಕೊಟ್ಟರು. "ಯುವ ಬೃಂದಾವನ" ತಂಡ ಎಲ್ಲರಿಗೂ CPR ತರಬೇತಿ ನೀಡಿದರು. ಶ್ರೀ ಬಸವರಾಜ್ ಹಿರೇಮಠ್ ಅವರ ಮಾರ್ಗದರ್ಶನದಲ್ಲಿ ಗಣೇಶ ಪೂಜೆಯೊಂದಿಗೆ ದಿನವು ಪ್ರಾರಂಭವಾಯಿತು. ರಘುರಾಂ ರಾಯಸಂ ಅವರು ನಲವತ್ತಕ್ಕೂ ಹೆಚ್ಚು ಮಕ್ಕಳಿಗೆ ಕರಕುಶಲತೆಯಿಂದ ಗಣೇಶನ ಚಿತ್ರವನ್ನು ಮಾಡುವುದನ್ನು ಹೇಳಿಕೊಟ್ಟರು. ಮಕ್ಕಳು ತಾವೇ ರಚಿಸಿದ ಗಣೇಶನ ಪಟಕ್ಕೆ ನಂತರ ಪೂಜೆ ಮಾಡುವುದನ್ನು ನೋಡಲು ಮನೋಹರವಾಗಿತ್ತು. ನಂತರ ಊಟದ ಸಮಯ. ಹಬ್ಬದ ಊಟವನ್ನು ಸವಿದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳತ್ತ ಪ್ರಯಾಣ ಸಾಗಿತು. ಬೃಂದಾವನ ಸದಸ್ಯರು ಮತ್ತು ಮಕ್ಕಳ ಅದ್ಭುತ ಪ್ರದರ್ಶನಗಳು ನಡೆಯಿತು. ನಂತರ ರಾಘವೇಂದ್ರ ಹೆಗ್ಡೆ ಎಂಬ ಮರಳು ಕಲಾವಿದರ ಅದ್ಭುತವಾದ ಮರಳಿನಲ್ಲಿ ಮೂಡಿಬಂದ ವಿವಿಧ ಕಲಾಸೃಷ್ಟಿಗಳು ಪ್ರೇಕ್ಷಕರನ್ನು ಆಕರ್ಷಿಸಿತು. ಮುಂದಿನ ಕಾರ್ಯಕ್ರಮದಲ್ಲಿ ಬೃಂದಾವನ ವೇದಿಕೆಯ ಮೇಲೆ ಮೊದಲ ಬಾರಿಗೆ ಎಲ್ಲಾ ಬೃಂದಾವನ ಶಾಲಾ ಪುಟ್ಟ ಮಕ್ಕಳು ಸೂಪರ್ ಸ್ಟಾರ್‌ಗಳಂತೆ ಉಡುಗೆ ತೊಟ್ಟು ಫ್ಯಾಶನ್ ಶೋ ಪ್ರದರ್ಶಿಸಿದರು. ಮುಂದಿನ ಕಾರ್ಯಕ್ರಮ ಹೇಮಂತ್ ಮತ್ತು ಅವರ ತಂಡದ ಸಂಗೀತ ಕಾರ್ಯಕ್ರಮ. ಅದು ಸದಸ್ಯರುಗಳ ನೃತ್ಯ ಮತ್ತು ಹಾಡಿನೊಂದಿಗೆ ಮುಕ್ತಾಯವಾಯಿತು.

ಮನಸ್ಸು ಮತ್ತು ಚೇತನಗಳನ್ನು ಯಾವುದು ವಿಸ್ತರಿಸುತ್ತದೆಯೋ ಅದೇ ಸಂಸ್ಕೃತಿ —ಜವಾಹರ್ ಲಾಲ್ ನೆಹರು

ಸಾಂಸ್ಕೃತಿಕ ಸೌರಭ

೪. ನವೆಂಬರ್ ೧, ೨೦೧೯ : ಕನ್ನಡ ರಾಜ್ಯೋತ್ಸವ (ಇದು ಸೌರಭ ತಂಡದ ಹೊಸ ಉಪಕ್ರಮ): ೨೦೧೯ ನವೆಂಬರ್ ೧, ನಾವೆಲ್ಲರೂ ಮರೆಯಲಾಗದ ದಿನ. ಬೃಂದಾವನ ತಂಡ ಮೊದಲ ಬಾರಿಗೆ ನವೆಂಬರ್ ೧ರಂದೇ ಕನ್ನಡ ರಾಜ್ಯೋತ್ಸವ ನಡೆಸಿದ ದಿನ. ಸುಮಾರು ೮೦ ರಿಂದ ೧೦೦ ಸ್ನೇಹಿತರು ಒಂದಾಗಿ ನ್ಯೂ ಜೆರ್ಸಿ, ಎಡಿಸನ್‌ನಲ್ಲಿರುವ ಅಕ್ಬರ್ ರೆಸ್ಟೋರೆಂಟ್‌ನಲ್ಲಿ ಸಂಜೆ ೭ ಗಂಟೆಗೆ ಹಾಜರಾಗಿದ್ದರು. ಬೃಂದಾವನ ತಂಡದ ಸದಸ್ಯರು ಹಾಗು ಪದಾಧಿಕಾರಿಗಳು ಒಟ್ಟಾಗಿ ಭುವನೇಶ್ವರಿ ತಾಯಿಯನ್ನು ನೆನೆದು, ಕನ್ನಡ ಕಂಪನ್ನು ಹರಡಿ, ಧ್ವಜಾರೋಹಣ ಮಾಡಿದರು. ಒಂದು ಒಳ್ಳೆಯ ಕಾರ್ಯಕ್ರಮಕ್ಕೆ ನಾಂದಿ ಹಾಡಿದ ಮೇಲೆ, ಅಲ್ಲಿ ಸೇರಿದ್ದ ದಂಪತಿಗಳು ಸುಂದರ ಕ್ಯಾರಿಯೋಕೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಮ್ಮ ಪ್ರೀತಿಯ ಶುಭ್ರ ಅಲಂಘಾಟ್ ಈ ಕಾರ್ಯಕ್ರಮವನ್ನು ಪ್ರಾಯೋಜಿಸಿದರು. ಸಂಜೆ ೭ ಘಂಟೆಗೆ ಶುರುವಾದ ಕಾರ್ಯಕ್ರಮ ರಾತ್ರಿ ೧೧:೩೦ ರವರೆಗೂ ನಡೆಯಿತು. ನವೆಂಬರ್ ೧, ೨೦೧೯ ಒಂದು ಮರೆಯಲಾರದ ಸುಮಧುರ ಅನುಭವ.

೫. ಡಿಸೆಂಬರ್ ೭, ೨೦೧೯: ಬೃಂದಾವನ ಮಕ್ಕಳೋತ್ಸವ / ವಾರ್ಷಿಕೊತ್ಸವ: ಈ ಕಾರ್ಯಕ್ರಮವನ್ನು ವಿಶೇಷವಾಗಿ ಡಾ.ಎಂ.ಜಿ.ಪ್ರಸಾದ್ ಅವರಿಗೆ ಸಮರ್ಪಿಸಲಾಯಿತು, ಅವರ ಅಗಲಿಕೆ ಬೃಂದಾವನ ಕುಟುಂಬಕ್ಕೆ ಒಂದು ತುಂಬಲಾರದ ನಷ್ಟ. ಈ ಕಾರ್ಯಕ್ರಮ ೨೦೧೯ರ ಕಡೆಯ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮದಲ್ಲಿ ನಾವು ಮಕ್ಕಳಿಗಾಗಿ ಅನೇಕ ಸ್ಪರ್ಧೆಗಳನ್ನು ಆಯೋಜಿಸಿದ್ದೆವು. ಈ ಕಾರ್ಯಕ್ರಮದ ಅಂಗವಾಗಿ ಒಂದು ವಾರದ ಮುಂಚಿತವಾಗಿ ಚಿತ್ರಕಲಾ ಸ್ಪರ್ಧೆಯನ್ನು ನಡೆಸಲಾಗಿದ್ದು, ಇದರಲ್ಲಿ ೯೦ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಕಾರ್ಯಕ್ರಮದ ದಿನದಂದು ನಾವು ಹಾಡು ಮತ್ತು ಕನ್ನಡ ಭಾಷೆಯ ಸ್ಪರ್ಧೆಗಳನ್ನು ನಡೆಸಿದೆವು. ಇದರಲ್ಲಿ ಎಲ್ಲಾ ಮಕ್ಕಳು ತಮ್ಮ ಅಪಾರ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಿದರು. ಇದು ಹಿರಿಯರಿಗೆಲ್ಲಾ ಆಶ್ಚರ್ಯ ಉಂಟುಮಾಡಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕನ್ನಡ ಶಾಲಾ ಮಕ್ಕಳ ನಾಟಕ, ಹಾಡು ಮತ್ತು ನೃತ್ಯ ಪ್ರದರ್ಶನಗಳು, ಬೃಂದಾವನ ಯುವತಂಡದಿಂದ ಸ್ಯಾಕ್ಸಫೋನ್ ಕಚೇರಿ, ೪೫ಕ್ಕೂ ಹೆಚ್ಚು ಬೃಂದಾವನ ಮಹಿಳೆಯರ ಫ್ಯಾಷನ್ ಶೋ ಮತ್ತು ಬೃಂದಾವನ ತಂಡದ ಸ್ನೇಹಿತರಿಂದ ಸ್ನೇಹಕ್ಕಾಗಿಯೇ ಮೀಸಲಾದ ನೃತ್ಯ ಪ್ರದರ್ಶನ ವಿಶೇಷವಾಗಿತ್ತು.

ಸಾಂಸ್ಕೃತಿಕ ಸೌರಭ

೬. ಜನವರಿ ೧೯, ೨೦೨೦:ಬೃಂದಾವನ ಸಂಕ್ರಾಂತಿ: ಒಂದು ವಿಶಿಷ್ಟ ಪ್ರದರ್ಶನಕಾರರನ್ನು ಬೃಂದಾವನಕ್ಕೆ ಕರೆತರುವ ಆಲೋಚನೆಯೊಂದಿಗೆ, ನಾವು ೨೦೨೦ರ ವರ್ಷವನ್ನು ಭಾರತದ ಮೊದಲ ಮಹಿಳಾ ಧ್ವನಿ ಗಾರುಡಿಗಾರ್ತಿ ಶ್ರೀಮತಿ ಇಂದುಶ್ರೀ ರವೀಂದ್ರ ಅವರ ಪ್ರದರ್ಶನದೊಂದಿಗೆ ಪ್ರಾರಂಭಿಸಿದೆವು. ಸಭಾಂಗಣವು ನಗೆಯಿಂದ ತುಂಬಿ ತುಳುಕಿತ್ತು ಮತ್ತು ಪ್ರೇಕ್ಷಕರು ಕಾರ್ಯಕ್ರಮವನ್ನು ವಿಸ್ತರಿಸುವಂತೆ ವಿನಂತಿಸಿಕೊಂಡರು. ಇಂದುಶ್ರೀ ಅವರು ತಮ್ಮ ಪ್ರತ್ಯೇಕ ಪ್ರತಿಭೆಯಿಂದ ನಮ್ಮ ಬೃಂದಾವನ ಸದಸ್ಯರನ್ನು ಮಂತ್ರಮುಗ್ಧಗೊಳಿಸುವುದನ್ನು ನೋಡುವುದು ಒಂದು ಆಹ್ಲಾದಕರ ಅನುಭವವಾಗಿತ್ತು ಮತ್ತು ಮಕ್ಕಳಿಗೆ ತಮ್ಮ ಧ್ವನಿಯನ್ನು ಹೇಗೆ ಅನುಕರಿಸುವುದು ಎಂಬ ವಿಚಾರದ ಆಲೋಚನೆ ಮೂಡಿಬಂತು.

೭. ಬೃಂದಾವನ ವರ್ಚುಯಲ್ ಸರಣಿ: ನಾವು ವಸಂತೋತ್ಸವಕ್ಕೆ ತಯಾರಿ ನಡೆಸುತ್ತಿದ್ದಾಗ, ಲಾಕ್‌ಡೌನ್ ಮತ್ತು ಸಾಮಾಜಿಕ ಅಂತರ ಪ್ರಾರಂಭವಾಯಿತು. ಆದ್ದರಿಂದ ನಾವು ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ತಡೆಹಿಡಿಯಬೇಕಾಯಿತು. ಪರಿಸ್ಥಿತಿ ಹದಗೆಟ್ಟಾಗ, ಸಮುದಾಯವನ್ನು ಒಗ್ಗೂಡಿಸುವ ಯೋಜನೆಯನ್ನು ನಾವು ತರಬೇಕಾಗಿದೆ ಎಂದು ನಾವು ನಿಶ್ಚಯಿಸಿದೆವು. ಆದ್ದರಿಂದ ನಮ್ಮ ವರ್ಚುಯಲ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆವು. ವರ್ಚುಯಲ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ ಮೊದಲ ಕನ್ನಡ ಕೂಟ ನಮ್ಮದೇ. ಇದು ಶ್ರೀ ಕೃಷ್ಣ ವೃಂದಾವನದ ಶ್ರೀ ಯೋಗೀಂದ್ರ ಭಟ್ ಅವರ ಆಶೀರ್ವಾದ ಮತ್ತು ಡಾ.ರಾಮ್ ಬೆಂಗಳೂರ್ ಅವರ ಮಾರ್ಗದರ್ಶನದೊಂದಿಗೆ ಮಾಹಿತಿಯುಕ್ತ ಅಧಿವೇಶನವಾಗಿ ಪ್ರಾರಂಭವಾಯಿತು. ನಾವು ಈ ಉಪಕ್ರಮವನ್ನು ಸಾಪ್ತಾಹಿಕ ಆರೋಗ್ಯ ಮತ್ತು ಮಾಹಿತಿ ಅಧಿವೇಶನವಾಗಿ ಮುಂದುವರೆಸಿ, ನಿಧಾನವಾಗಿ ಸಾಂಸ್ಕೃತಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನು ಸೇರಿಸಲು ಪ್ರಾರಂಭಿಸಿದೆವು. ನಮ್ಮ ಸಾಪ್ತಾಹಿಕ ಅಧಿವೇಶನಗಳನ್ನು ಎದುರು ನೋಡುತ್ತಿದ್ದ ಸದಸ್ಯರಿಂದ ನಮಗೆ ನಿರಂತರವಾಗಿ ಪ್ರೋತ್ಸಾಹ ದೊರೆಯಿತು. ಲಾಕ್‌ಡೌನ್‌ಗೆ ಸಂಬಂಧಿಸಿದ ವೀಸಾ ಮತ್ತು ಪ್ರಯಾಣದ ವಿವರಗಳನ್ನು ವಿವರಿಸಲು ಮತ್ತು ಸರಾಗಗೊಳಿಸಲು ವಕೀಲರನ್ನು, ಆರೋಗ್ಯ ಮಾಹಿತಿಯನ್ನು ಪಡೆಯಲು ವಿವಿಧ ಹಿನ್ನೆಲೆಯ ವೈದ್ಯರನ್ನು ಆಹ್ವಾನಿಸಲಾಯಿತು. ಶಾಸ್ತ್ರೀಯ ಮತ್ತು ಭಾವಗೀತೆಗಳು, ಗಮಕ ಅಧಿವೇಶನಗಳು, ಯೋಗ ಮತ್ತು ಜುಂಬಾ ಅಧಿವೇಶನಗಳು, ಆಯುರ್ವೇದ ಅಡುಗೆ ಪ್ರದರ್ಶನ, ವಾದ್ಯ ಕಛೇರಿ, ನಮ್ಮೇರಿಕಾ ನಾಟಕ, ಬೃಂದಾವನ ಕನ್ನಡ ಶಾಲಾ ಕಾರ್ಯಕ್ರಮಗಳು, ಯುವ ಬೃಂದಾವನ ಪದವಿ ಕಾರ್ಯಕ್ರಮ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಮಿಶ್ರಣದಿಂದ ನಾವು ಸದಸ್ಯರನ್ನು ರಂಜಿಸಿದೆವು. ಕೆಲವು ತಮ್ಮ ವೃತ್ತಿಯಲ್ಲಿ ಕೀರ್ತಿಶಾಲಿಗಳಾದವರು ನಮ್ಮೊಂದಿಗೆ ಕೈಜೋಡಿಸಿ, ಕೆಲವು ಸೆಷನ್‌ಗಳಲ್ಲಿ ನಮ್ಮೊಂದಿಗೆ ಪಾಲ್ಗೊಳ್ಳಲು ಒಪ್ಪಿಕೊಂಡರು. ಧ್ವನಿ ಗಾರುಡಿಗಾರ್ತಿ ಇಂದುಶ್ರೀ, ಅನುಕರಣಾ ಕಲೆಗಾರರಾದ ರವಿ ಸತೀಶ್ ಮತ್ತು ಗೋಪಿ, ಗಾಯಕ ಬದರಿ ಪ್ರಸಾದ್ ಅವರೊಂದಿಗೆ ಬೃಂದಾವನ ಅಂತ್ಯಾಕ್ಷರಿ, ಉತ್ಸಾಹಭರಿತ ಭಾಗವಹಿಸುವಿಕೆ ಮತ್ತು ಸ್ವಯಂಸೇವಕರ ಅದ್ಭುತ ಸಹಾಯವನ್ನು ನೋಡಿ ಆಶ್ಚರ್ಯವಾಯಿತು. ಪ್ರಣಯರಾಜ ಶ್ರೀನಾಥ್ ಅವರೊಂದಿಗೆ ಬೃಂದಾವನ ಆದರ್ಶ ದಂಪತಿಗಳು, ಅನಿತಾ ಮತ್ತು ಸುನಿತಾ ಅನಂತಸ್ವಾಮಿ ಅವರಿಂದ ತಾಯಿಯ ದಿನಾಚರಣೆ ಪ್ರಯುಕ್ತ ಭಾವಗೀತೆ ಕಾರ್ಯಕ್ರಮ ಹೀಗೆ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು .

ಈ ಎಲ್ಲಾ ಕಾರ್ಯಕ್ರಮಗಳ ಹೊಮ್ಮುವಿಕೆ ಬೃಂದಾವನದಲ್ಲಿ ನನ್ನ ಅವಧಿಯಲ್ಲೇ ಆದದ್ದು ನನಗೆ ಅತ್ಯಂತ ಸಂತೃಪ್ತಿದಾಯಕ. ನಾವು ಸಮುದಾಯಕ್ಕೆ ಇನಿತಾದರೂ ಒಳ್ಳೆಯದನ್ನು ಮಾಡಲು ಮತ್ತು ಕಷ್ಟದ ಸಮಯದಲ್ಲಿ ಸಂತೋಷವನ್ನು ಹರಡಲು ಈ ವರ್ಚುಯಲ್ ಸರಣಿಯಿಂದ ಸಾಧ್ಯವಾಯಿತು. ವರ್ಚುವಲ್ ರಂಗಮಂಚ ನಮ್ಮ ಬೃಂದಾವನ ಸಮುದಾಯದ ಅನೇಕ ಪ್ರತಿಭೆಗಳನ್ನು ಗುರುತಿಸಲು ಮತ್ತು ಪ್ರದರ್ಶಿಸಲು ಅವಕಾಶವನ್ನು ನೀಡಿತು. ನಮ್ಮ ಪುಟ್ಟ ಮಕ್ಕಳು ವರ್ಚುವಲ್ ವೇದಿಕೆಯನ್ನು ಅಳವಡಿಸಿಕೊಂಡು ನಾಟಕಗಳಲ್ಲಿ ಪಾಲ್ಗೊಳ್ಳುವುದು ಅಚ್ಚರಿ ಮೂಡಿಸಿತು. ನಮ್ಮ ಸದಸ್ಯರ ಇಡೀ ಸಮುದಾಯವು ಒಗ್ಗೂಡಿ, ಒಂದು ಕುಟುಂಬವಾಗಿ ನಾವು ಮಾರ್ಚ್‌ನಿಂದ ಜುಲೈ ೨೦೨೦ರವರೆಗೆ ೧೯ ವರ್ಚುವಲ್ ಕಾರ್ಯಕ್ರಮಗಳನ್ನು ನಡೆಸಿದೆವು.

ಸಾಂಸ್ಕೃತಿಕ ಸೌರಭ

ಹಣ ಎಂಬುದು ಗೊಬ್ಬರ ಇದ್ದಂತೆ. ಗುಡ್ಡಹಾಕಿ ಬಿಟ್ಟರೆ ದುರ್ನಾತ ಬೀರುತ್ತದೆ. ಹರಡಿದರೆ ಬೆಳೆಯುತ್ತಾ ಹೋಗುತ್ತದೆ. -ಜೆ. ಆರ್. ಡಿ. ಟಾಟಾ

ಸಾಂಸ್ಕೃತಿಕ ಸೌರಭ

೮. ೨೦೨೦ ಗಣೇಶೋತ್ಸವ: ಗಣೇಶೋತ್ಸವಕ್ಕಾಗಿ ನಾವು ಎರಡು ದಿನಗಳ ಕಾರ್ಯಕ್ರಮವನ್ನು ಆಯೋಜಿಸಿದೆವು. ಆಗಸ್ಟ್ ೧೬ ರಂದು ಬೃಂದಾವನದ ಅತ್ಯಂತ ಆತ್ಮೀಯ ಸ್ವಯಂಸೇವಕ *ರಘುರಾಮ್ ರಾಯಸಂ* ಅವರು ಮಣ್ಣಿನ ಗಣೇಶನನ್ನು ತಯಾರಿಸಲು ಮಕ್ಕಳಿಗೆ ಕಲಿಸಿದರು ಮತ್ತು *ದರ್ಶನ ವಡ್ನರೆ* ಅವರು ಮಕ್ಕಳಿಗೆ ಗಣೇಶ ಹಬ್ಬದಲ್ಲಿ ಕರಕುಶಲ ತಯಾರಿಕೆಯನ್ನು ಕಲಿಸಿದರು. "ನಾವು ವಾಸ್ತವವಾಗಿ ಈ ಕಾರ್ಯಕ್ರಮಗಳು ಮಾಡಲು ಸಾಧ್ಯವೇ?" ಎಂದು ನಾವು ಚಿಂತೆ ಮಾಡುತ್ತಿದ್ದೆವು, ಆದರೆ ಮಕ್ಕಳು ಕಳುಹಿಸಿದ ತಮ್ಮ ಗಣೇಶನ ಚಿತ್ರಗಳನ್ನು ನೋಡಿ ಆಶ್ಚರ್ಯಗೊಂಡೆವು. ಕಾರ್ಯಕ್ರಮದಲ್ಲಿ ಕಲಿತು, ತಾವೇ ಮಾಡಿದ ಗಣೇಶನಿಗೆ ಪೂಜೆ ಮಾಡಿದರು ಮತ್ತು ಅದರ ಚಿತ್ರಗಳನ್ನು ಕಳುಹಿಸಿದರು. ನಂತರ ತ್ರಿವೇಣಿ ಕನ್ನಡ ಕೂಟದವರೊಂದಿಗೆ ಸಹಕರಿಸಿ ಗಣೇಶನ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಗಸ್ಟ್ ೨೩ರಂದು ರೂಪಿಸಿದೆವು.

೯. ೨೦೨೦ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ನಾವಿಕೋತ್ಸವ ಮತ್ತು ಅಕ್ಕ ಸಮ್ಮೇಳನದಂತಹ ಮಹಾ ಕನ್ನಡ ವರ್ಚುಯಲ್ ಕಾರ್ಯಕ್ರಮಗಳಲ್ಲಿ ನಮ್ಮ ಬೃಂದಾವನ ಸದಸ್ಯರು ಉತ್ಸಾಹದಿಂದ ಭಾಗವಹಿಸಿದರು. ಅವರು ಭಾಗವಹಿಸಿದ್ದು ಮಾತ್ರವಲ್ಲದೆ ಕೆಲವು ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ನಡೆಸಿಕೊಡಲು ಸ್ವಯಂಪ್ರೇರಿತರಾಗಿ ಮುಂದೆ ಬಂದರು. ಈ ಕಾರ್ಯಕ್ರಮಗಳಿಗೆ ಮಾಡಿದ ವಿಡಿಯೋಗಳು ಯಾವುದೇ ಚಲನಚಿತ್ರಗಳಿಗಿಂತ ಕಡಿಮೆ ಇರಲಿಲ್ಲ. ಹೊರಾಂಗಣ ಚಿತ್ರೀಕರಣ ಕಲಾವಿದರು, ಛಾಯಾಗ್ರಾಹಕರು, ಇತ್ಯಾದಿ ಎಲ್ಲರೂ ಬೃಂದಾವನ ಸದಸ್ಯರೇ ಆಗಿದ್ದು ನಮ್ಮ ಹೆಮ್ಮೆ. ಅಕ್ಕ ಮತ್ತು ನಾವಿಕಾಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರಚಿಸಲು ನಮ್ಮ ಸ್ವಯಂಸೇವಕರು ಮಾಡಿದ ಅದ್ಭುತ ಕಾರ್ಯಗಳಿಂದಾಗಿ ನಾವು ಸ್ವಯಂಸೇವಕರಿಗೆ ಒಂದು ಔತಣ ಕೂಟವನ್ನು ಆಯೋಜಿಸಿ, ಅದು ಸೆಪ್ಟೆಂಬರ್ ೧೯ ರಂದು ಜಾನ್ಸನ್ ಪಾರ್ಕ್‌ನಲ್ಲಿ ನಡೆಯಿತು. ಸರ್ಕಾರವು ನಿಗದಿಪಡಿಸಿದ ಎಲ್ಲಾ ಮುನ್ನೆಚ್ಚರಿಕೆಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸಿ ಈ ಕಾರ್ಯಕ್ರಮವನ್ನು ಏರ್ಪಾಡು ಮಾಡಿದ್ದೆವು.

ಧರ್ಮ ಒಂದೇ ನಿಜವಾದ ಮಿತ್ರ. ಸಾವಿನಲ್ಲಿಯೂ ಸಹ ಜೊತೆಯಾಗಿರುತ್ತದೆ. ಮಿಕ್ಕಿದ್ದೆಲ್ಲವೂ ಶರೀರದೊಂದಿಗೆ ನಾಶವಾಗುತ್ತದೆ. -ಮನು ಸ್ಮೃತಿ

ಸಾಂಸ್ಕೃತಿಕ ಸೌರಭ

೧೦. ನವೆಂಬರ್ ೧, ೨೦೨೦ : ಕನ್ನಡ ರಾಜ್ಯೋತ್ಸವ: ನವೆಂಬರ್ ಒಂದರಂದೇ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಸೌರಭ ತಂಡದ ಪ್ರಯತ್ನ ಈ ವರ್ಷವೂ ಮುಂದುವರೆಯಿತು. ಸರ್ಕಾರವು ಸೂಚಿಸಿದ ಮಾರ್ಗಸೂಚಿಯನ್ನು ಅನುಸರಿಸಿ, ಮುಂಜಾನೆ ಬೃಂದಾವನ ಸದಸ್ಯರೊಡಗೂಡಿ ಕನ್ನಡ ಧ್ವಜಾರೋಹಣ ಮತ್ತು ತಾಯಿ ಭುವನೇಶ್ವರಿ ಪೂಜಾ ಕಾರ್ಯಕ್ರಮ ಮಾಡಲಾಯಿತು. ನಾವು ಕನ್ನಡ ರಾಜ್ಯೋತ್ಸವದ ಮಹಾನ್ ಕಾರ್ಯಕ್ರಮವನ್ನು ನೆರೆ ರಾಜ್ಯದ ಕನ್ನಡ ಕೂಟಗಳು ಹಾಗು ಪೂರ್ವ ತೀರದ ಇನ್ನಿತರ ಕನ್ನಡ ಕೂಟ ಸೇರಿ ಒಟ್ಟು ಏಳು ಕನ್ನಡ ಕೂಟಗಳ ಸಹಕಾರದೊಂದಿಗೆ, ವರ್ಚುಯಲ್ ವೇದಿಕೆಯಲ್ಲಿ ಅನೇಕ ಕನ್ನಡ ಪ್ರೇಕ್ಷಕರ ಜೊತೆ ಒಟ್ಟಿಗೆ ಕೈಜೋಡಿಸಿ ವಿವಿಧ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮವನ್ನು ಆಯೋಜಿಸಿದ್ದೆವು.

೧೧. ಸಪ್ಟೆಂಬರ್ ೫, ೨೦೨೦ : ವಾರ್ಷಿಕೋತ್ಸವ / ಮಕ್ಕಳೋತ್ಸವ

ವರ್ಚುವಲ್ ವೇದಿಕೆಯ ಲಾಭವನ್ನು ಪಡೆದುಕೊಂಡು, ನಾವು ನಮ್ಮ ಸ್ಪರ್ಧೆಗಳನ್ನು ಪ್ರತ್ಯೇಕ ಕಾರ್ಯಕ್ರಮಗಳಾಗಿ ವಿಂಗಡಿಸಿದೆವು. ಗಾನ ಕೋಗಿಲೆ, ನಾಟ್ಯ ಮತ್ತು ಕನ್ನಡ ಸ್ಪರ್ಧೆ ಹೀಗೆ ಮೂರು ಸ್ಪರ್ಧೆಗಳನ್ನು ಆಯೋಜಿಸಿದೆವು. ಸ್ಪರ್ಧೆಗಳಲ್ಲಿ ಶಾಸ್ತ್ರೀಯ ಪ್ರಕಾರವನ್ನು ಮೊದಲ ಬಾರಿ ಪರಿಚಯಿಸಿ, ಅದರಲ್ಲಿ ಎಲ್ಲ ವಯಸ್ಸಿನವರಿಗೂ ಪಾಲ್ಗೊಳ್ಳಲು ಅವಕಾಶ ನೀಡಲಾಯಿತು. ಈ ಕಾರ್ಯಕ್ರಮವನ್ನು ನಿರ್ವಹಿಸಲು ಮುಂದಾದಾಗ ನಮಗೆ ಅಭೂತಪೂರ್ವ ಪ್ರತಿಕ್ರಿಯೆಯು ಸಿಕ್ಕ ಕಾರಣ, ಶಾಸ್ತ್ರೀಯ ಪ್ರಕಾರ ಹಾಗು ಶಾಸ್ತ್ರೀಯವಲ್ಲದ ಪ್ರಕಾರವಾಗಿ ಎರಡು ಪ್ರತ್ಯೇಕ ಕಾರ್ಯಕ್ರಮಗಳ ದಿನಾಂಕಗಳನ್ನು ರಚಿಸಬೇಕಾಯಿತು. ಕೋಗಿಲೆ ಸ್ಪರ್ಧೆಯ ಅಂತಿಮ ಹಂತ ನವೆಂಬರ್ ೨೮ ಮತ್ತು ೨೯ ರಂದು, ನಾಟ್ಯ ಮತ್ತು ಕನ್ನಡ ಸ್ಪರ್ಧೆಯ ಅಂತಿಮ ಹಂತ ಡಿಸೆಂಬರ್ ೪ ರಂದು ನಡೆಸಲಾಯಿತು. ನಾವು ಡಿಸೆಂಬರ್ ೫ ರಂದು ನಮ್ಮ ಅಂತಿಮ ಕಾರ್ಯಕ್ರಮವನ್ನು ಬೃಂದಾವನ ಶಾಲಾ ಮಕ್ಕಳ ಹಾಗು ಹಿರಿಯರ ನಾಟಕಗಳೊಂದಿಗೆ ನಡೆಸಿಕೊಟ್ಟೆವು.

ಬೃಂದಾವನ ಸದಸ್ಯರಿಗೆ ವೇದಿಕೆಯ ಮೇಲೆ ಒಂದು ವಿಶಿಷ್ಟವಾದ ಅನುಭವ ನೀಡುವಂತಹ ಪ್ರದರ್ಶನ ತರುವುದೇ ನನ್ನ ಮುಖ್ಯ ಉದ್ದೇಶವಾಗಿ, ವಿವಿಧ ಕನ್ನಡ ಕಾರ್ಯಕ್ರಮಗಳನ್ನು ರಚಿಸುತ್ತಿರುವಾಗ, ಹಿಂದೆ ಯಾವುದೇ ತಂಡಕ್ಕೆ ಬಂದಿರದ ಒಂದು ವಿಶಿಷ್ಟ ಅನುಭವ ಈ ಸೌರಭ ತಂಡಕ್ಕೆ ಬಂದೊದಗಿತು. ಅದು ಈ ಸಾಂಕ್ರಾಮಿಕ ರೋಗ ಹರಡಿದ ಸಲುವಾಗಿ, ನಮ್ಮ ಕಾರ್ಯಕ್ರಮಗಳ ಶೈಲಿ ಬದಲಿಸಬೇಕಾಗಿ ಬಂತು. ಈ ಸೌರಭ ತಂಡದ ಮುಖಾಂತರ ಕಾರ್ಯಕ್ರಮಗಳನ್ನು ೨೦೧೯ರಲ್ಲಿ ಸಾಂಪ್ರದಾಯಿಕವಾಗಿ ಎಲ್ಲರೊಡನೆ ವೇದಿಕೆಯ ಮೇಲೆ ನಡೆಸಿಕೊಡಲಾಯಿತು. ಆದರೆ ಈ ಸಾಂಕ್ರಾಮಿಕ ರೋಗದ ಭಯದಿಂದ, ನಮ್ಮ ಸಾವಿರಾರು ಸದಸ್ಯರ ಆರೋಗ್ಯದ ದೃಷ್ಟಿಯಿಂದ, ೨೦೨೦ರಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ಪ್ರವರ್ತಿಸಲು ನಮಗೆ ಅವಕಾಶ ಸಿಕ್ಕಿತು. ವರ್ಚುಯಲ್ ಆಗಿ ಎಲ್ಲರನ್ನು ಸೇರಿಸಿದ ಕೀರ್ತಿ ಬೃಂದಾವನ ಕನ್ನಡ ಕೂಟಕ್ಕೆ ಸೇರುತ್ತದೆ ಎಂದು ನಾನು ಬಹಳ ಹೆಮ್ಮೆಯಿಂದ ಹೇಳಬಲ್ಲೆ. ನಮ್ಮ ವರ್ಚುವಲ್ ಸರಣಿಯು ಪ್ರಾರಂಭವಾದ ನಂತರ ಪ್ರತಿ ವಾರವೂ ಎಲ್ಲರೂ ಈ ಕಾರ್ಯಕ್ರಮಗಳಿಗಾಗಿ ಎದುರು ನೋಡುತ್ತಿದ್ದರು. ಇದು ಬಹಳಷ್ಟು ಜನರ ಪ್ರತಿಭೆಗಳು ಹೊರಬರಲು ಒಂದು ದಾರಿಯಾಯಿತು ಹಾಗು ಈ ಕಾರ್ಯಕ್ರಮಗಳನ್ನು ಸಿದ್ಧಪಡಿಸುವಾಗ ಮತ್ತು ರಚಿಸುವಾಗ ಅನೇಕ ಜನರೊಡನೆ ಪರಸ್ಪರ ಸಂಪರ್ಕ ಸಾಧಿಸಲು ಅವಕಾಶ ಒದಗಿ ಬಂತು. ಈ ಕಾರ್ಯಕ್ರಮಗಳನ್ನು ರಚಿಸುವ ಸಮಯದಲ್ಲಿ ಹಲವಾರು ಸ್ವಯಂಸೇವಕರೊಂದಿಗೆ ಸಾಕಷ್ಟು ಗಂಟೆಗಳ ಕಾಲ ಕೆಲಸ ಮಾಡುವ ಸದವಕಾಶ ದೊರೆತದ್ದು ನನ್ನ ಅದೃಷ್ಟ ಎಂದು ಭಾವಿಸಿದ್ದೇನೆ. ಸಾಂಸ್ಕೃತಿಕ ವಿಭಾಗದ ನಿರ್ದೇಶಕಿಯಾಗಿ ನಾನು ಏನೇನು ಮಾಡಿದೆನೋ ಅದೆಲ್ಲಾ ಕೇವಲ ನಿಸ್ವಾರ್ಥ ಸ್ವಯಂಸೇವಕರ ಅಪಾರ ಸಹಾಯದಿಂದ ಮಾತ್ರ ಸಾಧ್ಯವಾಯಿತು.

ಈ ಎರಡು ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ನನಗೆ ಸಹಾಯ ಹಸ್ತನೀಡಿ ಸಹಕರಿಸಿದ ಎಲ್ಲರಿಗೂ ನನ್ನ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸಲು ಈ ಸಂದರ್ಭದಲ್ಲಿ ಇಚ್ಛಿಸುತ್ತೇನೆ. ಒಗ್ಗಟ್ಟಿನಲ್ಲಿ ಬಲವಿದೆ ಎಲ್ಲರೂ ಒಗ್ಗೂಡಿ ಕೆಲಸ ಮಾಡಿದರೆ ನಾವು ಸಾಧಿಸಲಾರದ ಕಾರ್ಯಗಳೇ ಇಲ್ಲ! ನಾವು ದಾಟಲಾಗದ ಎಲ್ಲೆಯೇ ಇಲ್ಲ.

ಸೌರಭ ಸಾಹಿತ್ಯ

ದಾಶರಥಿ ಘಟ್ಟು, ನ್ಯೂ ಜೆರ್ಸಿ

೨೦೧೯ರ ಗಣೇಶೋತ್ಸವದಲ್ಲಿ ಸಾಹಿತ್ಯ ಬೃಂದಾವನದ ಒಂದು ಕಾರ್ಯಕ್ರಮ ಏರ್ಪಡಿಸಬೇಕೆಂದು ಸೌರಭ ತಂಡ ಯೋಜಿಸಿತು. ಸಾಹಿತ್ಯ ಬೃಂದಾವನದ ಈ ಕಾರ್ಯಕ್ರಮದಲ್ಲಿ ಏನು ಮಾಡಬಹುದೆಂದು ಯೋಚಿಸುತ್ತಿದ್ದಾಗ, ಕಂಪ್ಯೂಟರ್ ತಂತ್ರಜ್ಞಾನದ ಅಧ್ಯಾಪಕರೂ, ಹಂಪಿಯ ವಿಶ್ರಾಂತ ಉಪ ಕುಲಪತಿಗಳೂ, ಲೇಖಕರೂ ಆದ ಚಿದಾನಂದ ಗೌಡರು ಮತ್ತು ಅವರ ಶ್ರೀಮತಿಯವರಾದ ತಾರಿಣಿಯವರೂ ನ್ಯೂಜೆರ್ಸಿಯಲ್ಲಿರುವ ಮಗಳ ಮನೆಗೆ ಬಂದಿರುವ ವಿಷಯ ಗೆಳೆಯ ಭಾಸ್ಕರ್ ತೈಲಗೇರಿಯವರಿಂದ ತಿಳಿಯಿತು. ತಾರಿಣಿಯವರು ಜ್ಞಾನಪೀಠ ಪ್ರಶಸ್ತಿ ಭಾಜನ, ರಾಷ್ಟ್ರಕವಿ ಕುವೆಂಪುರವರ ಮಗಳು. ಅವರು "ಮಗಳು ಕಂಡ ಕುವೆಂಪು" ಎಂಬ ಸುಂದರ ಕೃತಿಯ ಲೇಖಕರೂ ಹೌದು. ಸಾಹಿತ್ಯೋತ್ಸವದ ಸಂಭ್ರಮಕ್ಕೆ ಅವರಿಗಿಂತ ಸರಿಯಾದ ಅತಿಥಿಗಳು ಯಾರು ತಾನೇ ಸಿಗಲು ಸಾಧ್ಯ ಆದರೆ ಅವರನ್ನು ಯಾರ ಮೂಲಕ ಭೇಟಿ ಮಾಡುವುದು? ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದರೆ ಬರುತ್ತಾರೆಯೇ? ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರಿಗೆ ಬಿಡುವು ಇದೆಯೇ? ಎಂಬ ಪ್ರಶ್ನೆಗಳು ತಲೆಯಲ್ಲಿ ಓಡುತ್ತಿದ್ದವು.

ನಾನು ಮೈಸೂರಿನ SJCEನಲ್ಲಿ ಓದುತ್ತಿದ್ದಾಗ ಚಿದಾನಂದ ಗೌಡರು ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿದ್ದರು. ತುಂಬಾ ಒಳ್ಳೆಯ ಅಧ್ಯಾಪಕರೆಂದು ಹೆಸರು ಪಡೆದಿದ್ದರು ಮತ್ತು ಅದಾಗಲೇ "ಇಂಜಿನಿಯರಿಂಗ್ ಗೀತೆಗಳು" ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದರು. ಬಿಳಿ ಶರ್ಟು ಮತ್ತು ಬಿಳಿ ಪ್ಯಾಂಟ್ ಹಾಕಿ ಬರುತ್ತಿದ್ದ ಅವರನ್ನು ದೂರದಿಂದ ನೋಡಿದ್ದೆ. ಅವರು ಕುವೆಂಪುರವರ ಅಳಿಯ ಎಂದು ತಿಳಿದ ಮೇಲಂತೂ ಅವರ ಹತ್ತಿರ ಹೋಗಲೂ ಒಂದು ರೀತಿಯ ಭಯ ಇತ್ತು. ದೂರದಿಂದಲೇ ಅವರನ್ನು ಒಬ್ಬ ದೇವದೂತನಂತೆ ನೋಡುತ್ತಿದ್ದೆ.

ಸಾಹಿತ್ಯೋತ್ಸವದ ಒಂದು ವಾರಕ್ಕೆ ಮುಂಚೆ, ಚಿದಾನಂದ ಗೌಡರ ಮಗಳು ಪ್ರಾರ್ಥನಾರವರ ಕಾಂಟಾಕ್ಟ್ ನಂಬರ್ ಪಡೆದು, ಅವರಿಗೆ ಒಂದು ಮೆಸೇಜ್ ಕಳಿಸಿದೆ. ಚಿದಾನಂದ ಗೌಡರಿಗೇ ಕರೆ ಮಾಡಲು ಒಂದು ರೀತಿಯ ಹಿಂಜರಿಕೆ ಇತ್ತು. ಗೌಡರು ಬಿಡುವಾಗಿಯೇ ಇರುತ್ತಾರೆ, ಯಾವ ಸಮಯಕ್ಕೆ ಬೇಕಾದರೂ ಅವರಿಗೆ ಕರೆ ಮಾಡಬಹುದು ಎಂದು ಪ್ರಾರ್ಥನಾರವರು ಹೇಳಿದರು. ಅವರಿಗೆ ಕರೆ ಮಾಡಿದಾಗ, ಗೌಡರು, ನನ್ನನ್ನು ತುಂಬಾ ವರ್ಷಗಳಿಂದ ಬಲ್ಲಷ್ಟು ಆತ್ಮೀಯವಾಗಿ ಮಾತನಾಡಿದಾಗ, ನನ್ನ ಮೈ ಚಳಿ ಬಿಟ್ಟು ಹೋಯಿತು. ಸಾಹಿತ್ಯೋತ್ಸವದ ಕಾರ್ಯಕ್ರಮಕ್ಕಾಗಿ ಅವರನ್ನು ನೋಡಲು ಬರಬೇಕೆಂದಿರುವುದನ್ನು ತಿಳಿಸಿದೆ.

ನಾನು ಅಹೀಶ್ ಮನೆಗೆ ಹೋಗಿ, ಅಹೀಶ್ ಮತ್ತು ಸರಿತಾರವರ ಜೊತೆ ಗೌಡರನ್ನು ಭೇಟಿ ಮಾಡಲು ಅವರ ಮಗಳು ಪ್ರಾರ್ಥನಾರವರ ಮನೆಗೆ ಹೋದೆ. ಚಿದಾನಂದ ಗೌಡರೂ ಮತ್ತು ತಾರಿಣಿಯವರೂ ತುಂಬಾ ಆತ್ಮೀಯ ಸಂಭ್ರಮದಿಂದ ನಮ್ಮನ್ನು ಬರಮಾಡಿಕೊಂಡರು. SJCE ದಿನಗಳನ್ನು ನೆನೆಸಿಕೊಂಡು ಬಹಳ ಮಾತಾಡಿದೆವು. ನನ್ನ ಗೆಳೆಯರಾದ ಅವರ ಶಿಷ್ಯರ ಬಗ್ಗೆ ಅವರು ವಿಚಾರಿಸಿದರು. ಸಾಹಿತ್ಯದ ಬಗ್ಗೆ, ಕುವೆಂಪು ಮತ್ತು ತೇಜಸ್ವಿಯವರ ಬಗ್ಗೆ ಮಾತಾಡಿದೆವು. ಗಣೇಶೋತ್ಸವ ಮತ್ತು ಸಾಹಿತ್ಯೋತ್ಸವಕ್ಕೆ ಅವರನ್ನು ಆಹ್ವಾನಿಸಿದೆವು. ಸಾಹಿತ್ಯೋತ್ಸವದ ಕಾರ್ಯಕ್ರಮದಲ್ಲಿ ಯಾವುದರ ಬಗ್ಗೆ ಮಾತಾಡಬೇಕೇನು ಅವರು ಕೇಳಿದರು. 'ನೀವು ಏನು ಮಾತನಾಡಿದರೂ ಅದರಲ್ಲಿ ಬೆಲೆಯಿರುತ್ತದೆ. ನೀವು ಕಾರ್ಯಕ್ರಮಕ್ಕೆ ಬಂದು ಅದರಲ್ಲಿ ಭಾಗವಹಿಸುವುದೇ ನಮ್ಮ ಸೌಭಾಗ್ಯ' ಎಂದು ಹೇಳಿದೆವು.

ಗಣೇಶೋತ್ಸವದ ದಿನ, ಹೇಳಿದ ಸಮಯಕ್ಕಿಂತ ಮುಂಚಿತವಾಗಿಯೇ ಚಿದಾನಂದ ಗೌಡರು ಮತ್ತು ತಾರಿಣಿಯವರನ್ನು, ಪ್ರಾರ್ಥನಾ ಅವರು ಕಾರ್ಯಕ್ರಮದ ಸ್ಥಳಕ್ಕೆ ಕರೆದುಕೊಂಡು ಬಂದರು. ಗೌಡರು ಮತ್ತು ತಾರಿಣಿಯವರು ಅಂದಿನ ಕಾರ್ಯಕ್ರಮದ ವಿಶೇಷ ಅತಿಥಿಗಳೂ ಆಗಿದ್ದರು. ಲಘು ಉಪಹಾರದ ನಂತರ ಅವರನ್ನು ಸಂವಾದಕ್ಕಾಗಿ ನಿಗದಿತವಾಗಿದ್ದ ಸಭಾಂಗಣಕ್ಕೆ ಕರೆದುಕೊಂಡು ಹೋದೆವು. ಅತ್ಯಂತ ಕಡಿಮೆ ಅವಧಿಯಲ್ಲಿ ಈ ಸಂವಾದ ಕಾರ್ಯಕ್ರಮ ಯೋಜಿಸಿದ್ದಾಗ್ಯೂ, ಸಭಾಂಗಣ ತುಂಬಿಹೋಗಿತ್ತು. ಪಕ್ಕದ ಕೋಣೆಗಳಿಂದ ಕುರ್ಚಿಗಳನ್ನು ತಂದು ಹಾಕಿದರೂ ಸಾಲದೇ, ಬಹಳಷ್ಟು ಜನ ನಿಂತೇ ಇದ್ದರು. ಸಾಹಿತ್ಯ ಸಂವಾದ ಕಾರ್ಯಕ್ರಮಕ್ಕೆ ಇಷ್ಟು ಜನ ಸೇರಿದ್ದುದು ಅತ್ಯಂತ ಅಪರೂಪದ ದೃಶ್ಯವಾಗಿತ್ತು. ಚಿದಾನಂದ ಗೌಡರು ಮತ್ತು ತಾರಿಣಿ ಚಿದಾನಂದರನ್ನು ನೋಡಲು, ಅವರ ಮಾತುಗಳನ್ನು ಕೇಳಲು ಮತ್ತು ಅವರನ್ನು ಮಾತನಾಡಿಸಲು ಕನ್ನಡ ಬಂಧುಗಳು ಮುಗಿ ಬಿದ್ದಿದ್ದರು.

ಸೌರಭ ತಂಡದ ಅಧ್ಯಕ್ಷ ಸತೀಶ್ ಹೊಸನಗರ ಚಿದಾನಂದ ಗೌಡ ದಂಪತಿಗಳನ್ನು ಸಭೆಗೆ ಸ್ವಾಗತ ಮಾಡುವುದರ ಮೂಲಕ ಸಂವಾದಕ್ಕೆ ಚಾಲನೆ ಕೊಟ್ಟರು. ನನ್ನದು (ದಾಶರಥಿ ಘಟ್ಟು) ಒಂದು ರೀತಿಯ ಚರ್ಚಾನಿರ್ವಾಹಕನ ಪಾತ್ರ. ನನ್ನ SJCE ದಿನಗಳನ್ನು ನೆನೆಸಿಕೊಂಡು ಚಿದಾನಂದ ಗೌಡರನ್ನೂ ಮತ್ತು ತಾರಿಣಿಯವರ "ಮಗಳು ಕಂಡ ಕುವೆಂಪು" ಪುಸ್ತಕದ ಓದನ್ನು ನೆನೆಪಿಸಿಕೊಂಡು ತಾರಿಣಿಯವರನ್ನೂ ಸಭೆಗೆ ಪರಿಚಯಿಸಿದೆ. ಈ ಪರಿಚಯ ಎನ್ನುವುದು ಒಂದು ಸಂಪ್ರದಾಯ. ಚಿದಾನಂದ ಗೌಡರು ಮತ್ತು ತಾರಿಣಿಯವರ ಬಗ್ಗೆ ಗೊತ್ತಿಲ್ಲದವರು ಯಾರಿದ್ದಾರು? ಸಾಹಿತ್ಯ, ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿಯವರ ಬಗ್ಗೆ ಓದಿಕೊಂಡವರಿಗೆಲ್ಲಾ ಇವರು ಪರಿಚಯವಿದ್ದೇ ಇರುತ್ತಾರೆ.

ಒಂದು ಗಂಟೆ ಎಂದು ಯೋಜಿತವಾಗಿದ್ದ ಸಾಹಿತ್ಯ ಸಂವಾದ ಸುಮಾರು ಎರಡೂವರೆ ಗಂಟೆಗಳ ಕಾಲ ನಡೆಯಿತು. ಚಿದಾನಂದ ಗೌಡರು, ತಾರಿಣಿಯವರ ಜೊತೆಗಿನ ಮದುವೆಯ ಪ್ರಸ್ತಾಪದಿಂದ ಹಿಡಿದು, ಕುವೆಂಪುರವರ ಜೊತೆಗಿನ ಮಾತುಕತೆ, ಅವರ ಕುಟುಂಬದಲ್ಲಿನ ಒಡನಾಟಗಳು ಮತ್ತು ತೇಜಸ್ವಿಯವರ ಬಗೆಗಿನ ಅನೇಕ ಸ್ವಾರಸ್ಯಕರ ಸಂಗತಿಗಳನ್ನು ಹೇಳಿದರು. ತಾರಿಣಿಯವರು ಅವರ ಬಾಲ್ಯ, ಕುವೆಂಪುರವರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ತೋರಿಸುತ್ತಿದ್ದ ಕಾಳಜಿ, ಅವರ ಪ್ರೀತಿ, ಅವರು ಕೊಟ್ಟಿದ್ದ ಸ್ವಾತಂತ್ರ್ಯಗಳ ಬಗ್ಗೆ ಮಾತನಾಡಿದ್ದಲ್ಲದೇ, ಅವರ ತಂದೆ, ಅಣ್ಣಂದಿರು ಮತ್ತು ಅಕ್ಕಂದಿರ ಜೊತೆಗಿನ ಒಡನಾಟ ಮತ್ತು ಅನೇಕ ಸ್ವಾರಸ್ಯಕರ ಸಂಗತಿಗಳನ್ನು ಹೇಳಿದರು. ಈ ಸಂವಾದದಲ್ಲಿ ಅವರ ಮಾತುಗಳನ್ನು ಕೇಳಿ, ಕುವೆಂಪು ಕುಟುಂಬದ ಪ್ರಬುದ್ಧತೆ ಮತ್ತು ಸುಸಂಸ್ಕೃತತೆಯ ಅರಿವು ಹೆಚ್ಚಾಯಿತು. ಈ ದಂಪತಿಗಳ ಸರಳತೆ, ಸ್ನೇಹಪರತೆ, ಮನಃಪೂರ್ವಕ ಮಾತುಕತೆ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ತಾವು ಅನೇಕ ಸ್ವಾರಸ್ಯಕರ ಸಂಗತಿಗಳನ್ನು ಹೇಳಿದ್ದಲ್ಲದೇ, ಸಭಾಸದಸ್ಯರ ಅನೇಕ ಪ್ರಶ್ನೆಗಳಿಗೆ ಅವರು ತುಂಬಾ ತಾಳ್ಮೆ ಮತ್ತು ಉತ್ಸಾಹಗಳಿಂದ ವಿವರಣೆ ಕೊಟ್ಟರು. ಇವರಿಂದ ಎಷ್ಟು ಕೇಳಿದರೂ ಸಾಲದು ಎಂಬ ಮಾಂತ್ರಿಕ ವಾತಾವರಣ ಸಭೆಯಲ್ಲಿ ಸೃಷ್ಟಿಯಾಗಿತ್ತು. ಒಟ್ಟಿನಲ್ಲಿ ಸೌರಭ ತಂಡ ಮತ್ತು ಬೃಂದಾವನ ಕನ್ನಡ ಕೂಟದ ಬಂಧುಗಳಿಗೆ ಸಾಹಿತ್ಯೋತ್ಸವದ ಈ ಸಂವಾದ ಕಾರ್ಯಕ್ರಮ ಎಂದೆಂದಿಗೂ ಸುಂದರ ನೆನಪಾಗಿ ಮನಸ್ಸಿನಲ್ಲಿ ಉಳಿದಿರುತ್ತದೆ.

●

ನೀವು ಸೇವಿಸುವ ಅನ್ನ, ಬೇಯಿಸುವ ನೀರು ನಿಮ್ಮ ದುಡಿಮೆಯ ಬವರಾಗಬೇಕೇ ಹೊರತು ಬೇರೆಯವರ ಕಣ್ಣೀರಾಗಬಾರದು.

—ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳು

ಸೌರಭದ ವನವಿಹಾರ

ಸತೀಶ್ ಹೊಸನಗರ, ನ್ಯೂ ಜೆರ್ಸಿ

ನಮ್ಮ ನ್ಯೂ ಜೆರ್ಸಿಯ ವಿಶೇಷಗಳಲ್ಲಿ ಒಂದು ಎಂದರೆ ಇಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಬದಲಾಗುವ ಸುತ್ತ ಮುತ್ತಲಿನ ಪರಿಸರ ಎನ್ನಬಹುದು. ಇಲ್ಲಿನ ಸೀಜನ್ ಬದಲಾಗುವ ಪ್ರಕ್ರಿಯೆ, ಪ್ರತಿ ಮೂರು ತಿಂಗಳುಗಳಿಗೆ ಅವರ್ಣನೀಯ ಬದಲಾವಣೆ ತರುವುದನ್ನು ನೋಡುವುದು ಒಂದು ರೀತಿಯಲ್ಲಿ ಹಿತವಾದ ಅನುಭವವೆನ್ನಬಹುದು. ವರ್ಷ ಪೂರ್ಣ ಕಾಲ ಬೇಸಿಗೆಯ ಹಾಗೇ ಇದ್ದರೆ ಏನು ಫಲ? ಅಂತೆಯೇ ನಮ್ಮಲ್ಲಿನ ಕೇವಲ ಮೂರೇ ಮೂರು ತಿಂಗಳುಗಳ ಕಾಲ ಇರುವ ಬೇಸಿಗೆ ವರ್ಷದಿಂದ ವರ್ಷಕ್ಕೆ ಅಪ್ಯಾಯಮಾನವಾಗಿರುವುದು. ಈ ಸಂದರ್ಭದಲ್ಲೇ ನಮ್ಮೆಲ್ಲರ ಒಡನಾಟ ವನವಿಹಾರದ ರೂಪದಲ್ಲಿ ಆಚರಿಸಲ್ಪಡುವುದು. ಈ ವರ್ಷ (2020ರಲ್ಲಿ) ಕೋವಿಡ್ ಮಾರಿಯ ದೆಸೆಯಿಂದ ವನವಿಹಾರವನ್ನು ಆಚರಿಸದಿದ್ದುದರಿಂದ, ಕಳೆದ ವರ್ಷದ ನಮ್ಮ ವನವಿಹಾರ ಕಾರ್ಯಕ್ರಮ ಇಂದಿಗೂ ನಮ್ಮ ಸ್ಮರಣೆಯಲ್ಲಿರುವುದು.

ಜುಲೈ ತಿಂಗಳ 13ನೇ ತಾರೀಖಿನಂದು ಸ್ಥಳೀಯ ಡೋನಾಲ್ಡ್‌ಸನ್ ಪಾರ್ಕಿನಲ್ಲಿ ಎಲ್ಲರನ್ನೂ ಕುಟುಂಬ ಸಮೇತ ಭಾಗವಹಿಸಲು ಕೇಳಿಕೊಂಡಿದ್ದೆವು. ನಮ್ಮ ಕಾರ್ಯಕ್ರಮದ ವಿಶೇಷವೆಂದರೆ, 'ಆಟ, ಓಟ, ಊಟ, ಮೋಜು, ಮಸ್ತಿ' ಎಂಬ ಟ್ಯಾಗ್‌ಲೈನ್‌ನಲ್ಲಿ ಎಲ್ಲರನ್ನು ಆಹ್ವಾನಿಸಿದ್ದೆವು. ನಮ್ಮ ವಾರ್ಷಿಕ ಪಿಕ್‌ನಿಕ್‌ಗಳ ವಿಶೇಷವೆಂದರೆ, ಈ ಕಾರ್ಯಕ್ರಮದಲ್ಲಿ ಭಾರತದಿಂದ ಬಂದಂತಹ ಅನೇಕ ಹಿರಿಯ ದಂಪತಿಗಳು ತಮ್ಮ ಮಕ್ಕಳ - ಮೊಮ್ಮಕ್ಕಳ ಜೊತೆಗೆ ಪಾಲ್ಗೊಳ್ಳುವುದು. ಹೀಗೆ, ಈ ಪಿಕ್‌ನಿಕ್ ಅನ್ನು ಮೂರು ತಲೆಮಾರುಗಳನ್ನು ಒಂದು ತೆರೆದ ವೇದಿಕೆಯಲ್ಲಿ ಒಟ್ಟುಗೂಡಿಸುವ ಕಾರ್ಯಕ್ರಮ ಎಂದರೆ ತಪ್ಪಾಗಲಾರದು. ಇದು ನಮ್ಮ ಸದಸ್ಯರಿಗೆ ಶುಲ್ಕರಹಿತ ಕಾರ್ಯಕ್ರಮ. ಇದೇ ಸಂದರ್ಭದಲ್ಲಿ ಹೊಸ ಹೊಸ ಸದಸ್ಯರೂ ಕೂಡ ಬೃಂದಾವನವನ್ನು ಸೇರುವ ಅವಕಾಶ ಎನ್ನಬಹುದು.

ಶನಿವಾರ ಮುಂಜಾನೆ, ಸಂಪೂರ್ಣ ನೀಲಿ ಬಣ್ಣದ ಆಕಾಶವಿತ್ತು, ಮುಂದೆ ಬರುವ ಚಿಣ್ಣರ ಚಿಲಿಪಿಲಿ, ಆಟೋಟಗಳನ್ನು ನೋಡಲು ಮೋಡಗಳ್ಯಾವೂ ಇರಲಿಲ್ಲ. ಶುಭ್ರವಾದ ಆಕಾಶ, ಹಸನಾದ ತಿಳಿಬಿಸಿಲಿನ ವಾತಾವರಣದಲ್ಲಿ ನಮ್ಮ ತಯಾರಿ ಬೆಳಿಗ್ಗೆ ಒಂಭತ್ತು ಘಂಟೆಯಿಂದಲೇ ಆರಂಭವಾಗಿತ್ತು. ಒಂದು ವೇಳೆ ಮಳೆ ಏನಾದರೂ ಬಂದು ಬಿಟ್ಟರೆ ಎನ್ನುವ ಮುತುವರ್ಜಿಯಿಂದ ಹಾಕಿದ್ದ ದೊಡ್ಡ ಬಿಳಿ ಬಣ್ಣದ ಟೆಂಟ್ ತಿಳಿಬಿಸಿಲಿನಿಂದ ಇನ್ನೂ ಕಂಗೊಳಿಸುತ್ತಿತ್ತು. ಎತ್ತ ನೋಡಿದರೂ ಹಸಿರಿನ ಮೈದಾನ, ಊಟದ ಅನುಕೂಲಕ್ಕೆ ಸಾಕಷ್ಟು ಪಿಕ್‌ನಿಕ್ ಟೇಬಲ್‌ಗಳು. ಅಲ್ಲದೇ ನಮ್ಮ ದೋಸೆ ಕ್ಯಾಂಪ್‌ಗೆಂದೇ ಮೀಸಲಾಗಿಟ್ಟ ಒಂದು ತೆರೆದ ಸ್ಥಳ. ಮಕ್ಕಳೇ ತಮ್ಮ ಕೈ ಅಕ್ಷರದಲ್ಲಿ ಬರೆದ ಸೂಚನಾ ಫಲಕಗಳು. ಎಲ್ಲಕ್ಕೂ ಮುಖ್ಯವಾಗಿ ಈ ದಿನದ ಆಟೋಟಗಳಲ್ಲಿ ವಿಜೇತರಿಗೆ ಮತ್ತು ಭಾಗವಹಿಸಿದವರಿಗೆ ನೀಡಲು ತಂದಿಟ್ಟ ಬಂಗಾರ ಬಣ್ಣದ ಟ್ರೋಫಿಗಳು, ಈ ಎಲ್ಲವೂ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದ್ದವು.

ಜನರು ಬಂದು ಸೇರುತ್ತಿದ್ದ ಹಾಗೆ, ನಮ್ಮ ನಿರ್ದೇಶಕರಲೊಬ್ಬರಾದ ಬಾಬು ರಂಗಯ್ಯನವರು ಮಕ್ಕಳಿಂದ ಹಿರಿಯರಾದಿಯಾಗಿ ಎಲ್ಲರಿಗೂ ಯೋಗ ಪ್ರಾಣಾಯಾಮದ ವಿವರಗಳನ್ನು ತಿಳಿಸಿ ಹೇಳಿದರು. ಅವರ ಮಾರ್ಗದರ್ಶನದಲ್ಲಿ ಅನೇಕ ಮಕ್ಕಳು ವಿವಿಧ ಆಸನಗಳನ್ನು ಹಾಕಿದರು.

ಈ ನಡುವೆ, ಇತರ ನಿರ್ದೇಶಕರು ಉಳಿದ ಆಟೋಟಗಳ ಕಡೆಗೆ ಗಮನ ಹರಿಸಿದರು. ಒಂದೆರೆಡು ಕಾರುಗಳಲ್ಲಿ ಸುಮಾರು ಇಪ್ಪತ್ತು ಕಲ್ಲಂಗಡಿ ಹಣ್ಣುಗಳು ಬಂದು ಸೇರಿದವು. ಊಟಕ್ಕೂ ಮೊದಲು ಬಿಸಿಲಿನಲ್ಲಿ ಬಸವಳಿದವರಿಗೆ ಅನುಕೂಲವಾಗಲಿ ಎಂದು ನೀರು ಮಜ್ಜಿಗೆಯೂ ಲಭ್ಯವಾಗಿತ್ತು. ಪಕ್ಕದ ದೋಸೆ ಕ್ಯಾಂಪ್‌ನಲ್ಲಿ ಇನ್ನೇನು ದೋಸೆ ಮಾಡಲು ಆರಂಭಿಸುತ್ತಿದ್ದಂತೆ ಜನರು ಒಬ್ಬರ ಹಿಂದೆ ಒಬ್ಬರಂತೆ ಸರತಿ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯವಾಗಿತ್ತು.

ಈ ಪಿಕ್‌ನಿಕ್‌ನ ಊಟದ ತಿಂಡಿಯ ವಿಶೇಷವೆಂದರೆ ತರಕಾರಿ ಬಿರಿಯಾನಿಯ ಜೊತೆಗೆ, ಮಕ್ಕಳಿಗೆ ಮೊಸರನ್ನ ಮತ್ತು ತರಾವರಿ ದೋಸೆಗಳ ಸರಬರಾಜು. ಅದೇ ಸ್ಥಳದಲ್ಲಿ ಮಾಡಿ ಬಡಿಸುತ್ತಿದ್ದ ದೋಸೆ, ಅದರಲ್ಲೂ ಅನೇಕ ಚಟ್ಟಿಪುಡಿ ಮತ್ತು ಸುವಾಸನಾಭರಿತ ಮಸಾಲೆಯೊಂದಿಗೆ ಎಲ್ಲರ ಬಾಯಲ್ಲೂ ನೀರೂರಿಸುತ್ತಿತ್ತು. ಹಾಗೆಯೇ ಅನೇಕ ಸಿಹಿತಿಂಡಿಗಳು, ಮುಖ್ಯವಾಗಿ ಮ್ಯಾಂಗೋ ಐಸ್‌ಕ್ರೀಮ್!

ನಮ್ಮ ಯುವ ಬೃಂದಾವನದ ಸದಸ್ಯರು, ದೇಣಿಗೆ (ಚಾರಿಟಿ) ಟೀಮ್ ಜೊತೆಗೆ ಕೈ ಜೋಡಿಸಿ, ಲೆಮನೇಡ್ ಸ್ಟ್ಯಾಂಡ್ ಮಾಡಿ, ಸ್ಥಳೀಯ ಚಾರಿಟಿಗೆ ಹಣ ಹೊಂದಿಸುವ ಕೆಲಸವನ್ನು ಮಾಡಿದರು. ಒಂದು ಕಡೆ ಅನೇಕ ಟೀಮುಗಳು ಲಿಮಿಟೆಡ್ ಓವರ್ ಕ್ರಿಕೆಟ್ ಅನ್ನು ಪಕ್ಕದ ಬೇಸ್‌ಬಾಲ್ ಫೀಲ್ಡ್‌ನಲ್ಲಿ ಆಡುತ್ತಿದ್ದರೆ, ಮಕ್ಕಳಿಂದ ಹಿರಿಯರವರೆಗೆ ಅನೇಕ ಆಟೋಟಗಳು. ಚಿಕ್ಕ ಮಕ್ಕಳಿಗೆ ಕೆರೆ - ದಡ ಆಟವಾದರೆ ಹಿರಿಯರಿಗೆ ಪಗಡೆ ಚೌಕಾಬಾರಗಳಿದ್ದವು. ಒಟ್ಟಿಗೆ, ಈ ಪಿಕ್‌ನಿಕ್ ಕಾರ್ಯಕ್ರಮದಲ್ಲಿ ಗೆದ್ದ ಹಾಗೂ ಭಾಗವಹಿಸಿದ ಎಲ್ಲ ಮಕ್ಕಳಿಗೂ ಒಂದೊಂದು ಟ್ರೋಫಿ!

ಈ ಪಿಕ್‌ನಿಕ್ ಕಾರ್ಯಕ್ರಮದ ಮತ್ತೊಂದು ವಿಶೇಷವೆಂದರೆ, ಮೊಟ್ಟ ಮೊದಲನೆಯ ಬಾರಿಗೆ ನಮ್ಮ ಯುವ ಬೃಂದಾವನ ತಂಡದ ಸದಸ್ಯರು, ಸುಮಾರು ಐವತ್ತಕ್ಕೂ ಹೆಚ್ಚು ಯುವಕ - ಯುವತಿಯರು ಸೇರಿ ನಡೆಸಿಕೊಟ್ಟ 'ಯುವ ಫ್ಲಾಶ್ ಮಾಬ್' (Yuva flash mob) ಡ್ಯಾನ್ಸ್ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ನೋಡುತ್ತಿದ್ದರೆ, ಯಾವುದೋ ಸಿನಿಮಾ ಶೂಟಿಂಗ್‌ನಲ್ಲಿ ಗ್ರೂಪ್ ಡ್ಯಾನ್ಸ್ ನಡೆಯುತ್ತಿದೆಯೇನೋ ಎಂಬ ಭಾವನೆ ಬರುತ್ತಿತ್ತು.

ಒಟ್ಟಿನಲ್ಲಿ ಹಿರಿಯರಿಂದ ಕಿರಿಯರವರೆಗೆ ಎಲ್ಲ ವಯೋಮಾನದವರನ್ನು ಒಂದು ತೆರೆದ ಆಗಸದ ವೇದಿಕೆಯಲ್ಲಿ ಸೇರಿಸಿ, ಒಂದು ಸೊಗಸಾದ ಬೇಸಿಗೆಯ ದಿನವನ್ನು ನಾವೆಲ್ಲರೂ ಎಂದೂ ಮರೆಯದ ಹಾಗೆ ಮಾಡಿದ ಕಾರ್ಯಕ್ರಮ ಈ ವರ್ಷದ ಪಿಕ್‌ನಿಕ್ ಎನ್ನಬಹುದು. ಹೀಗೆ ಬಂದು ಹಾಗೆ ಹೋಗುವ ಬೇಸಿಗೆಯನ್ನು ನಾವು ಪ್ರತೀ ವರ್ಷವೂ ನಮ್ಮ ವನವಿಹಾರದ ರೂಪದಲ್ಲಿ ಸಂಭ್ರಮಿಸೋಣ. ಇಂತಹ ಉತ್ತಮವಾದ ಕಾರ್ಯಕ್ರಮವನ್ನು ಆಯೋಜಿಸಿದ ಸೌರಭ ತಂಡದ ಎಲ್ಲ ಪದಾಧಿಕಾರಿಗಳಿಗೂ ಮತ್ತು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಲ್ಲ ಕಾರ್ಯಕರ್ತರಿಗೂ ಸಪ್ರೇಮ ವಂದನೆಗಳು.

ನನ್ನ ಅಜ್ಜ ಯಾರೆಂದು ನನಗೆ ಗೊತ್ತಿಲ್ಲ; ಆದರೆ ಆತನ ಮೊಮ್ಮಗ ಏನಾಗಬೇಕೆಂದು ನನಗೆ ಗೊತ್ತಿದೆ. -ಅಬ್ರಹಾಂ ಲಿಂಕನ್

ಸೌರಭದ ವನವಿಹಾರ

ಕಲಿತದ್ದು ಮುಗಿಯಿತು ಎಂಬ ಅಹಂ ಭಾವ ಬಿಟ್ಟು, ಸದಾ ಕಲಿಯುತ್ತಿರಬೇಕು. -ಆ. ನ. ಕೃ.

Sourabha's Yuva Brindavana



Suhas Kumar, New Jersey

Yuva Brindavana, officially created during the "Milana Thanda", continued its efforts to create and maintain interest amongst Kannada youth to become active members of Brindavana and partake in all the activities offered by the organization. The four pillars which this suborganization stands on includes Culture, Service, Development, and Socialization.

2019

As is customary during all annual indoor Brindavana events, the yuva volunteers, from as young as 4 year old children to tweens, always saddle up to serve food for the rest of their fellow attendees. The youth also play a hand backstage, with audio, and with clean up (a special shout out to Aneesh Acharya for his service through 2019). The first major event requiring the Yuva Brindavana strength was the Vijay Prakash Concert, where the yuva team helped usher, organize and police nearly 800 attendees in a timely and friendly fashion.

Still feeling the ripples of the energy displayed by Vijay Prakash's ensemble, Anagha and Ananya, gathered nearly 25 yuvakaru to participate in the first ever group dance program hosted by Brindavana's Cultural team during the Brindavana picnic!

As the summer faded and the yuva members' school started back up again, the annual Ganesha Celebrations transitioned into the Inaugural Kannada Rajyothsava, and eventually to the Makkala Dina where we hosted a CPR/AED instructor to come in and certify nearly 10 Brindavana members, of which 5 were adults and 5 were yuva members! This was complemented by a first ever yuva initiated drama where our fantastic yuva Actors and Actresses enacted in a moving skit about dealing with Autism within our culture. Cast: Sudeepta, Shreya, Supreet, Rachna, Aahiri, Akshar, and Kriti as the children and Anagha, Ananya, Ekta, Eashaan, Raksha, and Swathi as the parents!

The winter snuck up and the holiday season kicked off with an initiative by Swathi Prasad to host a collection of winter care packages for the NYC homeless. The 80 care packages were packed by the younger yuva members while the older members walked the streets of New York from Union Square (14th Street) to Central Park (60th Street) while traversing, in groups, up avenues 3 through 9. To celebrate the wonderful day, the event ended with some food and lighthearted game of White Elephant.

2020

2020 had an optimistic beginning and many plans for the year with continuation of previous traditions and even a social game night event on the Horizons. What ensued was generational and kicked off the new Virtual age!

With this new format, and many Virtual shows later, the Brindavana team was able to conduct the first ever Graduation Celebration for all 2020 Graduates from High School, Undergraduate Schools, and Graduate Schools! To commemorate this achievement, we invited Ashwini Thammaiah, Pramod Thammaiah, and Surabhi Pandit as our keynote speakers. Ashwini, having graduated from MIT and Harvard Business school was able to talk about her venture into the new digital age when online marketing was making its initial impacts on society in the late 2000's. Surabhi, a University of Michigan alumni, was able to educate an entire society about a career path in Social Service in an impactful way. Pramod, a Harvard graduate and a successful entrepreneur, was able to motivate the new generation to take calculated risks and strive for greatness without fearing failure!

A great event overall was that much more crucial for the recent grads due to the hardships that the pandemic left them with! The comfort that things will get better and that we can equip ourselves to this new era and the motivation to strive to achieve were significantly valuable for the graduates who faced an unfair culmination to each one of their vast efforts! We know that the graduates of 2020 will grow to succeed having faced their biggest challenge at such an early stage of their careers!

The last major event for the Yuva Brindavana members was the Yuva to Yuva camp. In this virtual summer camp, there were 4 weeks of engaging Yuva instructors occupying the minds and interest of the up and coming yuvas during 2 sessions each of the 5 days of the week!

Sourabha's Yuva Brindavana

Yuva to Yuva – Summer Camp Courses

- Ajay Bhat – Baking
- Avni Girish – Beginner Coding
- Chiraag Nadig – Basic Computer Skills with iOS
- Dhanvi Satyaprasad – Arts and Crafts
- Dhanya Sureshbabu – Basic Computer Skills with Windows
- Hithaishi Chandra – History of Karnataka
- Inchara Hosanagara – History of Karnataka
- Nihar Basroor – Decoding the Rubik's Cube
- Saurav Vidyadhara – Intermediate Coding
- Srivatsa Karanam – Decoding Chess
- Sudeepta Murthy – Cooking
- Vismitha Prashanth – Drawing Disney Characters

Both events in 2020 became great hits with the participants and the supporters, creating an opportunity for all future Yuva Brindavana teams to conduct annual Graduation Celebrations and Yuva to Yuva camps!

CONGRATULATIONS CLASS OF 2020



ಸೌರಭದ ಸಹಾಯಹಸ್ತ

ರಾಮಚಂದ್ರ ಶಾಸ್ತ್ರಿ, ನ್ಯೂ ಜೆರ್ಸಿ

ಬೃಂದಾವನ ಕನ್ನಡ ಕೂಟ ಒಂದು ಲಾಭ ರಹಿತ (Non-Profit) ಸಂಘಟನೆ. ಕನ್ನಡ ಭಾಷೆ, ಕನ್ನಡದ ಸಂಸ್ಕೃತಿ, ಕನ್ನಡದ ಹಲವಾರು ಕಲೆಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲದೆ, ಈ ಕೂಟ ಕರ್ನಾಟಕ ಮತ್ತು ನ್ಯೂ ಜೆರ್ಸಿ ರಾಜ್ಯಗಳ ಹಲವಾರು ದೇಣಿಗೆ (Charity) ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಬೃಂದಾವನದ ಸೌರಭ ತಂಡ ಹಲವಾರು ಸಮಾಜ ಸೇವಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದೆ. ಹಲವಾರು ಧಾರ್ಮಿಕ ಸಂಸ್ಥೆಗಳಿಗೆ ಸಹಾಯ ಹಸ್ತ ನೀಡಿದೆ. ಈ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ ಇಲ್ಲಿದೆ.

ಸೌರಭ ತಂಡದ ಸಮಾಜ ಸೇವಾ ಕಾರ್ಯಗಳು ೨೦೧೯ ಏಪ್ರಿಲ್ ೭, ಯುಗಾದಿ ಕಾರ್ಯಕ್ರಮದಿಂದ ಶುರು ಆಯಿತು. ಅಮೇರಿಕ ದೇಶ ಪ್ರಪಂಚದಲ್ಲೇ ಅತ್ಯಂತ ಸಂಪದ್ಭರಿತ ದೇಶ. ಆದರೆ, ಈ ದೇಶದಲ್ಲೂ ಹಲವಾರು ಜನ ಎರಡು ಹೊತ್ತು ಊಟಕ್ಕೆ ಕಷ್ಟ ಪಡುತ್ತಿದ್ದಾರೆ ಅಂದರೆ ನಂಬ್ತೀರಾ? ನಿಜ. ಈ ದೇಶದಲ್ಲೂ ಹಸಿವೆಯಿಂದ ಬಳಲುವ ಎಷ್ಟೋ ಜನರಿದ್ದಾರೆ, ಅವರಲ್ಲಿ ಸುಮಾರು ೭೦೦ ಸಾವಿರ ಜನ ಇಲ್ಲೇ ನ್ಯೂ ಜೆರ್ಸಿಯಲ್ಲಿ ಇದ್ದಾರೆ. ಇವರಲ್ಲಿ ೨೦೦ ಸಾವಿರ ಹಸಿದ ಮಕ್ಕಳಿದ್ದಾರೆ ಎಂದು ನೆನೆಸಿಕೊಂಡಾಗ ಯಾರಿಗಾದರೂ ಕರುಳು ಚುರುಕ್ ಅನ್ನದೆ ಇರದು. ಅಂಥವರ ಸಹಾಯರ್ಥವಾಗಿ ಯುಗಾದಿಯ ಶುಭ ದಿನದಂದು Food Drive ಆಯೋಜಿಸಲಾಗಿತ್ತು. ೧೦೦ಕ್ಕೂ ಹೆಚ್ಚು ಊಟದ ಮತ್ತು ಪಾನೀಯ ವಸ್ತುಗಳನ್ನು ಸಂಗ್ರಹಿಸಿ ಸೌತ್ ಬ್ರುನ್ಸವಿಕ್ ಫುಡ್ ಪ್ಯಾಂಟ್ರಿಗೆ ಕೊಟ್ಟಾಗ ಮನಸ್ಸಿಗೆ ಏನೋ ತೃಪ್ತಿ. ನಾಲ್ಕು ಜನಕ್ಕೆ ಊಟ ಹಾಕಿದ ಪುಣ್ಯ ಬಳಗದ ಸದಸ್ಯರಿಗೆ ಸೇರಿದ್ದು. ಯುಗಾದಿಯಂದು ಅನ್ನದಾನದ ಮಹತ್ವನ್ನು ಶ್ಲಾಘಿಸಿದ ದಿವಂಗತ Dr. M.G. ಪ್ರಸಾದ್ ಅವರ ಮಾತುಗಳು ಅವಿಸ್ಮರಣೀಯ.

SANKARA EYE FOUNDATION Giving the Gift of Vision

'ರವಿ ಇರದೆ ಕಣ್ಣೇನು? ಕಣ್ಣಿರದೆ ರವಿ ಏನು?'ಎನ್ನುವ ಕವಿ ವಾಣಿ ಜನಪರಿಚಿತ. ನೋಡಲು ಬೆಳಕು ಬೇಕು ನಿಜ, ಆದರೆ ಅದೊಂದೇ ಸಾಲದು. ನೋಡುವುದಕ್ಕೆ ಕಣ್ಣೂ ಇರಬೇಕು. ಕಣ್ಣು ಕಾಣದಿದ್ರೆ ಜಗತ್ತೇ ಕತ್ತಲು. ನೋಡುವ ಭಾಗ್ಯವಿಲ್ಲದ ಎಷ್ಟೋ ಮಂದಿ ನಮ್ಮ ಭಾರತ ದೇಶದಲ್ಲಿದ್ದಾರೆ (ಪ್ರಪಂಚದಲ್ಲೇ ಅತಿ ಹೆಚ್ಚು ಸಂಖ್ಯೆ). ಸುಮಾರು ೪.೫ ಕೋಟಿ ಜನ ಯಾವುದೋ ಕಾಯಿಲೆಯ ಕಾರಣದಿಂದ ಕಣ್ಣಿಲ್ಲದವರು. ಎಂಥ ದಾರುಣ ಸ್ಥಿತಿ! ಒಂದು ಆಶಾಕಿರಣ ಏನೆಂದರೆ, ಎಲ್ಲಾ ಕಣ್ಣಿನ ಕಾಯಿಲೆಗಳೂ ಅಂಧತ್ವವನ್ನು ತರಬೇಕಾಗಿಲ್ಲ ಸರಿಪಡಿಸಬಹುದಾದ ಬೇಕಾದಷ್ಟು ಕಣ್ಣಿನ ಖಾಯಿಲೆಗಳು ಇವೆ. ಅವುಗಳನ್ನು ಸರಿಪಡಿಸದೆ ಬಿಟ್ಟರೆ ಅಂಧತ್ವ ಸಿದ್ಧ. Sankara Eye Foundation ೧೯೭೭ರಲ್ಲಿ ಸ್ಥಾಪನೆಯಾಗಿದ್ದು ಅದರ ಗುರಿ: ಗುಣಪಡಿಸಬಹುದಾದ ಕಣ್ಣಿನ ಕಾಯಿಲೆಗಳಿಗೆ ಉಚಿತವಾಗಿ ಚಿಕಿತ್ಸೆಕೊಟ್ಟು ಜನರಿಗೆ 'Gift of Vision' ಕೊಡುವುದು. ಅಂದಿನಿಂದ ಇಂದಿನವರಿಗೆ ೨೦ ದಶಲಕ್ಷ ಜನಕ್ಕೆ, ಅವರ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ೧೦ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಿದ್ದಾರೆ. ಸೌರಭ ತಂಡ ಯುಗಾದಿ ಹಬ್ಬದ ಸಮಾರಂಭದಲ್ಲಿ Sankara Eye Foundation, USA ಜೊತೆ ಕೈ ಜೋಡಿಸಿ ಒಂದು ನಿಧಿ ಸಂಗ್ರಹಣಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಅಂದು ಬೃಂದಾವನದ ಬಂಧುಗಳಿಂದ ಸುಮಾರು $೨೦೦ ಸಂಗ್ರಹಿಸಿ SEF, USA ಗೆ ಅರ್ಪಿಸಲಾಯಿತು.

ಫೆಬ್ರವರಿ ೧೪, ಭಾರತದ ಇತಿಹಾಸದಲ್ಲಿ ರಕ್ತಾಕ್ಷರದಲ್ಲಿ ಬರೆಯುವಂಥ ಕರಾಳ ದಿನ. ಜಮ್ಮು ಶ್ರೀನಗರದ ಹೆದ್ದಾರಿಯಲ್ಲಿ ಭಾರತದ ಸೇನಾ ಸಿಬ್ಬಂದಿಯರನ್ನು ಒಯ್ಯುತ್ತಿದ್ದ ಒಂದು ವಾಹನ, ಉಗ್ರಗಾಮಿಗಳ ವಿಸ್ಫೋಟಕ್ಕೆ ಗುರಿಯಾಗಿ ಮೀಸಲು ಪಡೆಯ ೪೦ ಸೈನಿಕರು ಆಹುತಿ ಆದ ಘೋರ ದಿನ. ಎದುರು ಬಂದು ಯುದ್ಧ ಮಾಡದೆ ಹೇಡಿತನ ತೋರಿ, ನಮ್ಮ ವೀರ ದೇಶಭಕ್ತರನ್ನು ಅಮಾಯಕವಾಗಿ ಕೊಂದ ದಿನ. ಯಾರಿಗೆ ತಾನೇ ಇದರಿಂದ ರೋಷ ಬರದು? ಭಾರತದಲ್ಲಿ ಎಲ್ಲೆಲ್ಲೂ ರಾಷ್ಟ್ರ ಪ್ರೇಮದ ಪತಾಕೆ. ಭಾರತ ಸರ್ಕಾರ ಉಗ್ರಗಾಮಿಗಳು ಮಾಡಿದ ಹೀನ ಕಾರ್ಯಕ್ಕೆ ಪ್ರತ್ಯುತ್ತರ ಕೊಡುವ ಜೊತೆಯಲ್ಲಿ ಹುತಾತ್ಮರ ನಿಧಿಗಾಗಿ ಹಣ ಸಂಗ್ರಹಣೆಗೂ ಮುಂದಾಯಿತು. ನ್ಯೂ ಜೆರ್ಸಿ ಮತ್ತು ನ್ಯೂಯಾರ್ಕನಲ್ಲಿ ಧಾಳಿಯನ್ನು ವಿರೋಧಿಸಿ ಹಲವಾರು ಮೆರವಣಿಗೆಗಳೂ ಮತ್ತು ಕಾರ್ಯಕ್ರಮಗಳೂ ನಡೆದವು. ಹಲವಾರು ಸಂಸ್ಥೆಗಳು ನಿಧಿ ಸಂಗ್ರಹಿಸಿ ಸರ್ಕಾರದ ಕೈಜೋಡಿಸಿದವು. ಭಾರತದ ವೀರ ಸೈನಿಕರ ಸಂರಕ್ಷಣಾ ನಿಧಿ ಸಹಾಯಾರ್ಥವಾಗಿ ಬೃಂದಾವನ ಕೂಟ ಇತರ ಕನ್ನಡ ಸಂಘಗಳೊಂದಿಗೆ ಕೈಮೇಳವಿಸಿ ಮೇ ೫ರಂದು ಪ್ರಖ್ಯಾತ ಗಾಯಕ ಶ್ರೀ ವಿಜಯಪ್ರಕಾಶ್ ಮತ್ತು ಅವರ ತಂಡದವರಿಂದ ಒಂದು ನಿಧಿ ಸಂಗ್ರಹಣಾ ಕಾರ್ಯಕ್ರಮವನ್ನು ಆಯೋಜಿಸಿತು. ಅದರಿಂದ ಸಂಗ್ರಹಿಸಿದ $೫೩೭೨ ನ್ನು 'ಭಾರತ್ ಕೆ ವೀರ್' ಸಂಸ್ಥೆಗೆ ದೇಣಿಗೆ ಕೊಟ್ಟಿದ್ದು ಕನ್ನಡ ಬಂಧುಗಳ ದೇಶಪ್ರೇಮದ ಸಂಕೇತ.

ನಿಮ್ಮ ಬದುಕನ್ನು ಬದಲಿಸಬಲ್ಲ ವ್ಯಕ್ತಿಗಾಗಿ ನೀವು ಹುಡುಕುತ್ತಿದ್ದರೆ, ಕನ್ನಡಿಯ ಮುಂದೆ ನಿಲ್ಲಿ. —ಸಂದೀಪ್ ಮಾಹೇಶ್ವರಿ

ಸೌರಭದ ಸಹಾಯಹಸ್ತ

ಪ್ರತಿ ಬೇಸಿಗೆಯಲ್ಲಿ ಸಾಮಾನ್ಯವಾಗಿ ನಾವು ಕೇಳೋದು 'ಕರ್ನಾಟಕದಲ್ಲಿ ನೀರಿಗೆ ಹಾಹಾಕಾರ, ಎಲ್ಲೆಲ್ಲೂ ಕ್ಷಾಮ' ಎಂದು. ಆದ್ರೆ ೨೦೧೯ ರಲ್ಲಿ ಹವಾಮಾನ ಬದಲಾಗಿ ಅನಿರೀಕ್ಷಿತ ಭಾರಿ ಮಳೆ. ಮಳೆಯ ಆರ್ಭಟಕ್ಕೆ ತತ್ತರಿಸಹೋಗಿತ್ತು ಕರ್ನಾಟಕ. ಕರ್ನಾಟಕ ಮಾತ್ರವಲ್ಲ, ಬೇರೆ ರಾಜ್ಯಗಳೂ ಕೂಡ ವರುಣನ ವಕ್ರ ದೃಷ್ಟಿಗೆ ಬಲಿಯಾದವು. ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಆದ ಅನಾಹುತಕ್ಕೆ ಇತಿಮಿತಿ ಇಲ್ಲ, ನಷ್ಟ ಅಷ್ಟಿಷ್ಟಲ್ಲ. ೫೦ಕ್ಕೂ ಹೆಚ್ಚು ಜನರು ಮರಣ ಹೊಂದಿದ್ದಲ್ಲದೆ, ಗದ್ದೆ ಹೊಲಗಳು ಜಲಮಯ, ಹಸು ಹಂದಿಗಳು ನೀರುಪಾಲು, ಹಳ್ಳಿಗೆ ಹಳ್ಳಿಯೇ ಮುಳುಗಿ ಮನೆಗಳು ಕುಸಿದು ಜನ ಬೀದಿಪಾಲು. ಸುಮಾರು ೨೦ಕ್ಕೂ ಹೆಚ್ಚು ಜಿಲ್ಲೆಗಳು ಮಳೆಯ ಆಕ್ರೋಶಕ್ಕೆ ಬಲಿಯಾದವು. ಒಂದು ಅಂಕಿ ಅಂಶದ ಪ್ರಕಾರ ಸಾವಿರಾರು ಕೋಟಿ ರೂಪಾಯಿಗಳ ನಷ್ಟ ಸರ್ಕಾರಕ್ಕೆ. ಎಲ್ಲ ಕಡೆಯಿಂದ ಸಂತಪ್ತರಿಗೆ ನೆರವು. ಹೊರದೇಶದಲ್ಲಿದ್ದರೂ ಹೃದಯವಂತ ಕನ್ನಡಿಗರಿಂದ ಸಹಾಯದ ಮಹಾಪೂರ. ಬೃಂದಾವನ ಕನ್ನಡ ಕೂಟ ಮುಂದಾಳತ್ವವಹಿಸಿ ಜುಲೈ ೧೩ ಮತ್ತು ೧೫ ರಂದು ಪ್ರವಾಹದಿಂದ ನೊಂದವರ ಸಹಾಯಾರ್ಥ ಹಣ ಸಂಗ್ರಹಣೆ ಮಾಡಿ ಸುಮಾರು $೧೩,೨೦೦ನ್ನು "ಮುಖ್ಯ ಮಂತ್ರಿಗಳ ಪರಿಹಾರ ನಿಧಿ"ಗೆ ಅರ್ಪಿಸಿತು.

ಕನ್ನಡ ನಾಡಿನ ಜೀವನದಿ ಕಾವೇರಿ, ಲಕ್ಷಾಂತರ ರೈತರ ಜೀವನಾಡಿ. ಆದರೆ ಕಾವೇರಿ ನೀರಿನ ಉಪಯೋಗ ಸರಿಯಾಗಿ ಆಗುತ್ತಿಲ್ಲ ಅನ್ನುವುದು ವಿಷಾದದ ಸಂಗತಿ."ಇಶಾ ಫೌಂಡೇಶನ್" ಆಶ್ರಯದಲ್ಲಿ "ಕಾವೇರಿ ಕೂಗು" ಆಂದೋಲನ ನಡೆದಿದೆ. ಕಾವೇರಿ ನದಿಯ ಪುನರ್ಜೀವನಗೊಳಿಸಿ ನದಿಯ ನೀರನ್ನು ಸಮರ್ಥಕವಾಗಿ ಉಪಯೋಗಿಸುವುದೇ ಈ ಸಂಸ್ಥೆಯ ಉದ್ದೇಶ. "ಕಾವೇರಿ ಕೂಗಿ"ಗೆ ಓಗೊಟ್ಟು $೯೯ಲನ್ನು ಸಂಗ್ರಹಿಸಿ "ಇಶಾ ಫೌಂಡೇಶನ್"ಗೆ ಕಾಣಿಕೆಯಾಗಿ ಸೆಪ್ಟೆಂಬರ್ ೧೫, ಗಣಪತಿ ಹಬ್ಬದ ಆಚರಣೆಯಂದು ಸೌರಭ ತಂಡ ನೀಡಿತು.

ಸೆಪ್ಟೆಂಬರ್ ತಿಂಗಳು ಆಗಲೇ ಶುರು ಆಗಿ, ಚಳಿ ನಿಧಾನವಾಗಿ ಆವರಿಸುತ್ತಾ ಇತ್ತು. ಈ ಸಮಯದಲ್ಲಿ ಅಮೇರಿಕಾದ ಸುಮಾರು ಸಂಘ ಸಂಸ್ಥೆಗಳು ನಿರಾಶ್ರಿತರಿಗೆ ನೆರವಾಗಲೆಂದು "Winter Coat Drive" ಮಾಡೋದು ಉಂಟು. ಬೃಂದಾವನ ಕೂಡ ಗಣಪತಿ ಹಬ್ಬದಂದೇ Winter Coat Drive ಮಾಡಿ ನ್ಯೂಯಾರ್ಕ ನ "Bowery Mission" ಗೆ ದಾನ ಮಾಡಿತು.

Cancer ರೋಗವೆಂದರೆ ಮೈ ನಡುಗುತ್ತದೆ. ಅದರಲ್ಲೂ ಬ್ಲಡ್ ಕ್ಯಾನ್ಸರ್ ಅಂತಹ ರೋಗದ ಪ್ರಕಾರಕ್ಕೆ ವಿಶೇಷ ಚಿಕಿತ್ಸೆಯ ಅಗತ್ಯವಿದೆ. ಕೆಲವು ತರಹದ ಬ್ಲಡ್ ಕ್ಯಾನ್ಸರ್ ಪ್ರಕಾರಗಳನ್ನು Bone Marrow Transplant ಮಾಡಿ ಗುಣಪಡಿಸುವಂತಹ ಪ್ರಯತ್ನ ಸಫಲತೆ ಕಂಡಿದೆ. ಆದರೆ ಅದನ್ನು ಯಾರು ದಾನ ಮಾಡಬಹುದು, ಯಾರದ್ದು ಯಾವ ರೋಗಿಗೆ ಹೊಂದುತ್ತೆ ಅನ್ನೋದು ನಮ್ಮ ಪರೀಕ್ಷೆ ಮಾಡಿದ ಮೇಲೆಯೇ ತಿಳಿಯುವುದು. SAMAR organization, Bone Marrow Registration Drive ಅನ್ನು ಬಹಳ ವರ್ಷಗಳಿಂದ ನಡೆಸುತ್ತ ಬಂದಿದೆ. ಈ ದೇಶದಲ್ಲಿ ನಮ್ಮ ಜನರ ಸಂಖ್ಯೆ ಕಡಿಮೆ ಇರೋದ್ರಿಂದ, Bone Marrow donate ಮಾಡೋ ಅಂಥವರ ಸಂಖ್ಯೆಯೂ ಕಡಿಮೆ. ಹಾಗಾಗಿ ಜನರಿಗೆ ಅವರ ಕಾರ್ಯದ ಬಗೆಗೆ ವಿವರವನ್ನು ಕೊಡಲು ನಾವು SAMAR ಸಂಸ್ಥೆಯ ಪದಾಧಿಕಾರಿಗಳನ್ನು ಡಿಸೆಂಬರ್ ೭ರ ಕಾರ್ಯಕ್ರಮಕ್ಕೆ ಆಹ್ವಾನಿಸಿ Bone Marrow Registration Drive ಮಾಡಿದೆವು. ಅದೇ ಸಮಯದಲ್ಲಿ ಬೃಂದಾವನದ ಚಿಣ್ಣರು 'ಬೇಕ ಸೇಲ್' ಮಾಡಿ ಬಂದ $೨೦೦ ಹಣವನ್ನು SAMAR Bone Marrow Registration Drive ಗೆ ಕಾಣಿಕೆಯಾಗಿ ಕೊಟ್ಟದ್ದು ಶ್ಲಾಘನೀಯ!

೨೦೨೦ ಎಲ್ಲ ವರ್ಷದಂತೆ ಅಲ್ಲ. COVID ವೈರಾಣು ಪ್ರಪಂಚವನ್ನೇ ಅಲ್ಲೋಲಕಲ್ಲೋಲಗೊಳಿಸಿದ ವರ್ಷ. ಇದರಿಂದ ಆದ ನಷ್ಟ ಅಷ್ಟಿಷ್ಟಲ್ಲ. ವರ್ಷ ಪ್ರತಿ ವಿಜೃಂಭಣೆಯಿಂದ ಮಾಡುತ್ತಿದ್ದ ಬೃಂದಾವನದ ಕಾರ್ಯಕ್ರಮಗಳನ್ನು ಎಲ್ಲರ ಸಮ್ಮುಖದಲ್ಲಿ ಮಾಡುವ ಅವಕಾಶವನ್ನು ಕಳೆದುಕೊಂಡರೂ ಹತಾಶರಾಗದೆ ಸೌರಭ ತಂಡ ಪ್ರತಿವಾರ 'ವರ್ಚುಯಲ್ ಪ್ರೋಗ್ರಾಮ್' ಶ್ರೇಣಿಯನ್ನು ಶುರು ಮಾಡಿತು. ಅದೇ ಸಮಯಕ್ಕೆ ಕರ್ನಾಟಕದಿಂದ ಮತ್ತು ಸ್ಥಳೀಯ ಸಂಸ್ಥೆಗಳಿಂದ ದೇಣಿಗೆಗೆ ಕೇಳಿಕೆಗಳು ಬಂದಾಗ ಆ ಸಂಸ್ಥೆಗಳ ಸಹಾಯಕ್ಕೆ ಮುಂದಾಯಿತು.

COVID ವೈರಾಣು ಕಾಟದಿಂದ ಸಾರ್ವಜನಿಕರು ಒಂದೇ ಜಾಗದಲ್ಲಿ ಸೇರೋ ಅಂತಹ ಎಲ್ಲ ಕಾರ್ಯಕ್ರಮಗಳು ರದ್ದಾಗಿ, ಜನ ಮನೆಯಿಂದ ಆಚೆ ಬರದಂತೆ ಸರಕಾರದಿಂದ ಕಾಯಿದೆಗಳು ಜಾರಿಯಾದವು. ಜನಸಾಮಾನ್ಯರು ಮನೆಯಿಂದ ಹೊರಗೆ ಬರಲೂ ಹೆದರುವಂತಾಯಿತು. ಅತ್ಯವಶ್ಯಕ ವ್ಯವಹಾರಗಳಲ್ಲದೆ (essential businesses) ಇನ್ನೆಲ್ಲ ವ್ಯವಹಾರಗಳೂ ಬಂದಾದವು, ಸಿನಿಮಾ ಮಂದಿರಗಳು ಮುಚ್ಚಿದವು. ದಿನಗೂಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಅನೇಕ ಕಲಾವಿದರು ಕಕ್ಕಾಬಿಕ್ಕಿಯಾದರು. ಎಲ್ಲರಿಗೂ ಮುಂದೇನು ಅನ್ನುವ ಚಿಂತೆ ಕಾಡಿತು. ದಿನಗಳು ವಾರವಾಗಿ, ವಾರಗಳು ಮಾಸವಾದಾಗ ಎರಡು ಹೊತ್ತಿನ ಊಟಕ್ಕೂ ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂತು. ಆ ಸಮಯಕ್ಕೆ ಕರ್ನಾಟಕದ ಪ್ರಖ್ಯಾತ ಕಲಾವಿದರ ಸಮ್ಮಿಲನದ ಸಂಸ್ಥೆ ಮ್ಯೂಸಿಕ್ ಮ್ಯಾನ್ಷನ್, "ಕಷ್ಟದಲ್ಲಿದ್ದ ಕನ್ನಡ ಕಲಾವಿದರಿಗೆ ನೆರವು ನೀಡಲು ಮಾಡುತ್ತಿರುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಹಣ ಸಂಗ್ರಹಣೆ ಮಾಡಲು ಸಹಾಯ ಮಾಡಿ" ಎಂದು ಅಮೇರಿಕಾ ದೇಶದ ಎಲ್ಲಾ ಕನ್ನಡ ಕೂಟಗಳಿಗೂ ತಮ್ಮ ವಿನಂತಿ ಸಲ್ಲಿಸಿದರು. ಬೃಂದಾವನ ಕನ್ನಡ ಕೂಟ ಸಂತೋಷದಿಂದ ಇದರ ಮುಂದಾಳತ್ವವಹಿಸಿ ಇತರ ಕನ್ನಡ ಕೂಟಗಳ ಜೊತೆ ಕೈಗೂಡಿಸಿ ಹಲವಾರು ಕಾರ್ಯಕ್ರಮಗಳನ್ನು ಸಂಯೋಜಿಸಿ ಕೂಟಗಳ ಸಮುಚ್ಚಯದ ನೆರವಿನಿಂದ $೧೩,೫೦೦ನ್ನು ಸಂಗ್ರಹಿಸಿ ಕರ್ನಾಟಕದ ನೊಂದ ಕಲಾವಿದರಿಗೆ ಮ್ಯೂಸಿಕ್ ಮ್ಯಾನ್ಷನ್ ಸಂಸ್ಥೆಯವತಿಯಿಂದ ವಿತರಿಸಿದ್ದು ದೊಡ್ಡ ಸಾಧನೆಯೇ ಸರಿ. ವಾರಗಟ್ಟಲೆ ನಡೆದ ಕಾರ್ಯಕ್ರಮಗಳಲ್ಲಿ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ಮತ್ತು ಕೈ ಜೋಡಿಸಿದ ಎಲ್ಲ ಕನ್ನಡ ಸಂಘಟನೆಗಳಿಗೂ ನಮ್ಮ ಚಿರ ನಮನ.

ವಿಜೇತರು ಭಿನ್ನವಾದ ಕೆಲಸಗಳನ್ನೇನೂ ಮಾಡುವುದಿಲ್ಲ ತಾವು ಮಾಡುವ ಕೆಲಸಗಳನ್ನೇ ವಿಭಿನ್ನವಾಗಿ ಮಾಡುತ್ತಾರೆ ಅಷ್ಟೇ —ಶಿವ್ ಖೇರಾ

ಸೌರಭದ ಸಹಾಯಹಸ್ತ

ಪ್ರತಿ ವಾರ ಬೆಳಿಗ್ಗೆ ಹತ್ತು ಘಂಟೆಗೆ ತಪ್ಪದೆ ಸೌರಭ ತಂಡ ನಡೆಸಿದ ಹತ್ತಾರು ವಾರಗಳ ಕಾರ್ಯಕ್ರಮಗಳನ್ನು ವೀಕ್ಷಿಸಿ ಉದಾರವಾಗಿ ಧನಸಹಾಯ ಮಾಡಿದ ನಿಮ್ಮೆಲ್ಲರಿಗೂ ತಂಡ ಚಿರಋಣಿ. ಸಂಗ್ರಹಿಸಿದ ಹಣವನ್ನು ಹಲವಾರು ಸಂಸ್ಥೆಗಳಿಗೆ ಸಾಧ್ಯವಾದಷ್ಟು ನೀಡಿ ಸಹಕರಿಸಲಾಯಿತು. ಅದರ ಪರಿಚಯ ಹೀಗಿದೆ: $೧೫೦೦ನ್ನು Meals on Wheels, Monmouth County, New Jersey (ಸುಮಾರು1000 Senior citizen ಮನೆಗಳಿಗೆ ಪ್ರತಿನಿತ್ಯ ಊಟ ಒದಗಿಸುವ ಸಂಸ್ಥೆ), $೧೦೦೦ನ್ನು 'ಬೆಳಕು ಅಕಾಡೆಮಿ' ಬೆಂಗಳೂರು (ಬೆಳಕು ಅಕಾಡೆಮಿ ಅಂಧ ಮಕ್ಕಳ ಕಲ್ಯಾಣಕ್ಕಾಗಿ ವಿದ್ಯಾರ್ಥಿ ನಿಲಯ ಸ್ಥಾಪಿಸಿ ಅಲ್ಲಿ ಸುಮಾರು 35 ಅಂಧ ಮಕ್ಕಳಿಗೆ ಆಶ್ರಯ ಕೊಟ್ಟು ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ), ಮೈಸೂರು ಮೃಗಾಲಯದ ಪ್ರಾಣಿಗಳ ಸಂರಕ್ಷಣೆಗಾಗಿ $೫೦೦ನ್ನು 'Save Mysore Zoo' ಅಭಿಯಾನಕ್ಕೆ (COVID ಗಲಾಟೆಯಲ್ಲಿ ತೊಂದರೆ ಅನುಭವಿಸಿದ್ದು ಬರಿ ಮನುಷ್ಯರೇ ಅಲ್ಲ ಪ್ರಾಣಿಗಳೂ ಕೂಡ. ವಿಶ್ವ ವಿಖ್ಯಾತ Mysore Zoo ನೋಡಲು ಜನ ಬರದೇ Zooಗೆ ಆದಾಯ ಇರದೇ ಪ್ರಾಣಿಗಳಿಗೆ ಆಹಾರ ನೀಡಲೂ ದುಡ್ಡಿಲ್ಲದ ಪರಿಸ್ಥಿತಿ ಬಂದಿತ್ತು ಪ್ರಾಣಿಗಳ ಸಂರಕ್ಷಣೆಗೆ ನಮ್ಮ ಸಣ್ಣ ಕೊಡುಗೆ), $೫೦೦ನ್ನು 'ಮನಸು ಟ್ರಸ್ಟ್' (ಸವಲತ್ತು ಇಲ್ಲದ ಮಕ್ಕಳನ್ನು ಗುರುತಿಸಿ ಅವರಿಗೆ ಸಮಾಜದ ಗೊಂದಲಗಳನ್ನು ಎದುರಿಸಿ ಜಯಿಸಲು ಶಿಕ್ಷಣ, ಆಹಾರ ಮತ್ತು ಇತರೆ ಸೌಲಭ್ಯಗಳ ಜೊತೆ ಹೆಚ್ಚುವರಿ ಜೀವನ ಕೌಶಲ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂತಹ ಸಂಸ್ಥೆ), ಸಂಸ್ಥೆಗಳಿಗೆ ಬೃಂದಾವನ ಅನುದಾನವನ್ನು ನೀಡಿತು.

ಸೆಪ್ಟೆಂಬರ್ ೨೮ ಮತ್ತು ೨೯ "Sewa Diwali" ಸಂಘದ ಜೊತೆ ಕೈ ಜೋಡಿಸಿ ಆಹಾರ ಸಂಗ್ರಹಿಸಿ ನ್ಯೂ ಜೆರ್ಸಿ ಯ Food Pantry ಗಳಿಗೆ 6000 pound ಆಹಾರ ಸಾಮಗ್ರಿಗಳನ್ನು ಸೌರಭ ತಂಡ ಕೊಟ್ಟಿದೆ. ನಿಮ್ಮಿಂದ ಆದ ಸಹಾಯಕ್ಕೆ ಧನ್ಯವಾದಗಳು.

ಹಣದ ತೆರದಲ್ಲಿ ಅನುದಾನ ಮಾತ್ರವಲ್ಲದೆ, ಬೃಂದಾವನದ ಸದಸ್ಯರು, N95 ಮಾಸ್ಕಗಳು, ಆಹಾರಧಾನ್ಯಗಳನ್ನು ಉದಾರವಾಗಿ ವಿತರಿಸಿದ್ದಾರೆ. ಅಹೋರಾತ್ರಿ ನಮಗಾಗಿ ಶ್ರಮಿಸಿದ "First responders" ಮನೆಗಳಿಗೆ ಹೋಗಿ ಅವರಿಗೆ (ದೂರದಿಂದಲೇ!) ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಸೌರಭ ತಂಡದ ಎಲ್ಲ ಅನುದಾನದ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಸಹಕರಿಸಿದ ಬೃಂದಾವನ ಕನ್ನಡ ಕೂಟದ ಎಲ್ಲ ಸದಸ್ಯರಿಗೂ ಸೌರಭ ತಂಡದ ಹೃತ್ಪೂರ್ವಕ ಧನ್ಯವಾದಗಳು.

ಕಳೆದ ಎರಡು ವರ್ಷಗಳಿಂದ ಸೌರಭ ತಂಡ ಪಾಲ್ಗೊಂಡ ವಿವಿಧ ಅನುದಾನದ ಕಾರ್ಯಕ್ರಮಗಳ ಪಕ್ಷಿ ನೋಟ ಕೆಳಗಿದೆ.

Sankara Eye Foundation :	$೨೦೦
ಭಾರತ್ ಕೆ ವೀರ್: India's Brave Hearts:	$೫೩೭೨
ಮುಖ್ಯ ಮಂತ್ರಿಗಳ ಪರಿಹಾರ ನಿಧಿ	$೧೩೨೦
ಕಾವೇರಿ ಕೂಗು, Isha Foundation :	$೩೯೮
SAMAR, Bone Marrow Match Drive	$೨೦೦
ಕರ್ನಾಟಕದ ಕಲಾವಿದರು, Music Mansion	$೧೩,೫೦೦
Meals on Wheels of Monmouth County', NJ	$೧೫೦೦
ಬೆಳಕು Academy, School for the Blind ಬೆಂಗಳೂರು	$೧೦೦೦
Save ಮೈಸೂರು Zoo ಅಭಿಯಾನ	$೫೦೦
ಮನಸು Charitable Trust, ಬೆಂಗಳೂರು	$೫೦೦
South Brunswick Food Pantry, NJ	Food Drive
Sewa Diwali, NJ Food Pantries	Food Drive
Bowery Mission, New York	Winter Coat Drive
First responders/Doctors, NJ	N95 Masks

ನಿಮ್ಮ ಗುರಿಗಳನ್ನು ನೋಡಿ ಜನ ನಗುತ್ತಿಲ್ಲವೆಂದರೆ ಆ ಗುರಿಗಳು ಅತ್ಯಂತ ಸಣ್ಣವು ಎಂದರ್ಥ. —ಅಜೀಮ್ ಪ್ರೇಮ್ ಜಿ

ಕನ್ನಡ ಶಾಲೆ

ಸಂಧ್ಯಾ ಮಲ್ಲಿಕ್, ನ್ಯೂ ಜೆರ್ಸಿ
ಕಾರ್ಯದರ್ಶಿ/ ಬೃಂದಾವನ ಕನ್ನಡ ಶಾಲೆ

ವೃತ್ತಿಯಲ್ಲಿ ಶಿಕ್ಷಕಿಯಾದ ನನಗೆ ಮಕ್ಕಳ ಜೊತೆ ಒಡನಾಟ, ಅವರ ಕಲಿಕೆ, ಅವರ ಬೆಳವಣಿಗೆ ಬಹಳ ಸಂತಸವನ್ನು ನೀಡುತ್ತದೆ. ನ್ಯೂ ಜೆರ್ಸಿಯಲ್ಲಿ ಮಕ್ಕಳಿಗಾಗಿ ಕನ್ನಡ ಶಾಲೆ ಆರಂಭವಾಗಬೇಕೆಂಬ ಆಸೆ ಬಹಳವಾಗಿತ್ತು ಮತ್ತು ಮಕ್ಕಳಿಗೆ ಅದು ಅತ್ಯವಶ್ಯಕವಾಗಿತ್ತು. ಐದು ವರ್ಷಗಳ ಹಿಂದೆ ಬೃಂದಾವನ ಅಧ್ಯಕ್ಷರಾಗಿದ್ದ ಮಲ್ಲಿಕ್ ಪ್ರಸಾದ್ ಮತ್ತು ಮಿಲನ ತಂಡದ ಕಾರ್ಯಕರ್ತರ ಪರಿಶ್ರಮದಿಂದ ಮೊದಲ ಕನ್ನಡ ಶಾಲೆ ಸೌತ್ ಬ್ರನ್ಸ್ವಿಕ್ ನಗರದಲ್ಲಿ ಆರಂಭಗೊಂಡಿತು. ನಂತರ ಅದೇ ವರ್ಷದಲ್ಲಿ ಎಡಿಸನ್ ಮತ್ತು ಈಸ್ಟ್ ವಿಂಡ್ಸರ್ ನಗರಗಳಲ್ಲೂ ಕನ್ನಡ ಶಾಲೆಗಳು ಆರಂಭಗೊಂಡವು. ಹಲವು ಸಹೃದಯಿ ಸ್ವಯಂ ಸೇವಕರ ಸಹಕಾರದಿಂದ ಕನ್ನಡ ಶಾಲೆ ನಿರಂತರವಾಗಿ ನಡೆಯುತ್ತಿದೆ.

ಎರಡು ವರ್ಷಗಳ ಹಿಂದೆ ಸೌರಭ ತಂಡದ ನೇತೃತ್ವದಲ್ಲಿ ಬೃಂದಾವನ ಶಾಲೆಯನ್ನು ವಿಸ್ತರಿಸಬೇಕೆಂಬ ಕನಸನ್ನು ಹೊತ್ತು ಶಾಲೆಯ ಜವಾಬ್ದಾರಿಯನ್ನು ತೆಗೆದುಕೊಂಡೆನು. ಈ ಕಾರ್ಯಕ್ಕೆ ಸೌರಭ ತಂಡ ಮತ್ತು ಅಧ್ಯಕ್ಷರಾದ ಸತೀಶ್‌ರವರ ಸಂಪೂರ್ಣ ಬೆಂಬಲ ಮತ್ತು ಪ್ರೋತ್ಸಾಹವಿತ್ತು.

ಕನ್ನಡ ಶಾಲೆಯನ್ನು ಅತಿ ಕಡಿಮೆ ವೆಚ್ಚದಲ್ಲಿ ನಡೆಸಬೇಕಾಗಿರುವ ಸಂದರ್ಭವಿರುವುದರಿಂದ, ನಮಗೆ ಸ್ಥಳ ಹುಡುಕಾಟಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ನಂತರ ಅವರು ಕೇಳುವ ಎಲ್ಲ ದಾಖಲೆಗಳನ್ನು ಒದಗಿಸಿಕೊಟ್ಟಿದಲ್ಲಿ ನಮಗೆ ಉಚಿತವಾಗಿ ಸ್ಥಳಾವಕಾಶ ದೊರಕುತ್ತದೆ. ಈ ಪ್ರಕ್ರಿಯೆಯ ಹಿಂದೆ ಹಲವರ ಪರಿಶ್ರಮವಿರುತ್ತದೆ. ನಂತರ ಹಲವು ಸಹೃದಯಿ ಸ್ವಯಂಸೇವಕರನ್ನು ಒಟ್ಟುಗೂಡಿಸಿ ಶಾಲೆಯ ಆರಂಭದ ಸಿದ್ಧತೆ ನಡೆಯುತ್ತದೆ.

ಹಿಲ್ಸ್‌ಬರೋ ಶಾಲೆಯ ಉದ್ಘಾಟನೆಗೆ ಕುವೆಂಪುರವರ ಮಗಳು ತಾರಿಣಿ ಚಿದಾನಂದ್ ಮತ್ತು ಅವರ ಅಳಿಯ ಪ್ರೊ. ಚಿದಾನಂದ ಗೌಡರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಇವರೊಂದಿಗೆ ಹಿಲ್ಸ್ ಬರೋ ನಗರದ ಹಲವು ಗಣ್ಯವ್ಯಕ್ತಿಗಳು, ಸರ್ಕಾರ ಅಧಿಕಾರಿಗಳೂ ಕೂಡ ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಆಗಮಿಸಿದ್ದರು. ಇವರೆಲ್ಲರೂ ಮಕ್ಕಳಿಗೆ ನಮ್ಮ ಸಂಸ್ಕೃತಿ ಮತ್ತು ಭಾಷೆಯನ್ನು ಕಲಿಯುವುದು ಎಷ್ಟು ಮುಖ್ಯ ಎಂದು ತಿಳಿಸಿ ಹೇಳಿದರು.

ಬೃಂದಾವನದ ಐದನೆಯ ಶಾಲೆಯ ಉದ್ಘಾಟನೆ ಮಾರ್ಲ್ಬರೊ ನಗರದಲ್ಲಿ ನಡೆಯಿತು ಶಾಲೆಯ ಉದ್ಘಾಟನೆಗೆ ವಿಶ್ವೇಶ್ವರಯ್ಯನವರ ಕುಟುಂಬದವರಾದ ಮೋಕ್ಷಗುಂಡಂ ಶೇಷಾದ್ರಿಯವರು ಮತ್ತು ಗೌತಮ್ ಜೋಯಿಸ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗೌತಮ್ ಜೋಯಿಸ್ ಹಾರ್ವರ್ಡ್ ನಿಂದ ಕಾನೂನು ಪದವಿ ಪಡೆದು ಅಮೇರಿಕ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಭಾರತೀಯ - ಮೂಲದ ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲು ಕೊಡುಗೆಯನ್ನು ನೀಡುತ್ತಿದ್ದಾರೆ, ರಾಜಕೀಯ ಕ್ಷೇತ್ರದಲ್ಲೂ ಇನ್ನಷ್ಟು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಉತ್ತೇಜಿಸಿದರು. ಮುಂದಿನ ಪೀಳಿಗೆಯ ಮಕ್ಕಳು ಜೀವನದಲ್ಲಿ ನಾಯಕತ್ವ ಮತ್ತು ಜವಾಬ್ದಾರಿಯುತ ಪಾತ್ರಗಳನ್ನು ತೆಗೆದುಕೊಳ್ಳಬೇಕೆಂದು ತಿಳಿ ಹೇಳಿದರು.

ಕನ್ನಡ ಶಾಲೆ

ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಸಾಂಸ್ಕೃತಿಕ ಮಂತ್ರಿ ಶ್ರೀ ಸಿ.ಟಿ.ರವಿ ಅವರು ತಮ್ಮ ಶುಭಕೋರಿಕೆಯನ್ನು ವಿಡಿಯೋ ಸಂದೇಶದ ಮೂಲಕ ನಮಗೆಲ್ಲ ಕಳುಹಿಸಿದ್ದರು. ಹಲವಾರು ಬಾರಿ ಅನೇಕ ಕನ್ನಡ ಸ್ನೇಹಿತರು ನಾರ್ತ್ ಜೆರ್ಸಿಯಲ್ಲಿ ಒಂದು ಶಾಲೆಯನ್ನು ಆರಂಭ ಮಾಡಬೇಕೆಂದು ಕೇಳಿದ್ದರು ಅದಕ್ಕಾಗಿ ಸ್ಥಳದ ಹುಡುಕಾಟ ಆರಂಭಗೊಂಡಿತು, ಮುಂಚೆಯೇ ತಿಳಿಸಿದಂತೆ ಶಾಲೆಯ ಆವರಣ ಉಚಿತವಾಗಿ ಪಡೆಯಲು ನಮ್ಮ ಹುಡುಕಾಟ ಆರಂಭಗೊಂಡಿತು. ಅದೇ ಸಂದರ್ಭದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಹಾವಳಿ ಆರಂಭಗೊಂಡು, ನಮ್ಮ ಎಲ್ಲ ಕಾರ್ಯಗಳು ಸ್ಥಗಿತಗೊಂಡವು. ಕನ್ನಡ ಶಾಲೆಗಳಾಗಿ ವರ್ಚುಯಲ್ ಶಾಲೆಗಳಲ್ಲಿ ಕನ್ನಡ ಕಲಿಸುವಿಕೆಯನ್ನು ಮುಂದುವರಿಸಿದೆವು.

ಸೌರಭ ತಂಡದ ಸಹಕಾರದೊಂದಿಗೆ ಬೇಸಿಗೆಯಲ್ಲಿ ಆರನೆಯ ಶಾಲೆಯ ಆರಂಭಕ್ಕೆ ತಯಾರಿ ನಡೆಸಿದೆವು. ಅನೇಕ ಉತ್ಸಾಹಿ ಸ್ವಯಂಸೇವಕರು ನಮ್ಮೊಂದಿಗೆ ಕೈಜೋಡಿಸಿ ಶಾಲೆಯ ಜವಾಬ್ದಾರಿಯನ್ನು ಹೊತ್ತರು. ಶಾಲೆಯ ಉದ್ಘಾಟನೆಯು ಜಾನ್ಸನ್ ಪಾರ್ಕ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಇದಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಬಸವರಾಜ್ ಹೀರೇಮಠ್ ಅವರು ಆಗಮಿಸಿದ್ದರು. ಅವರು ಕನ್ನಡ ಶಾಲೆಗಳ ಬೆಳವಣಿಗೆಯನ್ನು ನೋಡಿ ಬಹಳ ಸಂತಸದಿಂದ ಶಾಲೆಯ ಅಭಿವೃದ್ಧಿಗಾಗಿ ದೇಣಿಗೆಯನ್ನು ನೀಡಿ, ಬೃಂದಾವನ ಕನ್ನಡ ಶಾಲೆಗಳು ಹೀಗೆ ಅತಿ ಎತ್ತರಕ್ಕೆ ಬೆಳೆಯಲಿ ಎಂದು ಹರಸಿದರು.

ಈಗ ಬೃಂದಾವನ "ಕನ್ನಡ ಕಲಿ" ಕನ್ನಡ ಅಕ್ಯಾಡೆಮಿಯೊಂದಿಗೆ ಕೈ ಜೋಡಿಸಿದೆ. ವಿಶ್ವದೆಲ್ಲೆಡೆ ಕನ್ನಡ ಶಾಲೆಗಳನ್ನು ತೆರೆಯುವ ಅವರ ಉತ್ತಮ ಯೋಜನೆಗೆ ನಮ್ಮ ಸ್ವಯಂಸೇವಕರ ತಂಡ ನೆರವು ನೀಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡ ಅಕ್ಯಾಡೆಮಿ, ಕನ್ನಡ ಭಾಷೆಯನ್ನು ಶಾಲಾ ಕಾಲೇಜುಗಳಲ್ಲಿ ದ್ವಿತೀಯ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದರತ್ತ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕನ್ನಡಕ್ಕಾಗಿ ಮಿಡಿಯುವ ಎಲ್ಲಾ ಸಹೃದಯಿ ಕನ್ನಡಿಗರ ಬೆಂಬಲದಿಂದ ಬೃಂದಾವನ ಕನ್ನಡ ಶಾಲೆಯು ಕಳೆದ ನವೆಂಬರ್ ತಿಂಗಳಂದು ಐದು ವರುಷಗಳನ್ನು ಯಶಸ್ವಿಯಾಗಿ ಮುಗಿಸಿ ಆರನೇ ವರ್ಷಕ್ಕೆ ಕಾಲಿಡುತ್ತಿದೆ. ನಿಮ್ಮೆಲ್ಲರ ಸಹಕಾರ ಮತ್ತು ಪ್ರೀತಿ ನಮ್ಮ ಕನ್ನಡ ಶಾಲೆಯ ಮೇಲೆ ಹೀಗೆ ಇರಲಿ. ಹಲವು ಪೀಳಿಗೆಗೆ ಕನ್ನಡ ಕಲಿಸುವ ಕಾರ್ಯ ನಿರಂತರವಾಗಿ ನಡೆಯಲಿ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ. ಜೈ ಕರ್ನಾಟಕ ಮಾತೆ.

ಒಂದು ತಾಸು ಓದಿದರೆ ಎರಡು ತಾಸು ದುಡಿಯಿರಿ, ಮೂರು ತಾಸು ವಿಚಾರ ಮಾಡಿ . —ರಾಮಕೃಷ್ಣ ಪರಮಹಂಸ

"ನಾವಿಕ" ದಲ್ಲಿ ಬೃಂದಾವನ



ಡಾ. ಅಶೋಕ್ ಕಟ್ಟಿಮನಿ, ನ್ಯೂ ಜೆರ್ಸಿ
ಸಂಚಾಲಕರು, 5 ನೇ ನಾವಿಕೋತ್ಸವ

ವಿಶ್ವದ ಕನ್ನಡಿಗರೆಲ್ಲರ ಮನೆಯಂಗಳದಲ್ಲಿ ಆಗಸ್ಟ್ 28, 29 ಮತ್ತು 30 ರಂದು ನಡೆದ ಕಡಲಾಚೆಯ 5ನೇ ನಾವಿಕೋತ್ಸವ ಅಂತರ್ಜಾಲ ಸಮ್ಮೇಳನದ ಸಂಚಾಲಕನ ಜವಾಬ್ದಾರಿ ಒಪ್ಪಿಸಿದ ನಾವಿಕ ಸಂಸ್ಥೆಯ ವಿಶ್ವಸ್ಥ ಮಂಡಳಿ, ನಿರ್ದೇಶಕ ಮಂಡಳಿ ಮತ್ತು ಅಧ್ಯಕ್ಷ ಶ್ರೀ ವಲ್ಲೀಶ್ ಶಾಸ್ತ್ರೀಯವರಿಗೆ ನಾನು ಅತ್ಯಂತ ಆಭಾರಿ. ಇಂತಹ ಯಶಸ್ವೀ ಸಮ್ಮೇಳನದ ಹಲವು ವಿಷಯಗಳನ್ನು ಹಂಚಿಕೊಳ್ಳುವುದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ?

ವಿಶ್ವದ ಎಲ್ಲೆಡೆ ನೆಲೆಸಿರುವ ಕನ್ನಡಿಗರೆಲ್ಲ ಕನ್ನಡ ಭಾಷೆ, ಸಂಸ್ಕೃತಿ ಉಳಿಸಿಕೊಳ್ಳಲು ಮತ್ತು ಮುಂದಿನ ಪೀಳಿಗೆಯು ಕನ್ನಡತನವನ್ನು ಮುಂದುವರಿಸಿಕೊಂಡು ಹೋಗಲು, ತನು, ಮನದಿಂದ ಶ್ರದ್ಧೆ ವಹಿಸಿ ಪ್ರಯತ್ನಿಸುತ್ತಿದ್ದಾರೆ. ಇಂದಿನ ಕೋವಿಡ್ ಪರಿಸ್ಥಿತಿ, ಮನುಷ್ಯ ಕುಲಕ್ಕೆ ಕಷ್ಟಕರ ಸವಾಲುಗಳನ್ನು ತಂದೊಡ್ಡಿದ್ದರೂ ಹಲವಾರು ಹೊಸ ಅವಕಾಶಗಳನ್ನು ಹುಟ್ಟು ಹಾಕಿದೆ. ಈ ದಿಸೆಯಲ್ಲಿ, 5ನೇ ನಾವಿಕೋತ್ಸವ, ವಿಶ್ವದ ಎಲ್ಲ ಕನ್ನಡಿಗರನ್ನು ಅಂತರ್ಜಾಲದ ರಂಗ ಮಂಟಪದಲ್ಲಿ ಒಂದು ಗೂಡಿಸಿ, ದೂರ ದೇಶದಲ್ಲಿದ್ದರೂ ಅವರಿಗಿರುವ ಕನ್ನಡ ಪ್ರೇಮವನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟಿತು. ದೇಶಗಳ ಎಲ್ಲೆ ಮೀರಿ ಎಲ್ಲ ಕನ್ನಡ ಸಂಘಗಳು ಭಾಗವಹಿಸಿದ್ದ ಜಗತ್ತಿನ ಈ ಪ್ರಥಮ ಅಂತರ್ಜಾಲ ಚಾಲಿತ ವಿಶ್ವ ಕನ್ನಡ ಸಮ್ಮೇಳವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟ ನಾವಿಕ ಸಂಸ್ಥೆ, ಕಾರ್ಯಕರ್ತರು, ಕಲಾವಿದರು, ಪ್ರಾಯೋಜಕರನ್ನು ಅಭಿನಂದಿಸಲೇಬೇಕು.

ಈ ಪ್ರಥಮ ಅಂತರ್ಜಾಲ ಚಾಲಿತ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ. ಎಸ್.ಯಡಿಯೂರಪ್ಪನವರು ಉದ್ಘಾಟಿಸಿದರು. ಡಿ. ಸಿ. ಎಂ. ಡಾ. ಅಶ್ವಥ್ ನಾರಾಯಣ ಮತ್ತು ಸಚಿವ ಶ್ರೀ ಸಿ. ಟಿ. ರವಿ ಭಾಗವಹಿಸಿ ಶುಭ ಸಂದೇಶ ನೀಡಿದರು. ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಶ್ರೀಮತಿ ಸುಧಾ ಮೂರ್ತಿಯವರು ಮಾತನಾಡಿ, ಹೊರ ದೇಶದಲ್ಲಿರುವ ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸಲು ಮಾಡುತ್ತಿರುವ ಶ್ರಮವನ್ನು ಪ್ರಶಂಸಿಸಿದರು.

ಮೂರು ದಿವಸಗಳ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನ ಸೂರೆಗೊಂಡವು. ಸವಿತಕ್ಕನವರ ಹಳ್ಳಿ ಬ್ಯಾಂಡ್, ಜಾನಪದ ಗೀತೆಗಳನ್ನು ಎಲ್ಲರೂ ಇಷ್ಟ ಪಟ್ಟರು. ಯುವ ಹಾಸ್ಯ ಕಲಾವಿದರ ನಮ್ಮುಕೆ ತಂಡದ ಸ್ಟಾಂಡ್ ಅಪ್ ಕಾಮಿಡಿ, ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿತು. ಗಣೇಶ್ ದೇಸಾಯಿ ಮತ್ತು ತಂಡದವರ ಸುಗಮ ಸಂಗೀತ, ಉದಯೋನ್ಮುಖ ಕನ್ನಡ ಕೋಗಿಲೆ ಕಲಾವಿದರ ಸಂಗೀತ ಸಂಜೆ ಮುಖ್ಯ ಆಕರ್ಷಣೆಗಳಾಗಿದ್ದವು. ಕ್ಯಾಲಿಫೋರ್ನಿಯಾದ ಶ್ರೀಮತಿ ಅಲಮೇಲು ಅಯ್ಯಂಗಾರ್ರವರು ನಿರ್ದೇಶಿಸಿದ, ಪು.ತಿ.ನ ವಿರಚಿತ ಶ್ರೀರಾಮ ಪಟ್ಟಾಭಿಷೇಕ ಸಂಗೀತ ನಾಟಕ ಎಲ್ಲರ ಮನ ಸೆಳೆಯಿತು. ಪ್ರೊಫೆಸರ್ ಕೃಷ್ಣೆಗೌಡರು ಮತ್ತು ಮುಖ್ಯಮಂತ್ರಿ ಚಂದ್ರುರವರ ಸಂಭಾಷಣೆಯ ಕಾರ್ಯಕ್ರಮ ಸೊಗಸಾಗಿತ್ತು. ಸಾಹಿತ್ಯ ಕಾರ್ಯಕ್ರಮದ ವಿಶೇಷ ಗೋಷ್ಠಿಯಲ್ಲಿ ಸಾಹಿತಿ ಶ್ರೀ H.S. ವೆಂಕಟೇಶ್ ಮೂರ್ತಿ, ಪತ್ರಕರ್ತ ಶ್ರೀವಿಶ್ವೇಶ್ವರ ಭಟ್ ಮತ್ತು ಕಿರು ತೆರೆಯ ನಿರ್ದೇಶಕರಾದ ಶ್ರೀ ಸೀತಾರಾಮ್‌ರವರೊಂದಿಗಿನ ಚರ್ಚೆ ವೈಚಾರಿಕ ಮನಸ್ಸುಗಳನ್ನು ತೃಪ್ತಿ ಪಡಿಸಿದವು. ಚಿತ್ರ ನಟ ಶ್ರೀ ಧನಂಜಯರೊಂದಿಗಿನ ಸಂಭಾಷಣೆ, ಇಂದಿನ ಚಿತ್ರ ರಂಗ ಸಾಗುತ್ತಿರುವ ಹಾದಿಯ ಪರಿಚಯ ನೀಡಿತು. ಉದ್ಯಮಿಗಳೊಂದಿಗಿನ ಕಾರ್ಯಕ್ರಮದಲ್ಲಿ, ವಿ.ಆರ್.ಎಲ್ ಸಮೂಹ ಸಂಸ್ಥೆಗಳ ಎಂ.ಡಿ. ಶ್ರೀಆನಂದ ಸಂಕೇಶ್ವರ್, ಖ್ಯಾತ ಕಂಪ್ಯೂಟರ್ ತಜ್ಞ ಡಾ. ಉದಯಶಂಕರ್ ಪುರಾಣಿಕ್, ಕೆನಡಾದ ಬಸವರಾಜ್ ಹಳ್ಳಿ, ಅಮೇರಿಕ ಉದ್ಯಮಿ ಶ್ರೀ ಶಶಿ ಕುಮಾರ್ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಈ ಸಮ್ಮೇಳನದ ವಿಶೇಷ ಮನರಂಜನಾ ಕಾರ್ಯಕ್ರಮ ಶ್ರೀ ಮನೋಮೂರ್ತಿಯವರ 25 ವರ್ಷದ ಸಂಗೀತ ಪಯಣ ಪ್ರೇಕ್ಷಕರಿಗೆ ರಸದೌತಣ ನೀಡಿತು. ವಿಶ್ವ ಸಮ್ಮೇಳನಗಳಲ್ಲಿ ಪ್ರತಿಭಾ ಸ್ಪರ್ಧೆಗಳು, ಎಲ್ಲರನ್ನು ಒಂದುಗೂಡಿಸುವುದರಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಸಂದರ್ಭದಲ್ಲಿ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ಮಕ್ಕಳು, ಯುವ ಸಮುದಾಯ, ಸ್ನೇಹಿತರೆಲ್ಲ ನೀಡಿದ ಪ್ರತಿಭಾ ಪ್ರದರ್ಶನ ಎಲ್ಲರ ಮನಸ್ಸಿನಲ್ಲಿ ಬಹುಕಾಲ ಉಳಿಯುವುದು.

ಈ ಸಮ್ಮೇಳನದ ಅತ್ಯಂತ ವಿಶೇಷವೆಂದರೆ, ವಿಶ್ವದ 25 ದೇಶಗಳಿಂದ, 80ಕ್ಕೂ ಹೆಚ್ಚು ಕನ್ನಡ ಸಂಸ್ಥೆಗಳು ಭಾಗವಹಿಸಿ ತಮ್ಮ ಸದಸ್ಯರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ನಾವಿಕೋತ್ಸವವನ್ನು ನೆರವೇರಿಸಿದ ತಂಡದ ಹೆಮ್ಮೆಯ ಸಾಧನೆ ಇದು.

ನಾವಿಕದ ಕನ್ನಡ ಕಲಿ ಸ್ಪರ್ಧೆಯ ಬಗ್ಗೆ ನನಗೆ ವಿಶೇಷ ಅಭಿಮಾನವಿದೆ. ಎಲ್ಲ ದೇಶಗಳಲ್ಲಿ ಕನ್ನಡಿಗರು, ಕನ್ನಡ ಶಾಲೆಗಳನ್ನು ಕಟ್ಟಿ ಕನ್ನಡ ಭಾಷೆ, ಸಂಸ್ಕೃತಿ, ಕಲೆಗಳನ್ನು ತಮ್ಮ ಮಕ್ಕಳಿಗೆ ಧಾರೆ ಎರೆಯಲು ಶ್ರಮಿಸುತ್ತಿದ್ದಾರೆ. ಈ ಸಲದ ಸ್ಪರ್ಧೆಯಲ್ಲಿ ಎಲ್ಲ ದೇಶಗಳಿಂದ ಭಾಗವಹಿಸಿದ ಮಕ್ಕಳ ಪ್ರತಿಭೆ, ಕನ್ನಡದ ಬಗ್ಗೆ ಅವರಿಗಿರುವ ತಿಳುವಳಿಕೆ ನೋಡಿದಾಗ ಕನ್ನಡ ನೂರ್ಕಾಲ ಉಳಿಯುವುದರಲ್ಲಿ ಸಂದೇಹವಿಲ್ಲ. ಈ ಸಲದ ಮತ್ತೊಂದು ವಿಶೇಷ ಕರ್ನಾಟಕದ ಉದಯೋನ್ಮುಖ ಬರಹಗಾರಿಗಾಗಿ ಏರ್ಪಡಿಸಿದ್ದ ಸಣ್ಣ ಕತೆಗಳ ಸ್ಪರ್ಧೆ. ಬಹಳಷ್ಟು ಲೇಖಕರು ಈ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದಾರೆ. ಇದರೊಂದಿಗೆ ಸೌಂದರ್ಯ ಸ್ಪರ್ಧೆ ಮತ್ತು ಚಲನ ಚಿತ್ರ ಗಾಯನ ಸ್ಪರ್ಧೆ ಮತ್ತಷ್ಟು ಪ್ರತಿಭೆಗಳನ್ನು ಹುಟ್ಟುಹಾಕಿವೆ. ಈ ಎಲ್ಲ ಸ್ಪರ್ಧೆಗಳನ್ನು ನಡೆಸಿಕೊಟ್ಟ ಸಮಿತಿ ಸದಸ್ಯರಿಗೆ, ತೀರ್ಪುಗಾರರಿಗೆ ಅನಂತಾನಂತ ವಂದನೆಗಳು.

ಈ ಸಮ್ಮೇಳನದ ದೇಣಿಗೆಗಾಗಿ ಆಶಾ ಕಾರ್ಯಕರ್ತೆಯರನ್ನು ಗುರುತಿಸಿದ್ದೆವು. ಸಮ್ಮೇಳನದಲ್ಲಿ ಬಂದ ಎಲ್ಲ ದೇಣಿಗೆಯ ಹಣವನ್ನು ಕರೋನ ಮಾರಿಯೊಂದಿಗಿನ ಹೋರಾಟದ ಮುಂಚೂಣಿಯಲ್ಲಿ, ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಸೇವೆ ಸಲ್ಲಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ನೀಡಲಾಯಿತು. ಈ ಸಾರ್ಥಕ ಕಾರ್ಯದಲ್ಲಿ ಕೊಡುಗೆ ನೀಡಿದ ಎಲ್ಲರಿಗೂ ನಾವು ಆಭಾರಿ.

ಈ ಸಂದರ್ಭದಲ್ಲಿ 'ಸ್ನೇಹ ಸಂಗಮ' ಸ್ಮರಣ ಸಂಚಿಕೆಯನ್ನು ಅನೇಕ ದೇಶಗಳ ಉದಯೋನ್ಮುಖ ಮತ್ತು ಹಿರಿಯ ಲೇಖಕರ ಬರಹಗಳು. ಕನ್ನಡದ ಹಿರಿಯ ಚಿತ್ರ ಸಾಹಿತಿಗಳ ಚಿತ್ರಗೀತೆಗಳನ್ನು ಸುಂದರವಾಗಿ ಅಳವಡಿಸಿ ನಮ್ಮ ನಮನ ಸಲ್ಲಿಸಿದೆವು.

5ನೇ ನಾವಿಕೋತ್ಸವದ ಈ ಸಮ್ಮೇಳನದಲ್ಲಿ ನ್ಯೂ ಜೆರ್ಸಿ ಕನ್ನಡಿಗರು, ಬೃಂದಾವನ ಕನ್ನಡ ಸಂಘ ಅತ್ಯಂತ ಶ್ರಮವಹಿಸಿ ಅದರ ಯಶಸ್ಸಿಗೆ ಕಾರಣರಾಗಿದ್ದಾರೆ. ಬೃಂದಾವನ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಸತೀಶ್ ಹೊಸನಗರ, ಸೌರಭ ತಂಡದ ಸದಸ್ಯರೆಲ್ಲರ ಸಹಕಾರ, ಸ್ನೇಹಪೂರ್ಣ ಹರಕೆ ಎಂದೆಂದಿಗೂ ನೆನಪಿನಲ್ಲಿ ಉಳಿಯುವಂತಹುದು.

ಸಮಾಜದಲ್ಲಿ ಮೊದಲನೆಯ ಸ್ಥಾನ ಅಧಿಕಾರ, ಪಾಂಡಿತ್ಯ ಅಥವಾ ಐಶ್ವರ್ಯಕ್ಕಲ್ಲ. ಮೊದಲನೆಯ ಸ್ಥಾನ ಇರುವುದು ಸೇವೆಗೆ. -ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು.

"ನಾವಿಕ" ದಲ್ಲಿ ಬೃಂದಾವನ

ಕನ್ನಡ ಸಂಘಗಳ ಮನರಂಜನಾ ಕಾರ್ಯಕ್ರಮಗಳನ್ನು ರೂಪಿಸಿದವರು ಶ್ರೀ ಪ್ರಸನ್ನ ಕುಮಾರ್, ಶ್ರೀಮತಿಯರಾದ, ಲಕ್ಷಿ ಶೈಲೇಶ್, ಲಕ್ಷ್ಮಿ ಅನಿಲ್, ಸೌಮ್ಯ ಪ್ರಶಾಂತ್, ಸವಿತಾ. ಸಂಗೀತ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟವರು ನಮ್ಮ ಶ್ರೀ ಸಿಂಹಾದ್ರಿ ಸಂತೆಬೆನ್ನೂರ್ ಮತ್ತು ಶ್ರೀ ಶ್ರೇಯಸ್. ಸೌಂದರ್ಯ ಸ್ಪರ್ಧೆಯನ್ನು ಬಹುಕಾಲ ನೆನಪಿನಲ್ಲಿ ಉಳಿಯುವಂತೆ ರೂಪಿಸಿದವರು ಶ್ರೀಮತಿ ಅಮೃತ ರಮೇಶ್, ಅನನ್ಯ ಕಟ್ಟಿಮನಿ, ಪ್ರಶಾಂತ್ ಮುರುಗೇಂದ್ರಪ್ಪ. ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿ ಕನ್ನಡ ಸ್ಪರ್ಧೆಗಳಲ್ಲಿ ದಾಖಲೆ ಮಾಡಿದ್ದುದರ ಹಿನ್ನಲೆಯಲ್ಲಿ ಬೃಂದಾವನ ಶಿಕ್ಷಕರೆಲ್ಲರ ಸಹಕಾರವಿದೆ. ಮುಖ್ಯವಾಗಿ ಶ್ರೀಮತಿಯರಾದ ಉಮಾ ಕಾರಂತ್, ಅರ್ಚನ ಆಚಾರ್ಯ, ಉಷಾ ಬಸರೂರ್, ಶ್ರೀವಿದ್ಯಾ ಪ್ರಶಾಂತ್. ಸಮ್ಮೇಳನದ ಕಥಾ ಸ್ಪರ್ಧೆಯನ್ನು ಸರಿತಾ ಅಹೀಶ್ ನಡೆಸಿಕೊಟ್ಟರೆ, ಸಾಹಿತ್ಯ ಸಮಿತಿಯಲ್ಲಿ ಶ್ರೀಯುತರಾದ ಸತ್ಯ ಪ್ರಸಾದ್, ಭಾಸ್ಕರ್ ತೈಲಗೇರಿ, ದಾಶರಥಿಯವರ ಸಲಹೆಗಳು ಸಮ್ಮೇಳನದ ಉತ್ತಮ ಸಾಹಿತ್ಯ ಕಾರ್ಯಕ್ರಮಕ್ಕೆ ಸಹಕಾರ ನೀಡಿದವು.

ನಾವಿಕೋತ್ಸವದ ಸ್ಮರಣ ಸಂಚಿಕೆ "ಸ್ನೇಹ ಸಂಗಮ" ಕ್ಕಾಗಿ ಶ್ರಮಿಸಿದ ಸಂಪಾದಕ ವರ್ಗ ಮತ್ತು 'ಹಳೆಯ ಹಾಡು..' ತಂಡದ ಸ್ನೇಹಿತರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ಮುಖ್ಯವಾಗಿ ನ್ಯೂ ಜೆರ್ಸಿಯಿಂದ ಶ್ರೀಯುತ ರಾಘವೇಂದ್ರ ಕುಂದಲಗರ್ಕಿ, ನರಸಿಂಹ ಮೂರ್ತಿ, ಶ್ರೀಪರ್ಣಿಕ, ಭಾಸ್ಕರ್ ತೈಲಗೇರಿ, ಪ್ರಸನ್ನ ಕುಮಾರ್, ಉಷಾ ಪ್ರಸನ್ನ. ಒಟ್ಟಾರೆ 5ನೇ ನಾವಿಕೋತ್ಸವ ಬಹುಕಾಲ ಎಲ್ಲರ ನೆನಪಿನಲ್ಲಿ ಉಳಿಯುವ ವಿಶ್ವ ಕನ್ನಡ ಸಮ್ಮೇಳನ.

ಸೌಂದರ್ಯ ಸ್ಪರ್ಧೆ



ಕನ್ನಡ ಕಲಿ ಸ್ಪರ್ಧೆ

ಮುಕ್ತವಾದ ಮನಸ್ಸಿಲ್ಲದ ವ್ಯಕ್ತಿ ಬದುಕಿದ್ದರೂ ಸತ್ತಂತೆ. ಮುಕ್ತವಾದ ಮನಸ್ಸು ವ್ಯಕ್ತಿಯೊಬ್ಬನ ಅಸ್ತಿತ್ವದ ಸಂಕೇತ. —ಬಿ. ಆರ್. ಅಂಬೇಡ್ಕರ್

"ಅಕ್ಕ" ದಲ್ಲಿ ಬೃಂದಾವನ

ರೂಪಶ್ರೀ ಮೇಲ್ಕೋಟೆ, ನ್ಯೂ ಜೆರ್ಸಿ

"ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂದಿದ್ದಾರೆ ರಾಷ್ಟ್ರಕವಿ ಕುವೆಂಪು. ಇದರ ಅನುಗುಣವಾಗಿ ಸೆಪ್ಟೆಂಬರ್ ತಿಂಗಳಲ್ಲಿ ದಿನಾಂಕ 4,5,6 ರಂದು ಅಕ್ಕ ವರ್ಚುಯಲ್ ವಿಶ್ವ ಕನ್ನಡ ಸಮ್ಮೇಳನ ಏರ್ಪಡಿಸಲಾಗಿತ್ತು. ಈ ಬಾರಿ ಕೋವಿಡ್ - 19 ಕಾರಣದಿಂದ ಸಮ್ಮೇಳನವನ್ನು ಆನ್‌ಲೈನ್‌ನಲ್ಲಿ ನಡೆಸಲಾಯಿತು. ಒಟ್ಟು ಮೂರು ದಿನಗಳ ಕಾಲ ಸಾಮಾಜಿಕ ಜಾಲತಾಣದಲ್ಲಿ ನೇರ ಪ್ರಸಾರ ಮಾಡುವ ಮೂಲಕ ಕಾರ್ಯಕ್ರಮ ಜರುಗಿತು. ಅಮೇರಿಕ ಅಲ್ಲದೇ ಆಸ್ಟ್ರೇಲಿಯ, ನ್ಯೂಜಿಲೆಂಡ್, ಮಸ್ಕತ್, ಕೆನಡಾ ಮುಂತಾದ ದೇಶಗಳ ಅನಿವಾಸಿ ಕನ್ನಡಿಗರು ಒಟ್ಟಾಗಿ ಈ ಹಬ್ಬವನ್ನು ಆಚರಿಸಿದರು. ಪ್ರಪಂಚದಾದ್ಯಂತ ಹಲವಾರು ಕನ್ನಡ ಕೂಟಗಳು ಸಮ್ಮೇಳನದ ಭಾಗವಾಗಿದ್ದವು. ಈ ಮೂರು ದಿನದ ಸಂಭ್ರಮದಲ್ಲಿ ಕನ್ನಡ ಸಾಹಿತ್ಯ, ಕಲೆ, ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ವರ್ಚುವಲ್ ಆಗಿ ಮೂಡಿಬಂದವು.

ಕಾರ್ಯಕ್ರಮವನ್ನು ತಮ್ಮ ಕಛೇರಿಯಿಂದಲೇ ಉದ್ಘಾಟನೆ ಮಾಡಿದ ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ವಿಶ್ವಮಟ್ಟದಲ್ಲಿ ಕನ್ನಡವನ್ನು ಶ್ರೀಮಂತಗೊಳಿಸುತ್ತಿರುವ ಅಕ್ಕ ಸಂಘಟನೆಯ ಕಾರ್ಯವನ್ನು ಶ್ಲಾಘಿಸಿದರು. ಉಡುಪಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ, ಆದಿ ಚುಂಚನಗಿರಿ ಸಂಸ್ಥಾನದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗು ಸುತ್ತೂರು ಮಠದ ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಆಶೀರ್ವಚನ ನೀಡಿದರು.

ಹಿರಿಯ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಈ ಸಮಾರಂಭದಲ್ಲಿ ಜಾನಪದ ಹಾಗು ಭಾವಗೀತೆಗಳ ಗಾಯನ, ಪ್ರೊಫೆಸರ್ ಕೃಷ್ಣೇಗೌಡ ಮತ್ತು ಸಂಗಡಿಗರಿಂದ ಹಾಸ್ಯ ಕವಿಗೋಷ್ಠಿ, ಕವಿತಾ ವಾಚನ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳು ನಡೆದವು. ಹೆಸರಾಂತ ನಿರ್ದೇಶಕರಾದ ಟಿ.ಎನ್. ಸೀತಾರಾಮ್ ಅವರಿಂದ ವಿಶೇಷ ಕಾರ್ಯಕ್ರಮವೊಂದು ಮೂಡಿಬಂದಿತು. ಹಿರಿಯರಾದ ಪದ್ಮಶ್ರೀ ಪುರಸ್ಕೃತ ಜಿ. ವೆಂಕಟಸುಬ್ಬಯ್ಯನವರು ಹಿತವಚನ ನೀಡಿದರು.

ವಿಶ್ವದಾದ್ಯಂತ ಕನ್ನಡ ಕೂಟಗಳಿಂದ ವರ್ಚುವಲ್ ಮೆರವಣಿಗೆ, ಅಕ್ಕ ಸಿಂಗಿಂಗ್ ಐಡಲ್ ಹಾಗೂ ಅಕ್ಕ ಸೌಂದರ್ಯ ಸ್ಪರ್ಧೆ ನಡೆಯಿತು. ಅಕ್ಕ ಐಡಲ್ ತೀರ್ಪುಗಾರರಾಗಿ ಸಂಗೀತ ನಿರ್ದೇಶಕ ಮನೋಮೂರ್ತಿ, ಸಾಹಿತಿ ಜಯಂತ್ ಕಾಯ್ಕಿಣಿ ಹಾಗೂ ಗಾಯಕಿ ಅನುರಾಧ ಭಟ್ ಪಾಲ್ಗೊಂಡಿದ್ದರು. ಹೆಸರಾಂತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಹಾಗೂ ಗುರುಕಿರಣ್ ಅವರ ಮ್ಯೂಸಿಕಲ್ ನೈಟ್, ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು. ಹೆಸರಾಂತ ನಾಟ್ಯ ಕಲಾವಿದರಾದ ನಿರುಪಮ ರಾಜೇಂದ್ರ ಹಾಗೂ ಸಂಜಯ್ ಶಾಂತಾರಾಮ್ ಅವರಿಂದ ಲೈವ್ ನೃತ್ಯ ಪ್ರದರ್ಶನ ನಡೆಯಿತು. ಜಾನಪದದ ಸೊಗಡನ್ನು ಮತ್ತಷ್ಟು ಹೆಚ್ಚಿಸಲು ಅನನ್ಯಾ ಭಟ್ ಸೊಗಸಾದ ಕಾರ್ಯಕ್ರಮ ನೀಡಿದರು.

ಈ ಕೋವಿಡ್ ಮಹಾಮಾರಿಯ ಬಗ್ಗೆ ನಮ್ಮ ಕನ್ನಡಿಗರಿಗೆ ಮಾಹಿತಿ ನೀಡಲು ಹಲವಾರು ವೆಬಿನಾರ್‌ಗಳನ್ನೂ ಕೂಡಾ ಅಕ್ಕ ಏರ್ಪಡಿಸಿತ್ತು. ಹೆಸರಾಂತ ಸ್ಥಳೀಯ ಹಾಗು ಭಾರತದ ವೈದ್ಯರು ಇದರಲ್ಲಿ ಪಾಲ್ಗೊಂಡಿದ್ದರು. ಅದಲ್ಲದೇ ನಮ್ಮ ಅಕ್ಕ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಮರನಾಥ ಗೌಡರು ಇಮಿಗ್ರೇಷನ್ ಬಗ್ಗೆ ನಮ್ಮ ಕನ್ನಡಿಗರಿಗೆ ಮಾಹಿತಿ ನೀಡಿದರು. ನಮ್ಮೆಲ್ಲರ ಹೃದಯಕ್ಕೆ ಹತ್ತಿರವಾದಂತಹ ಮೈಸೂರು ಮೃಗಾಲಯಕ್ಕೆ ಅಕ್ಕ ವತಿಯಿಂದ ಸುಮಾರು 25 ಲಕ್ಷ ರೂಪಾಯಿಗಳ ಕೋವಿಡ್ ಪರಿಹಾರ ಧನ ನೀಡಲಾಯಿತು.

ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟ, ಪ್ರಸಕ್ತ ಕಾರ್ಯಕಾರಿ ಸಮಿತಿಯಾದ "ಸೌರಭ" ತಂಡದ ನೇತೃತ್ವದಲ್ಲಿ ಅಕ್ಕ ಸಮ್ಮೇಳನದಲ್ಲಿ ಪಾಲ್ಗೊಂಡಿತು. ಬೃಂದಾವನ ವತಿಯಿಂದ ಮೆರವಣಿಗೆ, ಗಣೇಶ ವೃತ್ತಾಂತ ನೃತ್ಯ, ದಶಾವತಾರಂ ನೃತ್ಯ, ಕವಿ ನಮನ ಹಾಗೂ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಗೀತೆಗಳ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲಾಯಿತು. ಅದಲ್ಲದೇ ಮೈಸೂರು ಮೃಗಾಲಯಕ್ಕೆ ಸುಮಾರು 500 ಡಾಲರಗಳ ಧನಸಹಾಯವನ್ನು ಕೂಟದ ವತಿಯಿಂದ ನೀಡಲಾಯಿತು.

ಮುನ್ನಡೆ ಸಾಧಿಸಿದರೆ ಸಾಲದು. ಮೇಲ್ನಡೆ ಸಾಧಿಸುವುದು ಮನುಷ್ಯನ ಗುರಿಯಾಗಬೇಕು. —ಕೆ. ಎಸ್. ನಿಸಾರ್ ಅಹಮದ್

ಲೇಖನಗಳು

ನವಚೇತನ

ಬದುಕಿನ ಸಾರ್ಥಕತೆ

ಒಮ್ಮೆ ಒಬ್ಬ ಋಷಿಯನ್ನು ಭಕ್ತನು ಕೇಳಿದನು , 'ಋಷಿಗಳೇ, ನಿಮ್ಮ ಜೀವನವು ತುಂಬಾ ನಿರ್ಮಲತೆ ಹಾಗು ಶಾಂತಿಯಿಂದ ಕೂಡಿದೆ, ಆದರೆ ನನ್ನ ಜೀವನ ಯಾವಾಗಲೂ ಅಸಮಾಧಾನದಿಂದ ಕೂಡಿದೆ; ಅದು ಏಕೆ?'



'ಭಕ್ತನೇ! ಇವೆಲ್ಲವನ್ನೂ ಮರೆತು ಬಿಡು, ಇಂದಿನಿಂದ ಎಂಟನೇ ದಿನ, ನೀನು ಸಾಯುವಿ! ಆ ಬಗ್ಗೆ ಯೋಚಿಸು', ಋಷಿ ಹೇಳಿದನು. ಗಾಬರಿಯಿಂದ ಭಕ್ತನು ತನ್ನ ಮನೆಗೆ ನೇರವಾಗಿ ಹೋಗಿ, ತನ್ನ ಸಂಬಂಧಿಕರನ್ನು ಕರೆದು 'ನಾನು ಇಂದಿನಿಂದ ಎಂಟನೇ ದಿನ ಸಾಯುತ್ತೇನೆ, ಋಷಿವರ್ಯರು ನನಗೆ ಹೇಳಿದ್ದಾರೆ. ಆದ್ದರಿಂದ, ನಾನು ಯಾವುದೇ ತಪ್ಪುಗಳನ್ನು ಮಾಡಿದ್ದರೆ ದಯೆಯಿಂದ ನನ್ನನ್ನು ಕ್ಷಮಿಸಿ' ಎಂದು ಹೇಳದನು. ಅದರ ನಂತರ, ಅವನು ಸದ್ಗುಣ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡನು. ಎಂಟನೇ ದಿನ ಅವನು ಋಷಿಗಳ ಬಳಿಗೆ ಹೋಗಿ ಕೇಳಿದನು, 'ಋಷಿಗಳೇ! ಹೇಳಿ, ನಾನು ಯಾವಾಗ ಸಾಯುತ್ತೇನೆ? '

'ಭಕ್ತ! ಸಾವು ಯಾವಾಗ ನಮಗೆ ಬರುತ್ತದೆ ಎಂದು ಶ್ರೀಹರಿಗೆ ಮಾತ್ರ ತಿಳಿದಿದೆ. ಸದ್ಯಕ್ಕೆ, ಅದನ್ನು ಪಕ್ಕಕ್ಕೆ ಇರಿಸಿ; ಹೇಳು, ಕಳೆದ ವಾರದಲ್ಲಿ ನೀನು ನಿನ್ನ ಸಮಯವನ್ನು ಹೇಗೆ ಕಳೆದಿದ್ದೀಯ?'

'ಋಷಿಗಳೇ! ಯಾವುದೇ ವಿರಾಮವಿಲ್ಲದೆ ನಿರಂತರವಾಗಿ ನನ್ನ ಮುಂದೆ ಸಾವಿನ' ನೃತ್ಯವನ್ನು ಮಾತ್ರ ನೋಡಿದೆ. ಕಳೆದ ವಾರದಲ್ಲಿ ನಾನು ಕೆಟ್ಟದ್ದನ್ನು ಮಾಡಲಿಲ್ಲ. ನಾನು ಯಾರೊಂದಿಗೂ ಕಠಿಣವಾಗಿ ಮಾತನಾಡಲಿಲ್ಲ, ಎಂದು ಭಕ್ತನು ಉತ್ತರಿಸಿದ.

''ಭಕ್ತ! ಕೇವಲ ಒಂದು ವಾರದವರೆಗೆ ನಿನ್ನ ಕಣ್ಣಮುಂದೆ 'ಸಾವಿನ ನೃತ್ಯ' ಮಾಡಿದ ಕಾರಣ ಮಾತ್ರ ನೀನು ಯಾವುದೇ ತಪ್ಪು ಕೆಲಸ ಮಾಡಿಲ್ಲ, ಹಾಗು ಯಾವುದೇ ತಪ್ಪು ಮಾತನಾಡಲಿಲ್ಲ''. ಸಾವು ಯಾವುದೇ ವಿರಾಮವಿಲ್ಲದೆ ಪ್ರತಿದಿನ 'ನನ್ನ ಕಣ್ಣ ಮುಂದೆ ನರ್ತಿಸುತ್ತಿದೆ'? ಈಗ, ನಾನು ಏನು ಮಾಡಬೇಕು? ಆದ್ದರಿಂದ, ನಾನು ಶಾಂತಿಯಿಂದ ಉಳಿದಿದ್ದೇನೆ'. ''ಸಾವು ಭಯಪಡಬೇಕಾದ ವಿಷಯವಲ್ಲ. ಅದನ್ನು ನಮ್ಮ ದೃಷ್ಟಿಯಲ್ಲಿ(ಅರಿವಿನಲ್ಲಿ) ಇಡಬೇಕು; ನಂತರ, ಜೀವನವು ಶಾಂತಿಯುತವಾಗುತ್ತದೆ'' ಎಂದು ಋಷಿ ಭೋದಿಸಿದನು.

ಇದಕ್ಕೆ ಜೇನು ತೆಗೆಯಲು 'ಜೇನು ಕುರುಬ' ಹಾಕಿದ ಬೆಂಕಿಯ ದೃಷ್ಟಾಂತವನ್ನು ಕೊಟ್ಟರು. ಜೇನು ಹಾಕಿದ ಬೆಂಕಿಗೆ, ಕೆಲವು ಜೇನುನೊಣಗಳು ಹೆದರಿ ಹಾರಿ ಹೋದವು ಮತ್ತು ಜೇನುಗೂಡಿನ ಸುತ್ತಲೂ ಸುತ್ತುತ್ತಿದ್ದ ಕೆಲವು ಜೇನುನೊಣಗಳು ಬೆಂಕಿಯ ಶಾಖಕ್ಕೆ ಸಿಕ್ಕಿ ಸುಟ್ಟು ಹೋದವು. 'ಜೇನು ಕುರುಬ' ಜೇನುಗೂಡಿನಿಂದ ಜೇನುತುಪ್ಪವನ್ನು ಬರಿದು ಮಾಡಿ, ಅದರಲ್ಲಿ ಸ್ವಲ್ಪವನ್ನು ಕುಡಿದು, ಉಳಿದಿದ್ದನ್ನು ಮನೆಗೆ ತೆಗೆದು ಕೊಂಡು ಹೋದನು.

ಜೇನುನೊಣಗಳು ತಾವು ಶ್ರದ್ಧೆಯಿಂದ ಸಂಗ್ರಹಿಸಿದ ಜೇನುತುಪ್ಪವನ್ನು ಸೇವಿಸಲಿಲ್ಲ ಮತ್ತು ಜೇನುತುಪ್ಪವನ್ನು ಬೇರೆ ಯಾರೊಂದಿಗೂ ಹಂಚಿಕೊಳ್ಳಲಿಲ್ಲ. ಅಂತಿಮವಾಗಿ ಅದು ವಿನಾಶಕಾರಿ ಅಂತ್ಯವನ್ನು ಹೊಂದಿದವು.

ನಾನು ಇದರಿಂದ ನನ್ನ ಪಾಠವನ್ನು ಕಲಿತಿದ್ದೇನೆ. ''ನಾನು ಜೇನುಹುಳುಗಳಂತೆ ದಡ್ಡನಾಗಿರಬಾರದು. ಭಿಕ್ಷಾಟನೆಯಿಂದ ನಾನು ಭಿಕ್ಷೆಯಾಗಿ ಸಂಗ್ರಹಿಸಿದ ಭಿಕ್ಷೆಯನ್ನು ನಾನು ಸಂಜೆ ಅಥವಾ ನಾಳೆಗೆ ಉಳಿಸಬಾರದು. ನಾಳೆಗೆ ಏನಾದರೂ ಉಳಿದಿರುವಷ್ಟು ನಾನು 'ಭಿಕ್ಷಾ' ಹುಡುಕಬಾರದು. ನಾನು ಅತಿಯಾದ 'ಭಿಕ್ಷಾ' ಸಂಗ್ರಹಿಸಿದರೆ ಅದು ಮರುದಿನ ಏನಾದರೂ ಉಳಿಯುತ್ತದೆ. ನಂತರ ಜೇನುಹುಳುಗಳಂತೆಯೇ ನಾನು ದುರದೃಷ್ಟದಿಂದ ಪಾರಾಗುವುದಿಲ್ಲ''.

ಭಿಕ್ಷಾಟನೆಗಾಗಿ ಕೇವಲ ಒಂದು ಭಿಕ್ಷಾ ಪಾತ್ರೆ ಸಾಕು,ಇತರ ಪಾತ್ರೆಗಳ ಅಗತ್ಯವಿಲ್ಲ.
ತುಂಬಲು, ಕೇವಲ ಹೊಟ್ಟೆ ಸಾಕು, ದೊಡ್ಡ ಪಾತ್ರೆಯ ಅಗತ್ಯವಿಲ್ಲ.

- ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ ಯವರ ಪುಸ್ತಕದಿಂದ ಸಂಗ್ರಹಿಸಿದ್ದು
(ಅನುವಾದ: ರಾಘವೇಂದ್ರ ಕುಂದಲಗುರ್ಕಿ)

ಶ್ರೀ ಯೋಗೀಂದ್ರ ಭಟ್ ಉಳಿ
ಶ್ರೀಕೃಷ್ಣ ವೃಂದಾವನ, ನ್ಯೂ ಜೆರ್ಸಿ

ನವಚೇತನ

ಸುಖ ದುಃಖಗಳೆರಡೂ ಹುದುಗಿರುವುದು ನಮ್ಮಲ್ಲೇ. ಹುಡುಕಲು ಹೊರಟರೆ ಹೊರಗೆ ಕಾಣುವುದೆಲ್ಲಾ ಅವುಗಳದ್ದೇ ಪ್ರತಿಫಲನ. ಮನಸ್ಸನ್ನು ಸ್ವಚ್ಛವಾಗಿಟ್ಟುಕೊಂಡವರಿಗೆ ಎಲ್ಲಿ ನೋಡಿದರೂ ಸಿಗುವುದು ಸುಖವೊಂದೇ. ಪ್ರಕ್ಷಿಪ್ತ ಮನಸ್ಸಿಗೆ ಎಲ್ಲಿ ಕಂಡರಲ್ಲಿ ದೋಷಗಳೇ ಎದ್ದುಕಾಣುತ್ತವೆ.

"ಚಿತ್ತೇ ವಿಷಣ್ಣೇ ಭುವನಂ ವಿಷಣ್ಣಂ,

ಚಿತ್ತೇ ಪ್ರಸನ್ನೇ ಭುವನಂ ಪ್ರಸನ್ನಂ"

ಮೈಮರೆತು ನಿದ್ರಿಸಿದವನೆದ್ದು ಕಾಣುವ ಮುಂಜಾವಿನ ಸವಿನೋಟದಂತೆ....ಹಕ್ಕಿಗಳ ಚಿಲಿಪಿಲಿ ಸದ್ದಿಗೆ ಬಂಗಾರದ ಸೂರ್ಯನ ತಂಬೆಳಕಿನ ಚಿತ್ತಾರ. ಗಿಡ ಮರಗಳ ಮೇಲೆ ಮೂಡಿನ ಮಂಜು ಹನಿಯನ್ನು ಮುಟ್ಟಿ ಬಂದ ತಂಗಾಳಿಯ ತಣ್ಣನೆಯ ಸ್ಪರ್ಶ.

ಏನಿದರ ವೈಚಿತ್ರ್ಯ ?

ಹಾಗೆ ನೋಡಿದರೆ ಇದು ನಿತ್ಯದ ನೋಟ. ಪ್ರಕೃತಿಯೊಡಲಿನ ಮಾಮೂಲಿಯಾಟ. ಸೂರ್ಯ ಉದಯಿಸದ ದಿನವುಂಟೇ ? ತಂಗಾಳಿ ಬೀಸದ ಕ್ಷಣವುಂಟೇ ? ಇದೇ ಮುಂಜಾವು ಕೆಲವರಿಗೆ ಸ್ಫೂರ್ತಿಯನ್ನು ಕೊಟ್ಟರೆ ಮತ್ತೆ ಕೆಲವರನ್ನು ಮಂಕಾಗಿಸುತ್ತದೆ! ಅವರವರ ಭಾವಕ್ಕೆ ತಕ್ಕಂತೆ ಅವರವರ ಅನುಭವ.

ಮತ್ತೆ, ಸಹಜತೆಯಲ್ಲಿ ಸುಖವನ್ನು ಸವಿಯುವ ಬಗೆ ಹೇಗೆ? ಮನಸ್ಸನ್ನು ಸದಾ ತಿಳಿಯಾಗಿಸಿಕೊಳ್ಳುವ ಕ್ರಮ ಹೇಗೆ? ಸಮಸ್ಯೆಯ ಜೊತೆಗೆ ಪರಿಹಾರವೂ ನಮ್ಮೊಳಗೇ ಇದೆ.

ಮನಸ್ಸು ಸಮುದ್ರದಂತೆ, ರತ್ನಾಕರ. ಉಪ್ಪುನೀರು, ಕಪ್ಪೆ ಚಿಪ್ಪುಗಳ ಜೊತೆಗೆ ಮುತ್ತು ರತ್ನಗಳೂ ಹೇರಳವಾಗಿವೆ. ಆದರೆ ಅದು ಬಹಳ ಆಳದಲ್ಲಿ! ಕಹಿ ನೆನಪುಗಳೆಂಬ ಕಪ್ಪೆ ಚಿಪ್ಪುಗಳು, ಆತಂಕಗಳೆಂಬ ಆಳೆತ್ತರದ ಅಲೆಗಳು. ಸಂಸಾರವೆಂಬ ವಿಸ್ತಾರವಾದ ಉಪ್ಪಿನೀರಿನಲ್ಲಿ ತಿರುಗಾಡುವ ಆಪತ್ತುಗಳೆಂಬ ತಿಮಿಂಗಿಲ, ಮೊಸಳೆಗಳು ಯಾವಾಗಲೂ ಇರುತ್ತವೆ! ಅವುಗಳನ್ನೆಲ್ಲ ಸಹಿಸಿ ಆಳಕ್ಕಿಳಿದರೆ ಮಾತ್ರ ಸಿಗುತ್ತವೆ, ಸಿಹಿನೆನಪುಗಳೆಂಬ ಮುತ್ತುಗಳು. ಭರವಸೆಯೆಂಬ ರತ್ನಗಳು. ಗುರು ಹಿರಿಯರ ಹರಕೆ, ದೇವರ ಅನುಗ್ರಹವೆಂಬ ವೈಡೂರ್ಯಗಳು!

ಬದಲಾವಣೆ ಪ್ರಕೃತಿಯ ನಿಯಮ. ಇಂದು ಇದ್ದಂತೆ ಎಲ್ಲವೂ ನಾಳೆಗಿರದು. ಎಲ್ಲವೂ ಬದಲಾಗಬೇಕು. ಮಕ್ಕಳು ದೊಡ್ಡವರಾದಂತೆ. ಗಿಡವು ಮರವಾದಂತೆ. ಕಾಯಿ ಹಣ್ಣಾದಂತೆ. ನಾವೂ ಬದಲಾಗಬೇಕು. ಬೆಳೆಯಬೇಕು. ಬದುಕಲು ಕಲಿಯಬೇಕು. ಕಲಿಯುತ್ತಲೇ ಇರಬೇಕು. ಸಾಯುವ ತನಕವೂ.

ದೇವರು ವಿಗ್ರಹದೊಳಗೆ ಇಲ್ಲ. ನಿಮ್ಮ ಭಾವನೆಗಳೇ ನಿಮ್ಮ ದೇವರು. ನಿಮ್ಮ ಆತ್ಮವೇ ದೇವಸ್ಥಾನ. —ಚಾಣಕ್ಯ

ಆ ಒಂದು ಥರ

ಕಾವ್ಯಾ ಕಡಮೆ ನಾಗರಕಟ್ಟೆ, ನ್ಯೂ ಜೆರ್ಸಿ

"**ಯಾ**ಕ ಒಂಥರಾ ಆದಿ ಅಲಾ?" ಎಂಬ ಒಂದೇ ಮಾತು ಸುಘೋಷನ ಬಾಯಿಂದ ಬರದೇ ಇರಲಿ ದೇವರೇ ಅಂತ ಪ್ರಾರ್ಥಿಸುತ್ತಾಳೆ ಮನು ಯಾವಾಗಲೂ. ಅವನು ಹಾಗೆಂದ ಎಂದರೆ ಮನೆಯಲ್ಲಿ ಇನ್ನೊಂದು ವಾರ ಅಕಾರಣವಾಗಿ ಏನೋ ಸ್ಫೋಟಗೊಳ್ಳುತ್ತದೆ ಅಂತ ಅವಳಿಗೆ ಗೊತ್ತು. ಇವತ್ತು ಆದದ್ದೂ ಅದೇ.

"ಇಲ್ಲಲಾ, ಏನಾಗೇತಿ?" ಹಾಸಿಗೆಯಿಂದ ಏಳಲಾರದ ಆಲಸ್ಯದಲ್ಲಿ ಗೋಡೆಯ ದಿಕ್ಕಿಗೆ ಮುಖ ತಿರುಗಿಸುತ್ತ ಹೇಳಿದಳು.

"ಇಲ್ಲಾ, ದಿನಾ ಇರೂ ಹಂಗಿಲ್ಲ"

"ದಿನಾನೂ ಹಿಂಗ ಇರ್ತೇನಲ್ಲ"

ಹಿಂದಿನ ದಿನ ಭಾನುವಾರವಾದ್ದರಿಂದ ಕಾರು ಹೊಡೆಯಲು ಕಲಿಸುತ್ತೇನೆ ಅಂತ ಸುಘೋಷ ಮನುವನ್ನು ಕರೆದಿದ್ದ. ಹುಬ್ಬಳ್ಳಿಯಲ್ಲಿದ್ದಾಗ ಆರಾಮಾಗಿ ದಾಜೀಬಾನ ಪೇಟೆಯಂಥ ಜನದಟ್ಟಣೆಯಲ್ಲೇ ಸ್ವತಂತ್ರವಾಗಿ ಕಾರು ಓಡಿಸಿ ಅನುಭವವಿದ್ದರೂ ಮನು ಅಮೇರಿಕೆಯ ಅಗಲಗಲ ರಸ್ತೆಗಳಿಗೆ, ಸಾಟಿಯಿಲ್ಲದ ವೇಗಕ್ಕೆ ವಿಪರೀತ ಅಂಜಿದ್ದಳು. ಆ ನಡುಕವನ್ನೇ ಹೊದ್ದಂತೆ ಕಾರು ಸೀಟಿನ ಮೇಲೆ ಕುಳಿತು ಬಾಗಿಲೆಳೆದುಕೊಂಡಿದ್ದಳು. ಸುಘೋಷನ ಎತ್ತರಕ್ಕೆ ಹೊಂದಿಸಿಕೊಂಡ ಕಾರು ಸೀಟು, ಹಿಂಬದಿಯ ರಸ್ತೆಯನ್ನು ಮೂರು ಕೋನಗಳಲ್ಲಿ ತೋರುವ ದರ್ಪಣ ಎಲ್ಲವನ್ನೂ ಕಾಣುತ್ತಿದ್ದರೆ ಎರಡು ಸೈಜು ದೊಡ್ಡ ಬಟ್ಟೆಯನ್ನು ತೊಟ್ಟ ಅನುಭವವಾಗುತ್ತಿತ್ತು.

ಪಕ್ಕದಲ್ಲಿ ಕುಳಿತಿದ್ದ ಸುಘೋಷ "ಇದು ಎಕ್ಸಲೇಟರು, ಬ್ರೇಕು ನೆನಪಿರಲಿ ಎ -ಬಿ" ಅಂತ ಶುರುಮಾಡಿದ್ದೇ "ಹುಬ್ಳಿಯಾಗ ಫ್ರೆಂಡಿನ ಕಾರನ್ನ ಹೊಡದೇನಿ ಭಾಳ ಸರ್ತಿ" ಅಂತ ನಿರ್ಲಕ್ಷ್ಯ ತೋರಿದಂತೆ ನಟಿಸಿದರೂ ಕ್ಲಚ್ಚಿಲ್ಲದೇ ಕೇವಲ ಕೀಲಿ ತಿರುವುತ್ತಲೇ ಶುರುವಾಗುವ ಕಾರು ಕಂಡು ಮನುಗೆ ತುಸು ಆತಂಕವೇ ಆಗಿತ್ತು. ಎರಡು ವರ್ಷಗಳಿಂದ ಡ್ರೈವರ್ ಸೀಟಿನಲ್ಲಿ ಕುಳಿತಿಲ್ಲವಾದುದರಿಂದ ಆ ಆತಂಕವೇ ಮೈಮನಸ್ಸುಗಳಿಗೆ ಒಂದು ರೀತಿಯ ಜಡತ್ವವನ್ನು ತಂದಿತ್ತು.

"ಅಯ್ಯಯ್ಯೋ ಬ್ರೇಕು ಹಾಕು", "ಸ್ವಾಪ್ ಸೈನು ಕಾಣಾಂಗಿಲ್ಲೇನ?" "ರೇರ್ ವ್ಯೂ ಕನ್ನಡಿಯನ್ಯಾಕನೋಡಾಂಗಿಲ್ಲ", "ಪ್ಯಾಸೆಂಜರ್ ಸೀಟ್ ಕನ್ನಡಿಯನ್ಯಾಕ ನೋಡಾಕತ್ತಿಲ್ಲ", "ಬ್ಲೈಂಡ್ಸ್ಪಾಟ್ ಕಾಣದಿದ್ರ ಹೊಡಕೋತಿ ಯಾವುದರ ಟ್ರಕ್ಕಿಗ" ಸುಘೋಷನ ಕಾಟ ತಾಳಲಾರದೇ ಕೊನೆಗೆ ರಸ್ತೆ ಬದಿಯಲ್ಲೇ ಕಾರು ನಿಲ್ಲಿಸಿ ನಡೆದು ಮನೆಗೆ ಬಂದುಬಿಟ್ಟಿದ್ದಳು. "ಎಂಥಾ ಬೇಜವಾಬ್ದಾರಿ ವರ್ತನೆ" ಅಂತ ಸುಘೋಷ ಕಂಗೆಣ್ಣು ಬಿಡುತ್ತ ಮನೆಗೆ ಕಾರು ಓಡಿಸಿಕೊಂಡು ಬಂದಿದ್ದ.

ಮನೆಗೆ ಬಂದಿದ್ದೇ ಇಬ್ಬರೂ ಒಂದೂ ಮಾತಾಡದೇ ಊಟ ಮಾಡಿ, ಒಂದೂ ಮಾತಾಡದೇ ಬುಸುಗುಡುತ್ತ ಮಲಗಿದ್ದರು. ಅದು ಇನ್ನೊಂದೆರಡು ದಿನದಲ್ಲಿ ಲಾವಾರಸದಂತೆ ಹೊರಬಂದು ದಹಿಸುತ್ತದೆ ಅಂತ ಅವಳಿಗೆ ಆಗಲೇ ಗೊತ್ತಾಗಿತ್ತು. ಆದರೆ ಅದು ಹೀಗೆ ಬೆಳಿಗ್ಗೆ ಬೆಳಿಗ್ಗೆಯೇ ನಡೆಯಬಹುದು ಅಂತ ಊಹಿಸಿರಲಿಲ್ಲ ಅಷ್ಟೇ.

"ದಿನಾ ಏನು ಹಿಂಗಿರಂಗಿಲ್ಲ ನೀನು, ಹಾಂಗ ಸೊಟ್ಟ ಮಾರಿ ಮಾಡಿಕೊಂಡು ಕುಂದರಾಕ ಏನಾಗೇತಿ ಹೇಳು?" ಅವನ ಚುರುಕಾದ ತಾರಕ ದನಿ ತನ್ನನ್ನು ತಟ್ಟಲೆಂದೇ ಬಂದಿದ್ದು ಅಂತ ಗೊತ್ತಾದರೂ ಮನು ಸಾವಧಾನವಾಗಿ ಉತ್ತರಿಸಲು ಪ್ರಯತ್ನಿಸಿದಳು.

"ಯಾಕ ಹಂಗ ಅನ್ನತಿ? ಎಲ್ಲೆ ಸೊಟ್ಟ ಮಾರಿ ಮಾಡೇನಿ?"

"ಓಹ್, ನಿನ್ನಿ ನಡೆದಿದ್ದನ್ನ ಇನ್ನೂ ಮನಸ್ಸಿನ್ಯಾಗಿಟ್ಟುಕೊಂಡಿ ಏನ? ರೇರ್ ವ್ಯೂ ಕನ್ನಡಿಯಾಗ ನೋಡದ ಎಷ್ಟು ಜನ ಆಕ್ಸಿಡೆಂಟ್ ಮಾಡಿಕೊಂಡಾರ"

ಆಗಲೇ ಮನು ಕಣ್ಣೀರಿಡತೊಡಗಿದ್ದಳು. ಅದನ್ನು ಕಂಡು ಸುಘೋಷ ಇನ್ನೂ ಕಿರಿಕಿರಿಗೊಂಡ. ಅವನ ಮಾತುಗಳಲ್ಲಿ ಮನುವಿನ ಜನ್ಮ ಜಾಲಾಡುವಂಥ ಎಲ್ಲ ಮಾತುಗಳೂ ಬಂದು ಹೋದವು. "ಬೇಡ ಅದೊಂದು ಹೇಳದಿರಲಿ" ಅಂತ ಅವಳು ಅಂದುಕೊಳ್ಳುತ್ತಲೇ ಅದೇ ಮಾತು ಅವನ ಬಾಯಿಂದ ಬಂತು. ಒಂದೂ ಕೆಟ್ಟ ಮಾತನಾಡದೇ, ಬೈಗುಳವಾಡದೇ ಅವಳು ಪೂರ್ತಿ ನೆಲಕ್ಕಿಳಿಯುವಂತೆ ಮಾಡುವುದು ಹೇಗೆಂದು ಅವನಿಗೆ ಗೊತ್ತು. ಇವನು ಆಫೀಸಿಗೆ ಹೋದರೆ ಸಾಕು ಅಂದುಕೊಳ್ಳುತ್ತ ಬೆಳಗಿನ ಎರಡು ಘಂಟೆಗಳನ್ನು ಕಳೆದಿದ್ದಳು.

ಅವನು ಅತ್ತ ಹೋದದ್ದೇ ಹಾಸಿಗೆಯ ಮೇಲೊರಗಿ ಎಲ್ಲಿದ್ದವಳು ಎಲ್ಲಿಗೆ ಬಂದು ಮುಟ್ಟಿದೆ ಅಂದುಕೊಂಡಳು. ಹೀಗೆಯೇ ಬಿಟ್ಟರೆ ಸಂಜೆ ಆರೂವರೆಗೆ ಸುಘೋಷ ಬರುವ ಅರ್ಧ ಘಂಟೆ ಮುಂಚಿನ ತನಕ ಹೀಗೆಯೇ ಬಿದ್ದಿರುತ್ತಾಳೆ ಮನು. ನಂತರ ಇಡೀ ದಿನ ಸಮಯ ಹಾಳು ಮಾಡಿದೆನಲ್ಲ ಅಂತ ನೊಂದುಕೊಳ್ಳುತ್ತಾಳೆ. ಅದನ್ನು ನೆನೆಸಿಕೊಂಡು ಒಲ್ಲದ ಮನಸ್ಸಿನಿಂದಲೇ ಹಾಸಿಗೆಯಿಂದೆದ್ದಳು. ಕಳೆದ ವಾರವಷ್ಟೇ ಹೊಸತಾಗಿ ತಂದ ಉದ್ದ ನಿಲುವುಗನ್ನಡಿಯ ಮುಂದೆ ನಿಂತು ಕೂದಲು ಬಿಚ್ಚಿದಳು. ಬೆಳಿಗ್ಗೆಯಿಂದ ಒಮ್ಮೆಯೂ ಕೂದಲಿಗೆ ಬಾಚಣಿಗೆ ತಾಗಿಸಿರಲಿಲ್ಲ. ಎತ್ತರಿಸಿ ಜಡೆ ಕಟ್ಟಿದರೆ ತೀರಾ ತೆಳ್ಳಗೆ ಕಾಣುವ, ಹಾಗೆಯೇ ಬಿಟ್ಟು ಕ್ಲಿಪ್ಪು ಹಾಕಿದರೆ ದಟ್ಟವಾಗಿ ತೋರುವ ಎದೆ ದಾಟುವ ಗುಂಗುರು ಕೂದಲು ನಾಲ್ಕು ದಿನಗಳಿಂದ ನೀರು ಕಾಣದೇ ಅಲ್ಲಲ್ಲಿ ಅರ್ಧ ಹರಿದು ವಿಚಿತ್ರವಾಗಿ ಎದ್ದು ನಿಂತಿತ್ತು. ಅವಳು ನಿಂತ ಕೋನದಿಂದ ನಿಲುವುಗನ್ನಡಿಯ ಸರೀ ಹಿಂದಕ್ಕಿರುವ ದೊಡ್ಡ ಕಿಟಕಿಯಿಂದ ತೂರಿ ಬಂದ ಪ್ರಖರ ಬಿಸಿಲು ಕಿರಣಗಳು ಅವಳ ಮುಖದ ಮೇಲೇ ಢಾಳಾಗಿ ಬಿದ್ದಿದ್ದವು.ಇದೇ ಮೊದಲ ಬಾರಿ ಅವಳು ಹುಬ್ಬನ್ನು ಒಂಚೂರೂ ಗಂಟಿಕ್ಕದಿದ್ದರೂ ಹಣೆಯ ಮೇಲೆ ತೆಳುವಾಗಿ ಮೂಡಿರುವ ಸುಕ್ಕುಗಳನ್ನು ಕಂಡಳು. ಕಣ್ಣುಗಳ ಇಕ್ಕೆಲಗಳಲ್ಲಿ, ತುಟಿಗಳ ಅಂಚಿನಲ್ಲಿ ದೂರದಿಂದ ಯಾರೂ ಕಾಣಲಾರದ ತೆಳು ನಾಜೂಕು ಗೆರೆಗಳು. ಒಂಚೂರೂ ಬೆಳಕಿಲ್ಲದ ನಿಸ್ತೇಜ ಕಣ್ಣುಗಳು.ಇಡೀ ಮುಖದ ಮೇಲೆ ಚರ್ಮಕ್ಕೇ ಅಂಟಿಕೊಂಡಂತಿರುವ ಸಣ್ಣ ಸಣ್ಣ ಗುಳ್ಳೆಗಳು, ಮೇಲ್ದುಟಿಗಳ ಅಂಚಿನಲ್ಲಿ ಇದೀಗ ಚಿಗುರುತ್ತಿರುವ ತೆಳು ಮೋಡದಂಥ ಕಂದು ಕೂದಲು. ಮೂವತ್ತು ದಾಟಿದ ಮೇಲೆ ಇದು ಸಹಜವೇ? ಅವಳಿಗೆ ಗೊತ್ತಾಗಲಿಲ್ಲ. "ಮೂವತ್ತು ದಾಟಿದ ಮೇಲೆ ಹೆಣ್ಣಿನ ದೇಹದಲ್ಲಾಗುವ ಬದಲಾವಣೆಗಳು" ಅಂತ ಗೂಗಲ್‌ನಲ್ಲಿ ಹುಡುಕಲು ಫೋನಿಗಾಗಿ ಕಣ್ಣು ಹಾಯಿಸುವಳು. ಹಾಗೆ ನೋಡಿದರೆ ಮನುವಿಗೆ ಸುಘೋಷನ ಕುರಿತು ಏನೇನೂ ತಕರಾರುಗಳಿಲ್ಲ. ಹಾಗೆ ಅಂದುಕೊಂಡ ಮರುಕ್ಷಣವೇ ಆ ಮಾತು ಸತ್ಯವಲ್ಲ ಅಂತಲೂ ಅವಳಿಗೆ ಅರಿವಾಗುವುದೂ ಸುಳ್ಳಲ್ಲ. ವಿಚಿತ್ರವೆಂದರೆ ಅವನು ಕಣ್ಣೆದುರಿಗೆ ಇಲ್ಲದಾಗ ಇಂದಿಗೂ ಅವಳಿಗೆ ಐದನೇಯತ್ತೆಯ ಆ ಪುಟ್ಟ ಹುಡುಗನೇ ಕಣ್ಮುಂದೆ ಬರುವ. ಮೊದಲ ಬೆಂಚಿನ

ಗೋಡೆಯಂಚಿನ ತುದಿಯಿಂದ ಮೆಲ್ಲನೆ ನಡೆದು ಅವನು ಬೋರ್ಡಿನ ಮೇಲೆ ಟೀಚರ್ ಹೇಳಿದ ಗಣಿತ ಬಿಡಿಸುತ್ತ ವಿಶಿಷ್ಟವಾಗಿ "೨" ಸಂಖ್ಯೆಯನ್ನು ಬರೆಯುವುದೇ ಕಣ್ಮುಂದೆ ಬರುವುದು. ಶಾಲೆಯಲ್ಲಿ ಒಮ್ಮೆಯೂ ತಲೆ ಎತ್ತದೇ, ಹುಡುಗರ ಗುಂಪಿನಲ್ಲಿ ಸೇರದೇ ಯಾವುದರಿಂದಲೋ ತಪ್ಪಿಸಿಕೊಳ್ಳಲೆಂಬಂತೆ ಸತತವಾಗಿ ಪುಸ್ತಕದಲ್ಲಿ ಹುದುಗಿರುತಿದ್ದ ಆ ಸಣಕಲು ಹುಡುಗನೇ ಈಗ ರಾತ್ರಿ ದೀಪವನ್ನೂ ಆರಿಸದೇ ಕಣ್ಣಳ್ಳಲ್ಲಿ ಬಾಣದಂತೆ ನೋಟ ನೆಟ್ಟು, ಅವನದೇ ಆದ ಅಪರೂಪದ ಆತ್ಮವಿಶ್ವಾಸದಿಂದ ಅವಳ

ಆ ಒಂದು ಥರ

ದೇಹವನ್ನು ನಖಶಿಕಾಂತ ಆವರಿಸಿ ಮುದ್ದಿಸುತ್ತಾನೆ ಅಂದರೆ ಅವಳಿಗೆ ನಂಬುವುದು ಕಷ್ಟ.

ಮನು ಮತ್ತವಳ ತಾಯಿ ಹರ್ಷಮಣಿ ಧಾರವಾಡದ ಅಜ್ಜನ ಮನೆಯಿಂದ ಜಗಳವಾಡಿಕೊಂಡು ಹುಬ್ಬಳ್ಳಿಗೆ ಬರುವ ಮೊದಲು ಮನು ಓದಿದ್ದು ಧಾರವಾಡದ ಬಾಸೆಲ್ ಮಿಶನ್ ಪ್ರಾಥಮಿಕ ಶಾಲೆಯಲ್ಲಿ. ಆಗ ಒಂದರಿಂದ ಐದನೆಯ ತರಗತಿಯವರೆಗೆ ಸುಘೋಷ ಅವಳ ಸಹಪಾಠಿಯಾಗಿದ್ದ. ನಂತರ ಹುಬ್ಬಳ್ಳಿಯ ಮಹಿಳಾ ವಿದ್ಯಾಪೀಠದಲ್ಲಿ ಮನು ಬಿ.ಎ ಫೈನಲ್ ಓದುತ್ತಿರುವಾಗ ತೆರೆದುಕೊಂಡ ಫೇಸ್‌ಬುಕ್ ಎಂಬ ಆಧುನಿಕ ಲೋಕದಲ್ಲಿ ಹಳೆಯ ಸಹಪಾಠಿಗಳೆಲ್ಲ ಸಿಗುವಾಗ ಮತ್ತೆ ಸಿಕ್ಕ. ತಂದೆ ತಾಯಿ ಇಲ್ಲದೇ ದೊಡ್ಡಪ್ಪನ ಮನೆಯಲ್ಲಿ ಬೆಳೆದ ಸುಘೋಷನಿಗೂ ಆ ಫೇಸ್‌ಬುಕ್ ಪ್ರೇಮ ಪ್ರಯಾಣ ಆಕರ್ಷಕವಾಗಿಯೇ ಕಂಡಿತ್ತು. ಸಂಬಂಧದಲ್ಲಿ ಏನು ಹುಡುಕಬೇಕೆಂದೇ ತಿಳಿಯದ ಧಾವಂತದಲ್ಲಿ ಇಬ್ಬರೂ ಮದುವೆಯಾಗಿದ್ದರು. ಸುಘೋಷನ ಸ್ನೇಹಿತರ ಹೆಂಡತಿಯರು ಇಲ್ಲಿಗೆ ಬಂದು ಒಂದೆರಡೇ ವರ್ಷಗಳಲ್ಲಿ ಎಂ.ಎಸ್ ಮುಗಿಸಿ ಯಾವುದೋ ಕಂಪನಿಯಲ್ಲಿ ಕೆಲಸ ಮಾಡುತ್ತ ವೀಕೆಂಡಿನ ಪಾಟ್‌ಲಕ್ ಡಿನ್ನರುಗಳಲ್ಲಿ ಅವಳು ತಯಾರಿಸಿದ ಹರಾ ಕಬಾಬ್ ಮೆಲ್ಲುತ್ತ "ಸೋ ವಾಟ್ ಡೂ ಯೂ ಡೂ?" ಅಂತ ತಮ್ಮ ನಾಜೂಕಾದ ಲೇಸಿನ ಬ್ರಾ ಪಟ್ಟಿಗಳನ್ನು ಕಾಣಿಸುವ ಹಾಗೆ ಧರಿಸಿ ಹೆಗಲು ಹಾರಿಸುತ್ತ ಕೇಳುವಾಗ ಮಾತ್ರ ಮನುವಿಗೆ ಫಜೀತಿಗಿಟ್ಟುಕೊಳ್ಳುತ್ತದೆ. "ವೆಲ್, ಐ ಆಮ್ ಅ ರೈಟರ್" ಅಂತ ಕಣ್ಣುಗಳಲ್ಲಿ ಆತ್ಮ ವಿಶ್ವಾಸ ನಟಿಸುತ್ತ ಏರುದನಿಯಲ್ಲಿ ಹೇಳುವಾಗ ಕಂಕುಳಲ್ಲಿ, ತೊಡೆಸಂದಿಯಲ್ಲಿ ತುಸು ಬೆವರಿದ್ದು ಅರಿವಾಗುವುದು. ಒಂದೆರಡು ಕನ್ನಡ ಪತ್ರಿಕೆಗಳಲ್ಲಿ ಅವಳ ಒಂದಿಷ್ಟು ಕವನಗಳು, ಹನಿ ಕವಿತೆಗಳು ಪ್ರಕಟವಾಗಿವೆ. ಹೀಗಾಗಿ ನಾನೂ ಕವಿ ಅಂತ ಮುಲಾಜಿಲ್ಲದೇ ಹೇಳಿಕೊಳ್ಳಬಲ್ಲಳು.

ಮನು ಅಷ್ಟು ಹೇಳಿದ್ದೇ ಸುಘೋಷ ಎಲ್ಲಿದ್ದರೂ ಅವಳ ನೆರವಿಗೆ ಓಡಿ ಬರುತ್ತಾನೆ. ತನ್ನ ಉದ್ದುದ್ದ ಮೋಡಿ ಬೆರಳುಗಳಲ್ಲಿ ಕಲಾತ್ಮಕ ಕುಸುರಿ ಕೆತ್ತನೆಯಿರುವ ವೈನ್ ಗ್ಲಾಸನ್ನು ದೃಢವಾಗಿ ಹಿಡಿದು ಅವನು ಮಾತಿಗೆ ತೊಡಗಿದನೆಂದರೆ ಎದುರಿಗೆ ಯಾರೇ ಇದ್ದರೂ ಅವನ ಮಾತಿಗೆ ಸೋಲಲೇಬೇಕು, ಹಾಗಿರುತ್ತದೆ ಅವನ ವರಸೆ. ಬರಹಗಾರರಿಗೆ "ಲೀಜ್ಜರ್" ಹೇಗೆ ಮುಖ್ಯ ಅಂತ ಶುರುವಾದ ಅವನ ವಾದ ಎಲ್ಲೆಲ್ಲೋ ಹೋಗಿ ಬರಹಗಾರರು ಜಗತ್ತಿಗೆ ಏಕೆ ಬೇಕು ಅನ್ನುವಲ್ಲಿ ಹೋಗಿ ಮುಟ್ಟುವವರೆಗೆ ಅವನ ಏಕಮುಖ ವಾದಸರಣಿಯನ್ನು ಅವನ ಸ್ನೇಹಿತರ ಹೆಂಡತಿಯರು ಅವನ ಎತ್ತರದ ನಿಲುವಿನ ಜೊತೆಗೆ ಸವಿಯುತ್ತ ಮೆಚ್ಚಿಕೊಳ್ಳುವರು. ಅವರ ಮಾತಿನ ಕೊನೆಗೆ ಮನುವನ್ನು ಒಬ್ಬ ಉದಾತ್ತ ಜೀವಿಯಂತೆ ಕಂಡು ತಮ್ಮೆಲ್ಲರಿಗಿಂತ ಇವಳದು ಬೇರೆಯದೇ ಹಾದಿ ಅಂತ ಮೆಚ್ಚುಗೆಯಿಂದ ಕಂಡಂತೆ ಅವರ ಕಣ್ಣಗಳಲ್ಲಿ ಅವಳ ಬಿಂಬ ಬದಲಾಗುವುದು.

***

ಮಂಚದ ಸರೀ ಹಿಂದಕ್ಕಿರುವ ಸದಾ ಬ್ಲೈಂಡು ಹಾಕಿರುವ ಕಿಟಕಿಯಲ್ಲಿ ಇಣುಕಿ ನೋಡಿದಳು. ಆಗಷ್ಟೇ ಶಾಲೆ ಬಿಟ್ಟ ಮಕ್ಕಳನ್ನು ಹಿಂದಿನ ಬೇಬಿ ಸೀಟುಗಳಲ್ಲಿ ಕೂರಿಸಿಕೊಂಡು ಉದ್ಯೋಗಸ್ಥ ತಾಯಂದಿರಿಬ್ಬರು, ಕಾರು ಇಳಿಯುವುದನ್ನು ಕಂಡಳು. ಇಂಥ ವೇಗದ ರಸ್ತೆಗಳಲ್ಲಿ ನಿರಮ್ಮಳವಾಗಿ ಕಾರು ಬಿಟ್ಟುಕೊಂಡು ನಡೆವ ಹೆಂಗಸರನ್ನು ಕಂಡರೆ ಮನುವಿಗೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗುತ್ತದೆ. ಅದರ ಹಿಂದೆಯೇ ಹುಬ್ಬಳ್ಳಿಯ ದಾಜೀಬಾನ ಪೇಟೆಯ ಸಂದುಗೊಂದುಗಳಲ್ಲಿ ಪುಟ್ಟ ಮಾರುತಿ ೮೦೦ ಕಾರನ್ನು ಓಡಿಸಿದ್ದು ನೆನಪಾಗುತ್ತದೆ.ತಿಳಿಹಸಿರು ಫ್ರಾಕು ಧರಿಸಿದ ಕಪ್ಪು ಕಾರಿನ ಹೆಂಗಸು ಒಂದು ಕೈಯಲ್ಲಿ ಮಗುವನ್ನೆತ್ತಿಕೊಂಡು, ಇನ್ನೊಂದರಲ್ಲಿ ಒಂದು ದೊಡ್ಡ ಹಾಲಿನ ಕ್ರೇಟನ್ ಹಿಡಿದುಕೊಂಡು ಮನುವಿನ ಕಿಟಕಿಯ ಕಣ್ಣಳತೆಯಿಂದ ನಿಧಾನಕ್ಕೆ ಮಾಯವಾಗುತ್ತಿದ್ದಳು. ಅದೇಕೋ ಮನುವಿನ ಮೈಯಲ್ಲಿ ಮಿಂಚಿನ ಸಂಚಾರವಾದಂತಾಯಿತು. ಟೀವಿ ಟೇಬಲ್ಲಿನ ಮೇಲೆ ಸುಘೋಷ ಇರಿಸಿಹೋಗಿದ್ದ ಕಾರಿನ ಕೀಲಿಯನ್ನು ನೋಡಿ ಕಾರು ಓಡಿಸುವ ಆಸೆ ತೀವ್ರವಾದರೂ ತಡೆದುಕೊಂಡಳು. ಮರುಕ್ಷಣವೇ ಕೂದಲಿಗೊಂದು ಬೋ ಹಾಕಿಕೊಂಡು ಜೀನ್ಸು ತೊಟ್ಟು ಕಾರು ಕೀಲಿಯ ಜೊತೆಗೆ ಮನೆಯ ಕೀಲಿಯನ್ನೂ ತೆಗೆದುಕೊಂಡು ಶೂ ತೊಟ್ಟು ಹೊರ ನಡೆದಳು.

***

ಐದೂವರೆಗೆ ಮನು ಮನೆಗೆ ಮರಳಿದಾಗ ಸಣ್ಣಗೆ ಸಿಳ್ಳು ಹಾಕುತ್ತಿದ್ದಳು. ಇಂದು ಮೊದಲ ಬಾರಿ ಈ ಪರದೇಶದಲ್ಲಿ ಸ್ವತಂತ್ರ್ಯವಾಗಿ ಕಾರು ಓಡಿಸುವ ಉದ್ವೇಗದಲ್ಲಿ ಬೆಳಿಗ್ಗೆಯಿಂದ ಮನಸ್ಸನ್ನು ಆವರಿಸಿದ ಮನಸ್ಸಿನ ಜಾಡ್ಯವೆಲ್ಲ ಕರಗಿ ತಿಳಿಯಾಗಿತ್ತು. ಶವರ್‌ನಲ್ಲಿ ತಲೆಸ್ನಾನ ಮುಗಿಸಿಕೊಂಡು ಬಂದಳು. ಸರಿಯಾಗಿ ಆರೂವರೆಗೆ ಎಂದಿನಂತೆ ಸುಘೋಷ ಮನೆಯ ಕೀಲಿ ತೆಗೆದು ಒಳಬಂದಾಗ ಹಾಯ್ ಹೇಳಿದರೂ ಇಬ್ಬರೂ ಅದೇಕೋ ಕಣ್ಣು ತಪ್ಪಿಸಿದ್ದು ಇಬ್ಬರ ಗಮನಕ್ಕೂ ಬಂತು. ಅವನು ಕಣ್ಮುಂದೆ ಇಲ್ಲದಾಗ ಹುಟ್ಟುವ ದ್ವೇಷದ ಮಾತೆಲ್ಲ ಅವನು ಮುಂದೆ ಬಂದಾಗ ಕರಗಿಹೋಗುತ್ತದೆ. ಅವನ ಮುಗ್ಧ ನೋಟಕ್ಕೆ ಮನಸ್ಸು ತುಂಬಿ ಬರುತ್ತದೆ. ಹಗೆ ಕರಗುತ್ತದೆ. ಬಹುಶಃ ಅವನಿಗೂ ಹಾಗೆಯೇ ಅನ್ನಿಸಿರಬಹುದು ತನ್ನ ಬಗ್ಗೆ ಅಂದುಕೊಂಡಳು ಮನು. ಅಥವಾ ಹಾಗೆಯೇ ಅನ್ನಿಸಲಿ ಅಂತ ಪ್ರಾರ್ಥಿಸಿದಳು.

"ಚಹಾ ಮಾಡುತ್ತೇನೆ" ಅಂತ ಸೋಫಾದಿಂದ ಎದ್ದವಳಿಗೆ ಬೆಳಿಗ್ಗೆಯಿಂದ ಒಂದೂ ಮಾತಾಡದೇ ಇದ್ದುದರಿಂದ ದನಿ ತುಸು ಒಡೆದದ್ದು ಗಮನಕ್ಕೆ ಬಂತು, ಬಾಲ್ ಪಾಯಿಂಟ್ ಪೆನ್ನಿನಲ್ಲಿ ಬರೆದ ಮೊದಲ ಅಕ್ಷರವನ್ನು ಪೆನ್ನು ಮೂಡಿದ ಮೇಲೆ ಇನ್ನೊಮ್ಮೆ ತಿದ್ದಿದಂತೆ "ಚಹಾ" ಅಂತ ಇನ್ನೊಮ್ಮೆ ಹೇಳಿದಳು. "ಮ್ಯಾಗೀ ನೂ ಮಾಡಲಿ?" ಅಂತ ಕೇಳಿದ್ದಕ್ಕೆ "ಹಂ, ಥ್ಯಾಂಕ್ಸ್" ಅಂತ ಉತ್ತರ ಬಂತು. ಮತ್ತೆ ಇದೇ ಮೌನ ನಾಲ್ಕು ದಿನ ಮುಂದುವರೆ - ಯುತ್ತದೆ ಅಂತ ಮನುಗೆ ಸಂಕಟವಾಯಿತು. ಆ ವಾಕ್ಯ ಮನಸ್ಸಿನಲ್ಲಿ ಪೂರ್ಣಗೊಳ್ಳುವ ಮೊದಲೇ ಸುಘೋಷ ಒಳಬಂದು ಹೆಗಲು ಬಳಸಿದ. ಇಲೆಕ್ಟ್ರಿಕ್ ಸ್ಟೋವಿನ ಕಡೆಗೆ ತಿರುಗಿದ್ದ ಮನುವಿನ ಮುಖವನ್ನು ಮೆಲ್ಲಗೆ ತನ್ನೆಡೆಗೆ ತಿರುಗಿಸಿಕೊಂಡ. ಬೆಳಿಗ್ಗೆ ಆಫೀಸಿಗೆ ಹೊರಡುವಾಗ ಅವಳ ಮುಖದ ಮೇಲಿದ್ದ "ಆ ಒಂಥರಾ" ಈಗಿಲ್ಲದೇ ಕರಗಿಹೋಗಿರುವುದನ್ನು ಗಮನಿಸಿ ತನ್ನ ಹಿಡಿತವನ್ನು ಇನ್ನಷ್ಟು ಬಿಗಿ ಮಾಡಿದ. ಇನ್ನೇನು ಕೆಲವೇ ಕ್ಷಣಗಳಲ್ಲಿ ತಾನು ತಿಳಿಸಲಿರುವ ಒಂಟಿಯಾಗಿ ಕಾರು ಚಲಾಯಿಸಿಕೊಂಡು ಹೋದ ಘಟನೆಯನ್ನು ಹೇಳುವಾಗ ಇವನು ಒಮ್ಮೆಲೇ ಸಿರಕ್ ಅಂತ ಸಿಡುಕದಿರಲಿ ದೇವರೇ ಅಂತ ಮನು ಅವನ ನಿಮೀಲಿತ ಕಣ್ಗಳನ್ನು ತನ್ಮಯತೆಯಿಂದ ನೋಡುತ್ತಾ ಒಳಗೊಳಗೇ ಪ್ರಾರ್ಥಿಸಿದಳು.

●

ನವಮಾಸ

ವಿ. ಪ್ರಸನ್ನ ಕುಮಾರ್ , ನ್ಯೂ ಜೆರ್ಸಿ

ನವಮಾಸ ಧರಿಸಿ ಹಾಲನು ಉಣಿಸಿ ಬೆಳೆಸಿದಳಾ ಮಾತೆ. ತಿಡ್ಡಿ ತೀಡಿದಳಾಕೆ. ಸನ್ಮಾರ್ಗ ತೋರಿದಳಾಕೆ.

ನವ ದಶಕದ ನನ್ನ ಆ ಮಾತೆಯ ಜೊತೆಗೆ ನವಮಾಸ ಕಳೆದು ತುಸು ಋಣವ ತೀರಿಸುವಂತೆ ಮಾಡಿದಳಾಕೆ.

ನಾನು ನಲವತ್ತು ವರ್ಷಗಳ ಹಿಂದೆ ೧೯೭೯ ರಲ್ಲಿ ಬಿ. ಇ. ಮುಗಿಸಿ ಸ್ನಾತಕೋತ್ತರ ಪದವಿ ಅರಸಿ ಐ.ಐ.ಟಿ. ಮದ್ರಾಸಿಗೆ ಹೋಗಿದ್ದವನು, ತಂದೆಗೆ ವಾಹನ ಅಪಘಾತ ಆಗಿ ಅವರು ಆಸ್ಪತ್ರೆಯಲ್ಲಿ ೩-೪ ತಿಂಗಳು ಇರಬೇಕೆಂಬುದನ್ನು ಅರಿತಾಗ ನಾನು ಯಾರಿಗೂ ಹೇಳದೆ ಕೇಳದೆ ಅವರ ಸೇವೆ ಮಾಡಲು ಸಿಕ್ಕಿದ್ದ ಎಮ್ - ಟೆಕ್ ಸೀಟನ್ನು ಬಿಟ್ಟು ಮೈಸೂರಿಗೆ ವಾಪಸ್ ಬಂದುಬಿಟ್ಟೆ. ನಾನು ಓದಿದ ಎನ್.ಐ.ಇ. ಕಾಲೇಜಿನಲ್ಲಿ ಒಬ್ಬ ತಾತ್ಕಾಲಿಕ ಉಪನ್ಯಾಸಕನಾಗಿ ಸೇರಿಕೊಂಡು, ಒಂದು ವರ್ಷ ನಮ್ಮ ತಂದೆಯವರ ಸೇವೆ ಮಾಡಿ ಮತ್ತೆ ಐ.ಐ.ಟಿ. ಗೆ ಸೇರಲು ಪರೀಕ್ಷೆ ಬರೆದು, ಮುಂಚಿಗಿಂತ ಉತ್ತಮವಾದ ಶಾಖೆಯನ್ನು ಪಡೆದು ಐ.ಐ.ಟಿ. ಮದ್ರಾಸಿನಲ್ಲಿ ಎಮ್ - ಟೆಕ್ ಮುಗಿಸಿ, ಟಾಟಾ ಸಂಸ್ಥೆಯಲ್ಲಿ ಒಳ್ಳೆಯ ಕೆಲಸ ಪಡೆದುಕೊಂಡು ತಂದೆ - ತಾಯಿಯರ ಕನಸನ್ನು ನನಸಾಗಿಸಿ ಏನೋ ಸಾಧಿಸಿದ ಹೆಮ್ಮೆಯ ಜೊತೆಗೆ ನಮ್ಮ ತಂದೆಯವರಿಗೆ ಮಾಡಿದ ಅಳಿಲು ಸೇವೆಯ ಧನ್ಯತಾ ಭಾವ ಇಂದಿಗೂ ಹಸಿಯಾಗಿದೆ. ನೆನಪಾದಾಗಲೆಲ್ಲಾ ಖುಷಿ ತರುತ್ತದೆ!

ಸರಿಯಾಗಿ ೪೦ ವರ್ಷಗಳ ನಂತರ ಕಳೆದ ವರ್ಷ ೨೦೧೯ರಲ್ಲಿ ನನ್ನ ೯೩ ವರ್ಷದ ಮಾತೃಶ್ರೀ ಅವರು ಬಚ್ಚಲು ಮನೆಯಲ್ಲಿ ಜಾರಿ ಬಿದ್ದು ಕಾಲು ಮುರಿದುಕೊಂಡು ಹಾಸಿಗೆ ಹಿಡಿದರೂ ಅವರ ಮಾನಸಿಕ ಉತ್ಸಾಹಕ್ಕೇನು ಕಡಿಮೆ ಆಗಲಿಲ್ಲ. ಕಳೆದ ೪೦ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸಮಾಡುತ್ತಾ ನಮ್ಮ ತಾಯಿಯವರನ್ನು ನೋಡಿಕೊಳ್ಳುತ್ತಿರುವ ನಮ್ಮ ಅಣ್ಣ - ಅತ್ತಿಗೆ ಅವರ ಎರಡು ವರ್ಷದ ಮೊಮ್ಮಗನ ಚೌಲಕ್ಕೆ (ಮೊದಲ ಜುಟ್ಟು ಬಿಡಿಸುವ ಶಾಸ್ತ್ರ) ೨ ತಿಂಗಳ ಮಟ್ಟಿಗೆ ಅಮೇರಿಕಾಗೆ ಬರಬೇಕಾದಾಗ, ನಮ್ಮ ತಾಯಿಯವರನ್ನು ನೋಡಿಕೊಳ್ಳಲು ನಾನು ಇದೇ ಜನವರಿಯಲ್ಲಿ ಬೆಂಗಳೂರಿಗೆ ಹೋದೆ. ೨ ತಿಂಗಳ ನಂತರ ಮಾರ್ಚ್‌ನಲ್ಲಿ ಈ ಜಗತ್ತಿಗೆ ವಕ್ಕರಿಸಿದ ಈ ಕರೋನ ಮಾರಿಯಿಂದ, ನಮ್ಮ ಅಣ್ಣ - ಅತ್ತಿಗೆ ೯ ತಿಂಗಳು ಅಮೇರಿಕಾದಲ್ಲೇ ಅವರ ಮಗಳ ಮನೆಯಲ್ಲೇ ಉಳಿಯಬೇಕಾಯ್ತು. ಆಗ ನನಗೆ ಸಿಕ್ಕಿದುದೆ ಈ ನವಮಾಸಗಳು ತಾಯಿಯ ಸೇವೆ ಮಾಡುವ ಸೌಭಾಗ್ಯ. ಅದನ್ನು ನಿಮಗೆ ತಿಳಿಸುವುದೇ ನನ್ನ ಈ ಲೇಖನದ ಉದ್ದೇಶ.

ನಮ್ಮ ಭಾರತದಲ್ಲಿ ಬಹುಶಃ ಕೇವಲ ಕೆಲವು ಅದೃಷ್ಟವಂತರಿಗೆ ಮಾತ್ರ ಮಾತಾಪಿತೃಗಳ ಮುಪ್ಪಿನಲ್ಲಿ ಅವರ ಸೇವೆ ಮಾಡುವ ಸೌಭಾಗ್ಯ ದೊರಕುವುದೇನೊ. ಅದರಲ್ಲೂ ಅಪ್ಪ ಅಮ್ಮನನ್ನು ಭಾರತದಲ್ಲಿ ಬಿಟ್ಟು ಪರದೇಸಿಗಳಾಗಿ ಬಂದ ನಮ್ಮಂಥ ಬಡಪಾಯಿಗಳಿಗೆ ಈ ರೀತಿಯ ಒಂದು ಅವಕಾಶ ಸಿಗುವುದು ಮರಳುಗಾಡಿನಲ್ಲಿ ಮರೀಚಿಕೆ ಸಿಗುವಂತೆ ಬಹಳ ಅಪರೂಪ. ಹೀಗಿರುವಾಗ, ನನ್ನ ಹೆಂಡತಿ ಮಕ್ಕಳ ಸಂಪೂರ್ಣ ಸಹಕಾರದಿಂದ, ಆ ಒಂದು ಸದವಕಾಶ ದೊರಕಿದ್ದು ನನ್ನ ಪುಣ್ಯ.

ನಮ್ಮ ಅಮ್ಮನನ್ನು ನೋಡಿಕೊಳ್ಳಲು ಇರುವ ನರ್ಸ್ ಸುನೀತ ಹಾಗು ನಾನು, ಫೆಬ್ರವರಿಯಲ್ಲಿ ಅಮ್ಮನನ್ನು ನೋಡಿಕೊಳ್ಳುವುದರ ಜೊತೆಗೆ ಸ್ವಲ್ಪ ಹೊಸ ಅಡಿಗೆಗಳನ್ನು ಕಲಿತುಕೊಂಡೆವು. ನಮ್ಮ ಸ್ನೇಹಿತರು, ನೆಂಟರು ನಾನಿದ್ದ ನಮ್ಮ ಅಣ್ಣನ ಮನೆಗೆ ಆಗ್ಗಾಗ್ಗೆ ಬಂದು ನಮಗೆ ವಾರಕ್ಕೆ ಆಗುವಷ್ಟು ಅಡಿಗೆ, ತಿಂಡಿ, ದೋಸೆ ಹಿಟ್ಟು, ಇಡ್ಲಿ ಹಿಟ್ಟು ಕೊಟ್ಟು ಹೋಗುತ್ತಿದ್ದರು. ಎರಡು ತಿಂಗಳು ತಾನೆ. ಆಡ್ತಾ ಬರುತ್ತೆ ಅಂತ ಅತ್ಯಂತ ಉತ್ಸುಕನಾಗಿ ತಾಯಿಯ ಸೇವೆ ಮಾಡಲು ಶುರು ಮಾಡಿದೆ. ನನ್ನದೇ ರಾಜ್ಯಭಾರ. ನನಗೆ ತೋಚಿದ ತಿಂಡಿ, ಅಡುಗೆ, ಸಿಹಿ - ತಿನಿಸುಗಳನ್ನು ಮಾಡಿಕೊಂಡು ಅಮ್ಮನ ಜೊತೆ ಮಾತಾಡಿಕೊಂಡು, ಅವರು ಮಲಗಿದ್ದಾಗ 'ಸ್ಕೂಲ್'ನಲ್ಲಿ ಒಂದೆರಡು ಹಾಡು ಹೇಳಿಕೊಂಡು ಹಾಯಾಗಿದ್ದೆ. ಮಾರ್ಚ್ ೨೩ರಂದು ಉಗಾದಿ ಹಬ್ಬಕ್ಕೆ ವಾಪಸ್ ಅಮೇರಿಕಾಗೆ ಬರಲು ಎಲ್ಲಾ ತಯಾರಿ ನಡೆಸುತ್ತಾ ಇದ್ದೆ. ಎರಡು ತಿಂಗಳ ಮಾತೃ ಸೇವೆ ಮಾಡಲು ಸಿಕ್ಕ ಸೌಭಾಗ್ಯವನ್ನು ಸ್ಮರಿಸುತ್ತಾ ಮತ್ತೆ ಸಂತೃಪ್ತಿ (ನನ್ನ ನ್ಯೂ ಜೆರ್ಸಿ ಮನೆ)ಗೆ ಬರುವ ಕನಸು ಕಾಣ್ತಾ ಇದ್ದೆ.

ಆಗ ಎಲ್ಲಿಂದಲೋ ವಕ್ಕರಿಸಿದ್ದೆ ಕರಾಳ ಕರೋನ ವೈರಸ್ ಭಾರತದಿಂದ ಎಲ್ಲ ಅಂತರರಾಷ್ಟ್ರೀಯ ವಿಮಾನಗಳನ್ನು ಅನಿರ್ದಿಷ್ಟ ಕಾಲ ರದ್ದು ಪಡಿಸಲಾಯ್ತು. ನಮ್ಮ ಅಣ್ಣ - ಅತ್ತಿಗೆ ವಾಪಸ್ ಬೆಂಗಳೂರಿಗೆ ಬಂದ ಮೇಲೆ ನಾನು ಉಗಾದಿ ಹಬ್ಬಕ್ಕೆ ವಾಪಸ್ ಅಮೇರಿಕಾಗೆ ಬರುವ ಕನಸೆಲ್ಲಾ ಕನಸಾಗಿಯೇ ಉಳಿಯಿತು.

ಆದರೆ, ಕರೋನ ಕಾಟದಿಂದ ಬೆಂಗಳೂರಿನಲ್ಲಿ ಮುಂದಿನ ಏಳು ತಿಂಗಳು ನನಗೆ ದೊರಕಿದ ಅನುಭವ ಅವಿಸ್ಮರಣೀಯ. ಮಗನ ಉಪಚಾರದಿಂದ ಅಮ್ಮ ಮತ್ತಷ್ಟು ಚೇತರಿಸಿಕೊಂಡು ಮೊದಲಿಗಿಂತಲೂ ಇನ್ನಷ್ಟು ಗೆಲುವಾದರು. ಹಳೆಯದನೆಲ್ಲಾ ನೆನಪಿಸಿಕೊಂಡು ಕೆಲವು ನನಗೆ ಗೊತ್ತಿಲ್ಲದೆ ಇದ್ದ ವಿಚಾರಗಳನ್ನು ಹೇಳತೊಡಗಿದರು. ಅವರಿಗೆ ನಾನು ಲಾಲಿ ಹಾಡು ಹಾಡಿ ಮಲಗಿಸುತ್ತಿದ್ದಾಗ ಅದೇನೊ ಅವ್ಯಕ್ತ ಆನಂದ. ಅವರಿಗೆ ಊಟ ಮಾಡಿಸುತ್ತಿದ್ದಾಗ ಒಂದು ರೀತಿಯ ಧನ್ಯತಾ ಭಾವ. ಆ ಸಮಯದಲ್ಲಿ ಅಮ್ಮ ಮಗುವಾಗಿಬಿಡುತ್ತಿದ್ದರು, ನಾನು ಪೋಷಕನಾಗಿಬಿಡುತ್ತಿದ್ದೆ. ನನ್ನ ಬಾಲ್ಯ ನೆನಪಾಗಿ ಆನಂದ ಭಾಷ್ಪದ ಕೊಳದ ಕಟ್ಟೆ ಆಗ್ಗಾಗ್ಗೆ ಒಡೆಯುತ್ತಿತ್ತು.

ಆದರೆ ಈ 'ಲಾಕ್ ಡೌನ್' ಕರೋನ ಮಾರಿಯ ಭಯ ಹಾಗು ಇದರ ನಡುವೆ ಆತಂಕದ ದಿನಗಳು ಇರಲಿಲ್ಲ ಎಂದೇನಿಲ್ಲ. ಅಮ್ಮ ಒಂದೆರಡು ಬಾರಿ ಸೀನಿದಾಗ ಗಾಬರಿ ಆಗಿತ್ತು. ಮಾರ್ಚ್ ಆದ ನಂತರ ನಾನು ಎಲ್ಲೂ ಹೋಗುತ್ತಿರಲಿಲ್ಲ. ನಮ್ಮ ಅಣ್ಣನ ಮನೆಗೆ ಯಾರು ಕೂಡ ಬರುತ್ತಲೂ ಇರಲಿಲ್ಲ. ಆದರೆ ನನ್ನ ದಿನಚರಿಯಲ್ಲಿ ನನಗೆ ಅಮ್ಮನೇ ಹೇಳಿಕೊಟ್ಟ ಶಿಸ್ತು ಇತ್ತು. ದಿನ ಮುಂಜಾನೆ ೬:೩೦ಕ್ಕೆ ಸುಪ್ರಭಾತವಾದರೆ, ೭:೪೫ಕ್ಕೆ ೯೦ ನಿಮಿಷಗಳ ಕಾಲ ಮನೆಯಲ್ಲೇ ವಾಕಿಂಗ್, ವ್ಯಾಯಾಮ ಮಾಡಿ ಅರಿಶಿನದ ಹಾಲು ಕುಡಿಯುವಾಗ ಅಮ್ಮನಿಗೆ ಆ ದಿನದ ಮುಖ್ಯ ಸಮಾಚಾರ ಹೇಳುತ್ತಿದ್ದೆ. ನಂತರ ಸ್ನಾನ ಮಾಡಿ, ಪೂಜೆ ಮಾಡಿ ದಿನಕ್ಕೊಂದು ಬಗೆಯಂತೆ ಉಪ್ಪಿಟ್ಟು, ದೋಸೆ, ಅವಲಕ್ಕಿ, ಇಡ್ಲಿ, ಚಪಾತಿ ಮುಂತಾದ ತಿಂಡಿಗಳನ್ನು ಮಾಡಿ ಅಮ್ಮನ ಜೊತೆ ತಿನ್ನುವ ಕಾರ್ಯಕ್ರಮ. ಅಮ್ಮನಿಗೂ ಕರೋನ ಬಗ್ಗೆ ಎಲ್ಲಾ ವಿಚಾರಗಳು ಬೇಕಾಗಿತ್ತು. ಪಬ್ಲಿಕ್ ನ್ಯೂಸ್ ನೋಡ್ತಾ, ಎಲ್ಲವನ್ನು ಹೇಳುತ್ತ ಅವರಿಗೆ ನಿದ್ದೆ ಮಾಡಿಸಿ, ಮಧ್ಯಾಹ್ನದ ಅಡುಗೆ ಮಾಡಿ, ಅಮ್ಮನಿಗೆ ಊಟ ಮಾಡಿಸಿ ನಾನು ಕೂಡ ಸ್ವಲ್ಪ ನಿದ್ದೆ ಮಾಡುತ್ತಿದ್ದೆ ಅಥವಾ ಹಾಡು ಹಾಡುತ್ತಿದ್ದೆ. ಮತ್ತೆ ಸಂಜೆ ೬:೩೦ಕ್ಕೆ 'ಟೀ ಟೈಮ್'! ಅಮ್ಮನ ಜೊತೆ ಟೀ ಕುಡಿದು ಲಲಿತ ಸಹಸ್ರನಾಮ ಹೇಳುವಾಗ ಅವರಿಗೆ ಕಾಲಿನ ಮಸಾಜ್ ಮಾಡುವ ಕಾರ್ಯಕ್ರಮ. ಎಲ್ಲಾ ಮುಗಿದು ರಾತ್ರಿ ೯:೩೦ ಕ್ಕೆಲ್ಲಾ ಊಟ ಮುಗಿಸಿ, ೧೦:೩೦ಕ್ಕೆ ಎಲ್ಲಾ ಒಟ್ಟಿಗೆ ಕಷಾಯ ಕುಡಿದು, ಅಮ್ಮನ ಕೈಯಲ್ಲಿ 'ನಿನ್ನ ನಂಬಿದೆನಯ್ಯ ನಾರಾಯಣ ಕೃಷ್ಣ' ಹಾಗು 'ರಾಮಂ ಸ್ಕಂದಂ ಹನೂಮಂತಮ್' ಹೇಳಿಸಿ, ೧೧ಕ್ಕೆ ಮಲಗಲು ಹೊರಟಾಗ ಏನೋ ಒಂದು ರೀತಿಯ ಸಂತೋಷ, ಸಮಾಧಾನ, ಸಂತೃಪ್ತಿ.

ಮೇ ೧೬ರಂದು ಅಮ್ಮನ ೯೪ನೇ ಹುಟ್ಟಿದ ಹಬ್ಬವನ್ನು ಅವರಿಗೆ ಇಷ್ಟವಾದ

ನವಮಾಸ

'ಹಾಲು ಬಾಯಿ' ಮಾಡಿ 'ಜೂಮ್'ನಲ್ಲಿ ಸುಮರು ೭೦-೮೦ ನೆಂಟರು ಇಷ್ಟರನ್ನೆಲ್ಲಾ ಒಟ್ಟುಗೂಡಿಸಿ ಆಚರಿಸಿದೆವು. ಎಲ್ಲರನ್ನು ನೋಡಿದ ಹಾಗು ಅವರ ಮಾತುಗಳನ್ನು ಕೇಳಿದ ಅಮ್ಮನ ಸಂತೋಷಕ್ಕೆ ಪಾರವೇ ಇರಲಿಲ್ಲ. ಸದಾ ಹಾಸಿಗೆಯಲ್ಲಿ ಮಲಗಿರುತ್ತಿದ್ದ ಅಮ್ಮನನ್ನು ಆಗ್ಗಾಗ್ಗೆ ಆಚೆ ಕರೆದುಕೊಂಡು ಬಂದು ಒಟ್ಟಿಗೆ ಊಟ ಮಾಡುತ್ತ ಇದ್ದೆವು. ಶ್ರಾವಣ ಮಾಸ ಬಂದಾಗ ಉಪಾಕರ್ಮ, ನಾಗರಪಂಚಮಿ, ಗೌರಿ - ಗಣೇಶ ಹಬ್ಬ, ಗೋಕುಲಾಷ್ಟಮಿ ಎಲ್ಲ ಹಬ್ಬಗಳನ್ನು ಪಾಂಗತವಾಗಿ ಮಾಡಿ ಅವರನ್ನು ದೇವರ ಮನೆಗೆ ಕರೆದುಕೊಂಡು ಹೋಗಿ, ಅವರ ಸಮ್ಮುಖದಲ್ಲೇ ಪೂಜೆಗಳನ್ನು ಮಾಡುತ್ತಿದ್ದೆ. ಈ ಎಲ್ಲ ಕಾರ್ಯಗಳಿಗೂ ಅಮ್ಮನನ್ನು ನೋಡಿಕೊಳ್ಳುತ್ತಿದ್ದ ನರ್ಸ್ ಸುನಿತಾ ತುಂಬಾ ಸಹಕರಿಸಿದಳು. ಮನೆಯ ಕೆಲಸದವಳು ಬರುತ್ತಿರಲಿಲ್ಲ. ಹಾಗಾಗಿ, ನಮ್ಮ ಅಮ್ಮನನ್ನು ನೋಡಿಕೊಳ್ಳುವುದರ ಜೊತೆಗೆ ಮನೆ ಕಸ ಗುಡಿಸಿ, ಪಾತ್ರೆ ತೊಳೆದು, ತರಕಾರಿ ಹೆಚ್ಚಿ ಕೊಟ್ಟು, ದೋಸೆ ಹಿಟ್ಟು, ಅಡೆ ಹಿಟ್ಟು ಕೂಡ ಮಾಡುತ್ತಿದ್ದಳು. ನಾನು ಕೇವಲ ಅಡುಗೆ ಮಾಡುತ್ತಾ ಇದ್ದೆ. ಎಲ್ಲರಿಗೂ ದೋಸೆ ಅಂದ್ರೆ ಇಷ್ಟ. ಹಾಗಾಗಿ, ಆ ನವಮಾಸದಲ್ಲಿ ನಾನು ಸುಮಾರು ೨೦೦೦ ದೋಸೆಗಳನ್ನು ಬಿಟ್ಟು 'ದೋಸೆ ಬಿಡುವದರಲ್ಲಿ' ಪರಿಣಿತ ಆಗಿಬಿಟ್ಟಿದ್ದೀನಿ!

ಕಳೆದ ೪೦ ವರ್ಷಗಳಲ್ಲಿ ನಮ್ಮ ತಾಯಿಯವರು ೧೦ ಬಾರಿ ಅಮೇರಿಕಾಗೆ ಬಂದಿದ್ದರಿಂದ ಉಷಾ ಹಾಗು ನಾನು ಅವರನ್ನು ನೋಡಿಕೊಂಡಿದ್ದು ಒಟ್ಟಾರೆ ಒಂದು ೬ ವರ್ಷ ಮಾತ್ರ. ಹಾಗಾಗಿ ಮಿಕ್ಕ ೩೪ ವರ್ಷ ನಮ್ಮ ಅಣ್ಣ ಅತ್ತಿಗೆ ಅವರೇ ನಮ್ಮ ಅಮ್ಮನನ್ನು ನೋಡಿಕೊಂಡಿರುವುದು. ಅವರ ಈ ಕೈಂಕರ್ಯಕ್ಕೆ ಈ ನವಮಾಸಗಳೂ ಅವರಿಗೆ ಅಮೇರಿಕದಲ್ಲಿರುವ ಅವರ ಮಗಳು ಅಳಿಯ ಮೊಮ್ಮಕ್ಕಳು ಹಾಗು ಆಸ್ಟ್ರೇಲಿಯದಿಂದ ಬಂದಿದ್ದ ಅವರ ಮಗನ ಜೊತೆ ಒಂದೇ ಸೂರಿನಡಿ ೨೪ ಘಂಟೆಗಳ ಕಾಲ ಒಟ್ಟಿಗೆ ೯ ತಿಂಗಳು ಇದ್ದಿದು ನನಗೆ ಅತ್ಯಂತ ಸಮಾಧಾನ ತಂದುಕೊಟ್ಟ ಮತ್ತೊಂದು ವಿಷಯ. ಮೂರು ಖಂಡಗಳಿಂದ ಬಂದು ಒಂದೇ ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳು ಜೊತೆಗೆ ೯ ತಿಂಗಳು ಸಮಯ ಕಳೆಯುವುದು ಕೂಡ ಒಂದು ಸುಯೋಗ ಅಲ್ಲವೆ?

ಅಮ್ಮನ ಮಾತುಗಳು, ವಾರಕ್ಕೊಮ್ಮೆ ಉಷಾ ಹಾಗು ನಮ್ಮ ಮಕ್ಕಳ ಜೊತೆ ಆಗುತ್ತಿದ್ದ ವಿಡಿಯೊ ಸಂಭಾಷಣೆಗಳು, ಅಲ್ಲಿ ಅಮ್ಮ ಆಡುತ್ತಿದ್ದ ಮಾತುಗಳು, ಹೇಳುತ್ತಿದ್ದ ಸ್ತೋತ್ರಗಳು, ವಿವರಿಸುತ್ತಿದ್ದ ಅಡುಗೆ ಮಾಡುವ ವಿಧಾನಗಳು, ಎಲ್ಲವು ತುಂಬಾ ಮುದ ನೀಡುತ್ತಿತ್ತು. ಅಮ್ಮನ ಮನಸ್ಸು ಕೂಡ ತುಂಬಾ ಸಮಾಧಾನ ಸ್ಥಿತಿಯಲ್ಲಿತ್ತು. ನನಗಂತೂ ನನ್ನ ಜೀವಮಾನದ ಒಂದು ಅಪೂರ್ವ ಅಮೋಘ ಅವಿಸ್ಮರಣೀಯ ಅನುಭವ ಆದಂತಾಯ್ತು. ನಾನು ಅವರೊಡನೆ ಕಳೆದ ದಿನಗಳು ಸಾರ್ಥಕವಾಯಿತು ಅನಿಸಿತು. ನವಮಾಸಗಳು ತಾಯಿಯ ಸೇವೆ ಮಾಡಿದ ಧನ್ಯತಾ ಭಾವದಿಂದ ಕಳೆದ ತಿಂಗಳು ಅಕ್ಟೋಬರ್ ನಲ್ಲಿ ಮರಳಿ ಅಮೇರಿಕಾಗೆ ಬಂದಾಗ ನನ್ನ ಪತ್ನಿ ಉಷಾ ಹಾಗು ಮಕ್ಕಳಾದ ಸುಹಾಸ್, ಸ್ನೇಹ, ಅಳಿಯ ಮೈಕ್ ಹಾಗು ಅವರ ನಾಯಿ 'ಬೆಲ್ಲ'ಳ ಪ್ರೀತಿ ಕಾಯುತ್ತಾ ಇತ್ತು. ಇವರೆಲ್ಲರ ಸಹಕಾರದಿಂದ, ಜಗತ್ತಿನಲ್ಲಿ 'ಕರೋನ' ಆರ್ಭಟಿಸುತ್ತಿದ್ದರೂ ಕೂಡ, ಅಲ್ಲಿ ತಾಯಿ ಸೇವೆ ಮಾಡಿಕೊಂಡು ಇದ್ದು, ಇಲ್ಲಿ ಉಷಾ ಹಾಗು ನಮ್ಮ ಮಕ್ಕಳು ನಮ್ಮ ಸಂಸಾರವನ್ನು ನಡೆಸಿಕೊಂಡು ಹೋಗಲು ಆ ಭಗವಂತ ಅನುವು ಮಾಡಿಕೊಟ್ಟ. ಅದಕ್ಕಾಗಿ ನಾನು ನಮ್ಮ ಗುರುಗಳಾದ ಪೂಜನೀಯ ಅಜ್ಜಯ್ಯನವರಿಗೆ ಅಡ್ಡಬಿದ್ದು, ನನ್ನ ಸಂತೃಪ್ತಿ ಕುಟುಂಬಕ್ಕೆ ಆಭಾರಿ ಆಗಿರುವೆನು.

ನಿಮ್ಮ ಅಭ್ಯಂತರ ಇಲ್ಲ ಎಂದರೆ ನಿಮ್ಮೆಲ್ಲರಿಗೂ ಒಂದು ಕಿವಿಮಾತು. ಗೊತ್ತು, ನಾವೆಲ್ಲರು ನಮ್ಮ ಕೆಲಸ - ಕಾರ್ಯದ ಭರದಲ್ಲಿ ನಮ್ಮ ಹೆತ್ತವರ ಜೊತೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುವುದಿಲ್ಲ. ಇಲ್ಲಿಗೆ ಬರಲಾಗದೆ, ಭಾರತದಲ್ಲೇ ಇರುವ ನಿಮ್ಮ ವೃದ್ಧ ಮಾತಾ - ಪಿತೃಗಳ ಜೊತೆ ನಿಮ್ಮ ಜೀವಮಾನದಲ್ಲಿ ಸತತವಾಗಿ ಸುಮಾರು ನಾಲ್ಕಾರು ತಿಂಗಳು ಸಮಯ ಕಳೆಯಲು ಹೇಗಾದರೂ ಸಮಯ ಮಾಡಿಕೊಳ್ಳಿ. ನಿಮ್ಮ ಜೀವಮಾನದಲ್ಲೇ ಇದು ಅತ್ಯಂತ ಸಂತಸ ತರುವ ಕೈಂಕರ್ಯವಾಗಿ ಸದಾ ಉಳಿಯುತ್ತದೆ. ನಮಗೆ ವಯಸ್ಸು ಆಗುತ್ತಿರುವ ಹಾಗೆ ಅವರಿಗೂ ವಯಸ್ಸು ಆಗುತ್ತಾ ಇರುತ್ತದೆ ಅನ್ನೋದು ಮಾತ್ರ ಮರೆಯಬೇಡಿರಿ. ನೀವು ಅವರೊಡನೆ ಕಳೆಯುವ ಪ್ರತಿಯೊಂದು ಕ್ಷಣವೂ ಅವರಿಗೆ ಅಮೂಲ್ಯ ನಿಮಗೆ ಅತ್ಯಮೂಲ್ಯ ಹಾಗು ನಿಮ್ಮೆಲ್ಲರಿಗೂ ಅಮೋಘವಾದ, ಅವ್ಯಕ್ತ ಆನಂದವನ್ನು ತಂದುಕೊಡುತ್ತದೆ. ಅದೂ ಅಲ್ಲದೆ ಈ ನಿಮ್ಮ ಸತ್ಕಾರ್ಯದಿಂದಾಗಿ ನಿಮಗೂ ಹಾಗು ನಿಮ್ಮ ಕುಟುಂಬದ ಎಲ್ಲಾ ಸದಸ್ಯರ ಮೇಲೆ ಆ ಹಿರಿಯರ ಆಶೀರ್ವಾದ ಸದಾಕಾಲ ಇರುತ್ತದೆ.

ನವಮಾಸ ಹೊತ್ತು, ಹೆತ್ತು ಮನೆಯಲ್ಲೇ ಇದ್ದು ಮಕ್ಕಳನ್ನು ಬೆಳೆಸುವ ಅಮ್ಮನಿಗೆ, ತನ್ನ ಎಲ್ಲಾ ಸುಖಗಳನ್ನು ಬದಿಗೊತ್ತಿ ಮಕ್ಕಳಿಗಾಗಿ ಹಗಲಿರುಳು ಹೊರಗಿದ್ದು ಶ್ರಮ ಪಟ್ಟು ದುಡಿವ ಅಪ್ಪನಿಗೆ. ನೀವು ಕೊಡುವ ಅತ್ಯಂತ ದೊಡ್ಡ ಉಡುಗೊರೆಯೆಂದರೆ ಅವರ ಮುಪ್ಪಿನಲ್ಲಿ ನಿಮ್ಮ ಸಮಯ ಕೊಡುವುದು. ನಿಮ್ಮ ಜೀವಮಾನದಲ್ಲಿ ದಯವಿಟ್ಟು ಅದಕ್ಕೆ ಸ್ವಲ್ಪ ಸಮಯ ಮಾಡಿಕೊಳ್ಳುವುದನ್ನು ಮಾತ್ರ ಮರೆಯಬೇಡಿ ಎಂಬುದೇ ನನ್ನ ಕಳಕಳಿಯ ಮನವಿ!

ತಾರೆ ಸಾವಿರ ಸೇರಿ ಚಂದಿರಗೆ ಸಾಟಿಯೆ?
ತಾಯೆ ಎಂಬ ದೈವಕೆ ಬೇರಾರು ಸಾಟಿಯೆ?

ನವ ಚೇತನದ ಬಾಗಿಲುಗಳು

ರಾಘವೇಂದ್ರ ಕುಂದಲಗುರ್ಕಿ , ನ್ಯೂ ಜೆರ್ಸಿ

ಜೀವನದಲ್ಲಿ ಒಂದು ನಾಣ್ಣುಡಿ ಇದೆ, 'ಅವಕಾಶದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ಬಾಗಿಲು ತೆರೆಯಿತು'. ಇದು ಹಲವಾರು ಬಾರಿ ನಿಜ ಜೀವನದಲ್ಲಿ ಎಲ್ಲರ ಅನುಭವಕ್ಕೂ ಬಂದಂತಹ ನುಡಿ ಮುತ್ತು. ಜೀವನದ ಆಗುಹೋಗುಗಳೊಡನೆ ಸಾಮರಸ್ಯದಲ್ಲಿ ಇದ್ದು, ಸಂತೋಷವಾಗಿ ಹಾಡಿಕೊಂಡು, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಸಿಕೊಂಡಿದ್ದ ನಮ್ಮೆಲ್ಲರಿಗೆ ಕರೋನ ಒಂದು ಘರಸಿಡಿಲಿನಂತೆ ಬಡೆದಂತಹ ಸಂದರ್ಭ.

ಕಳೆದ ಡಿಸೆಂಬರ್‌ನಲ್ಲಿ ಮೊಟ್ಟ ಮೊದಲ ಬಾರಿಗೆ ಚೀನಾ ದೇಶದಲ್ಲಿ ವ್ಯಾಪಕವಾದ ವೈರಾಣುವಿಗೆ ತುತ್ತಾಗಿ ಹಲವಾರು ಜನರು ರಸ್ತೆಯ ಮಧ್ಯದಲ್ಲೇ ಸಾವುಗೀಡಾದ ದೃಶ್ಯವನ್ನು ನೋಡುತ್ತಿದ್ದಂತೆ ಎಲ್ಲರ ದೇಹದಲ್ಲೂ ಎಲೆಕ್ಟ್ರಿಕ್ ಶಾಕ್ ಕೊಟ್ಟ ಅನುಭವಗಳು, ಇದು ನಿಜವಾ? ಅನ್ನುವ ರೀತಿಯಲ್ಲಿ ಹಲವಾರು ಚಿಂತನೆಗಳು ಬಂದಿದ್ದುಂಟು. ಎಷ್ಟೋ ಬಾರಿ ಈ ರೀತಿಯ ವಿಷಯಗಳು ದೇಶದ ಪ್ರಾಂತ್ಯಕ್ಕೆ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾದ ವಿಷಯಗಳು. ಕೆಲವೊಮ್ಮೆ ಒಂದು ನ್ಯೂಸ್ ಆರ್ಟಿಕಲ್ ಆಗಿ ಬಂದು ಹೋಗಿರುತ್ತೆ . ನಾವು ಎಷ್ಟೋ ಬಾರಿ ಅದಕ್ಕೆ ಗಮನ ಸಹ ಕೊಟ್ಟಿರುವುದಿಲ್ಲ. ಸರಿ ಸುಮಾರು ಜನವರಿ ಮಧ್ಯಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ ವುಹಾನ್ ನಗರದ ಒಂದು ವಿಡಿಯೋ ವಾಟ್ಸಾಪ್‌ನಲ್ಲಿ ನೋಡಿದಾಗ, ದೊಡ್ಡ ದೊಡ್ಡ ರಸ್ತೆ ಸೇತುವೆಗಳಲ್ಲಿ (ಬ್ರಿಡ್ಜ್) ಗಳಲ್ಲಿ ವೇಗವಾಗಿ ಹರಿಯುತ್ತಿದ್ದ ವಾಹನಗಳು ಒಂದೇ ದಿನದಲ್ಲಿ 'ಬಂದ್' ಆದಾಗ ಆಗುವ ಹಾಗೆ ಮಾಯವಾಗಿ ರಸ್ತೆಗಳು ಬಿಕೋ ಅನ್ನ ತೊಡಗಿತು, ಮನೆಮನೆಗಳಲ್ಲಿ ಜನರು ಬಂಧಿಯಾಗಿರುವ ವಿಡಿಯೋಗಳು, ಒಂದೇ ದಿನದಲ್ಲಿ ಅಂಗಡಿಗಳು, ವ್ಯಾಪಾರ ಕೇಂದ್ರಗಳು, ಸಾರಿಗೆ ವಾಹನಗಳು ಸ್ತಬ್ಧವಾಗಿ ಆಸ್ಪತ್ರೆಗಳಲ್ಲಿ ಜನರ ನುಗ್ಗಾಟಗಳು, ಆಂಬುಲೆನ್ಸ್ ಮಾತ್ರ ಓಡಾಡುವ ದೃಶ್ಯಗಳು ಅದಕ್ಕೂ ಹೆಚ್ಚಾಗಿ ಚೀನಾದಲ್ಲಿ ದೊಡ್ಡ ದೊಡ್ಡ ವಾಹನಗಳಲ್ಲಿ ಬಂದು ರಸ್ತೆ ಬದಿಗಳಲ್ಲಿ ರೋಗಾಣುಗಳ ಸಿಂಪಡಿಕೆಗೆ spray ಮಾಡುತ್ತಿದ್ದ ದೃಶ್ಯಗಳು ಒಂದು ರೀತಿಯ ಮನಃಸ್ಪುಟದಲ್ಲಿ ಅಚ್ಚಾಗಿ ಉಳಿದಂತಹ ದೃಶ್ಯಗಳು. ನನ್ನ ಮನಸ್ಸಿಗೆ ಬಂದ ಚಿಂತನೆಗಳು ಹಲವಾರು. ಮೊದಲು ಈ ನಗರದಲ್ಲಿ ವಾಸಿಸುವ 12 ಮಿಲಿಯನ್ ಜನಸಂಖ್ಯೆ(1 ಕೋಟಿ 20 ಲಕ್ಷ) ಮ್ಯಾನ್ಹಟನ್‌ಗಿಂತಲೂ ಹೆಚ್ಚು. ನ್ಯೂಯಾರ್ಕ್‌ನಲ್ಲಿ ಈ ರೀತಿಯಲ್ಲಿ ಆದರೆ ಏನಾಗಬಹುದು ಎಂಬ ಯೋಚನೆ ದಿನವೆಲ್ಲ ಕಾಡಿತು.

ಅದೇ ಸಮಯಕ್ಕೆ ವುಹಾನ್ ನಗರದಲ್ಲಿ ಗೃಹ ಪ್ರವೇಶದ ಜೋಕ್‌ಗಳು, ಬಸ್‌ನಲ್ಲಿ ಚೀನಾಗೆ ಹೋಗಿದ್ದೆ ಎಂದು ಜನರು ಜಾಗ ಬಿಡುವ ಇನ್ನು ಹಲವಾರು ಸಾಂದರ್ಭಿಕ ಜೋಕ್‌ನಿಂದ ನಗುತ್ತಿದ್ದರೂ, ಎಲ್ಲೋ ಒಂದು ಬಾರಿ ಇದು ನಮಗೆ, ನಮ್ಮ ಮನೆ ಬಾಗಿಲಿಗೆ ಈ ವೈರಾಣು ಬರುತ್ತದೆ ಎನ್ನುವ ಕಲ್ಪನೆಯು ಬಂದಿರಲಿಲ್ಲ. ಯಾರೋ ಚೀನಾದಲ್ಲಿ ಬಾವಲಿ (Bats) ತಿಂದು, ಆ ವೈರಾಣುವಿಗೆ ಮಾನವನ ದೇಹದಲ್ಲಿ ರಹದಾರಿ ಮಾಡಿ ಒಬ್ಬರಿಂದ ಇನ್ನೊಬ್ಬರಿಗೆ ಗಾಳಿಯ ಮೂಲಕ ಹರಡುವ ಸಾಂಕ್ರಾಮಿಕ ಪಿಡುಗಾಗಿ ಕೆಲವೇ ದಿನಗಳಲ್ಲಿ ಈ ಕರೋನ ಮಹಾಮಾರಿಯಾಗಿ ಮಾರ್ಪಟ್ಟಿತು. ಮೊಟ್ಟಮೊದಲ ಬಾರಿಗೆ ವಾಷಿಂಗ್ಟನ್ ರಾಜ್ಯದಲ್ಲಿ ಹಲವಾರು ಸಾವುಗಳು ನರ್ಸಿಂಗ್ ಹೋಂನಿಂದ ಬಂದಾಗ, ಇದು ಅಮೇರಿಕಾ ಹೊಕ್ಕಿದೆ ಎನ್ನುವ ವಿಷಯ ನಂಬಲಸಾಧ್ಯವಾದ ವಿಷಯಗಳು. ಕೆಲವೇ ದಿನಗಳಲ್ಲಿ ನ್ಯೂಯಾರ್ಕ್ ಕೋವಿಡ್ ಕೇಂದ್ರಬಿಂದು(ಎಪಿಸೆಂಟರ್) ಆಗಿಹೋಯಿತು. ಕಾಣದ ವೈರಾಣು ನಾನಿರುವ ಸ್ಥಳವನ್ನು ಆಕ್ರಮಿಸಿಕೊಂಡಿತು. ಮುಂದೇನು? ಎಷ್ಟೋ ಬಾರಿ ಸಾವಿನ ಛಾಯೆ ಸುಳಿದಾಡ ತೊಡಗಿತು. ಅಂಧಕಾರದ ಅನುಭವಗಳು ಮೈಮನ ಹೊಕ್ಕಿದವು. ಸಾಮಾನ್ಯ ಅಂಗಡಿಗೆ ಹೋಗಿ ಬರುವುದು ಒಂದು ಸಮರಕ್ಕೆ ಹೋಗಿ ಬಂದ ಅನುಭವ. ಎಡಗೈಲಿ ತೊಳೆದ ತರಕಾರಿ ಮತ್ತೊಮ್ಮೆ ಬಲಗೈಲಿ ತೊಳೆಯುವುದು, ಕಾಣದ ವೈರಾಣು ಎಲ್ಲ ತರಕಾರಿಗಳ ಮೇಲೆ ಇದ್ದ ಅನುಭವ, ಇನ್ನೇನು ನಮಗೂ, ಸಾವಿಗೂ ಒಂದೇ ಒಂದು ತರಕಾರಿ ಮಧ್ಯೆ ಇದ್ದ ಅನುಭವ. ಎಷ್ಟೋ ಬಾರಿ ಅಂಗಡಿಯಿಂದ ತಂದು ಕಾರ್‌ನಲ್ಲೇ ತಿನ್ನುತ್ತಿದ್ದವರು, ಕೈ ತೊಳೆದು, 2 ದಿನ ಕ್ವಾರಂಟೈನ್ ಮಾಡಿ ತಿನ್ನುವ ಹೊಸ ಸಂಪ್ರದಾಯ. ಭಯದ ಛಾಯೆ ಎಷ್ಟು ಅಂದರೆ, ನ್ಯೂಯಾರ್ಕ್‌ನಲ್ಲಿ ಕೆಲಸ ಮಾಡುವವರು ಅಂದರೆ ಕರೋನ ಹೊತ್ತವರು ಎನ್ನುವಷ್ಟು ಚಿಂತನೆ.

'ನಹಿ ಜ್ಞಾನೇನ ಸದೃಶಂ', ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ ಆದರೂ ಶಾಲೆಗಳಲ್ಲಿ ಸಿಗುವ ಅನುಭವ ಇನ್ನೆಲ್ಲೂ ಸಿಗದು. ಸ್ನೇಹಿತರ ಒಡಗೂಡಿ ಆಡುವುದು, ಚೇಷ್ಟೇಮಾಡುವುದು, ಓದುವುದು, ಜಗಳವಾಡುವುದು ಪ್ರತಿಯೊಂದು ಒಂದೊಂದು ಅನುಭವ. ಈ ಅನುಭವದ ಸೆಲೆಗೆ ಬೆಲೆ ಕಟ್ಟಲಾಗದು.ವೈರಾಣುವಿನ ಭೀತಿ ಎಲ್ಲರ ಮನೆ ಮಾತಾಗಿ ಮೊದಲ ಹೊಡೆತ ಶಾಲೆಗಳ ಮೇಲೆ ಬಿದ್ದಾಗ ಆ ಮಕ್ಕಳಿಗೆ ಆದ ನೋವು ಹೇಳತೀರದು. ಶಾಲೆ ವಸ್ತುತಃ (ವರ್ಚುಯಲ್) ಆದಾಗ ಮೊದಲು ಮಕ್ಕಳ್ಳೆಲ್ಲ ಜೂಮ್, ಗೂಗಲ್ ಕ್ಲಾಸ್ ರೂಮ್ ಎಲ್ಲಾ ಕಡೆ ಒಗ್ಗಿಕೊಳ್ಳಬೇಕಾಯಿತು. ಶಾಲಾ ತರಬೇತುದಾರರಿಗೂ ಇದು ಹೊಸದು. ಶಾಲೆಗಳಲ್ಲಿ ಇರುವ ಶಿಸ್ತನ್ನು ಕಂಪ್ಯೂಟರ್ ಮೂಲಕ ಮಾಡಿಸುವುದು ಹೇಗೆ ಎನ್ನುವ ಚಿಂತನೆ! ಮೊದ ಮೊದಲು ಶಾಲೆ ಇಲ್ಲ ಅಂದಾಕ್ಷಣ ಸಂತೋಷದಿಂದ ಕುಣಿದಿದ್ದ ಮಕ್ಕಳಿಗೆ ವರ್ಷದ ಕೊನೆಯ ಬೀಳ್ಕೊಡುಗೆ ಇಲ್ಲ, ಅದೇ ತರಗತಿ, ಅದೇ ಶಾಲೆಯಲ್ಲಿ ಮತ್ತೊಮ್ಮೆ ಓದಬೇಕು ಎಂಬ ಎಲ್ಲಾ ಉಹಾಪೋಹಗಳು ಬಹಳ ನೋವುಂಟು ಮಾಡಿತು. ಬೃಂದಾವನದ ಯುವ - ಬೃಂದಾವನ ತಂಡ ಮಾಡಿದ ವರ್ಚುಯಲ್ ಸಮಾರಂಭ ಹಲವಾರು ಮಕ್ಕಳಿಗೆ ಸಂತೋಷದ ಜೊತೆಗೆ ಅವರ ಶ್ರಮಕ್ಕೆ ಕನ್ನಡಿಗರಿಂದ ಸಿಕ್ಕ ಅಭಿಮಾನಕ್ಕೆ ಅದು ಮರೆಯಲಾರದ ನೆನಪಾಗಿಸಿತು.

'ಸಂಕಟ ಬಂದಾಗ ವೆಂಕಟರಮಣ', ಮನುಷ್ಯನಿಗೆ ಭಯವಾದಾಗ ಮೊದಲು ಮಾಡುವ ಕೆಲಸ ದೇವರ ಬಗ್ಗೆ ಚಿಂತನೆ, ತಾರ್ಕಿಕ ವಿಷಯಗಳಿಂದ ಧಾರ್ಮಿಕ ವಿಷಯಗಳ ಚಿಂತನೆಗೆ ಬದಲಾಗುವುದು, ಪೂಜೆ ಮಡಿ ಕಾರ್ಯಗಳು ಹೊಸದಲ್ಲದಿದ್ದರೂ ಹೊಸ ಆಯಾಮ ಪಡೆಯಿತು. ಭಜನೆಗಳು, ಸಾಮೂಹಿಕ ಪಾರಾಯಣ ಇನ್ನು ಹೆಚ್ಚಿನ ರೀತಿಯಲ್ಲಿ ವಿಶೇಷ ಶೋಭೆಯಿಂದ ಶುರುವಾಯಿತು. ಆದರೂ ಎಲ್ಲಾ ಚಿಂತನಗಳ ಒಳಗೆ ಏನೋ ಒಂದು ಹೇಳರಿಯದ ಭಯ, ಆತ್ಮೀಯರನ್ನು ಸಹ ಸಂಶಯದಿಂದ ನೋಡುವ ಸನ್ನಿವೇಶ, ಪ್ರೀತಿ ವಿಶ್ವಾಸಗಳು, ಕೈಕುಲಿಕಿ ತೋರುವ ಅಭಿಮಾನಗಳು ಪ್ರತಿಯೊಂದು ಸಂಶಯಾಸ್ಪದದ ಸೆಲೆಯಲ್ಲಿ ಸಿಕ್ಕಿ ನರಳ ತೊಡಗಿತು. ಇದೆಲ್ಲದರ ನಡುವೆ ಮನೆಯಿಂದ ಕೆಲಸ ಮಾಡುವ ಅವಕಾಶ, ಬಹುಶಃ ಯಾರು ಊಹಿಸಲಾರದ ಕರೋನದಿಂದ ಬಂದ ಒಂದು ಅವಕಾಶ, ಮನೆಯಲ್ಲಿ ಪುಟ್ಟ ಮಗಳೊಂದಿಗೆ ಸದಾ ಕಾಲ ಆಡುವ ಕನಸನ್ನು ಹೊತ್ತವನಿಗೆ ಇದೊಂದು ಸುವರ್ಣಾವಕಾಶ. ದಿನ ಮೊದಲು ನನ್ನ ಆಫೀಸ್ ಸಮಯಕ್ಕೆ ಸರಿಯಾಗಿ ಅವಳ ಬೆಳಗ್ಗಿನ ಪ್ರಾರ್ಥನೆ ನನ್ನೋಡನೆ, ಕಂಪ್ಯೂಟರ್ ಎದುರು. ಇದು ಬಯಸದೆ ಬಂದ ಭಾಗ್ಯ. ದಿನಂಪ್ರತಿ ನಮ್ಮೂರಿನಲ್ಲಿ ಎಷ್ಟು ಜನಕ್ಕೆ ಈ ಖಾಯಿಲೆ, ಹೇಗೆ ಈ ವೈರಾಣು ದಿನದಿನಕ್ಕೆ ಹೆಚ್ಚುತ್ತಿದೆ/ಹರಡುತ್ತಿದೆ ಎನ್ನುವ ಕುತೂಹಲ. ಅದಕ್ಕಾಗಿ ತಡಕಾಡಿದ ಪತ್ರಿಕೆಗಳೆಷ್ಟೋ, ನಮ್ಮ ರಾಜ್ಯದ ಪ್ರತೀ ಕೌಂಟಿಗಳ ಜನಸಂಖ್ಯೆ ತಿಳಿದುಕೊಳ್ಳುವುದು, ಅದರಲ್ಲಿನ ಜನಾಂಗಗಳ ಶೇಕಡಾವಾರು

ನವ ಚೇತನದ ಬಾಗಿಲುಗಳು

ತಿಳಿದುಕೊಳ್ಳುವುದು, ಅದರಲ್ಲಿನ ಜನಾಂಗಗಳ ಶೇಕಡಾವಾರು ಪತ್ತೆ ಹಚ್ಚುವುದು. ನಮ್ಮ ತಿಳುವಳಿಕೆಗೆ ಅದನ್ನು ಓರೆ ಹಚ್ಚುವುದು. ಅದರಿಂದ ಹೆಚ್ಚಿದ ನಮ್ಮ ಭೌಗೋಳಿಕ ಜ್ಞಾನ, ಸುತ್ತಮುತ್ತಲಿನ ಪರಿಸರ ಜ್ಞಾನ ನಮಗೆ ಬಹಳ ಕಾಲ ಉಪಯೋಗಕ್ಕೆ ಬರುವಂತಹದು. ಇದೆಲ್ಲದರ ನಡುವೆ ಮ್ಯಾರಥಾನ್ ಓಟಗಾರರಿಗೆ ಒಂದು ರೀತಿಯ ಸದವಕಾಶ. ಸದಾ ಕಾಲ ಕಾರ್‌ಗಳ ಭರಾಟೆಯಿಂದ ಇರುತ್ತಿದ್ದ ಸುತ್ತ ಮುತ್ತಲಿನ ರಸ್ತೆಗಳೆಲ್ಲಾ ನಮಗಾಗಿ ಕಾಯುತ್ತಿರುವಂತೆ ಭಾಸವಾಗತೊಡಗಿತು. ಓಡಿದಷ್ಟು ಮತ್ತಷ್ಟು ಓಡಬೇಕೆನ್ನುವ ಹಂಬಲ. ಅಚ್ಚ ಹಸಿರಿನಿಂದ ಮೈತೋರಿದ ಮರಗಳು, ಆರೋಗ್ಯದ ದೃಷ್ಟಿ ಹಾಗು ರಸ್ತೆಯಲ್ಲಿ ವೈರಸ್ ಇಲ್ಲದ ಸಂಭ್ರಮ ಮನೆಯಲ್ಲಿ ಕೂತು ನವಚೇತನ ಹಂಬಲಿಸಿದವರಿಗೆ ಬಾನಂಗಳದ ಭಾಸ್ಕರನೊಡನೆ ನಲಿಯುವ ಅವಕಾಶ.

'ಸತ್ತ ಮನೆಯಲ್ಲಿ ಹಸಿವು ತುಂಬಾ' ಎನ್ನುವ ಗಾದೆಯಂತೆ ಸುತ್ತಲಿನ ಸಾವಿನ ಸುದ್ದಿಗಳ ಚಿಂತನೆಯಲ್ಲೂ ಸಾಮಾಜಿಕ ತಾಣದಲ್ಲಿ ವಿಶೇಷವಾದ ತಿಂಡಿ ತಿನಿಸುಗಳ ಚಾಲೆಂಜ್‌ಗಳು, ಡೋಲ್ಗಾಣ ಕಾಫಿಯೊಡನೆ ಇನ್ನು ಹಲವಾರು ರುಚಿಯಾದ ಅಡುಗೆ ಖಾದ್ಯಗಳು, ಇದೆಲ್ಲದರ ನಡುವೆ ತಿಂಡಿಪೋತರ ಗ್ರೂಪ್‌ನಿಂದ ತರಾವರಿ ತಿಂಡಿಗಳ ಆಕರ್ಷಕ ಪ್ರದರ್ಶನ, ವೀಕೆಂಡ್ ಆದರೆ ಲೈವ್ ಬರುವ ಸ್ನೇಹಿತರ ಆಕರ್ಷಕ ಅಡುಗೆ ವಿವರಗಳು. 'ಸಾಂಕ್ರಾಮಿಕ ರೋಗದ ಸಮಯದಲ್ಲಿ ಮಿತಿ ಆಹಾರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು ಹಾಗು ಸಮಂಜಸ' ಎಂಬ ಆಚಾರ್ಯರ ನುಡಿಯನ್ನು ನೈಪಥ್ಯಕ್ಕೆ ಸರಿಸಿ ನಳ ಮಹಾರಾಜನಿಗೆ ಸೆಡ್ಡು ಹೊಡೆದು ನಿಂತ ನಾರೀಮಣಿಯರು.ಇದರ ತಪ್ಪು ಒಪ್ಪುಗಳು ಏನೇ ಇದ್ದರು, ಜನಗಳಿಗೆ ಈ ಭಯಾನಕದಿಂದ ಹೊರ ಬರುವ ಯಾವ ವಿಧಾನವಾದರೂ ಸರಿ ಎನ್ನುವ ಮಟ್ಟಿಗೆ ಬಂದ ಸಂದಿಗ್ಧ ಪರಿಸ್ಥಿತಿ, ಅದನ್ನು ನಿಭಾಯಿಸಿದ ನಾರಿ ಶಕ್ತಿ. ಇಲ್ಲಿನ ಭಯಾನಕ ಪರಿಸ್ಥಿತಿ, ಭಾರತದಲ್ಲೂ ಹರಡತೊಡಗಿದಾಗ ನಮಗೆ ಆದ ವೇದನೆ ಹೇಳತೀರದು. ಅಲ್ಲಿನ ಆಸ್ಪತ್ರೆಯ ಪರಿಸ್ಥಿತಿಗಳು, ಜನಸಂದಣಿ ನೆನೆದವರಿಗೆ ಏನಾಗಬಹುದೆಂಬ ಚಿಂತನೆಯೊಡನೆ ಅಲ್ಲಿ ಕರೋನ ಬಂದವರಿಗೆ ಒಂದು ರೀತಿಯ ಸಾಮಾಜಿಕ ಬಹಿಷ್ಕಾರ ನೋಡಿ ಮನೋವೇದನೆಯಾಯಿತು.

ಇದೆಲ್ಲದರ ನಡುವೆ ಸರಕಾರದ ಲಾಕ್ ಡೌನ್ನಿಂದ ಆದ ಜನರ ಸಂಕಟ ಹೇಳತೀರದು. ಸಂಕಟದ ಸಮಯದಲ್ಲಿ ಬಂದ ಸಹಾಯ ಹಸ್ತಗಳು ನೂರಾರು ಸಾವಿರಾರು, ಅಮೇರಿಕಾ ಕನ್ನಡಿಗರ ಹೃದಯ ವೈಶಾಲ್ಯ ಅವರು ಮಾಡಿದ ಸಹಾಯವನ್ನು ನೋಡಿದಾಗ ತಿಳಿಯುತ್ತದೆ. ಮ್ಯೂಸಿಕ್ ಮ್ಯಾನ್ಯನ್ ಮೂಲಕ ಸಂಗೀತ ಸುಧೆಯನ್ನು ಹರಿಸಿದ ಕನ್ನಡ ಸಂಗೀತಗಾರರಿಗೆ ಹಾಗು ಕುಟುಂಬದವರಿಗೆ, ಹರಿದಾಸರಿಗೆ ಇನ್ನು ಹಲವಾರು ಚಾರಿಟಿ ಕಾರ್ಯಕ್ರಮಗಳ ಮೂಲಕ ಸಹಾಯ ಧನ ನೀಡಿದ ಮಂದಿಯೆಷ್ಟೋ. 'ದೇವರ ಮನೆಯಲ್ಲಿ ಬೆಳಕಿರುತ್ತದೆ, ಕತ್ತಲೆಯಲ್ಲ' ಎಂಬ ಗಾದೆ ಮಾತು ನಿಜ ಅನ್ನಿಸತೊಡಗಿತು.

'ದೇವರ ಆಟ ಬಲ್ಲವರಾರು? ಆತನ ಎದಿರು ನಿಲ್ಲುವವರಾರು?' ಈ ಭೂಮಿ, ನೀರು, ಗಾಳಿ ಎಲ್ಲವೂ ಪ್ರಕೃತಿ ದೇವಿಯ ಮಡಿಲು . ಮಾನವ ತನ್ನ ಸ್ವಾರ್ಥತೆಗೆ ದುರ್ಬಳಕೆ ಮಾಡಿಕೊಂಡಾಗ ಒಂದು ಎಚ್ಚರಿಕೆಯ ಗಂಟೆ ನಮ್ಮನ್ನು ಎಚ್ಚರಿಸಲೋ ಎಂಬಂತೆ ಬಂದ ಈ ಪರಿಸ್ಥಿತಿ, ಲಾಕ್ ಡೌನ್ ನವದೆಹಲಿಯ ಚಿತ್ರಣ ನೋಡಿದಾಗ, ಧೂಳಿಲ್ಲದ ಗೇಟ್ ಆಫ್ ಇಂಡಿಯಾ, ರಾಷ್ಟ್ರಪತಿ ಭವನ ನೋಡಿದರೆ ಸದಾ ಕಾಲ ಹೀಗಿರಲು ಏನು ಮಾಡಬೇಕು ಅನ್ನಿಸದೆ ಇರಲಾರದು. ಇದೇ ರೀತಿ ಬೆಂಗಳೂರಿನ ಚಿತ್ರಗಳನ್ನು ನೋಡಿದಾಗ, ರಾಜ ಭವನದ ರಸ್ತೆ, ವಿಧಾನ ಸೌಧದ ದೃಶ್ಯಾವಳಿಗಳು ನೋಡಿದಾಗ ನಮ್ಮ ಪರಿಸರ ಮಾಲಿನ್ಯದ ಪರಿ ತಿಳಿಯುತ್ತದೆ. ಆ ತಿಳಿ ನೀಲಿ ಆಕಾಶ ಮತ್ತೊಮ್ಮೆ ನೋಡಿದಾಗ ನಮ್ಮ ಮುಂದಿರುವ ಸವಾಲುಗಳು ಅರಿವಿಗೆ ಬಾರದೇ ಇರುವುದಿಲ್ಲ.

ಬದಲಾದ ಪರಿಸ್ಥಿತಿ, ಬದಲಾದ ಚಿತ್ರರಂಗ, ಚಲನಚಿತ್ರಗಳನ್ನು ಬೆಳ್ಳಿ ತೆರೆಯ ಮೇಲೆ ನೋಡುವ ಮಜಾನೇ ಬೇರೆ. ಸ್ಯಾಂಡಲ್ ವುಡ್ ನಿಂದ ಹಿಡಿದು ಹಾಲಿವುಡ್ ತನಕ, ಒಳ್ಳೆಯ ಛಾಯಾಗ್ರಹಣ, ತಂತ್ರಜ್ಞಾನ ಇರುವ ಚಿತ್ರಗಳಿಗೆ ಬೇಕಾದ ಸಿನಿಮ್ಯಾಟಿಕ್ ಎಫೆಕ್ಟ್‌ನ್ನು ತೋರಿಸಲು ಬೇಕಾದ ಶ್ರವಣದ ತಂತ್ರಜ್ಞಾನ (ಡಾಲ್ಬಿ) ಅಕೋಸ್ಟಿಕ್ಸ್ ಚಿತ್ರ ಮಂದಿರದಲ್ಲಿ ಇದ್ದಷ್ಟು, ನೋಡಿದಷ್ಟು ಅನುಭವ ಬೇರೆಲ್ಲೂ ಸಿಗುವುದಿಲ್ಲ. ಸಿನಿಮಾ ಮಂದಿರಗಳು ಮುಚ್ಚಿದಾಗ ನಿರ್ಮಾಪಕರಿಗೆ ದಿಕ್ಕು ತೋಚದಾದಾಗ ಅವರ ನೆರವಿಗೆ ಬಂದಿದ್ದು OTT (ಓವರ್ ದಿ ಟಾಪ್)ವೇದಿಕೆಗಳು. ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್ ಜೊತೆಗೆ, ಕನ್ನಡದ ನಿರ್ದೇಶಕರ ಹೊಸ ವೇದಿಕೆ ಯುನೈಟೆಡ್ ಫಿಲಂ ಕ್ಲಬ್. ಈ ಆವಿಷ್ಕಾರಗಳು ಮೊದಲಿಂದ ಇದ್ದರೂ, ಈ ಪರಿಸ್ಥಿತಿಯಲ್ಲಿ ಹೊಸ ಚಿತ್ರಗಳ ಬಿಡುಗಡೆ ಸಂಪೂರ್ಣವಾಗಿ ಈ ವೇದಿಕೆಗಳಿಂದ ಬಂದದ್ದು, ಸಾಂಕ್ರಾಮಿಕ ರೋಗದ ಪಿಡುಗು ಕಳೆದ ಮೇಲೂ ಚಿತ್ರರಂಗದ ದಿಸೆಯನ್ನು ಇದು ಬದಲಾಯಿಸಬಲ್ಲದು.

'ಬದಲಾವಣೆ ಜೀವನದ ಮೂಲ ಮಂತ್ರ', ಜೀವನ ಒಂದು ರೀತಿಯಲ್ಲಿ ಏಕತಾನತೆಗೆ ಬಂದಿದೆ ಅನ್ನುವಷ್ಟರಲ್ಲಿ ಬದಲಾವಣೆಯ ಕರೋನ ಬಿರುಗಾಳಿ ಪ್ರಪಂಚವನ್ನು ಅಲುಗಾಡಿಸಿದೆ. ಆ ಹೊಡೆತಕ್ಕೆ ಸಿಕ್ಕಿ ಪ್ರಪಂಚ ನಲುಗಾಡಿದಾಗ ಮಾನವನ ಮೌಲ್ಯಗಳು, ದೇಶವನ್ನಾಳುವ ರಾಜಕೀಯ ಧುರೀಣರ ಚಾಣಕ್ಷತೆ, ವ್ಯಾಪಾರಸ್ಥರ ಪರಿಸ್ಥಿತಿ ಹೊಂದಾಣಿಕೆ ಮನೋಭಾವನೆ ಎಲ್ಲದಕ್ಕೂ ಇದು ಒಂದು ನಿಲುವುಗನ್ನಡಿ. ವಿಜ್ಞಾನಿಗಳ ಹಗಲಿರುಳ ಪರಿಶ್ರಮಕ್ಕೆ ಪ್ರತಿಫಲವಾಗಿ ಎರಡು ಲಸಿಕೆ ಮದ್ದುಗಳು (vaccines) ಈಗ FDA (Federal Drug Administration) ಇಂದ ತುರ್ತು ಪರಿಸ್ಥಿತಿಯ ಉಪಯೋಗಕ್ಕೆ ಅನುಮತಿ ಕೊಟ್ಟಿದೆ. ಇನ್ನು ಹಲವಾರು ಲಸಿಕೆಗಳು ಮುಂದಿನ ತಿಂಗಳಿನಲ್ಲಿ ಬರಲಿದೆ.

ಇನ್ನೇನು ಹಲವೇ ತಿಂಗಳುಗಳಲ್ಲಿ ಈ ಪರಿಸ್ಥಿತಿ ನಿಯಂತ್ರಣಕ್ಕೆ ಬರಬಹುದು. ಆದರೆ ಶತಮಾನದ ಈ ಅನುಭವ ಜೀವನದಲ್ಲಿ ಮರೆಯಲಾಗದು. ಮನುಷ್ಯ ಆರೋಗ್ಯದ ದೃಷ್ಟಿಯಿಂದ ಉತ್ತಮ ಆಹಾರ ಸೇವನೆ ಮಾಡಿದರೆ ತನ್ನ ಆರೋಗ್ಯವಲ್ಲದೆ ಸಮಾಜದ ಹಿತವನ್ನು ಕಾಪಾಡಬಹುದು.ದಿನಂಪ್ರತಿ ಸೂರ್ಯನ ಉದಯದಿಂದ ಪ್ರಾರಂಭವಾಗುವ ಜೀವನಕ್ಕೆ ಅವನೇ ನವ ಚೇತನಗಳ ಉದಯ ರವಿ. ಸಕಲ ಜೀವರಾಶಿಗಳಿಗೆ ಅವನೇ ಶಕ್ತಿಯ ಮೂಲಾಧಾರ. ಮುಚ್ಚಿದ ಬಾಗಿಲುಗಳನ್ನು ಲೆಕ್ಕಿಸದೆ ಹೊಸ ಅವಿಷ್ಕಾರದೊಡನೆ ಕದಗಳನ್ನು ತೆರೆಯೋಣ. ರಾಷ್ಟ್ರಕವಿ ಕುವೆಂಪು ಅವರ ರಚನೆಯಲ್ಲಿ ಹೇಳಿದಂತೆ

ತೆರೆದಿದೆ ಮನೆ ಓ ಬಾ ಅತಿಥಿ
ಹೊಸ ಬೆಳಕಿನ ಹೊಸ ಗಾಳಿಯ
ಹೊಸ ಬಾಳನು ತಾ ಅತಿಥಿ!

ನವ ಜೀವನ

ಅನಿಲ್ ಭಾರಧ್ವಾಜ್ , ನ್ಯೂ ಜೆರ್ಸಿ

ಹತ್ತು ತಿಂಗಳುಗಳು ಸರಿದುಹೋದವು. ಹತ್ತು ತಿಂಗಳು...ಸ್ವಲ್ಪ ನಿಂತು ಯೋಚಿಸಿದರೆ ನಂಬಲಸಾಧ್ಯವಾಗುತ್ತದೆ. ಈ ಹತ್ತು ತಿಂಗಳುಗಳು ಅದು ಹೇಗೆ ಹಾರಿಹೋಯಿತೋ ಆ ದೇವರೇ ಬಲ್ಲ. ಕೋವಿಡ್ ಉತ್ಕಟ ಪರಿಸ್ಥಿತಿ ಶುರುವಾಗಿ ಒಂದು ವರ್ಷವಾಗುವ ದಿನ ನಮ್ಮನ್ನು ದಿಟ್ಟಿಸಿ ನೋಡುತ್ತಿದೆ. ಈ ವಿಚಿತ್ರವಾದರೂ ನಿಜವಾದ ಜೀವನ ರೀತಿಗೆ ಇಡೀ ಜಗತ್ತೇ ಹೊಂದಿಕೊಂಡುಬಿಟ್ಟಿದೆ. ಈ ಅಸ್ತವ್ಯಸ್ಥೆಯಲ್ಲೂ ನಾವು ವಾಸ್ತವತೆಗನುಗುಣವಾಗಿ ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಂಡು, ಹೊಸ ಮಾಮೂಲಿಗೆ ಒಗ್ಗಿ ಹೋಗುತ್ತಿದ್ದೇವೆ.

ಮನೆಯೇ ಕಾರಾಗೃಹವಾದಾಗ, ಅವುಗಳ ಉಪಯೋಗ ಮೊಟಕುಗೊಳಿಸಬೇಕೆನ್ನುತ್ತಿದ್ದ ತಂತ್ರಜ್ಞಾನ ಸಲಕರಣೆಗಳೇ ಹೊರ ಪ್ರಪಂಚಕ್ಕೆ ನಮ್ಮ ಪ್ರವೇಶದ್ವಾರಗಳಾದವು. ಕಂಪ್ಯೂಟರ್ ಉಪಯೋಗಿಸಿ ಮನೆಯಿಂದಲೇ ಅಪ್ಪ - ಅಮ್ಮ ತಮ್ಮ ಕಛೇರಿ ಕೆಲಸಮಾಡಲು ಶುರುಮಾಡಿದರೆ, ಮಕ್ಕಳ ಶಾಲಾ ತರಬೇತಿಗೂ ಅದೇ ಸಾಧನ. ಬೆಳಗ್ಗೆ ಎಂಟು - ಒಂಭತ್ತು ಘಂಟೆಯ ಹೊತ್ತಿಗೆ, ಯಾವುದೋ ಕಾಲ್ ಸೆಂಟರ್‌ನ ನೌಕರರಂತೆ ಸಂಸಾರ ಸಮೇತರಾಗಿ ಎಲ್ಲರೂ ಕಂಪ್ಯೂಟರ್ ಮುಂದೆ ಸ್ಥಾಪಿಸಿಕೊಂಡುಬಿಡುತ್ತೇವೆ. ಕಿಂಡರ್ ಗಾರ್ಟನ್ ಮಕ್ಕಳೂ ಸಹ ತಮ್ಮ ಜೂಮ್ ಅಥವಾ ಗೂಗಲ್ ಮೀಟ್ ಕೊಠಡಿಗೆ ಸಲೀಸಾಗಿ ಸೇರಿಕೊಂಡು ತಮ್ಮ ವರ್ಚುಯಲ್ ತರಬೇತಿಯಲ್ಲಿ ನಿರತರಾಗುತ್ತಾರೆ ಕ್ಯಾಮೆರಾ ಆನ್/ಆಫ್ ಮಾಡುವುದು, ವಾಲ್ಯೂಮ್ ನಿಯಂತ್ರಿಸುವುದು, ಎಲ್ಲದರಲ್ಲೂ ಮಕ್ಕಳು ಈಗ ನಿಪುಣರು. ಗುಂಪಾಗಿ ಒಂದು ಕೊಠಡಿಯಲ್ಲಿ ಕೂತು, ಹೊಸ ಸ್ನೇಹಿತರನ್ನು ಮಾಡಿಕೊಂಡು, ಶಾಲೆಯಲ್ಲಿ ನಡೆಯುತ್ತಿದ್ದ ಸಂಗತಿಗಳನ್ನು ದಿನಕ್ಕೊಂದು ಹೇಳುತ್ತಿದ್ದ ಮಕ್ಕಳಿಗೆ, ಈಗ ಕಂಪ್ಯೂಟರ್‌ನಲ್ಲಿ ಕಾಣುವ ಇಪ್ಪತ್ತು ಸಣ್ಣ ಛಾಯಾಚಿತ್ರ ಚೌಕಟ್ಟುಗಳೇ ಸ್ನೇಹಿತರು. ಈ ಮೀಟ್ ಗಳಲ್ಲಿ ಒಬ್ಬರನ್ನೊಬ್ಬರು ಪರಸ್ಪರ ಮಾತನಾಡಲು ನಿಷೇಧಿಸಿರುವ ಕಾರಣ, ಈ ವರ್ಷ ಹೊಸ ಸ್ನೇಹಿತರು ಕೂಡ ವರ್ಚುಯಲ್ ಆಗಿ ಹೋಗಿದ್ದಾರೆ ದೂರದಲ್ಲಿ ಕಾಣಬಹುದಷ್ಟೆ, ಮಾನವ ಅನುಭವಗಳಿಲ್ಲ. ಇಷ್ಟಾದರೂ, ಪ್ರತಿ ಬೆಳಗ್ಗೆ ಈ ಅಸಹಜವಾದ ಶಾಲೆಗೆ ಹೋಗಲು ಮಕ್ಕಳಿಗೆ ಹುಮ್ಮಸ್ಸು ಮಾತ್ರ ಕಡಿಮೆ ಇಲ್ಲ. ಹತ್ತು ತಿಂಗಳಿಂದ ಬರೀ ಅಪ್ಪ - ಅಮ್ಮನ ಮುಖ ನೋಡಿ, ಅವರ ನಿರಂತರದ "ಅದು ಮಾಡ್ಬೇಡ, ಇದು ಮಾಡ್ಬೇಡ" ಕೇಳಿ ಕೇಳಿ ಬಳಲಿರುವ ಮಕ್ಕಳಿಗೆ, ಈ ಶಾಲೆಯೇ ಅವರಿಂದ ಒಂದು ಅಲ್ಪಕಾಲಿಕ ವಿಮುಕ್ತಿ ಕೊಡುತ್ತದೆಯೇನೋ..

ವಯಸ್ಕರೂ ಕೂಡ ಈ ನವಜೀವನಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದಾರೆ ಎನ್ನಬಹುದು. ಒಂದು ವೀಕೆಂಡ್ ಕೂಡ ಪುರುಸೊತ್ತು ಇಲ್ಲದಿದ್ದ ಹಾಗೆ ಹುಟ್ಟುಹಬ್ಬಗಳು, ಮದುವೆ - ಮುಂಜಿಗಳು, ಸೀಮಂತ ನಾಮಕರಣಗಳು, ಗೃಹಪ್ರವೇಶಗಳು ಸಂಘ ಸಂಸ್ಥೆಗಳ ಉತ್ಸವಗಳು, ದೇವಸ್ಥಾನಗಳಲ್ಲಿ ಆರಾಧನೆ ಕಲ್ಯಾಣೋತ್ಸವಗಳು, ಹೀಗೆ ಸಾಮಾಜಿಕವಾಗಿ ಬಿಡುವಿಲ್ಲದೆ ಇರುತ್ತಿದ್ದವರಿಗೆ, ಒಂದು ದೊಡ್ಡ ವಿರಾಮವೇ ಸಿಕ್ಕಿತು. ಪರಿಸ್ಥಿತಿಗೆ ತಕ್ಕಂತೆ ಶೀಘ್ರವಾಗಿ ಈ ಹೊಸ ಜೀವನಪರಿಗೆ ವಿಕಸಿಸಿಕೊಂಡೆವು ಎನ್ನಬಹುದು. ಎಲ್ಲ ಜೂಮಿಕರಣವಾಗಿ ಹೋಯಿತು ವಿಷ್ಣು ಸಹಸ್ರನಾಮ ಪಠನೆ, ದೇವರನಾಮ ಭಜನೆ, ಜೂಮ್; ಸಂಗೀತ ಕಚೇರಿಗಳು, ಸ್ಪರ್ಧೆಗಳು, ಜೂಮ್; ದೇವಸ್ಥಾನಗಳ ಹೋಮ ಪೂಜೆಗಳು ಜೂಮ್. ಜೀವನ ಈಗ "ಜೂಮ್ ಜೂಮ್ ಜೂಮ್ ಬಾ!" ಆಗಿಬಿಟ್ಟಿದೆ. ಈ ಜೂಮ್ ಪಾರ್ಟಿಗಳು ಸ್ವಲ್ಪ ಜಾಸ್ತಿಯೇ ಆಗಿವೆ ಎಂದರೂ ತಪ್ಪಾಗಲಾರದು. ಅತಿಥಿಗಳನ್ನು ಮನೆಗೆ ಕರೆಯಬೇಕೆನ್ನುವ ಅಗತ್ಯವಿಲ್ಲ, ಅದಕ್ಕಾಗಿ ಮನೆ ಚೊಕ್ಕಮಾಡುವುದು ಬೇಕಿಲ್ಲ, ತಿಂಡಿ - ಕಾಫೀ, ಊಟ - ಉಪಚಾರದ ಹೊರೆ ಇಲ್ಲ. ಒಂದು ಜೂಮ್ ಕೊಂಡಿ ವಾಟ್ಸಾಪ್ ಗುಂಪಿನಲ್ಲಿ ಹಾಕಿಬಿಟ್ಟರೆ ಮುಗಿಯಿತು ಪಾರ್ಟಿ ಶುರು. ಕೆಲವೊಮ್ಮೆ ವಿಪರೀತವೆನಿಸಿದರೂ, ಈ ಮಾಧ್ಯಮಗಳೇ ನಮ್ಮನ್ನು ಸಮಾಜದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಳ್ಳಲು, ಮನಸ್ಸಿನ ಅಳಲನ್ನು ತುಸು ಇಳಿಸುವ ಸಾಂತ್ವನಕರ್ತರಾಗಿವೆ.

ಈ ಗೃಹಬಂಧನದ ಪರಿಣಾಮವಾಗಿ ನಮ್ಮ ಸಂಸಾರದೊಂದಿಗೆ ಗುಣಮಟ್ಟದ ಸಮಯ ಕಳೆಯುವ ಭಾಗ್ಯವು ಒದಗಿಬಂತೆನ್ನಬಹುದು. ಬೆಳಗ್ಗೆ ಎಂಟರ ಹೊತ್ತಿಗೆ, ಶಾಲಾ - ಕಚೇರಿಗಳಿಗೆ ಹೊರಟ ಮೇಲೆ, ಬಿಕೋ ಎನ್ನುತ್ತಿದ್ದ ಮನೆಗಳು ಈಗ ತುಂಬಿಕೊಂಡಿರುತ್ತವೆ. ಮಕ್ಕಳೊಂದಿಗೆ ಕುಳಿತು ಯಾವುದಾದರು ಪುಸ್ತಕ ಓದುವುದು, ಅವರಿಗಿಷ್ಟವಾದ ಚಲನಚಿತ್ರವೋ ಅಥವಾ ಕಾಮಿಕ್ ಧಾರಾವಾಹಿಯೋ ನೋಡುವುದು, ಆಟಗಳಾಡುವುದು— ಕೇರಂ, ಚದುರಂಗ, ಚೌಕ - ಬಾರ, ಕೈ ಮೇಲೆ ಕಾಶಿ, ಮೊನೊಪೊಲಿ, ಹಿತ್ತಲಲ್ಲಿ ಫುಟ್ ಬಾಲ್, ಸಾಕರ್ ಇತ್ಯಾದಿ. ಸಣ್ಣ ಮಕ್ಕಳು ಇರುವ ಪೋಷಕರಿಗಂತೂ ಇನ್ನೂ ಅದೃಷ್ಟವೋ ಅದೃಷ್ಟ! ಮಗುವಿನ ಚಟುವಟಿಕೆಗಳನ್ನು, ಬೆಳವಣಿಗೆಯನ್ನು, ಪೂರ್ಣವಾಗಿ ಒಂದು ವರ್ಷದಷ್ಟು ಕಾಲ ನೋಡುವ ಸುಯೋಗ ಮತ್ತಿನ್ನಾವಾಗಲಾದರೂ ಸಿಗುತ್ತದೆಯೇ? ಇದೇ ಸದವಕಾಶ ತಮ್ಮ ಹಿರಿಯ ತಂದೆ - ತಾಯಿಗಳೊಂದಿಗೆ ಸಮಯ ಕಳೆದವರಿಗೂ ಲಭಿಸಿತು. ಇನ್ನು ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಹುಲು ಮುಂತಾದ ಹೊನಲು ಮಾಧ್ಯಮಗಳ ಬಗ್ಗೆ ಮಾತನಾಡದಿದ್ದರೆ ಈ ವಸ್ತು ವಿಷಯ ಅರ್ಧಂಬರ್ಧವಾಗುತ್ತದೆ ಧಾರಾವಾಹಿಗಳ ಬಿಂಜ್ ವಾಚಿಂಗ್, ಹೊಸ ಕನ್ನಡ ಚಲನಚಿತ್ರಗಳು, ಹಳೆಯ ಹೆಸರಾಂತ ಆಸ್ಕರ್ ಮೂವಿಗಳು, ಹೀಗೆ ತಲೆತಿರುಗಿಸುವಷ್ಟು ಆಯ್ಕೆಗಳು ನಮಗೆ ಬೇಕಾದಾಗ ವೀಕ್ಷಿಸಲು ಬೆರಳುತುದಿಯಲ್ಲೇ ಬಂದಿವೆ. ಈ ಕಂಪನಿಗಳ ಶೇರುಪೇಟೆ ಬೆಲೆ ಚಾವಣಿಯನ್ನು ತೂರಿಹೋದದ್ದು ಅಚ್ಚರಿಯ ವಿಷಯವೇನಲ್ಲ.

ಕೋವಿಡ್ ಸಂಕಟಕಾಲ ಹಲವಾರು ರಾಷ್ಟ್ರಗಳ ನಾಯಕರ ಹಾಗೂ ಅವರ ಜನತೆಯ ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಬಿಂಬಿಸುವ ದರ್ಪಣವೂ ಆಯಿತು. ನ್ಯೂಜಿಲ್ಯಾಂಡ್, ತೈವಾನ್, ಸಿಂಗಾಪುರ್, ವಿಯೆಟ್ನಾಂ, ಐಸ್ಲ್ಯಾಂಡ್ ಮುಂತಾದ ರಾಷ್ಟ್ರಗಳು ವೈಜ್ಞಾನಿಕ ಆಧಾರಾಂಶಗಳನ್ನು ಮುಂದಿಟ್ಟುಕೊಂಡು ನಿರ್ಣಾಯಕವಾದ ಹೆಜ್ಜೆಗಳನ್ನು ಇಟ್ಟು, ಈ ಸಮರದಲ್ಲಿ ಮೇಲುಗೈ ಪಡೆದು, ಈ ಹೋರಾಟ ಹೇಗೆ ಮಾಡಬೇಕೆಂದು ತೋರಿಸಿಕೊಟ್ಟರು. ಅದಕ್ಕೆ ವ್ಯತಿರಿಕ್ತವಾಗಿ, ಅಮೇರಿಕಾ, ಬ್ರೆಜಿಲ್, ಇಂಡಿಯಾ, ಮೆಕ್ಸಿಕೋ, ಗ್ರೇಟ್ ಬ್ರಿಟನ್ ಇತ್ಯಾದಿ ದೇಶಗಳು ನಿಯಂತ್ರಣದ ಕಾಳಗದಲ್ಲಿ ಪರಾಭವಗೊಂಡು, ಏನು ಮಾಡಬಾರದೆಂಬುದಕ್ಕೆ ದೃಷ್ಟಾಂತ -ಗಳಾದವು. ಈ ಸಾವು ನೋವಿನಲ್ಲಿ ನಾಯಕರುಗಳು ಎಷ್ಟು ಹೊಣೆಯೋ, ಅಷ್ಟೇ ಹೊಣೆ ಬೇಜವಾಬ್ದಾರಿ ಜನತೆಯ ಭುಜಗಳ ಮೇಲೂ ಬಿದ್ದಿದೆ.

ಎಲ್ಲಾ ಕಾರ್ಮೋಡದೊಳಗೆ ಬೆಳ್ಳಿಯ ಒಳಪದರವಿರುವಂತೆ, ಈ ಕೋವಿಡ್ ಪಿಡುಗಿನ ಸಮಯದಲ್ಲೂ ಮಾನವೀಯತೆಯನ್ನು ಎತ್ತಿ ಹಿಡಿಯುವ ನಿಸ್ವಾರ್ಥ ಸೇವೆಗಳನ್ನು ಮಾಡಿದ ಜನರ ಹಲವಾರು ನಿದರ್ಶನಗಳು ಜಗದಾದ್ಯಂತ ನೋಡಬಹುದು. ವೃತ್ತಿಯಲ್ಲಿ ವೈದ್ಯರಾದ ಒಂದು ನವ ದಂಪತಿಗಳು, ತಮ್ಮ ಮಧುಚಂದ್ರದ ಪ್ರಣಯ ದಿನಗಳನ್ನು ದುಬೈ ಮತ್ತು ಮಾಲ್ಡೀವ್ಸ್‌ನಲ್ಲಿ ಕಳೆಯಬೇಕೆಂದು ಆಶಿಸಿದ್ದವರು, ತಮ್ಮ ಎರಡು ದಿನದ ಅದ್ದೂರಿ ಮದುವೆಯನ್ನು ಮೊಟಕುಗೊಳಿಸಿ, ಮನೆಯಲ್ಲಿಯೇ ಸರಳವಾಗಿ, ಸಾಮಾಜಿಕ ಅಂತರವಿಟ್ಟುಕೊಂಡು ಮದುವೆ ಶಾಸ್ತ್ರ ಮುಗಿಸಿ, ಮುಂದಿನ

ಎಷ್ಟೋ ವರ್ಷಗಳಿಂದ ಕೀಲಿ ಕೈಗಾಗಿ ನಾನು ಹುಡುಕಾಡುತ್ತಿದ್ದೆ. ಆದರೆ, ಬಾಗಿಲು ತೆರೆದೇ ಇದ್ದುದನ್ನು ನಾನು ಗಮನಿಸರಲೇ ಇಲ್ಲ.—ಅರವಿಂದ ಅಡಿಗ

ನವ ಜೀವನ

ಹನ್ನೆರಡು ಗಂಟೆಗಳಲ್ಲೇ ತಂತಮ್ಮ ಆಸ್ಪತ್ರೆಗಳಿಗೆ ಸಂಗ್ರಾಮಕ್ಕೆ ಹೊರಟ ಯೋಧರಂತೆ ಹೋಗಿ, ಕೋವಿಡ್ ರೋಗಿಗಳ ಶುಶ್ರೂಷೆಯಲ್ಲಿ ನಿರತರಾದರು. ದಿನಕ್ಕೆ ನೂರಾರು ಕೋವಿಡ್ ಬಾಧಿತರಿಗೆ ಚಿಕಿತ್ಸೆ ಕೊಡುವ ವೈದ್ಯರುಗಳು ಹಾಗು ನರ್ಸ್ ಗಳು, ತಮ್ಮ ಕದನದಲ್ಲಿ ಜಯಾಪಜಯಗಳನ್ನು ನೋಡಿ ಬೇಸತ್ತು ಹೋಗಿರುತ್ತಾರೆ. ಏತನ್ಮಧ್ಯೆ, ಒಬ್ಬ ಆಸ್ಪಸ್ಥರು ಐ.ಸಿ.ಯು ವಿನಿಂದ ಸಾಮಾನ್ಯ ರೋಗಿಯ ಕೊಠಡಿಗೆ ವರ್ಗವಾದರೆ, ಆಸ್ಪತ್ರೆಯ ಸಿಬ್ಬಂದಿ ವರ್ಗವೆಲ್ಲಾ ಪ್ಯಾಸೇಜುಗಳಲ್ಲಿ ನಿಂತು, ವಿಜಯೋತ್ಸಾಹದಿಂದ ಕರತಾಡನ ಮಾಡುತ್ತಾ, ಆ ದಿನ ಗೆದ್ದ ಇನ್ನೊಬ್ಬ ಸೈನಿಕನನ್ನು ಬರಮಾಡಿಕೊಳ್ಳುತ್ತಾರೆ. ಅದಕ್ಕೆ ಏನೋ 'ವೈದ್ಯೋ ನಾರಾಯಣೋ ಹರಿಃ' ಎಂದು ಶಾಸ್ತ್ರಗಳು ಉಲ್ಲೇಖಿಸುವುದು. ಅರವತ್ತಕ್ಕೂ ಹೆಚ್ಚು ವಯಸ್ಸಾಗಿ, ನಿವೃತ್ತರಾದ ಅಸಂಖ್ಯಾತ ಹಿರಿಯ ವೈದ್ಯರುಗಳು, ತಮಗೆ ಸಂಭವಿಸಬಹುದಾದ ಜೀವಾಪಾಯವನ್ನು ಲೆಕ್ಕಿಸದೆ, ಈ ಮಾನವ ಜನಾಂಗದ ಮಹಾಯುದ್ಧದಲ್ಲಿ ತಮ್ಮ ಸೇವೆಯನ್ನು ಮಾಡುತ್ತಿದ್ದಾರೆ. ಈ ಉದಾತ್ತ ಸಮಾಜ ಸೇವಕರುಗಳ ತ್ಯಾಗಶೀಲತೆಗೆ ನಾವು ನೀಡಬಹುದಾದ ಬೃಹತ್ ಧನ್ಯವಾದವೆಂದರೆ, ವಿಜ್ಞಾನಿಗಳು ಮತ್ತು ಜವಾಬ್ದಾರಿಯುತ ಆಡಳಿತಾಧಿಕಾರಿಗಳು ಸೂಚಿಸುವ ಸಾಮಾಜಿಕ ಕ್ರಮ ಪದ್ಧತಿಗಳನ್ನು ಧರ್ಮನಿಷ್ಠೆಯಂತೆ ಪಾಲಿಸುವುದು.

ಜನಸಾಮಾನ್ಯರೂ ಕೂಡ ಯಥಾಶಕ್ತಿ ತಮ್ಮ ಅಳಿಲುಸೇವೆಯನ್ನು ಮಾಡುತ್ತಿದ್ದಾರೆ. ಈ ಪುಟ್ಟ ದಯೆ ತುಂಬಿದ ಕೃತ್ಯಗಳು, ಕೇಳಿದವರ ಚೈತನ್ಯವನ್ನು ಉತ್ಕರ್ಷಿಸುತ್ತದೆ. ದುಷ್ಪಶಕ್ತಿಯ ಜೊತೆಯೇ ಶ್ರೇಯಸ್ಕರ ಶಕ್ತಿಗಳು ಹುಟ್ಟುತ್ತವೆಯಂತೆ. ಸಕಾರಾತ್ಮಕತೆಯೂ, ರೋಗಾಣುಗಳಂತೆ ಸಾಂಕ್ರಾಮಿಕವಾಗಿರುತ್ತದೆ. ಕೆಲವರು ಮನೆಯಲ್ಲಿ ಕುಳಿತು ಮಾಸ್ಕ್‌ಗಳನ್ನು ತಯಾರಿಸಿ, ಹತ್ತಿರದ ಆಸ್ಪತ್ರೆಗಳಿಗೆ ಉಚಿತವಾಗಿ ಕೊಟ್ಟರೆ, ಮತ್ತೆ ಕೆಲವು ನಗರಗಳ ರೆಸ್ಟೋರೆಂಟ್‌ಗಳು ಕೈ - ಜೋಡಿಸಿ, ತಮ್ಮ ಊರಿನ ಆಸ್ಪತ್ರೆಯ ಸಿಬ್ಬಂದಿಗೆ ಉದಾರವಾಗಿ ತರಾವರಿ ಊಟವನ್ನು ಡಬ್ಬಿಗಳಲ್ಲಿ ಸರಬರಾಜು ಮಾಡುತ್ತಿದ್ದಾರೆ. ಎಷ್ಟೋ ನಗರಗಳಲ್ಲಿ ಆಸ್ಪತ್ರೆಗಳಿಗೆ ಹತ್ತಿರವಿರುವ ಪ್ರತಿಷ್ಠಿತ ಹೋಟೆಲುಗಳು ತಮ್ಮ ಕೊಠಡಿಗಳು ಹಾಗು ಸಮ್ಮೇಳನ ಭವನಗಳನ್ನು ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ ಒಪ್ಪಿಸಿದ್ದಾರೆ. "ಕೂತಲ್ಲೇ ದೇಶ-ವಿದೇಶ ಪ್ರವಾಸ ಮಾಡಿಸುವ ಶಕ್ತಿ ಪುಸ್ತಕಗಳಿಗೆ ಇದೆ" ಎಂದು ಹೇಳುವ ಆಸ್ಟ್ರೇಲಿಯಾದ 'ಗ್ಲೀ ಬುಕ್ಸ್' ನ ಮಾಲೀಕರು ತಮ್ಮ ಪುಸ್ತಕ ಮಳಿಗೆಯ ಎಲ್ಲ ಪುಸ್ತಕಗಳನ್ನು ಇಷ್ಟವಿದ್ದ ಓದುಗರಿಗೆ ಉಚಿತವಾಗಿ ಬೈಸಿಕಲ್ ಮೂಲಕ ತಲುಪಿಸುತ್ತಿದ್ದಾರೆ. ವೆರ್ಮಾಂಟ್ ರಾಜ್ಯದ ಕೆಲವು ಚಿಕ್ಕ ಉದ್ಯಮಗಾರರು ಸೇರಿಕೊಂಡು, ಒಂದೆರಡು ಖಾಸಗಿ ವಿಮಾನಗಳನ್ನು ಬಾಡಿಗೆಗೆ ಪಡೆದು, ಕೋವಿಡ್ - ೧೯ ಪರೀಕ್ಷಾ ಉಪಕರಣಗಳ ಕಿಟ್‌ಗಳನ್ನು ಮತ್ತೊಂದೆಡೆಗೆ ಶೀಘ್ರವಾಗಿ ರವಾನಿಸಲು ತಮ್ಮ ಸಹಾಯ ಹಸ್ತ ನೀಡಿದರಂತೆ. ಕ್ಯಾಲಿಫೋರ್ನಿಯಾದ ಹದಿವಯಸ್ಸಿನ ಬಾಲಕನೊಬ್ಬ,ಕೈಲಾಗದ ಹಿರಿಯರಿಗೆ ದಿನಸಿ ಸಾಮಾನುಗಳನ್ನು ಖರೀದಿಸಿ, ಉಚಿತವಾಗಿ ಅವರ ಮನೆ ಬಾಗಿಲಿಗೆ ತಂದಿಡುವ ಸೇವೆಮಾಡಲು ಒಂದು ವೆಬ್ ಸೈಟ್ ಶುರುಮಾಡಿದನಂತೆ. ಅದು ರಾಜ್ಯಾದ್ಯಂತ ಮನೆಮಾತಾಗಿ, ಎಲ್ಲರೂ ಅದರ ಉಪಯೋಗ ಮಾಡಿಕೊಳ್ಳಲು ಆರಂಭಿಸಿದರಂತೆ. ಹೀಗೆ, ಈ ಘೋರ ಸಮಯದಲ್ಲಿ ತಮಗೆ ಕೈಲಾದ ಸೇವೆ ಮಾಡುತ್ತಿರುವ ನೂರಾರು ಪ್ರತಿದಿನದ ಪರಾಕ್ರಮಿಗಳಿಗೆ ಹೃತ್ಪೂರ್ವಕ ನಮನಗಳನ್ನು ಸಲ್ಲಿಸೋಣ.

ಮಾನವ ಇತಿಹಾಸದಲ್ಲಿ ಅದೆಷ್ಟೋ ಪ್ರಮುಖ ಪ್ರಗತಿಪರ ಬದಲಾವಣೆಗಳು, ಆವಿಷ್ಕರಣಗಳು, ಸರ್ವವ್ಯಾಪಿ ವ್ಯಾಧಿಗಳ ಅಥವಾ ವೈಪರಿತ್ಯದ ಅವಧಿಯಲ್ಲೇ ಆಗಿದೆ. ೧೪ ನೇ ಶತಮಾನದ "ಬ್ಲ್ಯಾಕ್ ಡೆತ್"ನಲ್ಲಿ ಸುಮಾರು ೨೦೦ ದಶಲಕ್ಷ ಜನರು ಸಾವನ್ನಪ್ಪಿದರು. ಅದೇ ಸಮಯದಲ್ಲಿ, ಸಾರ್ವಜನಿಕ ಆರೋಗ್ಯ ಮತ್ತು ನಿರ್ಮಲೀಕರಣ ಮತ್ತು ಸಂಪರ್ಕತಡೆ ಶಾಸ್ತ್ರಗಳಿಗೆ ತಳಹದಿ ಹಾಕಿದರು. ಮೊಟ್ಟಮೊದಲಿಗೆ ಜೀತದಾಳುಗಳು ಮೇಲ್ಮಟ್ಟದ ಜೀವನ ಪರಿಸ್ಥಿತಿಗೆ, ಹೆಚ್ಚಿನ ಬಟವಾಡೆಗೆ ಬೇಡಿಕೆ ನೀಡಿ, ಯಶಸ್ಸುಗಳಿಸಿ, ಭವಿಷ್ಯದ ಕಾರ್ಮಿಕ ಹಕ್ಕುಗಳ ಪ್ರಾಥಮ್ಯ ನೆಟ್ಟರು. ಕ್ರಿ. ಶ. ೧೬೬೫ ರಲ್ಲಿ "ಗ್ರೇಟ್ ಪ್ಲೇಗ್ ಆಫ್ ಲಂಡನ್" ಲಂಡನ್ನಿನ ಕಾಲು ಭಾಗ ಜನರನ್ನು ಬಲಿ ತೆಗೆದುಕೊಂಡಾಗ, ಇಪ್ಪತ್ತರ ವಯಸ್ಸಿನಲ್ಲಿದ್ದ ಸರ್ ಐಸಾಕ್ ನ್ಯೂಟನ್ ವಿಶ್ವವಿದ್ಯಾನಿಲಯಕ್ಕೆ ಹೋಗಲಾಗದೆ, ಒಂದು ವರ್ಷ ಮನೆಯಲ್ಲೇ ತಮ್ಮ ವೈಜ್ಞಾನಿಕ ಸಂಶೋಧನೆ ನಡೆಸಿದರು. ಈ ಒಂದು ವರ್ಷಕ್ಕೆ ಅವರು "ಅನ್ನಸ್ ಮಿರಾಬಿಲಿಸ್", ಅಂದರೆ, ಕೌತುಕ ಅಥವಾ ವಿಸ್ಮಯದ ವರುಷ ಎಂದು ಹೇಳಿದರು. ಏಕೆಂದರೆ, ಆ ಜನಸಂಪರ್ಕವಿಲ್ಲದಿದ್ದ ವರ್ಷದಲ್ಲೇ ಅವರು ಗುರುತ್ವಾಕರ್ಷಣ ಶಕ್ತಿ, ಕ್ಯಾಲ್ಕುಲಸ್, ಥಿಯರಿ ಆಫ್ ಆಪ್ಟಿಕ್ಸ್ ಮುಂತಾದ ವಿಜ್ಞಾನದ ಅಡಿಕಲ್ಲುಗಳನ್ನು ಕಂಡುಹಿಡಿದರು. ೧೯೧೮ರ ಇನ್ಫ್ಲುಯೆಂಜಾ ಸಮಯದಲ್ಲಿ ಸರ್ಕಾರಗಳು ಹೊಸದಾಗಿ ಆರೋಗ್ಯ ಇಲಾಖೆಗಳನ್ನು ಸ್ಥಾಪಿಸಿದರು.,ಮಾನವ ಆರೋಗ್ಯದ ಅಭಿವೃದ್ಧಿಗೆ ಅಂತರರಾಷ್ಟ್ರೀಯ ಸಹಕಾರದ ಅಗತ್ಯ ಕಂಡು, ಒಂದು ಸಂಸ್ಥೆಯನ್ನು ಹುಟ್ಟುಹಾಕಿದರು ಅದೇ ಈಗಿನ "ವಿಶ್ವ ಆರೋಗ್ಯ ಸಂಸ್ಥೆ". ವಿಪರೀತದ ಸಂಕಷ್ಟಕ್ಕೆ ಒಳಗಾದಾಗ, ಮನುಷ್ಯ ಕುಲ ಮತ್ತೆ ಹುರುಪಿನಿಂದ ಪುಟಿದು ಬಂದು, ಏಳಿಗೆ ಹೊಂದಿರುವುದಕ್ಕೆ, ೧೯೩೦ ಇಸವಿಯಲ್ಲಿ ಆರಂಭಗೊಂಡ "ಗ್ರೇಟ್ ಡಿಪ್ರೆಶನ್" ಕೂಡ ಒಂದು ನಿದರ್ಶನ. ಆರ್ಥಿಕ ಮುಗ್ಗಟ್ಟಿನಿಂದ, ಮೊಟ್ಟಮೊದಲಿಗೆ ಮಹಿಳೆಯರು ಕಾರ್ಮಿಕ ವೃತ್ತಿ ಮಾಡಲು ಶುರುಮಾಡಿದರು. ಪೇಟೆಂಟ್‌ಗಳ ಸಂಖ್ಯೆ ಬಹಳಷ್ಟು ಹೆಚ್ಚಳವಾಯಿತು. ಮೊದಲ ಹೆಲಿಕಾಪ್ಟರ್, ಮ್ಯಾಗ್ನೆಟಿಕ್ ಟೇಪ್ ರೆಕಾರ್ಡಿಂಗ್, ನೈಲಾನ್, ಬಾಲ್ - ಪಾಯಿಂಟ್ ಪೆನ್, ನ್ಯೂಕ್ಲಿಯರ್ ಫಿಷನ್, ಫೋಟೋ ಕಾಪಿಯಿಂಗ್, ಕಾರ್ ರೇಡಿಯೋ, ಮೊದಲ ಸೂಪರ್ ಮಾರ್ಕೆಟ್ ಹೀಗೆ ನೂರಾರು ಆಗಿನ ಹೊಸ ಕಂಡುಹಿಡಿಕೆಗಳು ಮುಂದಿನ ಪೀಳಿಗೆಯ ಹೊಸ ದಿಗಂತವಾದವು.

"ನಡೆ ನಡೆ ನಡೆ ನಡೆ ನಡೆ ಮನವೇ, ನವಜೀವನದಾ ಕಡೆಗೆ...ನಮ್ಮಯ ಜೊತೆಯಲೆ ನಡೆ ಜಗವೆ...ನವಸಾಧನೆಯ ಕಡೆಗೆ" ಎಂಬ ಸೊಗಸಾದ ಹಾಡಿನಲ್ಲಿ ಹೇಳಿದಂತೆ, ಈ ಕಾಲಾವಧಿಯು ಮಾನವಕುಲಕ್ಕೆ ಸವಾಲೊಡ್ಡಿದ್ದರೂ, ನಾವೆಲ್ಲರೂ ಈ ದಾರಿದ್ರ್ಯದಿಂದ ಬೇಸತ್ತು, ಕಂಗಾಲಾಗಿದ್ದರೂ, ನಾವು ನವಜೀವನಕ್ಕೆ, ನವಸಾಧನೆಗಳಿಗೆ ಕತ್ತೆತ್ತಿ ಮುನ್ನಡೆಯುತ್ತಿರಲೇ ಬೇಕು. ಅದೇ ಮಾನವ ಪ್ರಕೃತಿಯ ಮೂಲಾಧಾರ. 'ನವಜೀವನ' ಒಂದು ಸಮಾನ ಪೂರ್ವಾಪರ ಪದ. ಆಂಗ್ಲಭಾಷೆಯಲ್ಲಿ ಪ್ಯಾಲಿನ್ಡ್ರೋಮ್ ಎಂದು ಕರೆಯುತ್ತಾರೆ. ಈ ಪದಗಳನ್ನು ಹಿಂದು ಮುಂದಾಗಿ ಓದಿದರೂ ಮೂಲ ಪದವಾಗಿಯೇ ಇರುತ್ತದೆ. ಹಾಗೆಯೇ, ಸದ್ಯದಲ್ಲಿ ನಮ್ಮ ಜೀವನಗಳು ಹಿಂದುಮುಂದಾಗಿದ್ದರೂ, ವ್ಯವಸ್ಥೆ ತಲೆ ಕೆಳಕಾದಂತಿದ್ದರೂ, 'ನವಜೀವನ' ಪದದಂತೆ ಹಿನ್ನಡೆಯಿಂದ ಮುನ್ನಡೆಯತ್ತ ಸಾಗಿ ಮತ್ತೆ ನವಜೀವನದ ಹಾದಿಗೆ ನಾಂದಿ ಹಾಡುವ.

●

ಕೋವಿಡ್ ಲಹರಿ

ದಾಶರಥಿ ಘಟ್ಟು, ನ್ಯೂ ಜೆರ್ಸಿ

ಕೋವಿಡ್ ಭೀತಿ, ಕರಿ ನೆರಳಿನಂತೆ ನಮ್ಮನ್ನು ಬೆಂಬಿಡದೆ ಅಂಟಿಕೊಂಡಿರುವಾಗ, ಈ ಸಂಕಷ್ಟದಿಂದ ನಾವು ಪಾರಾಗುತ್ತೇವೆಯೇ? ಮತ್ತೆ ಮೊದಲಿನಂತೆ ನಾವು ಓಡಾಡಿಕೊಂಡಿರುತ್ತೇವೆಯೇ? ನಮ್ಮ ಗೆಳೆಯರು ಮತ್ತು ಪರಿಚಯಸ್ಥರ ಜೊತೆ ಸೇರಿ ಕಾಲ ಕಳೆಯಲು ಆಗುತ್ತದೆಯೇ? ರೈಲು, ಬಸ್ಸುಗಳಲ್ಲಿ ಪ್ರಯಾಣ ಮಾಡಲು ಸಾಧ್ಯವಾಗಬಹುದೇ? ತುರ್ತು ಕೆಲಸಗಳಿಗೆ, ಅಥವಾ ಅಮ್ಮ - ಅಪ್ಪಂದಿರು, ಸೋದರ - ಸೋದರಿಯರು ಮತ್ತು ಬಂಧು - ಮಿತ್ರರನ್ನು ನೋಡಿಕೊಂಡು ಬರಲು ಇಂಡಿಯಾ ಪ್ರಯಾಣ ಮಾಡಲು ಸಾಧ್ಯವಾಗುತ್ತದೆಯೇ? ಹೀಗೆ ಎಷ್ಟೋ ಪ್ರಶ್ನೆಗಳು ಮನಸ್ಸಿನ ತುಂಬಾ ಕೂತು ಘಾಸಿ ಮಾಡುತ್ತಿವೆ.

ನಾವು ಕಟ್ಟಿಕೊಂಡು ಬಂದಿರುವ ಎಷ್ಟೋ ವ್ಯವಸ್ಥೆಗಳು ಈಗಾಗಲೇ ರೂಪಾಂತರ ಹೊಂದುತ್ತಿವೆ. ಎಲಿಮೆಂಟರಿ ಶಾಲೆಯಿಂದ ಹಿಡಿದು, ಯೂನಿವರ್ಸಿಟಿಗಳವರೆಗೆ ಪಾಠ - ಪ್ರವಚನಗಳೆಲ್ಲಾ ಆನ್‌ಲೈನ್‌ನಲ್ಲಿ ನಡೆಯುತ್ತಿದ್ದು, ನಾವು ಕಟ್ಟಿಟ್ಟಿರುವ ಶಾಲೆ ಕಾಲೇಜುಗಳ ಬೃಹತ್ ಕಟ್ಟಡಗಳು ಭೂತ ಬಂಗಲೆಗಳಂತೆ ತೋರುತ್ತಿವೆ. ನಮ್ಮ ಗ್ಯಾದರಿಂಗ್‌ಗಳು ಜೂಮ್ ಮತ್ತು ವೆಬೆಕ್ಸ್ ಮೀಟಿಂಗುಗಳಿಗೆ ಸೀಮಿತಗೊಂಡು, ನಾವೆಲ್ಲಾ 3D ಯಿಂದ 2D ಜೀವಿಗಳಾಗಿ ರೂಪಾಂತರ ಹೊಂದಿಬಿಟ್ಟಿದ್ದೇವೆ. ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳೂ, ಹೋಮ ಹವನಗಳೂ ಆನ್‌ಲೈನ್‌ನಲ್ಲಿ ನಡೆಯುತ್ತಿವೆ.

ಈ ವೈರಾಣುವಿನ ವಿರಾಟ್ ಸ್ವರೂಪದ ರೀತಿ ಮತ್ತು ವ್ಯಾಪ್ತಿ ನೋಡಿ! ನಮ್ಮದೇ ಕೈಗಳಿಂದ ನಮ್ಮದೇ ಮೂಗು, ಬಾಯಿ ಮತ್ತು ಕಣ್ಣುಗಳನ್ನು ಮುಟ್ಟಿಕೊಳ್ಳಲು ಭಯಭೀತರಾಗಿದ್ದೇವೆ. ದಿನಸಿ ಅಂಗಡಿಗಳಿಗೆ ಹೋದಾಗ ಅಲ್ಲಿ ಸುಳಿಯುವ ಪ್ರತಿ ಮಾನವ ಪ್ರಾಣಿಯನ್ನೂ ಕರೋನಾ ವೈರಾಣುವಿನ ಕಳ್ಳಸಾಗಾಣಿಕೆದಾರನಂತೆ ನೋಡುತ್ತಾ, ಅವನಿಂದ ಎರಡು ಮಾರು ದೂರ ಓಡುತ್ತಾ, ಅಲ್ಲಿನ ವಾತಾವರಣದ ಉಸಿರೆಳೆದುಕೊಳ್ಳಲೂ ಭಯಪಡುತ್ತಾ, ಮನೆಗೆ ಬಂದ ತಕ್ಷಣ ಹಾಲಿನ ಕ್ಯಾನ್‌ಗಳನ್ನೂ ಕ್ಲೋರಾಕ್ಸ್ ವೈಪ್‌ಗಳಿಂದ ಒರೆಸುತ್ತಾ... ಲೈಫು ಇಷ್ಟೇನಾ?

ಇನ್ನು ನನಗೆ ತಿಳಿದ ಮಟ್ಟಿಗೆ ಹಳ್ಳಿ, ಪಟ್ಟಣ, ನಗರ, ರಾಜ್ಯ ಮತ್ತು ದೇಶಗಳು ಒಟ್ಟಾರೆ ಒಂದು ಗಂಟೆ ಕೂಡಾ ಈಗಿನಂತೆ ಪ್ರಪಂಚದಾದ್ಯಂತ ನಡೆಯುತ್ತಿರುವ ಲಾಕ್‌ಡೌನ್‌ಗಳಂತೆ ಸಂಪೂರ್ಣ ಬಂದ್ ನಡೆಸಿದ್ದನ್ನು ನಾನು ಕೇಳಿಲ್ಲ. ಈಗ ನೋಡಿ ದೇಶ ದೇಶಗಳೇ ತನ್ನ ಸಂಪೂರ್ಣ ಸಾಮಾಜಿಕ ವ್ಯವಸ್ಥೆಯನ್ನು ತಟಸ್ಥಗೊಳಿಸಿ, ಪಟ್ಟಣ, ನಗರಗಳೆಲ್ಲಾ ಪಾರ್ಶ್ವವಾಯು ಪೀಡಿತ ನಿಸ್ತೇಜ ನತದೃಷ್ಟರಂತೆ ಹಾಸಿಗೆ ಹಿಡಿದುಬಿಟ್ಟಿವೆ. ಈ ಭೂಮಿ ಮತ್ತು ಭೂಮಿಯ ಮೇಲಿನ ಎಲ್ಲಾ ಸಂಪತ್ತೂ ಇರುವುದೇ ನನಗಾಗಿ. ಇಲ್ಲಿನ ಭೂಮಿ ಕಾಣಿ, ಗಿಡಮರಗಳು, ಪ್ರಾಣಿಪಕ್ಷಿಗಳು ಮತ್ತು ನೈಸರ್ಗಿಕ ಸಂಪತ್ತು ನನ್ನ ಸುಖ ಮತ್ತು ಐಷಾರಾಮಿಗಾಗಿ ಎಂಬ ಮನೋಸ್ಥಿತಿ ಮನುಷ್ಯ ಬಿಡಬೇಕಾದ ಕಾಲ ಬಂದಿದೆ. ವಿಜ್ಞಾನಿಗಳು ಈ ಭೂಲೋಕದಲ್ಲಿ ಒಂದು ಟ್ರಿಲಿಯನ್ ಜೀವ ಸಂಕುಲಗಳಿವೆಯೆಂದು ಅಂದಾಜು ಮಾಡಿದ್ದಾರೆ. ಅದರಲ್ಲಿ ೮೭ ಲಕ್ಷ ಸಂಕುಲಗಳನ್ನು ಗುರುತಿಸಿ ಪಟ್ಟಿ ಮಾಡಿದ್ದಾರಂತೆ! ಎರಡು ಕಾಲುಗಳಲ್ಲಿ ನಡೆದಾಡುವ ಮಾನವ ಜೀವಿ ಈ ಜೀವಸಂಕುಲದ ಮಹಾ ಸಾಗರದಲ್ಲಿ 'ಕೇವಲ ಒಂದು ಮಾತ್ರ'. ಉಳಿದ ಕೋಟ್ಯಂತರ ಸಂಕುಲಗಳಿರುವ ಜೀವಜಾಲವನ್ನೇ ಗಣನೆಗೆ ತೆಗೆದುಕೊಳ್ಳದೆ ತನಗೆ ಬೇಕಾದಂತೆ ಪರಿಸರದ ಹರಣ ಮಾಡುತ್ತಾ ನಾವು ಬಾಯಿ ಮಾತಿಗೆ ಮಾತ್ರ ಹೇಳುವ 'ಮದರ್ ನೇಚರ್' ಸುಮ್ಮನೆ ಇರುತ್ತದೆಯೇ?

ಈಶಾವಾಸ್ಯದ ಋಷಿ 'ಎಲ್ಲವೂ ಈಶ್ವರನಿಗೆ ಸೇರಿದ್ದು. ನಮಗೆ ಅಗತ್ಯವಿದ್ದಷ್ಟನ್ನು ಮಾತ್ರ ನಾವು ಬಳಸಿಕೊಂಡು, ಆ ಈಶ್ವರನಿಗೆ ಕೃತಜ್ಞತೆ ಸಲ್ಲಿಸುತ್ತಾ ಬದುಕಬೇಕು' ಎಂದಿದ್ದಾರೆ, ನಾವು ಮಾಡುತ್ತಿರುವುದೇನು? ಇಬ್ಬರು ಮೂವರಿರುವ ಕುಟುಂಬಗಳು ನಾಲ್ಕೈದು ಮಲಗುವ ಕೋಣೆಗಳುಳ್ಳ ಮನೆಗಳನ್ನು ಮಾಡಿಕೊಳ್ಳುತ್ತೇವೆ. ಮರಮಟ್ಟು, ಕಿಟಕಿ, ಬಾಗಿಲು, ಅಟ್ಟಗಳು, ಕಪಾಟುಗಳು, ಹಾರ್ಡ್‌ವುಡ್ ನೆಲ ಇವಕ್ಕೆಲ್ಲಾ ಸರಾಸರಿ ಒಂದು ಮನೆಗೆ ಚೆನ್ನಾಗಿ ಬಲಿತ ೪೨ ಮರಗಳು ಬೇಕೆಂದು ಗೂಗಲ್ ಅಂದಾಜಿಸುತ್ತದೆ. ಬೆಳೆದು ನಳನಳಿಸಿ ಧ್ಯಾನಸ್ಥ ಋಷಿಗಳಂತೆ ನಿಂತಿರುವ ಇಂತಹ ಮರಗಳನ್ನು ನಮ್ಮ ಮನೆಗಳನ್ನು ಕಟ್ಟಲು, ಪರೋಕ್ಷವಾಗಿ ಹನನ ಮಾಡುವ ರಾಕ್ಷಸರಂತೆ ನಾವು ತೋರುವುದಿಲ್ಲವೇ? ಇನ್ನು ನಮ್ಮಗಳನ್ನು ಹೊತ್ತೊಯ್ಯಲು, ನಮ್ಮ ಸರಕುಗಳನ್ನು ಸಾಗಾಣಿಕೆ ಮಾಡಲು, ನಮಗೆ ಮನೋರಂಜನೆಯನ್ನು ಒದಗಿಸಲು ನೂರಿಪ್ಪತ್ತು ಕೋಟಿ ಇಂಧನ ಚಾಲಿತ ಮೋಟಾರುಗಳನ್ನು ವಸುಂಧರೆಯ ಮೈಮೇಲೆ ಓಡಾಡಿಸುತ್ತಾ, ನಮ್ಮ ಐಷಾರಾಮಿಗಾಗಿ ವಸ್ತುಗಳನ್ನು ತಯಾರಿಸಲು ಲಕ್ಷಾಂತರ ಕಾರ್ಖಾನೆಗಳನ್ನು ನಿರ್ಮಿಸಿ ಪರಿಸರದ ತುಂಬಾ ವಿಷದ ಹೊಗೆ ತುಂಬುತ್ತಿದ್ದೇವೆ. ಸಾಗರದ ಅಗಾಧ ಜಲರಾಶಿಯನ್ನೇ ಚರಂಡಿಯ ನೀರನ್ನಾಗಿಸುತ್ತಿದ್ದೇವೆ. ನದಿಗಳ ಪಾಡು ಬಿಡಿ. ಇಂಡಿಯಾಕ್ಕೆ ಹೋದಾಗಲೆಲ್ಲಾ ಕಾವೇರಿ, ಕಪಿಲೆಯರ ದುಸ್ಥಿತಿ ನೋಡಿ ಮನಸ್ಸಿಗೆ ನೋವಾಗುತ್ತದೆ. ಇನ್ನು ಭೂಮಿತಾಯಿಯ ಮೈಯನ್ನು ಬಗೆದು ಅವಳ ಅಂತರ್ಜಲದಿಂದ ಹಿಡಿದು ವಜ್ರವೈಢೂರ್ಯದವರೆಗೂ ಅವಳ ಸಂಪತ್ತನ್ನೆಲ್ಲಾ ದೋಚುತ್ತಿರುವ ನಾವು, ಖಾಲಿಯಾದ ಗಣಿ, ಗುಂಡಿಗಳಲ್ಲಿ ಪ್ಲಾಸ್ಟಿಕ್ ತಾಜ್ಯ ತುಂಬಿ ಮುಚ್ಚುತ್ತಿದ್ದೇವೆ. ಇನ್ನು ೨೦೦ ವರ್ಷಗಳ ನಂತರ ನಮ್ಮ ಮಕ್ಕಳುಗಳಿಗೆ ಭೂಮಿಯ ಒಡಲಲ್ಲಿ ಸಿಕ್ಕುವುದು ಇಂತಹ ತ್ಯಾಜ್ಯ ಮಾತ್ರ! ಹೀಗೇ ಮುಂದುವರೆದು ನಮ್ಮ ಸೆಲ್ ಫೋನಿನ ತರಂಗಗಳಿಂದ ಗುಬ್ಬಿಯಂತಹ ಅನೇಕ ಪಕ್ಷಿ ಸಂಕುಲಗಳನ್ನೇ ವಿನಾಶದಂಚಿಗೆ ತಲುಪಿಸಿದ್ದೇವೆ. ನಮ್ಮ ನಗರಗಳಲ್ಲಿ ಈಗ ಶ್ರಾದ್ಧ ಪಿಂಡ ಸ್ವೀಕರಿಸಲೂ ಒಂದು ಕಾಗೆ ಸಿಕ್ಕುವುದಿಲ್ಲ. ಶಾರೀರಿಕವಾಗಿ ಮಜಭೂತಾಗೇ ಇರುವ ಹಂದಿ, ಹಸು ಮುಂತಾದ ಪ್ರಾಣಿಗಳಿಗೆ 'ಲೈವ್ ಸ್ಟಾಕ್' ಎಂದು ಹೆಸರಿಟ್ಟು, ನಮಗೆ ಬೇಕಾದಂತೆ ಅವುಗಳ ದೇಹರಚನೆ ಮಾರ್ಪಡಿಸಿ, ಅವ್ಯಾಹತವಾಗಿ ಆ ಜೀವಿಗಳನ್ನು ಹತ್ಯೆಮಾಡಿ ಭಕ್ಷಿಸುತ್ತಿದ್ದೇವೆ. ಇರಲಿ - ಇದೇನೋ ಪ್ರಾಣಿಸಂಕುಲದ ಆಹಾರ ಸರಪಳಿಯ ಪ್ರಕ್ರಿಯೆ ಎಂದುಕೊಂಡರೂ, ಪರಂಪರಾನುಗತವಾಗಿ ಉಪಯೋಗಿಸುತ್ತಿದ್ದ ಕೋಳಿ, ಕುರಿ, ಮೇಕೆಗಳನ್ನು ಬಿಟ್ಟು ಸಿಕ್ಕ ಸಿಕ್ಕ ವನ್ಯಜೀವಿಗಳನ್ನು ಸಂಹರಿಸಿ, ನಮ್ಮ ಎಕ್ಸೋಟಿಕ್ ಫುಡ್ ಎಕ್ಸ್‌ಪೀರಿಯೆನ್ಸ್ ಮಾಡಿಕೊಂಡು ದುರಹಂಕಾರದ ಪರಮಾವಧಿಯಲ್ಲಿ ತೇಲಾಡುತ್ತಿದ್ದಂತೆ....ಒಂದೆರಡು ತಿಂಗಳಲ್ಲೇ ನಾವುಗಳು ಕಟ್ಟಿಕೊಂಡಿದ್ದ ಗಾಳಿಗೋಪುರಗಳನ್ನು ಈ ಕಣ್ಣಿಗೆ ಕಾಣದ, ನಿಯಂತ್ರಣಕ್ಕೆ ಸಿಲುಕದ ಸೂಕ್ಷ್ಮಜೀವಿ ಹೇಗೆ ಉರುಳಿಸಿಬಿಟ್ಟಿತು ನೋಡಿ!

ಈ ವೈರಾಣುವಿನ ಪರಾಕ್ರಮ ನಿಧಾನವಾಗಿಯಾದರೂ ಕಡಿಮೆಯಾಗುತ್ತಿದೆ. ಏಕೆಂದರೆ, ಬುದ್ಧ ಹೇಳಿದಂತೆ, 'ಯಾವ ಸ್ಥಿತಿಯೂ ಶಾಶ್ವತವಲ್ಲ. ಎಲ್ಲವೂ ಸಾಗಿ ಹೋಗಲೇ ಬೇಕು'. ನಾವು ಈ ವೈರಾಣುವಿನ ಬಗ್ಗೆ ಹೆಚ್ಚು ತಿಳಿದುಕೊಳ್ಳುತ್ತಿದ್ದೇವೆ. ನಮ್ಮಗಳನ್ನು ಅದರ ಆಕ್ರಮಣದಿಂದ ರಕ್ಷಿಸಿಕೊಳ್ಳುವ ಉಪಾಯಗಳು ವ್ಯಕ್ತವಾಗುತ್ತಿವೆ. ಅನೇಕ ಔಷಧೀಯ ಕಂಪನಿಗಳು ವ್ಯಾಕ್ಸೀನುಗಳನ್ನು ಸಂಶೋಧಿಸಿ ತರುತ್ತಿದ್ದಾರೆ. ಕೆಲವು ದೇಶಗಳಲ್ಲಿ ವ್ಯಾಕ್ಸೀನುಗಳನ್ನು ಜನರಿಗೆ ಕೊಡುತ್ತಲೂ ಇದ್ದಾರೆ. ಇವೆಲ್ಲಾ ಭೀತ ಮನಸ್ಸು ಮತ್ತು ಬದುಕುಗಳಿಗೆ ಸಮಾಧಾನ ಮತ್ತು ಭರವಸೆಯ ಬೆಳಕನ್ನು ತರುತ್ತಿವೆ. ವೈಯುಕ್ತಿಕವಾಗಿ ಹೇಳುವುದಾದರೆ, ವೈರಾಣು ಪ್ರತಾಪ

ಏಳಿ, ಎದ್ದೇಳಿ ಮತ್ತು ಗುರಿ ತಲುಪುವವರೆಗೂ ನಿಲ್ಲದಿರಿ —ಸ್ವಾಮಿ ವಿವೇಕಾನಂದ

ಕೋವಿಡ್ ಲಹರಿ

ಪ್ರಾರಂಭವಾದ ಮೊದಮೊದಲ ಆ ದಿನಗಳಲ್ಲಿ ಭಯ ಎಷ್ಟಿತ್ತೆಂದರೆ, ಒಂದು ರೀತಿಯ ಖಿನ್ನತೆ ಮನಸ್ಸನ್ನು ಭಾದಿಸತೊಡಗಿತ್ತು. ಆಗಲೇ ಯಾರೋ ಹೇಳಿದರೆಂದು ಪ್ರತಿ ದಿನ ಅಷ್ಟೋತ್ತರ ಹೇಳುವುದನ್ನೂ, ವಿಷ್ಣು ಸಹಸ್ರ ನಾಮ ಹೇಳುವುದನ್ನೂ ಪ್ರಾರಂಭಿಸಿದೆ. ನನ್ನನ್ನು ಉಳಿಸುವ ಭಾರ ಆಗ ರಾಯರ ಮತ್ತು ಭಗವಂತ ವಿಷ್ಣು ದೇವರ ಜವಾಬ್ದಾರಿಯಾಗಿ ಹೋಯ್ತು. ಹೀಗೇ ಮುಂದುವರೆದು, ನಿಯಮಿತವಾಗಿ ಮೆಡಿಟೇಶನ್ ಮಾಡತೊಡಗಿದೆ. ಫಿಯರ್ ಡಿಟಾಕ್ಸಿಕೇಷನ್ ಅಂತರ್ಜಾಲ ಸೆಷನ್ನುಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡೆ. ಭಯದ ಮೂಲ ಮತ್ತು ಅದರ ನಿವಾರಣೆಗೆ ನೆರವಾಗುವ ಪುಸ್ತಕಗಳನ್ನು ಓದಿ, ಅದರ ಬಗ್ಗೆ ಚಿಂತನೆ ಮಾಡಲು ಪ್ರಯತ್ನ ಪಟ್ಟೆ. ಎಲ್ಲಾ ಚೆನ್ನಾಗಿದ್ದಾಗ ನಾವಾಡುವ ದೊಡ್ಡ ದೊಡ್ಡ ಮಾತುಗಳೆಲ್ಲಾ ಎಷ್ಟು ಪೊಳ್ಳು ಎಂಬುದು ಅರ್ಥವಾಗುತ್ತಿದ್ದ ಹಾಗೆ, ಆ ಮಾತುಗಳನ್ನು ನನ್ನ ಜೀವನದ ಕನ್ನಡಿಯಲ್ಲಿ ನೋಡಲು ಪ್ರಯತ್ನ ಪಡಬೇಕು ಎಂದು ಸಂಕಲ್ಪಿಸಿದೆ. ಈ ನಿರ್ಧಾರದಿಂದ ನನ್ನ ಆಧ್ಯಾತ್ಮಿಕ ದಾರಿ ನಿಧಾನವಾಗಿ ನಿಚ್ಚಳವಾಗುತ್ತಿದೆ ಎನ್ನಿಸುತ್ತಿದೆ. ಬದುಕಿನ ಸಂತೋಷ ಮತ್ತು ನೆಮ್ಮದಿಗೆ ಪೂರಕವಾಗದ ಯಾವ ತತ್ವವೂ, ಆಚರಣೆಯೂ ಪೊಳ್ಳು ಎನ್ನುವುದು ಅರ್ಥವಾಗತೊಡಗಿದೆ. ಮನಸ್ಸಿನ ಅರಿವನ್ನು ಹಿಗ್ಗಿಸದ, ಮನೋಬಲವನ್ನು ಹೆಚ್ಚಿಸದ ಯಾವುದೇ ಚಟುವಟಿಕೆಯೂ ಬರೀ ವ್ಯರ್ಥ ಕಾಲಕ್ಷೇಪ. ಆದುದರಿಂದಲೇ ಪ್ರವಚನಗಳನ್ನು ಕೇಳುವದನ್ನೂ, ಮೀಮಾಂಸೆಯ ಕೂಟಗಳಲ್ಲಿ ಭಾಗವಹಿಸುವುದನ್ನೂ ಬಿಟ್ಟು ಬಿಟ್ಟಿದ್ದೇನೆ. ಆದಷ್ಟು ಅದು ತಿನ್ನಕೂಡದು, ಇದು ತಿನ್ನಕೂಡದು, ಅದು ಹಾಗೆ ಮಾಡಬೇಕು, ಇದು ಹೀಗೆ ಮಾಡಬೇಕು ಎಂಬಂತಹ dogmaಗಳಿಂದ ಮುಕ್ತನಾಗಿ ಬದುಕು ನಡೆಸುವುದು, ಬದುಕಿನ ಅರ್ಥಪೂರ್ಣತೆಗೆ ಹೆಚ್ಚು ಪ್ರಸ್ತುತ ಎಂದು ಈ ಕೋವಿಡ್ ದಿನಗಳು ನನಗೆ ಕಲಿಸಿದೆ.

ಕೋವಿಡ್ ಸ್ಟೇ - ಹೋಮ್‌ನ ಮತ್ತೊಂದು ಮರೆಯಲಾಗದ ಸಂಗತಿಯೆಂದರೆ, ನನ್ನ ಮಗಳ ಜೊತೆ ಕಳೆದ ಕ್ವಾಲಿಟಿ ಟೈಮ್. ೨೨ ವರ್ಷಗಳ ಹಿಂದೆ ಈ ದೇಶಕ್ಕೆ ಬಂದಾಗಿನಿಂದ ಪ್ರಾಜೆಕ್ಟ್‌ಗಳು, ವೀಸಾ, ಹೊಸ ಸಂಸ್ಕೃತಿಯ ಜೊತೆಗಿನ ಹೊಂದಾಣಿಕೆ, ಇಲಿ ಓಟದ ಒತ್ತಡಗಳು ಇವುಗಳಲ್ಲೇ ದಿನಗಳು ಕಳೆದು ಹೋಗಿವೆ. ಇಲ್ಲಿ ಬಂದಾಗಿನಿಂದ, ನನ್ನ ಮಗಳು ಪ್ರಿ - ಸ್ಕೂಲು, ಡೇ - ಕೇರ್, ಸ್ಕೂಲು, ಇನ್ನಿತರ ಚಟುವಟಿಕೆ ಇವುಗಳಲ್ಲಿ ಮನೆಯಲ್ಲಿರುತ್ತಿದ್ದುದೇ ಕಡಿಮೆ. ನಮ್ಮದಂತೂ ಗೊತ್ತೇ ಇದೆ. ಯಾವನೋ ಕೊಡುವ ಕೆಲವು ಸಾವಿರ ಡಾಲರ್‌ಗಳಿಗೆ, ನಮ್ಮ ಅವತಾರಗಳೇ ಅವನಿಗೆ ಕೆಲಸ ಮಾಡಲು ಆಗಿವೆ ಎಂಬಂತೆ ಬದುಕು ಸವೆಸುತ್ತಾ ದಶಕಗಳೇ ಕಳೆದು ಹೋಗಿವೆ.ಕಳೆದ ಎಂಟು ವರ್ಷಗಳಿಂದ ಅಂತೂ ಅವಳು ಮನೆಯಲ್ಲೇ ಇರಲಿಲ್ಲ. ಡಾರ್ಮಿನಲ್ಲಿ ಇರುತ್ತಿದ್ದ ಅವಳು, ವೀಕೆಂಡಿಗೆ ಮನೆಗೆ ಬರುತ್ತಿದ್ದ ಶಾಸ್ತ್ರ ಮಾಡುತ್ತಿದ್ದರೂ, ಅವಳ ಗೆಳೆಯರ ಜೊತೆ ಸುತ್ತಲು ಹೊರಟುಬಿಡುತ್ತಿದ್ದಳು. ವಾರಾಂತ್ಯದ ದಿನಗಳಲ್ಲಿ ನಮಗೂ ಯಾವುದಾದರೂ ಕಾರ್ಯಕ್ರಮ ಇದ್ದೇ ಇರುತ್ತಿದ್ದು ಅವಳೇ ನಮ್ಮನ್ನು 'ನಾನು ಬಂದಾಗ ನೀವು ಮನೆಯಲ್ಲಿರುವುದಿಲ್ಲ. ನಾನು ಯಾಕೆ ಇಲ್ಲಿಗೆ ಬರಬೇಕು?' ಎಂದು ಬೈಯುವಂತೆ ಆಗುತ್ತಿತ್ತು. ವರ್ಷದ ರಜಾ ದಿನಗಳಲ್ಲಿ ಮಗಳು ಮನೆಯಲ್ಲಿದ್ದರೂ ನಮಗೆ ರಜಾ ಎಲ್ಲಿ ಬರಬೇಕು? ಈ ಸಲದ ರಚೆಯಲ್ಲೂ ಅಲ್ಲಿ - ಇಲ್ಲಿ ಹೋಗುವ ಯೋಜನೆಗಳನ್ನು ಹಾಕಿದ್ದರೂ, ಕೋವಿಡ್‌ನಿಂದಾಗಿ ಅವಳು ಗೃಹ ಬಂಧನದಲ್ಲಿ ಇರಬೇಕಾಯಿತು. ಮಾರ್ಚ್ ಹದಿನೈದರ ನಂತರ ನಮಗೆ ಮನೆಗಳಿಂದಲೇ ಕೆಲಸ ಮಾಡಲು ಹೇಳಿದರು. ಹೀಗಾಗಿ ಅಮ್ಮ, ಅಪ್ಪ ಮತ್ತು ಮಗಳು ಮನೆಯಲ್ಲಿ ಒಟ್ಟಿಗೆ ಇರುವ 'ವನ್ಸ್ ಇನ್ ಎ ಲೈಫ್ ಟೈಮ್' ಅವಕಾಶ ದೊರೆಯಿತು.

ಮನೆಯಲ್ಲಿ ನಮ್ಮ ನಮ್ಮ ಕೆಲಸಗಳಲ್ಲಿ ನಾವಿರುತ್ತಿದ್ದರೂ, ಒಟ್ಟಿಗೆ ಇದ್ದೇವೆಂಬ ಅನುಭೂತಿಯೇ ಮನಸ್ಸಿಗೆ ಸಂತೋಷ ಕೊಡುತ್ತಿತ್ತು. ಓದು ಬರಹದ ಯಾವುದೇ ಕೆಲಸವಿಲ್ಲದ ನಮ್ಮ ಮಗಳು ತನ್ನ ಬೇಸರ ಕಳೆದುಕೊಳ್ಳಲು, ಅಂತರ್ಜಾಲದಲ್ಲಿ ರೆಸಿಪಿಗಳನ್ನು ಹುಡುಕಿ, ಅದನ್ನು ತಯಾರಿಸಲು ಬೇಕಾದ ಸಾಮಗ್ರಿಗಳ ಪಟ್ಟಿ ಮಾಡಿಕೊಂಡು, ಗ್ರೋಸರಿ ಶಾಪಿಂಗ್ ಮಾಡಿಕೊಂಡು ಬರುತ್ತಿದ್ದಳು. ಮಧ್ಯಾಹ್ನದ ಊಟಕ್ಕೆ ಒಂದು ಅಡಿಗೆ ಮಾಡಿದರೆ, ರಾತ್ರಿಗೆ ಒಟ್ಟಿಗೆ ಸೇರಿ ಇನ್ನೇನೋ ರೆಸಿಪಿ ಟ್ರೈ ಮಾಡುತ್ತಿದ್ದೆವು. ನಾಳೆಗೆ ಏನು ಮಾಡುವುದು ಅಂತ ಅವಳು ರಿಸರ್ಚ್ ಮಾಡುತ್ತಿದ್ದಳು. ವಾರಾಂತ್ಯದಲ್ಲೂ ಮನೆಯಿಂದ ಹೊರಗೆ ಹೋಗುವುದು ಸಾಧ್ಯವಾಗಿಲ್ಲದಿದ್ದರಿಂದ, ಅವತ್ತೂ ಬೆಳಗಿಂದ ಸಾಯಂಕಾಲದವರೆಗೂ, ವಿವಿಧ ಅಡಿಗೆ - ತಿಂಡಿಗಳಲ್ಲೋ, ಒಳ್ಳೆಯ ಸಿನಿಮಾ ನೋಡುವುದರಲ್ಲೋ ತೊಡಗಿಕೊಂಡಿರುತ್ತಿದ್ದೆವು. ಮಾರ್ಚ್ ನಿಂದ - ಜೂನ್ ನಲ್ಲಿ ಅವಳು ತನ್ನ ರೆಸಿಡೆನ್ಸಿಗೆ ಹೋಗುವವರೆಗೂ ದಿನಗಳು ಎಷ್ಟು ಬೇಗ ಹೊರಟು ಹೋಯಿತೆಂದರೆ, ನಂಬಲೇ ಸಾಧ್ಯವಿಲ್ಲ. 'ನಾವೆಂದೂ ಒಟ್ಟಿಗೆ ಹೀಗೆ ದಿನಗಳನ್ನು ಕಳೆದದ್ದೇ ಇಲ್ಲ ಅಪ್ಪಾ. ಇಂತಹ ದಿನಗಳು ಮತ್ತೆ ಬರುತ್ತದೆ ಎಂಬ ನಂಬಿಕೆ ನನಗಿಲ್ಲ'. ಎಂದು ಅವಳು ಹೇಳಿದ್ದರಲ್ಲಿ ಅತಿಶಯೋಕ್ತಿ ಇಲ್ಲ. ಇದಕ್ಕೆ ಕಾರಣವಾದ ಕೋವಿಡ್ಡನ್ನು ನಾನು ಅಭಿನಂದಿಸಲೇ ಬೇಕಲ್ಲವೇ? ಈ ವೈರಾಣುವಿನ ಆಕ್ರಮಣ ಸಂಪೂರ್ಣವಾಗಿ ಕೊನೆಯಾಗದಿದ್ದರೂ, ಒಂದು ತಹಬಂದಿಗೆ ಬಂದಾಗ ನಮ್ಮ ಬದುಕುಗಳ ಚಹರೆಯೇ ಬೇರೆಯಾಗಬಹುದು. ಬೇರೆಯದೇ ಆದ ಅಭ್ಯಾಸಗಳನ್ನು ನಾವು ಅಳವಡಿಸಿಕೊಳ್ಳಬೇಕಾಗಬಹುದು. ನಮ್ಮ ಸಾಮಾಜಿಕ ಮತ್ತು ಆಡಳಿತ ವ್ಯವಸ್ಥೆಗಳಲ್ಲಿ ಬದಲಾವಣೆಗಳು ಆಗಬಹುದು. ಅವೆಲ್ಲಾ ಸಮಷ್ಟಿಯ ಒಟ್ಟು ಆರೋಗ್ಯವನ್ನು ಗಮನದಲ್ಲಿ ಇಟ್ಟುಕೊಂಡು ಆಗಲಿ ಎಂಬುದೇ ನನ್ನ ಆಸೆ ಮತ್ತು ಹಾರೈಕೆ. ಬದುಕಿನ ಅಶಾಶ್ವತೆ ಮತ್ತು ನಮ್ಮಗಳ vulnerabilityಯ ಅರಿವು ನಮ್ಮೆಲ್ಲರಿಗೂ ಆಗಿ, ನಾವು ಹೆಚ್ಚು ನಮ್ರತೆಯಿಂದ ಬದುಕನ್ನು ನೋಡುವುದನ್ನು ಕೋವಿಡ್ ಕಲಿಸಿತು ಎಂದುಕೊಳ್ಳುತ್ತೇನೆ. ಈ ನಮ್ರತೆ ನಾವು ನಮ್ಮ ಸಹಜೀವಿಗಳನ್ನು ಹೆಚ್ಚು ಪ್ರೀತಿ ಮತ್ತು ಸಹಾನುಭೂತಿಗಳಿಂದ ನೋಡುವುದನ್ನು ಕಲಿಸಬೇಕು.

ಕೊನೆಯದಾಗಿ ಒಂದು ಮಾತು. ಸೃಷ್ಟಿಯ ಎಲ್ಲಾ ಚರಾಚರ ವಸ್ತು ವಿಕಾರಗಳೂ ಪರಮಾತ್ಮನ ರೂಪಗಳೆಂದು ಸನಾತನ ಧರ್ಮದ ಜ್ಞಾನ ಹೇಳುತ್ತದೆ. ಎಲ್ಲ ಆಗುಹೋಗುಗಳೂ ಯಾವುದೋ ನಮಗರಿಯದ ಭವ್ಯ ವ್ಯವಸ್ಥೆಯ ಪ್ರಕ್ರಿಯೆ ಎಂದೂ ಅಭಿಪ್ರಾಯ ಪಡುತ್ತದೆ. ಅಲ್ಲದೆ, ಅಮರ ಮತ್ತು ಅನಂತವಾದ ಪರಮಾತ್ಮ ವಸ್ತುವನ್ನು ಸಾಕ್ಷಾತ್ಕರಿಸಿಕೊಂಡ ಎಲ್ಲಾ ಪಂಥದ ಜ್ಞಾನಿಗಳೂ, ಎಲ್ಲಾ ಜೀವಿಗಳ ಚೈತನ್ಯವೂ ವಿಶ್ವ ಚೈತನ್ಯದ ಪ್ರತಿ ರೂಪಗಳೆಂದು ಅರಿತು ಹೇಳಿದ್ದಾರೆ. ಹೀಗಾಗಿ, ಈಶ್ವರ ಚೈತನ್ಯವೇ ನಮ್ಮ ಒಳಿತಿಗಾಗಿ ಪಾಠ ಕಲಿಸಲು ಈ ವೈರಾಣುವಿನ ರೂಪದಲ್ಲಿ ಬಂದಿರಬಹುದು ಎಂದು ಚಿಂತಿಸೋಣ. ನಾವೆಲ್ಲಾ ಒಂದು ಮತ್ತು ನಾವೆಲ್ಲಾ ವಿಶ್ವದಲ್ಲಿನ ಎಲ್ಲಾ ಚರಾಚರ ವಸ್ತುಗಳ ಜಾಲದ ಒಂದು ಎಳೆ ಎಂಬುದನ್ನು ಮನದಟ್ಟು ಮಾಡಿಕೊಳ್ಳೋಣ. ನಾವು ಇನ್ನೊಂದು ಚೇತನಕ್ಕೆ ಕೊಡುವ ಯಾವುದೇ ರೀತಿಯ ನೋವು, ವಿಶ್ವ ಚೈತನ್ಯದಲ್ಲಿ ದಾಖಲಾಗುತ್ತದೆಂಬುದನ್ನು ನೆನಪಿನಲ್ಲಿಟ್ಟುಕೊಂಡು, ಈ ಸಮಷ್ಟಿಯ ಸಾಮರಸ್ಯಕ್ಕೆ ಧಕ್ಕೆಯಾಗದಂತೆ ಆದಷ್ಟು ಪ್ರಯತ್ನಿಸಿ, ಬಾಳೋಣ!!

ಬದುಕಿನ ಆಸರೆ

(ಕೋವಿಡ್ ನಿಜ ಕಥನ)

ಅರ್ಚನಾ ಆಚಾರ್ಯ, ನ್ಯೂ ಜೆರ್ಸಿ

78 ದಿನಗಳು.....

ಮೇರಿ ತನ್ನ ಪತಿ, ಮಗಳು, ಮೊಮ್ಮಕ್ಕಳನ್ನು ಮುಖತ: ಭೇಟಿಯಾಗದೇ ಜೂನ್‌ಗೆ 78 ದಿನಗಳಾಗಿದ್ದವು. ಮೇರಿಯಂತೆ, ನ್ಯೂ ಜೆರ್ಸಿಯ ನರ್ಸಿಂಗ್ ಹೋಮ್‌ಗಳಲ್ಲಿ ವಾಸಿಸುತ್ತಿದ್ದ ಹಲವಾರು ವಯೋವೃದ್ಧರು ಕಳೆದ ಬಾರಿ ತಮ್ಮ ಕುಟುಂಬದವರೊಂದಿಗೆ ಭೇಟಿಯಾಗಿದ್ದು ಮಾರ್ಚ್ ತಿಂಗಳಲ್ಲೇ.

ಕೋವಿಡ್ - 19ನ ಕಾರ್ಮೋಡ ವಿಶ್ವದಾದ್ಯಂತ ಹಬ್ಬಿ ಅಮೇರಿಕಾಗೆ ತಲುಪಿದಾಗ, ಎಲ್ಲೆಲ್ಲೂ ಆತಂಕ. ಸ್ವೇಚ್ಛೆಯಿಂದ ಓಡಾಡುವುದಕ್ಕೆ ದೇಶಾದ್ಯಂತ ನಿರ್ಬಂಧ ಹೂಡಿದ್ದಾಗ, ಅವಶ್ಯವೆನಿಸಿದ ವ್ಯವಹಾರಗಳು, ದಿನಸಿ ಅಂಗಡಿ, ಆಸ್ಪತ್ರೆಗಳು ಯಥಾಪ್ರಕಾರ ನಡೆಯುತ್ತಿದ್ದರೂ, ಇನ್ನುಳಿದವರು ತಮ್ಮ ತಮ್ಮ ಮನೆಯಲ್ಲಿದ್ದು ಕಳೆದರು. ಅಂತೆಯೇ, ನರ್ಸಿಂಗ್ ಹೋಮ್‌ಗಳಲ್ಲಿ ಅಲ್ಲಿನ ಉದ್ಯೋಗಿಗಳ ಹೊರತಾಗಿ, ಯಾರೂ ಒಳಗೆ ಬರಲು ಅನುಮತಿಯಿಲ್ಲ ಎಂದು ಘೋಷಿಸಲಾಯಿತು.

ಪಾರ್ಕಿನ್ಸನ್ ರೋಗದಿಂದ ಬಳಲುತ್ತಿದ್ದ 84ವರ್ಷದ ಮೇರಿಗೆ, ತನ್ನ ಮನೆಯಲ್ಲಿ ಕ್ರಮೇಣ ದಿನನಿತ್ಯದ ಆಗುಹೋಗುಗಳ ಬಗ್ಗೆ ನಿಗಾ ಇಡಲು ಕಠಿಣವಾದಾಗ, 2019ರಲ್ಲಿ, ನರರೋಗ ತಜ್ಞರನ್ನು ಭೇಟಿಯಾದಳು. ಒಂದರ ಮೇಲೊಂದು ಪರೀಕ್ಷೆ ಮಾಡಿ, ಮೇರಿಗೆ ಡಿಮೆಂಶಿಯಾ ಶುರು ಆಗಿದೆ, ಆರಂಭದ ಹಂತದಲ್ಲಿದ್ದಾರೆ ಎಂದು ವೈದ್ಯರು ತಿಳಿಸಿದರು. ಮೇರಿಯ ಪತಿ 86ರ ವಯಸ್ಸಿನ ಜೋಸೆಫ್, ತನ್ನ ಕೈಲಾದಷ್ಟು ಮೇರಿಯ ಆರೈಕೆ ಮಾಡುತ್ತಿದ್ದರು. ಹೀಗೊಮ್ಮೆ, ಮೇರಿ ಸ್ನಾನದ ಕೊಠಡಿಯಲ್ಲಿ ಜಾರಿಬಿದ್ದು, ಸೊಂಟ ಕೀಲಿ ಮುರಿದು, ಶಸ್ತ್ರ ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದರು. ಅಲ್ಲಿ ವೈದ್ಯರೂ, ಕುಟುಂಬದವರು ಸೇರಿ ಮೇರಿಯ ಶುಶ್ರೂಷೆಗಾಗಿ ನರ್ಸಿಂಗ್ ಹೋಮ್ ಉತ್ತಮ ಎಂದು ನಿರ್ಧರಿಸಿದರು.

ಮೊದಮೊದಲಿಗೆ ಗಾಬರಿ, ಆತಂಕ ಆಗಿದ್ದರೂ, ಹೊಸ ಜಾಗ, ಹೊಸ ಜನರು, ಹೊಸ ದಿನಚರಿಗೆ ಹೊಂದಿಕೊಳ್ಳುತ್ತಿರುವಾಗ, ಕೋವಿಡ್ ಶುರುವಾಯಿತು. ಇಲ್ಲಿಂದ ನೇರವಾಗಿ ಲಾಕ್‌ಡೌನ್. ಮೇರಿಯ ದಿನಚರಿ ಅಸ್ತವ್ಯಸ್ತವಾಯಿತು.

ಇಷ್ಟು ದಿನ ವಿಶಾಲವಾದ ಉಪಹಾರ ಕೊಠಡಿಯ ನಿಗದಿತ ಜಾಗದಲ್ಲಿ, ರಾಬರ್ಟ್ ಹಾಗೂ ಜೋಸೆಫಿನ್ ಜೊತೆ ಊಟ ಮಾಡುತ್ತಿದ್ದ ಮೇರಿಗೆ, ತನ್ನದೇ ಕೋಣೆಯೊಳಗೆ ಒಬ್ಬಳೇ ಊಟ ಮಾಡುವುದು; ಪ್ರತಿನಿತ್ಯ ಅಲ್ಲೇ ಇರುವ ಪ್ರಾರ್ಥನಾಮಂದಿರದಲ್ಲಿ ಎಲ್ಲರ ಜೊತೆ, ತನ್ನ ಮನಸ್ಸಿಗೆ ಮುದ ನೀಡುವ ದೇವರ ಪ್ರಾರ್ಥನೆ ಮಾಡುತ್ತಿದ್ದವಳಿಗೆ, ಈಗ ತನ್ನ ಕೊಠಡಿಯಲ್ಲೇ ಧ್ಯಾನ; ಎಲ್ಲರ ಜೊತೆ ಬೆರೆಯಲು ಅವಕಾಶವಿದ್ದ ಬಿಂಗೋ ಆಟವೂ ರದ್ದುಗೊಂಡು ತನ್ನ ಕೊಠಡಿಯೊಳಗೆ ದೂರದರ್ಶನದ ಕಾರ್ಯಕ್ರಮಗಳೇ ರೂಢಿಯಾಗಿ ಬೇಸರ ಬರಲು ಶುರುವಾಯಿತು. ದಿನವೂ ಸಹಾಯ ಮಾಡುತ್ತಿದ್ದ ಪರಿಚಾರಕಿಯರೆಲ್ಲ, ಮಾಸ್ಕ್, ಶೀಲ್ಡ್, ಗೌನ್ ಧರಿಸಿ, ಬಾಹ್ಯಾಕಾಶದಿಂದ ಬಂದಿರುವ ಏಲಿಯನ್ಸ್‌ನಂತೆ ಬಂದು, ಮಾತನಾಡಿಸಿದಾಗ, ಮೊದಲೇ ಶ್ರವಣ ಶಕ್ತಿ ಮಂದವಾಗುತ್ತಿದ್ದ ಮೇರಿಗೆ, ಗೊಂದಲ, ಭಯ ಆಗುವುದು ಸಹಜವಲ್ಲವೇ? ಜೊತೆಗೆ ಪ್ರತಿವಾರ ನಿಯಮಾನುಸಾರವಾಗಿ, ಮೂಗು ಚುಚ್ಚುವ ಕೋವಿಡ್ ಪರೀಕ್ಷೆ ಬೇರೆ ಹಿಂಸೆ.

ಇದಕ್ಕಿಂತ ಮೊದಲು ಜೋಸೆಫ್ ದಿನಾಲೂ ಹತ್ತೂವರೆಗೆ ಅಂದಿನ ದಿನಪತ್ರಿಕೆ ತಂದು, ಮೇರಿಯ ಜೊತೆ ಬಿಂಗೋ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಿ, ಊಟದ ವೇಳೆ ಮೇರಿ ತನಗೆ ಹಸಿವಿಲ್ಲ ಎಂದರೂ ಪ್ರೀತಿಯಿಂದ ಉಣಬಡಿಸಿ, ತಾನೂ ಉಂಡು, ತನ್ನ ವಠಾರದವರ ಸುದ್ದಿ, ಮುಂಬರುವ ಚುನಾವಣೆಯಲ್ಲಿ ಡೆಮೋಕ್ರೆಟಿಕ್ ಅಭ್ಯರ್ಥಿ ಯಾರಿರಬಹುದೋ, ಮೆಡಿಕೇರ್ ಏನಾಗುವುದೋ, ಎಂದೆಲ್ಲ ಸಂಭಾಷಣೆ ನಡೆಸುತ್ತಿದ್ದರು. ಮೇರಿಗೆ ಹೆಚ್ಚಿನದ್ದು ಅರ್ಥವಾಗದಿದ್ದರೂ, ಪದೇ ಪದೇ 'ಜೋಸೆಫ್, ಇನ್ನೇನು ಅಡಿಗೆ ಮುಗಿಸುತ್ತೇನೆ, ಮಕ್ಕಳೀಗ ಶಾಲೆಯಿಂದ ಬರುವ ಹೊತ್ತಾಯಿತು' ಎಂದೆಲ್ಲ ಅನ್ನುತ್ತಿದ್ದರೂ, ಜೋಸೆಫ್ ಹೊರಡುವ ಮುನ್ನ, ಪ್ರೀತಿಯಿಂದ 'ನೀನೀಗ ಮಲಗು, ಅದನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಸಮಜಾಯಿಸಿ ಹೇಳಿದ್ದೂ ಉಂಟು.

ಕೋವಿಡ್ ಶುರುವಾದಾಗಿನಿಂದ, ವಾರಕ್ಕೊಮ್ಮೆ ಫೇಸ್ ಟೈಮ್ ಮಾಡಿ ಅಲ್ಲಿಯ ಸಿಬ್ಬಂದಿಗಳು, ಸಂಬಂಧಿಕರ ಜೊತೆ ಮಾತನಾಡಲು ಅನುಕೂಲ ಮಾಡಿಕೊಡುತ್ತಿದ್ದರು.

ಮೇ10 ರಂದು ಮೇರಿ - ಜೋಸೆಫ್‌ರವರ 62ನೇ ವಿವಾಹ ವಾರ್ಷಿಕೋತ್ಸವವನ್ನು ಬಂಧು ಬಳಗದವರ ಸಮ್ಮುಖದಲ್ಲಿ, ಜೂಮ್ ಮೂಲಕ ಆಚರಿಸಲಾಯಿತು. ದೇಶದೆಲ್ಲೆಡೆ ಇದ್ದ ಮಕ್ಕಳು, ಮೊಮ್ಮಕ್ಕಳು, ಸ್ನೇಹಿತರು, ದಂಪತಿಗಳಿಗೆ ಶುಭ ಹಾರೈಸಿದರು. ಆದರೂ, ತನ್ನ ಗಂಡ ಏಕೆ ತನ್ನನ್ನು ಭೇಟಿಯಾಗಲು ಬರುತ್ತಿಲ್ಲ? ಬಹುಶ: ತನ್ನ ಮೇಲಿನ ಪ್ರೀತಿ ಕಡಿಮೆಯಾಗಿ ಪರಸ್ತ್ರೀಯರನ್ನು ನೋಡುತ್ತಿರಬಹುದು ಎಂಬ ಸಂಶಯ ಕಾಡತೊಡಗಿತು. ಹಾಗೆಯೇ, ಬರಬರುತ್ತಾ ಪರಿಚಿತ ಮುಖಗಳು ಕಾಣದೇ ಇರುವಾಗ, ತನ್ನ ಸಹಚರರಾದ, ರಾಬರ್ಟ್ ಹಾಗೂ ಜೋಸೆಫಿನ್ ಇಬ್ಬರೂ ಕೋವಿಡ್ ನಿಂದಾಗಿ ಭಗವಂತನಲ್ಲಿ ಲೀನರಾದರು ಎಂದು ತಿಳಿದುಬಂದಾಗ ಮರುಗಿದಳು. ಹಾಗಂತ, ಡಿಮೆಂಶಿಯಾದ ಲಕ್ಷಣಗಳು ಹೆಚ್ಚುತ್ತಿದ್ದ ಕಾರಣ, ತಾನು ಯಾಕೆ ಮರುಗಿದೆನು ಎಂದು ಅರಿವಾಗಲಿಲ್ಲ.

ಕೊನೆಗೂ ನ್ಯೂ ಜೆರ್ಸಿಯ ಗವರ್ನರ್ ಮರ್ಫಿ, ಮೇರಿಯ ಮನಸ್ಸಿಗೆ ಮುದ ನೀಡುವ ಸುದ್ದಿ ಘೋಷಿಸಿದರು. ಫಾದರ್ಸ್ ಡೇಯಂದು ನ್ಯೂ ಜೆರ್ಸಿಯಲ್ಲಿ ಎಲ್ಲಾ ನಿಯಮಗಳನ್ನು ಅಳವಡಿಸಿ ಆರು ಅಡಿ ದೂರದಲ್ಲಿ, ಪಾರದರ್ಶಕ ದ್ವಾರದ ಆಚೆ ಈಚೆ ಕುಳಿತು, ತಮ್ಮ ಕುಟುಂಬದವರನ್ನು ಭೇಟಿಮಾಡಲು ಅನುಮತಿ ನೀಡಿದರು. ಇನ್ನೂ ಕೆಲವರು ಕೊಠಡಿಯ ಕಿಟಕಿಯಿಂದ ತಮ್ಮ ಕುಟುಂಬದವರನ್ನು ನೋಡಿ, ದೂರವಾಣಿಯ ಮೂಲಕ ಮಾತನಾಡಿದರು. ಆದರೂ, ಮೇರಿಗೆ ತನ್ನ ಗಂಡ, ಮಗಳು ಯಾಕೆ ತನ್ನ ಕೈ ಸವರಿಸುತ್ತಿಲ್ಲ? ಅವರನ್ನು ಬಿಗಿದಪ್ಪಿಕೊಳ್ಳಲು ಹಾತೊರೆಯುತ್ತಿದ್ದ ಮೇರಿಗೆ, ಅವರಿಬ್ಬರೂ ಅರ್ಧ ಗಂಟೆಯೊಳಗೆ ಹೊರಡಬೇಕಾದಾಗ ಇದೊಂದೂ ಅರ್ಥ ಆಗದೇ ಖಿನ್ನಳಾಗಿ 'ನನಗೆ ಬದುಕಲು ಆಸೆಯಿಲ್ಲ' ಎಂದಳು. ಮಾನಸಿಕ ತಜ್ಞರ ಮಾರ್ಗದರ್ಶನ ಪಡೆಯಲಾರಂಭಿಸಿದಳು. ನೋಡನೋಡುತ್ತಾ, ಅಮೆರಿಕನ್ನರು ಕಾತರದಿಂದ ಮುಂದುಗಾಣುವ 'ಥ್ಯಾಂಕ್ಸ್ ಗಿವಿಂಗ್' ಸಮಯದಲ್ಲಿ, ಮನೆಗೆ ಹೋಗಿ, ಕುಟುಂಬದವರೊಂದಿಗಿರುವ ಅವಕಾಶಕ್ಕಾಗಿ ಹಾತೊರೆಯುತ್ತಿದ್ದಾಳೆ.

ಅತ್ತ ಇನ್ನೊಂದೆಡೆಗೆ .....

ಮಾರ್ಚ್ ಮೊದಲನೇ ವಾರ, ನ್ಯೂ ಜೆರ್ಸಿಯಲ್ಲಿ ಮೊಟ್ಟ ಮೊದಲು ಕೋವಿಡ್ ಪಾಸಿಟಿವ್ ದಾಖಲಾಯಿತು. ನೋಡನೋಡುತ್ತಿದ್ದಂತೆ ಆಸ್ಪತ್ರೆಯಲ್ಲಿ ಎನ್ - 95, ಗೌನ್, ಮಾಸ್ಕ್, ಶೀಲ್ಡಗಳ ಅಭಾವ ಉಂಟಾಗುತ್ತಿದ್ದಂತೆ, ನರ್ಸಿಂಗ್ ಹೋಮ್‌ಗಳಲ್ಲೂ ಈ ಸಾಂಕ್ರಾಮಿಕ ರೋಗದ ಜೊತೆ, ಪಿ.ಪಿ.ಇ.ಗಳ ಅಭಾವ ಉಂಟಾಯಿತು. ಆಗಷ್ಟೇ ಪಾರ್ಶ್ವವಾಯು ಆಗಿ ಆಸ್ಪತ್ರೆಯಿಂದ ಹಿಂದಿರುಗಿ ಬಂದಿದ್ದ ವಿಲ್ಲಿಯಮ್‌ಗೆ, ಫಿಸಿಕಲ್ ಥೆರಪಿಸ್ಟ್, ಆಕ್ಯುಪೇಶನಲ್ ಥೆರಪಿಸ್ಟ್, ಸ್ಪೀಚ್ ಥೆರಪಿಸ್ಟ್,

ಅನ್ಯರನ್ನು ಅಳು ಮಾಡದೆ, ತನ್ನತಾನಾಳಿದರೆ ಅದೇ ಬಿಡುಗಡೆ. —ದ.ರಾ.ಬೇಂದ್ರೆ

ಬದುಕಿನ ಆಸರೆ

(ಕೋವಿಡ್ ನಿಜ ಕಥನ)

ಸೇರಿ, ಸರ್ಜಿಕಲ್ ಮಾಸ್ಕ್ ಧರಿಸಿ ಚಿಕಿತ್ಸೆ ನೀಡುತ್ತಿದ್ದರು. ಸಂಜೆಯೊಳಗೆ ಫಿಸಿಕಲ್ ಥೆರಪಿಸ್ಟ್ ಸ್ಟೀವ್‌ಗೆ ಸುಸ್ತು ಅನ್ನಿಸಿದ್ದರೂ, ಮರುದಿನ ನೆಗಡಿ, ಕೆಮ್ಮು ಶುರುವಾಗಿತ್ತು. ಪರೀಕ್ಷೆ ಮಾಡಿಸಿದಾಗ, ವಿಲ್ಲಿಯಮ್ ಹಾಗೂ ಸ್ಟೀವ್‌ಗೆ ಕೋವಿಡ್ ಪಾಸಿಟಿವ್ ಎಂದು ಖಾತ್ರಿಯಾಯಿತು. ಆಕ್ಯುಪೇಶನಲ್, ಸ್ಪೀಚ್ ಥೆರಪಿಸ್ಟ್ ಹಾಗೂ ವಿಲಿಯಮ್‌ನ ಆರೈಕೆ ಮಾಡಿದ ದಾದಿ/ವೈದ್ಯರು ಎಲ್ಲರೂ 14 ದಿನ ಮನೆಯಲ್ಲಿ ಕ್ವಾರನ್ಟೈನ್ ಮಾಡಿಕೊಳ್ಳಬೇಕಾಯಿತು. ಆದರೆ, ಸ್ಟೀವ್‌ಗೆ, 105 ಡಿಗ್ರೀ ಜ್ವರ ಏರಿ, ಉಸಿರಾಡಲು ತೊಂದರೆಯಾಗಿ, ಆಸ್ಪತ್ರೆಗೆ ದಾಖಲಾಗಿ ವೆಂಟಿಲೇಟರ್ ಚಿಕಿತ್ಸೆ ಪ್ರಾರಂಭಗೊಂಡಿತು.

ಐದು ದಿನಗಳ ನಂತರ ಎಚ್ಚೆತ್ತಾಗ, ಸ್ಟೀವ್‌ನ ಬಾಯಿಯೊಳಗೆ, ವೆಂಟಿಲೇಟರ್ ಜೋಡಿಸಿದ ನಾಳ ಇದ್ದ ಕಾರಣ, ಮಾತನಾಡಲೂ ಧ್ವನಿ ಹೊರ ಬರುತ್ತಿಲ್ಲ. ಇಂದು ಯಾವ ದಿನ? ತಾನೆಲ್ಲಿದ್ದೇನೆ? ಒಂದೂ ನೆನಪಾಗಲಿಲ್ಲ. ಸುತ್ತಲೂ ವಿವಿಧ ಯಂತ್ರಗಳು. ಬೀಪ್ ಬೀಪ್ ಶಬ್ದ ಮಾಡುತ್ತಿದ್ದವು. ಎಂಟನೇ ದಿನಕ್ಕೆ ವೆಂಟಿಲೇಟರ್ ಇಲ್ಲದೇ, ಸ್ಟೀವ್, ಕೇವಲ ಮೂಗುದಾರದಂತಿರುವ ಆಮ್ಲಜನಕ ನಾಳದಲ್ಲಿ ಉಸಿರಾಡಲು ಪ್ರಾರಂಭಿಸಿದನು.. ರೀಹ್ಯಾಬ್ ಕೋಣೆಯಲ್ಲಿ ಫಿಸಿಕಲ್ ಥೆರಪಿಸ್ಟ್ ಜೊತೆ 5 ಹೆಜ್ಜೆ ಇಡುವುದರೊಳಗೆ ಉಸಿರಾಡಲು ಕಷ್ಟವಾಗಿ, ಆಮ್ಲಜನಕ ಹೆಚ್ಚಿಸಬೇಕಾಗಿ ಬಂತು. ಧ್ವನಿಪೆಟ್ಟಿಗೆಗೆ ಆದ ಏಟಿನಿಂದ, ಸ್ಪೀಚ್ ಥೆರಪಿಯ ಅಗತ್ಯ ಬಂತು. ಹೀಗೇ, ನಿರಂತರ ವ್ಯಾಯಾಮ, ಆರೈಕೆಯಿಂದಾಗಿ, ಸ್ಟೀವ್ ಎರಡು ವಾರದಲ್ಲಿ ಮನೆಗೆ ಹೋಗುವಂತಾಯಿತು. ಒಂದು ತಿಂಗಳು ಕಳೆದು ಪುನ: ಕೆಲಸಕ್ಕೆ ಹಾಜರಾದನು.

ಆದರೂ, ದಿನವಿಡೀ ದೈಹಿಕವಾಗಿ ಸುಸ್ತಾಗುವುದಕ್ಕಿಂತ, ಮನಸ್ಸು ದುರ್ಬಲವಾಗುತ್ತಿದ್ದಂತೆನಿಸಿತ್ತು. ಇತರ ಕೋವಿಡ್ ರೋಗಿಗಳಿಗೆ ಎನ್ - 95 ಹಾಕಿಕೊಂಡು, ಥೆರಪಿ ನೀಡುವಾಗ, ತಾನೂ ಉಸಿರಾಡಲು ಕಷ್ಟಪಟ್ಟನು. ಹೆಚ್ಚು ಕೆಲಸ ಮಾಡಲು ಬೇಸರ, ಅರೆಮರೆವು. ಸಂಜೆ ಮನೆಗೆ ಬಂದರೆ ಸೋಫಾದಲ್ಲಿ ಗಂಟೆಗಟ್ಟಲೆ ಕುಳಿತುಕೊಂಡಿರುತ್ತಿದ್ದ. ದೂರದರ್ಶನದಲ್ಲಿ ತನಗೆ ಇಷ್ಟವಾದ ಜೆಪರ್ಡಿಯ ಸುಲಭವಾದ ಪ್ರಶ್ನೆಗಳಿಗೂ ಉತ್ತರ ನೀಡಲು ಕಷ್ಟವಾಗುತ್ತಿತ್ತು. ರಾತ್ರಿ ಮಲಗಿದರೆ, ತಾನೆಲ್ಲಿ ಚಿರ ನಿದ್ರಾವಸ್ಥೆಯನ್ನು ತಲುಪುವೆನೋ ಎಂಬ ಭಯ; ಬೆನ್ನ ಮೇಲೆ ಮಲಗಿದರೆ, ಎದೆಯ ಮೇಲೆ ಬಂಡೆಕಲ್ಲಿಟ್ಟ ಅನುಭವ; ಮೇಲೆ ಮಲಗಿದರೆ, ಎದೆಯ ಮೇಲೆ ಬಂಡೆಕಲ್ಲಿಟ್ಟ ಅನುಭವ; ರಾತ್ರಿ ಕನಸಿನಲ್ಲೂ 'ಬೀಪ್, ಬೀಪ್' ಶಬ್ದಗಳು; ತನ್ನನ್ನು ಹಗ್ಗದಿಂದ ಬಿಗಿದು ಉಸಿರುಕಟ್ಟಿದ್ದು; ತನ್ನ ಮಂಚದ ಸುತ್ತ ನೆರಳುಗಳು ಯಾವ ಸಮಯದಲ್ಲೂ ತಾನು ಸಾಯಬಹುದು ಎಂದು ಕಾಯುತ್ತಿರುವಂತೆ, ವಿಚಿತ್ರ ಕನಸುಗಳು. ಇವೆಲ್ಲದರ ಜೊತೆ ಸ್ಟೀವ್‌ನ ರೋಗ/ವ್ಯಾಧಿಗಳ ಪಟ್ಟಿಗೆ ಇನ್ಸೋಮ್ನಿಯಾ (ನಿದ್ರಾ ಹೀನತೆ) ಸೇರಿಕೊಂಡಿತು. ಸ್ಟೀವ್‌ನ ಅಮ್ಮ, ಸ್ಟೀವ್‌ಗೆ ಇಷ್ಟವಾದ ಮೀನಿನ ಅಡುಗೆ ತಯಾರಿಸಿದರೂ, ಅಡಿಗೆಯ ವಾಸನೆಯನ್ನೂ ಗ್ರಹಿಸಲು ಅಸಾಧ್ಯವಾದಾಗ, ತನ್ನ ನೆಚ್ಚಿನ ಅಡಿಗೆಯ ರುಚಿಯನ್ನು ಆಸ್ವಾದಿಸುವುದು ಎಲ್ಲಿಂದ ಸಾಧ್ಯ? ಇಷ್ಟು ವರ್ಷ ದಂತ ವೈದ್ಯರಿಂದ, 'ಮುತ್ತಿನಂತ ಹಲ್ಲು' ಎಂದೆನ್ನಿಸಿಕೊಳ್ಳುತ್ತಿದ್ದ ಸ್ಟೀವ್ ಕೋವಿಡ್ ನಂತರ ಆಗ್ಗಾಗ್ಗೆ, ಹಲ್ಲು ನೋವಿನಿಂದ ಬಳಲುತ್ತಿದ್ದಾಗ, ದಂತವೈದ್ಯರು, 'ಇಷ್ಟರವರೆಗೆ ಇದು ಕೋವಿಡ್ ರೋಗಚಿಹ್ನೆಯಾಗಿರಲಿಲ್ಲ; ಈಗ ಕೆಲವರು ಅದನ್ನು ತಮ್ಮ 'ಕೇಸ್ - ಸ್ಟಡಿಗಳಲ್ಲಿ' ಉಲ್ಲೇಖಿಸಿದ್ದಾರೆ' ಎಂದು ತಿಳಿಸಿದರು. ವೈದ್ಯರೆಂದರು, ಇತ್ತೀಚೆಗೆ, ಈ ಹೊಸ ರೋಗಲಕ್ಷಣಗಳನ್ನು, "ಪೋಸ್ಟ್ ಇಂಟೆನ್ಸಿವ್ ಕೇರ್ ಸಿಂಡ್ರೋಮ್(PICS)" ಎಂದು ಪರಿಗಣಿಸಿದ್ದಾರೆ. ಶೋಚನೀಯವಾದ ವಿಷಯ ಏನೆಂದರೆ, ಇದು ಒಂದು ಮಾನಸಿಕ ರೋಗ ಎಂದು ಪರಿಗಣಿಸಲ್ಪಡುವವರೆಗೆ ಇದಕ್ಕೆ ಯಾವದೇ ಚಿಕಿತ್ಸೆ ಇಲ್ಲ. ನಿಮ್ಮ ರೋಗಲಕ್ಷಣಗಳ ಅನುಸಾರ ಔಷಧಿ ಕೊಡಲಾಗುವುದು'. ಆದರೆ, ಸ್ಟೀವ್ ಇನ್ನೂ ಹೆಚ್ಚಿನ ಔಷಧಿಯನ್ನು ತೆಗೆದುಕೊಳ್ಳಲು ಹಿಂಜರಿಯುತ್ತಿದ್ದಾನೆ. ಆದರೂ ಮನದ ಆಳದಲ್ಲಿ, 'ಇನ್ನು ಬದುಕಲು ಆಸೆಯಿಲ್ಲ' ಎಂಬ ಮಾತು ಪ್ರತಿಧ್ವನಿಸುತ್ತಿದೆ.

ಮತ್ತಿನ್ನೊಂದೆಡೆ, ರೇಜೀನಾ ಎಂಬ ನರ್ಸ್, ಇತ್ತೀಚೆಗೆ ಯಾವುದೇ ಕೋವಿಡ್ ರೋಗಿಗಳ ಶುಶ್ರೂಷೆ ಮಾಡದಿದ್ದರೂ, ಪ್ರತೀವಾರ ಮಾಡುತ್ತಿದ್ದ ಕೋವಿಡ್ ಪರೀಕ್ಷೆಯಲ್ಲಿ, ಯಾವುದೇ ರೋಗ ಲಕ್ಷಣಗಳೂ ಇಲ್ಲದೇ, 'ಏಸಿಂಪ್ಟಾಮ್ಯಾಟಿಕ್ ಪಾಸಿಟಿವ್' ಖಾತ್ರಿಯಾಯಿತು. ಕಳೆದ ವಾರ ಸ್ನೇಹಿತೆಯ ಮದುವೆಯಲ್ಲಿ ಆಮಂತ್ರಿತ 10 ಅತಿಥಿಗಳಲ್ಲಿ, ಇವಳೂ ಒಬ್ಬಳು. ಈಗ ಮನೆಯಲ್ಲಿ ಒಬ್ಬಳೇ ಕ್ವಾರಂಟೈನ್ ಮಾಡಿಕೊಳ್ಳುವಂತಾಯಿತು ಸ್ನೇಹಿತರೊಂದಿಗೆ, ಜೂಮ್, ಫೇಸ್ಬುಕ್‌ನಲ್ಲಿ ಕಾಲ ಕಳೆದು, ಹಾಗೋ, ಹೀಗೋ, ಮೂರು ವಾರಗಳ ನಂತರ ಪುನಃ ಕೆಲಸಕ್ಕೆ ಸೇರಿಕೊಂಡಳು. ಕಳೆದ ಇಪ್ಪತ್ತೈದು ವರ್ಷಗಳಿಂದ ಇಷ್ಟಪಟ್ಟು ರೋಗಿಗಳ ಶುಶ್ರೂಷೆಯಲ್ಲಿ ತೊಡಗಿಸಿ - ಕೊಂಡಿದ್ದ ರೆಜೀನಾಳಿಗೆ, ಔಷಧಿಗಳ ಹೆಸರುಗಳಲ್ಲಿ ಗೊಂದಲವಾಗತೊಡಗಿತು.102 ಕೊಠಡಿಯಲ್ಲಿದ್ದ ರೋಗಿಗೆ ತಪ್ಪಿ 104 ಕೊಠಡಿಯ ರೋಗಿಯ ಔಷಧಿಯನ್ನು ಕೊಡಲು ತಯಾರಿ ನಡೆಸುತ್ತಿದ್ದಳು. ತನ್ನ ತಪ್ಪಿನ ಅರಿವಾಗಿ, ಅಂದೇ ರಾಜೀನಾಮೆ ಕೊಡಲು ನಿರ್ಧರಿಸಿದಳು. ತನ್ನಿಂದ ಅಚಾತುರ್ಯ ಆಗಿ, ಇನ್ನೊಬ್ಬರು ಜೀವ ಕಳೆದುಕೊಳ್ಳುತ್ತಿದ್ದರು, ಎಂಬ ಬೇಸರದಲ್ಲಿ 'ಇನ್ನು ಬದುಕಲು ಆಸೆಯಿಲ್ಲ' ಎಂದು ಅನ್ನಿಸಿತು.

ವೈದ್ಯರ ಪ್ರಕಾರ ಕ್ರಮೇಣ ಇದೆಲ್ಲ ಸರಿಯಾಗಬೇಕು. ಆದರೆ, ರೆಜೀನಾ, ಸ್ಟೀವ್, ಮೆರಿಯಂತ ಹಲವಾರು ಮಂದಿ, ಈ ವರ್ಷ, ಈ ಮಾನಸಿಕ ಒತ್ತಡದಿಂದ ಬಳಲಿ ಖಿನ್ನರಾಗಿದ್ದಾರೆ. ಇನ್ನೂ ಕೆಲವರು 'ಇನ್ನು ಬದುಕಲು ಆಸೆಯಿಲ್ಲ' ಎಂಬ ನಿರ್ಧಾರಕ್ಕೆ ಬರುತ್ತಿದ್ದಾರೆ. ನಿದ್ರಾಹೀನತೆ, ಒಂಟಿತನ ಸೋಂಕಿಗೆ ಒಳಗಾಗುವ ಭೀತಿ, ಉದ್ಯೋಗ ಕಡಿತ, ಅನಿಶ್ಚಿತ ಭವಿಷ್ಯ; ಇನ್ನಿತರ ಕಾರಣಗಳಿಂದ ಜನರಲ್ಲಿ ಮಾನಸಿಕ ತುಮುಲ ಹೆಚ್ಚಾಗಿದೆ. ಆತ್ಮಹತ್ಯೆ, ಹಲ್ಲೆ ಪ್ರಕರಣಗಳೂ ವರದಿಯಾಗಿವೆ. ಕೋವಿಡ್ ಪಿಡುಗು ತಾತ್ಕಾಲಿಕ. ಈಗ, ಎರಡನೇ ಸಲ ಪುನರಾವರ್ತಿಸುವ ಸಂಭವ ಇರುವ ಕಾರಣ, ಈ ತುಮುಲವು ಖಿನ್ನತೆಗೆ ತಿರುಗುವ ಮುನ್ನ, ತಮ್ಮನ್ನು ತಾವು ಆಸಕ್ತಿ ಇರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. 'ಇನ್ನು ಬದುಕಲು ಆಸೆಯಿಲ್ಲ' ಅನ್ನುವ ಬದಲು 'ಬದುಕಲು ಆಸೆಯಿದೆ ಇನ್ನೂ' ಎನ್ನುವಂತಾಗಲಿ.

●

ಚಿತ್ರ ಕೃಪೆ :Vecteezy.com

ಕೋವಿಡ್ ಕಷ್ಟಗಳು

ರಘುರಾಂ ರಾಯಸಂ, ನ್ಯೂ ಜೆರ್ಸಿ

ನಿಮ್ಮ ಇಂದ್ರಿಯಗಳನ್ನು ಮತ್ತು ಮನಸ್ಸನ್ನು ನಿಗ್ರಹಿಸಿ ಮತ್ತು ನಿಮ್ಮ ಹೃದಯದಲ್ಲಿ ಭಗವಂತನನ್ನು ನೋಡಿ. —ಶ್ರೀ ಆದಿ ಶಂಕರಾಚಾರ್ಯರು

ಬೃಂದಾವನದ ಸಾರಥಿಗಳು



ನವಚೇತನ

ಬೃಂದಾವನದ ಸಾರಥಿಗಳು

ವಿ. ಪ್ರಸನ್ನ ಕುಮಾರ್

ಉಷಾ ಪ್ರಸನ್ನ

ಮಲ್ಲಿಕ್ ಪ್ರಸಾದ್

ಡಾ. ಅಶೋಕ್ ಕಟ್ಟಿಮನಿ

ನಿಮಗೆ ಬೃಂದಾವನ ಕನ್ನಡ ಸಂಘ ಶುರುಮಾಡಲು ಪ್ರೇರೇಪಿಸಿದ ಕಾರಣಗಳೇನು ?

೧೯೯೬ರಲ್ಲಿ ನಾನು, ಹಾಗು ನನ್ನ ಧರ್ಮಪತ್ನಿ ಉಷಾ ಭಾರತದಿಂದ ಅಮೇರಿಕಾದ ನ್ಯೂಜೆರ್ಸಿಗೆ ಬಂದಾಗ ನಮ್ಮ ಮಕ್ಕಳಾದ ಸ್ನೇಹ ಹಾಗು ಸುಹಾಸರಿಗೆ ೮ ಹಾಗು ೫ ವರ್ಷ ವಯಸ್ಸು. ಮುಂಚಿನಿಂದಲೂ ನಮ್ಮಿಬ್ಬರಿಗೂ ಕನ್ನಡ ಭಾಷೆ, ಕರ್ನಾಟಕದ ಕಲೆ, ಸಾಹಿತ್ಯ, ಸಂಗೀತದಲ್ಲಿ ಅಪಾರವಾದ ಆಸಕ್ತಿ. ಕನ್ನಡ ಕೂಟದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ನಮ್ಮ ಮಕ್ಕಳಿಗೂ 'ಕನ್ನಡ'ದ ಬಗ್ಗೆ ಒಲವು ಬೆಳೆಸಲು ಆಸಕ್ತರಾಗಿದ್ದ ನಮಗೆ, ಆಗ 'ಹತ್ತಿರ'ದಲ್ಲಿ ಇದ್ದಿದ್ದು ನ್ಯೂಯಾರ್ಕ್ ಕನ್ನಡ ಕೂಟ ಮಾತ್ರ. ಒಂದು ೬-೭ ವರ್ಷಗಳ ಕಾಲ ಕನ್ನಡ ಕೂಟಗಳ ಕಾರ್ಯಕ್ರಮದಲ್ಲಿ ಭಾಗವಹಿಸಲು ಸುಮಾರು ೨ ಘಂಟೆ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿ ನ್ಯೂಯಾರ್ಕ್ ಕನ್ನಡ ಕೂಟದದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆವು. ಇದು ಚೆನ್ನಾಗಿದ್ದರು ಕೂಡ ಸಾಕಷ್ಟು ಕಷ್ಟಕರವಾಗತೊಡಗಿತು. ಸುಮಾರು ೨೦೦೩-೦೪ ರಲ್ಲಿ ಉಷಾ ಹಾಗು ನನಗೆ, ಮತ್ತು ವಸಂತ ಹಾಗು ಶಶಿರಾಜ್ ಅವರಿಗೆ "ನಮ್ಮ ನ್ಯೂ ಜೆರ್ಸಿಯಲ್ಲೆ ಯಾಕೆ ಒಂದು ಕನ್ನಡ ಕೂಟವನ್ನು ಪ್ರಾರಂಭಿಸಬಾರದು" ಎಂಬ ಯೋಚನೆ ಬಂದಾಗ, ಒಂದು ಹತ್ತು ಮಂದಿ ಸ್ನೇಹಿತರೊಡನೆ ಸೇರಿಕೊಂಡು ದಿನಗಟ್ಟಲೆ ಸಂಘದ ರೂಪು ರೇಖೆಗಳ ಬಗ್ಗೆ ಚರ್ಚೆ ಮಾಡಿ ಬಲವಾದ 'ಅಡಿಪಾಯ' ಹಾಕಿ 'ನವಮಾಸಗಳು' ಟೊಂಕ ಕಟ್ಟಿ ಸಂವಿಧಾನವನ್ನು ರಚಿಸಿ ಡಿಸೆಂಬರ್ ೨೦೦೪ ರಲ್ಲಿ ಉಗಮವಾಗಿದ್ದುದೇ 'ಸುಮಧುರ ಸ್ನೇಹ ಸಮ್ಮಿಲನ' ನಮ್ಮೀ 'ಬೃಂದಾವನ'.

ನಾವು ನ್ಯೂ ಜೆರ್ಸಿಗೆ ಬಂದಾಗ ಇಲ್ಲಿ ಯಾವ ಕನ್ನಡ ಕೂಟವೂ ಇರಲಿಲ್ಲ. ನಮಗೆ ಆಗ ನ್ಯೂಯಾರ್ಕ್ ಕನ್ನಡ ಕೂಟದ ಬಗ್ಗೆ ತಿಳಿದಿತ್ತು. ಸುಮಾರು ಎಂಟು ವರುಷ ಅಲ್ಲಿಗೆ ಹೋಗುತ್ತಿದ್ವಿ. ಪ್ರತಿಸಲ ಹೋಗುವಾಗ ಮೂರರಿಂದ ನಾಲ್ಕು ಗಂಟೆ ಕಾರಿನ ಪ್ರಯಾಣ ಸಾಕಾಗಿ ಹೋಗೋದು. ಟ್ರಾಫಿಕ್‌ನಲ್ಲಿ ಮಕ್ಕಳಿಗೆ ಅವರು ಭಾಗವಹಿಸುವ ಕಾರ್ಯಕ್ರಮಕ್ಕೆ ಅಭ್ಯಾಸ ಮಾಡಿಸುವುದು, ಬಾತ್ರೂಮಿಗೆ ಒದ್ದಾಡೋದು ಎಲ್ಲ ಕಷ್ಟವಾಗುತ್ತಿತ್ತು. ಆಗ ಅನ್ನಿಸುತ್ತಿದ್ದದ್ದು "ನಾವೇ ಯಾಕೆ ಕನ್ನಡ ಕೂಟ ಶುರುಮಾಡಬಾರದು" ಅಂತ. ಅದಕ್ಕೆ ಕಾಕತಾಳೀಯ ಎಂಬಂತೆ ನಮ್ಮ ಸ್ನೇಹಿತರೊಬ್ಬರು ಬೆಂಗಳೂರಿಗೆ ಮರಳುತ್ತಿದ್ದರು ಅಂತ ಒಂದು ಇಡೀ ದಿವಸ ಅವರನ್ನು ರಂಜಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ್ದೆವು. ಅದು ಕನ್ನಡ ಕೂಟದ ಕನಸು ನನಸಾಗಲು ಕಾರಣವಾಯ್ತು. ನಾವು ಕನ್ನಡ ಕೂಟ ಶುರುಮಾಡಲು ಆಸೆ ಎನೋ ಪಟ್ಟಿ, ಆದರೆ ಯಾರು ನಮ್ಮ ಜೊತೆ ಕೈ ಜೋಡಿಸುತ್ತಾರೆ ಅಂತ ಯೋಚಿಸಿದಾಗ ನಮ್ಮ ಸ್ನೇಹಿತರ ಸಹಾಯ ದೂರಕಿತು. ಶುರುವಿನಲ್ಲಿ ನಾನು, ಪ್ರಸನ್ನ, ವಸಂತ ಹಾಗು ಶಶಿರಾಜ್ ಸೇರಿಕೊಂಡು ನಮ್ಮ ಬೃಂದಾವನ ಹೀಗಿರಬೇಕು ಅಂತ ನೀಲಿನಕ್ಷೆ ಹಾಕಿದ್ವಿ. ಅಲ್ಲಿಂದ ಪ್ರಾರಂಭವಾಯಿತು ನಮ್ಮ ಕನ್ನಡ ಸಂಘ.

೨೦೦೬ರಲ್ಲಿ ಅಮೇರಿಕಾಗೆ ನಾನು ಸಂಸಾರದೊಂದಿಗೆ ಬಂದಿಳಿದಿದ್ದು ರಿಚ್ಮಂಡ್, ವರ್ಜೀನಿಯದಲ್ಲಿ. ಅಮೇರಿಕಾ ಕನ್ನಡ ಮಿತ್ರರ ನಂಟು ರಿಚ್ಮಂಡ್ ಕನ್ನಡ ಸಂಘದೊಂದಿಗೆ ಶುರುವಾಯಿತು. ೨೦೧೦ ನ್ಯೂ ಜೆರ್ಸಿ ವರ್ಗಾವಣೆಯೊಂದಿಗೆ, ಬೃಂದಾವನ ಗಣೇಶ ಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ಸ್ಫೂರ್ತಿ" ತಂಡದ ಉಷಾ ಮತ್ತು ಹಲವಾರು ಕನ್ನಡ ಮಿತ್ರರ ಪರಿಚಯವಾಯಿತು. ಬೃಂದಾವನ ಮಿತ್ರರ ಕನ್ನಡ ಉತ್ಸಾಹ ನೋಡಿ, ೨೦೧೧-೧೨ ಸಂತೋಷ್ ಕಡ್ಲೆಬೇಳೆ ನೇತೃತ್ವದ ಮೈತ್ರಿ ತಂಡದ ಬೃಂದಾವನ ಕಾರ್ಯಕಾರಿ ಸಮಿತಿಯಲ್ಲಿ ಸವಿ ಭೋಜನ ಸವಿಯಬೇಕೆಂಬ ಅಭಿಲಾಷೆ, ಪ್ರೇರಣೆಯೊಂದಿಗೆ ಊಟದ ಜವಾಬ್ದಾರಿಯೊಂದಿಗೆ ಶುರುವಾಯಿತು ನನ್ನ ಮತ್ತು ಬೃಂದಾವನದ ನಂಟು!



ಬೃಂದಾವನದ ಪ್ರಾರಂಭದಲ್ಲಿ ಕಟ್ಟಿದ ಕನಸು, ನಡೆದು ಬಂದ ದಾರಿ, 'ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ' ಎಂಬ ನುಡಿಗಟ್ಟು, ನಮಗೆಲ್ಲ ಎಂದೆಂದಿಗೂ ಸ್ಫೂರ್ತಿ. ಬೃಂದಾವನದ 7ನೇ ಅವಧಿಯ ಅಧ್ಯಕ್ಷತೆಯ ಜವಾಬ್ದಾರಿ ವಹಿಸಿಕೊಂಡ ಹಿನ್ನಲೆಯಲ್ಲಿ, ಹಿಂದಿನ ತಂಡಗಳೊಂದಿಗೆ ಕಾರ್ಯ ನಿರ್ವಹಿಸಿದ ಅನುಭವ, ನ್ಯೂ ಜೆರ್ಸಿ ಕನ್ನಡ ಸ್ನೇಹಿತರ ಅಭಿಮಾನವಿತ್ತು. ಸಾಂಸ್ಕೃತಿಕ ನಿರ್ದೇಶಕನಾಗಿ ಮತ್ತು ಕಾರ್ಯದರ್ಶಿಯಾಗಿ ಪಡೆದ ಅನುಭವಗಳು ಅಭಿಮಾನಿ ತಂಡದೊಂದಿಗೆ ಅಧ್ಯಕ್ಷನ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಲು ಸಹಾಯವಾದವು. ಇದರೊಂದಿಗೆ ಬೃಂದಾವನದ ವಿಶ್ವಸ್ಥ ಮಂಡಳಿ, ಹಿಂದಿನ ಅಧ್ಯಕ್ಷರ ಸಂಪೂರ್ಣ ಬೆಂಬಲ, ಮಾರ್ಗದರ್ಶನ ಬೆನ್ನೆಲುಬಾಗಿ ನಿಂತವು.

ಮಾತಿನ ಬೆಲೆ ತಿಳಿದವರು ಹೃದಯದ ತಕ್ಕಡಿಯಲ್ಲಿ ತೂಗಿ ಅನಂತರ ಬಾಯಿಂದ ಹೊರಗೆ ಹಾಕುತ್ತಾರೆ -ಸಂತ್ ಕಬೀರ ದಾಸ

ಬೃಂದಾವನದ ಸಾರಥಿಗಳು

ಬೃಂದಾವನ ಕನ್ನಡ ಸಂಘ ಪ್ರಾರಂಭದ ದಿನಗಳಲ್ಲಿ ನೀವು ಎದುರಿಸಿದ ಸವಾಲು ಅಥವಾ ಅಡಚಣೆಗಳೇನು ?

ನಮ್ಮ ಬೃಂದಾವನ ಕನ್ನಡ ಕೂಟದ ಪ್ರಾರಂಭದ ದಿನಗಳಲ್ಲಿ ನಮಗೆ ಬಂದ ದೊಡ್ಡ ಸಂಕಷ್ಟವೆಂದರೆ ಸಂಘದ ಬಗ್ಗೆ ಪ್ರಚಾರ. ಇಂದಿನ ದಿನಗಳಂತೆ ೨೦೦೪-೦೫ ರಲ್ಲಿ ಈ ಸಾಮಾಜಿಕ ಜಾಲತಾಣಗಳ ಸೌಕರ್ಯವಾಗಲಿ, ವಾಟ್ಸಾಪ್ ಆಗಲಿ ಇರಲಿಲ್ಲ. ಮಿಂಚಂಚೆ ಒಂದೇ ಪ್ರಚಾರಕ್ಕೆ ದೊರೆತ ವಾಹಿನಿಯಾಗಿತ್ತು. ಹಾಗಾಗಿ ಸದಸ್ಯರನ್ನು ಸಂಘಟಿಸುವುದು ಕಷ್ಟಕರವಾಗಿತ್ತು. ಸ್ನೇಹಿತರು ಹಾಗು ಕನ್ನಡ ಪ್ರೇಮಿಗಳಿಗೆ ಈ ನವಜಾತ ಶಿಶುವನ್ನು ಪರಿಚಯಿಸಲು ತುಂಬಾನೇ ಕಷ್ಟಪಡಬೇಕಾಯ್ತು. ಆದ್ರೆ ನನ್ನ ಕಾರ್ಯಕಾರಿ ಸಮಿತಿಯ ಎಲ್ಲರಿಗೂ ಎಲ್ಲಿಲ್ಲದ ಉತ್ಸಾಹ. ಹಾಗಾಗಿ ಸ್ಥಾಪಕ ಅಧ್ಯಕ್ಷನಾಗಿದ್ದ ನನ್ನ ೨ ವರ್ಷದ ಅವಧಿಯಲ್ಲಿ ಸುಮಾರು ೨೦೦ ಕುಟುಂಬಗಳ ಸದಸ್ಯತ್ವವನ್ನು ಪಡೆಯಲು ಸಾಧ್ಯವಾಯಿತು.

ಮನೆಗೆ ಹೊಸ ಕೂಸು ಬಂದಾಗ ಹೇಗೆ ಕಾತುರ ಪಡುತ್ತೀವೊ ಹಾಗೆ ಇತ್ತು. ಇದು ಹೀಗೆ ಮಾಡಿದರೆ ಸರಿನಾ ಅಥವ ಅದು ಹಾಗೆ ಮಾಡಿದರೆ ವಾಸಿನೋ ಅನ್ನೋ ಗೊಂದಲ. ಸದಸ್ಯರನ್ನು ಹೇಗೆ ಸೇರಿಸುವುದು, ಅವರಿಗೆ ಸಿಗುವ ಅನುಭವವಾದರು ಹೇಗಿರಬೇಕು, ಮುಖ್ಯವಾಗಿ ನಮ್ಮ ಮಕ್ಕಳಿಗೆ ಒಂದು ವೇದಿಕೆ ರೂಪಿಸಿ ನಮ್ಮ ನಾಡು ನುಡಿಯ ಬಗ್ಗೆ ತಿಳಿಸುವುದು ನಮ್ಮ ಮೊದಲ ಗುರಿಯಾಗಿತ್ತು. ಏಳುಬೀಳುಗಳೊಂದಿಗೆ ಸ್ವಲ್ಪ ಸ್ವಲ್ಪವಾಗಿ ಎಲ್ಲರೀತಿಯ ಪ್ರಯತ್ನದಿಂದ ಹಂತಹಂತವಾಗಿ ನಮ್ಮ ಕನಸು ನನಸಾಗುವಲ್ಲಿ ಯಶಸ್ವಿಯಾದೆವು.

ನನ್ನ ಮತ್ತು ಬೃಂದಾವನದ ಅನುಬಂಧ ಶುರುವಾಗಿದ್ದು ೨೦೧೦ರಲ್ಲಿ. ೨೦೧೧ - ೧೨ ಮೈತ್ರಿ ತಂಡದಲ್ಲಿ ಎಲ್ಲರಿಗೂ ಸವಿ ಭೋಜನ ಉಣ ಬಡಿಸಿ ಹಲವಾರು ಮಿತ್ರರ ಪರಿಚಯ, ೨೦೧೩ - ೧೪ "ಸಂಭ್ರಮ" ತಂಡದಲ್ಲಿ ಕಾರ್ಯದರ್ಶಿಯಾಗಿ ಬೃಂದಾವನ ಕಾರ್ಯವೈಖರಿಯ ಹತ್ತಿರದ ಪರಿಚಯ. ೨೦೧೫ ಬೃಂದಾವನ ಅಧ್ಯಕ್ಷರಾಗಿ ಜವಾಬ್ದಾರಿ ದಶಮಾನೋತ್ಸವ ನಂತರ ಏನು ಏನು? ಎಂಬ ಪ್ರಶ್ನೆ ನನಗೆ ತುಂಬಾ ಕಾಡಿತು. ಹೊಸ ಆಯಾಮಕ್ಕಾಗಿ ಹಾತೊರೆದು "ಕಾರ್ಯಕ್ರಮ" ಗಳಿಂದ "ಚಟುವಟಿಕೆ"ಗಳ ಕಡೆಗೆ ಶುರುವಾಯಿತು ೨೦೧೫ - ೧೬ ರಿಂದ ಬೃಂದಾವನ ಮಿಲನ ತಂಡದೊಡನೆ ಪಯಣ! ಮಿಲನ ತಂಡ ಹಮ್ಮಿಕೊಂಡ ಹೊಸ ಚಟುವಟಿಕೆಗಳು—ಬೃಂದಾವನ ಕನ್ನಡ ಶಾಲೆ, ಯುವ ಬೃಂದಾವನ, ಬೃಂದಾವನ ಅಕ್ಷರ ಭಂಡಾರ, ಸಾಹಿತ್ಯ ಬೃಂದಾವನ, ಬೃಂದಾವನ ದ್ವೈಮಾಸಿಕ ವಾಹಿನಿ, ಬೃಂದಾವನ ವಾಣಿ. ಈ ಎಲ್ಲಾ ಹೊಸ ಚಟುವಟಿಕೆಗಳು ನೂರಾರು ಕನ್ನಡದ ಕೈ ಮತ್ತು ಮನಸ್ಸು ಜೋಡಿಸುವ ಸೇತುವೆಯಾಗಿ ಮಾರ್ಪಟ್ಟಿತು. ದಶಕ ತುಂಬಿದ ಬೃಂದಾವನದಲ್ಲಿ ಸರಿಯಾದ ಸಮಯಕ್ಕೆ ಹರೆಯ ಉಕ್ಕಿ, ಹೊಸ ಚೇತನ ತುಂಬಿ ಹರಿಯುವಂತಾಯಿತು.

ನ್ಯೂ ಜೆರ್ಸಿಯಲ್ಲಿ ಸಾವಿರಕ್ಕೂ ಮಿಕ್ಕಿ ಕನ್ನಡಿಗರಿದ್ದರೂ ಅವರೆಲ್ಲರನ್ನೂ ನಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅವಶ್ಯಕತೆಯಿತ್ತು. ನಮ್ಮ ಅಭಿಮಾನಿ ತಂಡದ ಮುಖ್ಯ ಗುರಿ ಈ ದಿಸೆಯಲ್ಲಿ ಕೆಲಸ ಮಾಡುವುದಾಗಿತ್ತು. ನಮ್ಮ ಎರಡು ವರ್ಷದ ಅವಧಿಯಲ್ಲಿ ಆ ನಿಗದಿತ ಗುರಿ ತಲುಪಿದೆವು ಎಂದು ಹೇಳಲು ಹೆಮ್ಮೆ ಮತ್ತು ಸಂತೋಷವೆನಿಸುತ್ತಿದೆ. ಈ ಸಾಧನೆಗಳ ಹಿಂದೆ, ಅಭಿಮಾನಿ ತಂಡದ ಸ್ನೇಹಿತರಿದ್ದಾರೆ, ಬೃಂದಾವನ ವಿಶ್ವಸ್ಥ ಮಂಡಳಿಯ ಸದಸ್ಯರಿದ್ದಾರೆ, ಹಿಂದಿನ ಅವಧಿಯ ನಿರ್ದೇಶಕರು, ಅಧ್ಯಕ್ಷರಿದ್ದಾರೆ, ಯುವ ಬೃಂದಾವನದ ಸದಸ್ಯರಿದ್ದಾರೆ, ಸ್ವಯಂ ಸೇವಕ ತಂಡದವರಿದ್ದಾರೆ, ನ್ಯೂ ಜೆರ್ಸಿ ಸಂಗೀತ ನೃತ್ಯ ಕಲಾವಿದರಿದ್ದಾರೆ, ವಿವಿಧ ಕೂಟಗಳಾದ ನಾಸಾ, ವಿ.ಎಸ.ಏನ್.ಎ, ವಿ.ಪಿ.ಎ, ಮಂಗಳೂರು ಕ್ರಿಶ್ಚಿಯನ್ ಅಸೋಸಿಯೇಷನ್, ಕಟ್ಟೇ ಬಾಯ್ಸ್, ತ್ರಿವೇಣಿ, ಪ್ರಸ್ತಾಪ, ಕನ್ನಡ ಸಾಹಿತ್ಯ ಸಂಘಗಳಿದ್ದವು. ನಮ್ಮ ಅವಧಿಯಲ್ಲಿ, ನಾವು ಒತ್ತು ಕೊಟ್ಟಿದ್ದು, ಬೃಂದಾವನದ ಕಾರ್ಯಕ್ರಮಗಳು ಬಹುಕಾಲ ನೆನಪಿನಲ್ಲಿ ಉಳಿಯುವ ಒಂದು ಸುಂದರ ಅನುಭವವಾಗಬೇಕೆಂದು. ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು, ರುಚಿಕಟ್ಟಾದ ಊಟ, ಆಸಕ್ತರಿಗೆಲ್ಲ ಭಾಗವಹಿಸಲು ಅವಕಾಶ. ಇಷ್ಟಾದರೆ ಇನ್ನೇನು ಬೇಕು. ಆಹ್ವಾನಿತ ಕಲಾವಿದರೊಂದಿಗೆ ಸ್ಥಳೀಯ ಕಲಾವಿದರೆಲ್ಲ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸುವ "ಸಮ್ಮಿಲನ" ಪ್ರಯತ್ನ ಎಲ್ಲರ ಮನ ಗೆದ್ದಿತು.

ಬೃಂದಾವನದ ಸಾರಥಿಗಳು

ಎಳೆತನದಿಂದ ಈಗ ಹದಿಹರಯದಲ್ಲಿರುವ ಈ ಸಂಘವನ್ನು ನೋಡಿದರೆ ಯಾವುದಾದರೂ ವ್ಯತ್ಯಾಸಗಳು ಕಾಣುತ್ತೀವೆಯೇ?

ನವಮಾಸಗಳು ನಮ್ಮ ಕನ್ನಡ ಕೂಟದ ಉಗಮಕ್ಕೆ ಸ್ನೇಹಿತರೊಡನೆ ಯೋಜನೆ ಹಾಕಿ, ಡಿಸೆಂಬರ್ ೨೦೦೪ರಲ್ಲಿ ಉದ್ಘಾಟನೆಯಾದ ದಿನದಿಂದ ಇದೀಗ ೧೬ ವರ್ಷದ ಷೋಡಶಿ ಆಗಿರುವ ನಮ್ಮ ಬೃಂದಾವನದ ಬೆಳವಣಿಗೆಯನ್ನು ನೋಡುತ್ತ ಬಂದಿರುವ ನನಗೆ ಇದಕ್ಕಿಂತ ಹೆಮ್ಮೆಯ ವಿಷಯ ಬೇರೊಂದಿಲ್ಲ. ೨೦೦೪ರಲ್ಲಿ ಶುರುವಾದ ನಮ್ಮ ಬೃಂದಾವನ ಕನ್ನಡ ಕೂಟಈಗ ೧೬ ರ ಹರೆಯದ ಕೂಟವಾಗಿರುವಾಗ ಸಾಕಷ್ಟು ಆರೋಗ್ಯಕರ ಬೆಳವಣಿಗೆಗಳನ್ನು ಕಂಡಿದ್ದೇನೆ. ಕನ್ನಡ ಕುಟುಂಬಗಳ ಮಕ್ಕಳಿಗೆ ಕನ್ನಡ ಬಗೆಗಿನ ಆಸಕ್ತಿ ಹುಟ್ಟಿಸಲು ಒಂದು ಪಾಲಿಕೆ, ಕರ್ನಾಟಕದ ಹಾಡು, ನೃತ್ಯ, ನಾಟಕ ಪ್ರದರ್ಶಿಸಲು ಒಂದು ವೇದಿಕೆ ಹಾಗು "ಇದ್ದವರೆಲ್ಲ ಇಲ್ಲದವರಿಗೆ ಸಾಧ್ಯವಾದಷ್ಟು ಸಹಾಯ ಮಾಡುವ ಕೈಂಕರ್ಯ" ಕ್ಕೆ ಪೀಠಿಕೆ ಎಂಬ ಮೂರು ಮೂಲಭೂತ ಸದುದ್ದೇಶಗಳಿಂದ ಪ್ರಾರಂಭವಾದ ನಮ್ಮೀ ಬೃಂದಾವನ, ಈಗ ಸುಮಾರು ೧೫೦ ಮಕ್ಕಳಿಗೆ ಕನ್ನಡ ಕಲಿಸಲು ಆರು 'ಬೃಂದಾವನ ಕನ್ನಡ ಕಲಿಸೋಣ' ಕನ್ನಡ ಶಾಲೆಗಳನ್ನು ತೆರೆದಿರುವುದು, ಯುವ ಪೀಳಿಗೆಯನ್ನು ಕನ್ನಡ ಕೂಟದಲ್ಲಿ ಸಕ್ರಿಯವಾಗಿ ಭಾಗವಹಿಸಲು 'ಯುವ ಬೃಂದಾವನ್' ಸ್ಥಾಪಿಸಿ ಯುವ ಜನಾಂಗಕ್ಕೆ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು, ಕೂಟದ ಬಗೆಗಿನ ವಿಷಯ ತಿಳಿಸಲು ಹಾಗು ಸ್ಥಳೀಯ ಬರಹಗಾರರಿಗೆ ಉತ್ತೇಜಿಸಲು ದ್ವೈಮಾಸಿಕ ಪತ್ರಿಕೆ 'ಬೃಂದಾವನ ವಾಣಿ' ಯನ್ನು ಆರಂಭಿಸಿದ್ದು, ಕನ್ನಡ ಸಾಹಿತ್ಯವನ್ನು ಇಲ್ಲಿ ಹೆಚ್ಚು ಮನೆಗಳಿಗೆ ತಲುಪಿಸಲು 'ಸಾಹಿತ್ಯ ಬೃಂದಾವನ' ನಡೆಸುತ್ತಿರುವುದನ್ನು ನೋಡಿದರೆ, ನಮ್ಮೀ ಬೃಂದಾವನ ನೂರಾರು ವರುಷ ಕಾಲ ಚೆನ್ನಾಗಿ ಬಾಳಿ ವಿಜೃಂಭಿಸುವುದರಲ್ಲಿ ಸಂಶಯವೇ ಇಲ್ಲ. ಈ ನಿಟ್ಟಿನಲ್ಲಿ, ನನ್ನ ನಂತರ ಅಧ್ಯಕ್ಷರಾಗಿ ಬೃಂದಾವನದ ಚುಕ್ಕಾಣಿಯನ್ನು ಹಿಡಿದು ನಡೆಸಿದ ವಸಂತ ಶಶಿ, ಉಷಾ ಪ್ರಸನ್ನ ಕುಮಾರ್ (೨ ಬಾರಿ), ದಿವಂಗತ ಸಂತೊಷ್ ಕುಮಾರ್ ಕಡ್ಲೇಬೇಳೆ, ಮಲ್ಲಿಕ್ ಪ್ರಸಾದ್, ಡಾ. ಅಶೋಕ್ ಕಟ್ಟೇಮನಿ ಹಾಗು ಸತೀಶ್ ಹೊಸನಗರ ಹಾಗು ಅವರ ಕಾರ್ಯಕಾರಿ ಸಮಿತಿಯ ಸೃಜನಶೀಲತೆ, ಸ್ನೇಹಪರತೆ ಹಾಗು ಕಾರ್ಯದಕ್ಷತೆಗೆ ನನ್ನ ಸಾಷ್ಟಾಂಗ ನಮಸ್ಕಾರಗಳು !!!

ನಾವು ಶುರುಮಾಡಿದಾಗ ಕೇವಲ ಒಂದು ಪುಟ್ಟ ಸಸಿಯಾಗಿದ್ದ ಸಂಸ್ಥೆ ಈಗ ಬೆಳೆದು ದೊಡ್ಡ ಮರವಾಗಿ ನೂರಾರು ಸದಸ್ಯರ ಕಲೆಯನ್ನು ಪ್ರದರ್ಶಿಸಿಲು ಅವಕಾಶ ಕಲ್ಪಿಸಿದೆ. ಮಕ್ಕಳು ಕನ್ನಡದಲ್ಲಿ ಮಾತನಾಡಿದಾಗ, ನಾಟಕ, ನೃತ್ಯ, ಹಾಡಿನ ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ ಎಷ್ಟು ಬೆಳೆದಿದೆ ನಮ್ಮ ಬೃಂದಾವನ ಅನ್ನಿಸುತ್ತದೆ. ವಿಧವಿಧವಾದ ಕಾರ್ಯಕ್ರಮ, ಎಲ್ಲಾ ವಯಸ್ಸಿನವರು ಭಾಗವಹಿಸಲು ತೋರುವ ಆಸಕ್ತಿ ನೋಡಿದಾಗ ಹೆಮ್ಮೆ ಅನಿಸುತ್ತದೆ. ಇದರ ಹಿಗ್ಗಳಿಕೆ ಪ್ರತಿಯೊಂದು ಹೊಸ ಸಮಿತಿಯ ಶ್ರಮ.

ಎಳೆ ಹರೆಯದ ಚಟುವಟಿಕೆಗಳಲ್ಲಿ ಎಲ್ಲರೂ ಕೈ ಜೋಡಿಸಿ ಹೊಸ ಆಯಾಮ ಪಡೆದು ಹದಿಹರಯದಲ್ಲಿ ನಿಂತಿರುವ ನಮ್ಮ ಬೃಂದಾವನ ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸವ ಸ್ಫುರದ್ರೂಪಿ ಯುವಕ/ಯುವತಿಯಾಗಿ ನಿಂತಿದೆ! ಆಕರ್ಷಣೆ, ಉತ್ಸಾಹದೊಂದಿಗೆ ೩ ಹೊಸ ಕನ್ನಡ ಶಾಲೆ ಚಾಲ್ತಿಯಾಗಿ ೩೦ಕ್ಕೂ ಹೆಚ್ಚು ಶಾಲಾ ಸ್ವಯಂ ಸೇವಕರು ೨೦೦ಕ್ಕೂ ಹೆಚ್ಚು ನ್ಯೂ ಜೆರ್ಸಿ ಮಕ್ಕಳು ಕನ್ನಡ ಸೊಗಡನ್ನು ಸವಿಯುವಂತಾಗಿದೆ. ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸವಿ ಕನ್ನಡ ಮಾತಾಡುತ್ತಿದ್ದಾರೆ! ಬೃಂದಾವನ ವಾಣಿ, ಅಕ್ಷರ ಭಂಡಾರ, ಸಾಹಿತ್ಯ ಬೃಂದಾವನ ನ್ಯೂಜೆರ್ಸಿಯ ಜಾಣ/ ಜಾಣೆಯರು ಬರಹ ಚಮತ್ಕಾರ ತೋರಿಸುವ ಮತ್ತೊಂದು ಹೊಸ ಕವಲು ಸಿಕ್ಕ ಹಾಗಾಗಿದೆ. ಇದಕ್ಕೆ ಪ್ರಮಾಣವೆಂಬಂತೆ ನ್ಯೂ ಜೆರ್ಸಿಯಿಂದ ಹಲವಾರು ಕನ್ನಡದ ಪುಸ್ತಕ ಪ್ರಕಟಣೆ, ದಿನಪತ್ರಿಕೆ, ಪತ್ರಿಕೆ ಲೇಖನಗಳು, ಟಿವಿ ಯಲ್ಲಿ ಪ್ರಕಟಣೆ! ಇದಲ್ಲದೆ ಕನ್ನಡದಲ್ಲಿ ಬೃಂದಾವನ ವಾಟ್ಸಾಪ್/ಮುಖಪುಸ್ತಕ/ಯೂಟ್ಯೂಬ್ ಜಾಲತಾಣಗಳಲ್ಲಿ ಎಲ್ಲಾ ವೈವಿಧ್ಯ ವಿಷಯಗಳು ಕನ್ನಡದಲ್ಲಿ ನಿರರ್ಗಳ ವಾಗ್ಪಾದ ನಡೆಯುತ್ತಿರುತ್ತದೆ. ಅನಿವಾಸಿ ಕನ್ನಡಿಗನಿಗೆ ನಮ್ಮ ಈ ಹದಿ ಹರೆಯದ ಬೃಂದಾವನ ಪೂರಕವಾಗಿ ನಿಂತಿರುವುದು ಸಂತಸ ತಂದಿದೆ.

ಕಳೆದ ಹದಿನಾರು ವರ್ಷಗಳಲ್ಲಿ ಬೃಂದಾವನ ಅಗಾಧವಾಗಿ ಬೆಳೆದು ನಿಂತಿದೆ. ಇಂದು ನ್ಯೂ ಜೆರ್ಸಿಯ ಎಲ್ಲ ಕನ್ನಡಿಗರ ಜೀವನಾಡಿ ಬೃಂದಾವನ. ತನ್ನ ಶೈಶವಾಸ್ಥೆ ಯಿಂದ ಪ್ರೌಢಾವಸ್ಥೆ ತಳೆದು ಎಲ್ಲ ದಿಕ್ಕಿನಲ್ಲಿ ಪಸರಿಸಿದೆ. ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು, ಎಲ್ಲ ಸದಸ್ಯರಿಗೂ ಒಂದಲ್ಲ ಒಂದು ರೀತಿ ಭಾಗವಹಿಸಲು ಅವಕಾಶಗಳು, ಮಕ್ಕಳೆಲ್ಲ ಕನ್ನಡ ಕಲಿಯಲು ಶಾಲೆಗಳು, ಅವರೆಲ್ಲ ತಮ್ಮ ಸಂಸ್ಕೃತಿ ತಿಳಿಯಲು ಮತ್ತು ಮಾತೃಭಾಷೆ ಕಲಿಯಲು, ಪ್ರತಿಭೆ ಪ್ರದರ್ಶಿಸಲು ಸಾಕಷ್ಟು ಅವಕಾಶಗಳು, ಕೋವಿಡ್ ಸಂದರ್ಭದಲ್ಲಿ ದುಗುಡ ದುಮ್ಮಾನಗಳನ್ನು ಒಟ್ಟಾಗಿ ಹೋರಾಡಲು ನೀಡಿದ ಸಹಕಾರ. ಬೃಂದಾವನ ಇಂದು ನಮ್ಮೆಲ್ಲರ ಹೆಮ್ಮೆಯ ಪ್ರೌಢ ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆದು ನಿಂತಿದೆ.

ಬೃಂದಾವನದ ಸಾರಥಿಗಳು

ನಿಮ್ಮ ನೇತೃತ್ವದಲ್ಲಿ ಕಾರ್ಯಗತ ಮಾಡಿದ ಬೃಂದಾವನ ಸಂಘದ ಯಾವುದಾದರು ಕೆಲಸ ತಮಗೆ ಖುಶಿ ಅಥವ ಹೆಮ್ಮೆ ತಂದಿದೆಯಾ ?

ನನ್ನ ನೇತೃತ್ವದಲ್ಲಿ, ನಮ್ಮ ನ್ಯೂಜೆರ್ಸಿಯಲ್ಲಿ ಒಂದು ಕನ್ನಡ ಸಂಘ ಸ್ಥಾಪನೆಯಾಗಿ ಸುಮರು ೨೦೦ ಕುಟುಂಬಗಳನ್ನು ಒಟ್ಟುಗೂಡಿಸಿದ್ದು ಹಾಗು ಮೊದಲೆರಡು ವರ್ಷದಲ್ಲೇ ಖ್ಯಾತ ಹಿನ್ನಲೆ ಗಾಯಕರಾದ ರಾಜೇಶ್ ಕೃಷ್ಣನ್, ನಿರ್ದೇಶಕರಾದ ಭಾರ್ಗವ, ಸುಗಮ ಸಂಗೀತದ ಹಿರಿಮೆ ರತ್ನಮಾಲ ಪ್ರಕಾಶ್, ಹಾಗೂ ಮಾಲತಿ ಶರ್ಮ ಮತ್ತು ಹಿನ್ನಲೆ ಗಾಯಕಿ ಅಪೂರ್ವ ಶ್ರೀಧರ್ ಮುಂತಾದವರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದೆ ನನಗೆ ಅತ್ಯಂತ ಸಂತಸ ಕೊಟ್ಟ ವಿಷಯ.

ನಾನು ಮೊದಲ ಬಾರಿ ಅಧ್ಯಕ್ಷೆ ಆಗಿದ್ದಾಗ ಸೆಪ್ಟೆಂಬರ್ ೨೦೧೦ರಲ್ಲಿ ನಡೆದ ಆರನೇ 'ಅಕ್ಕ' ವಿಶ್ವ ಸಮ್ಮೇಳನ ನಮ್ಮ 'ಸ್ಫೂರ್ತಿ' ತಂಡದ ಹೆಗ್ಗಳಿಕೆ. ಆಗ ಪರಿಚಯವಾದ ಎಷ್ಟೋ ಕಲಾವಿದರು, ಸಹಾಯ ಮಾಡಿದ ಆತ್ಮೀಯ ಸ್ನೇಹಿತರು. ನನಗೆ ತುಂಬಾ ಸಂತೋಷ ಕೊಟ್ಟ ವಿಷಯ. ಆ ವಿಶ್ವ ಸಮ್ಮೇಳನದಲ್ಲಿ ಬೃಂದಾವನ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಸೇರಿ ಮಾಡಿದ, 'ಬೃಂದಾವನ ನಡೆದು ಬಂದ ದಾರಿ'..ಜೇನುಗೂಡಿನಂತೆ ನಾವೆಲ್ಲರು ಅನ್ನೋ ಹೆಮ್ಮೆ. ೫೦೦ ಜನ ಸ್ಥಳೀಯ ಹಾಗು ಭಾರತದ ಕಲಾವಿದರಿಂದ ಮೂರು ದಿನ ಆರು ವೇದಿಕೆಗಳಲ್ಲಿ ಭಾಗವಹಿಸಿ ಅಮೇರಿಕದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸುಮಾರು ೫೦೦೦ ಜನ ಕನ್ನಡಿಗರು ಒಟ್ಟುಗೂಡಿ ನಕ್ಕು ನಲಿದಾಡಿದ ಈ ಅಕ್ಕ ಸಮ್ಮೇಳನ 'ನ ಭೂತೋ ನ ಭವಿಷ್ಯತಿ' ಅಂತ ಅಕ್ಕ ಚೇರ್ಮನ್ ಅವರೇ ಹೇಳಿದರು. ಈ ಸಮ್ಮೇಳನದಿಂದಾಗಿ ನಮ್ಮ ಐದು ವರ್ಷ ಹರೆಯದ ಬೃಂದಾವನ ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಿತು. ಇದು ಮರೆಯಲಾಗದ ಒಂದು 'ಮೆಗಾ' ಸಮಾರಂಭ ಎಂದರೆ ಉತ್ಪ್ರೇಕ್ಷೆಯಾಗಲಾರದು!! ೨೦೧೦ ರಲ್ಲಿ ನ್ಯೂಜೆರ್ಸಿ ಸರ್ಕಾರಕ್ಕೆ ನಾವು ಸಲ್ಲಿಸಿದ್ದ ಅರ್ಜಿಗೆ, 'ಚಾರಿಟಿ' ಎಂದು ನಮ್ಮ ಬೃಂದಾವನ ಕನ್ನಡ ಕೂಟ ಸಂಸ್ಥೆಗೆ ೫೦೧ (ಸಿ) ೩ ದೊರಕಿದ್ದು ತುಂಬಾ ಖುಷಿ ಕೊಟ್ಟಿತು. ನಾನು ಎರಡನೆಯ ಬಾರಿ ಅಧ್ಯಕ್ಷೆ ಆಗಿದ್ದಾಗ ನಮ್ಮ 'ಸಂಭ್ರಮ' ತಂಡ ೨೦೧೪ ರಲ್ಲಿ ಮಾಡಿದ ಬೃಂದಾವನ 'ದಶಮಾನೋತ್ಸವ' ಕಾರ್ಯಕ್ರಮ. ಸ್ಥಳೀಯ ಕಲಾವಿದರು ಸತತ ೧೨ ಗಂಟೆಯ ಕಾಲ ಅಮೋಘವಾದ ಕಾರ್ಯಕ್ರಮವನ್ನು ಕೊಟ್ಟಿದ್ದು ಅಪಾರ ಸಂತೋಷ ನೀಡಿತು.

೨೦೧೫ ಬೃಂದಾವನ ಅಧ್ಯಕ್ಷರಾಗಿ ಜವಾಬ್ದಾರಿ ಹೊತ್ತು ಹೊಸ ಆಯಾಮಕ್ಕಾಗಿ ಹಾತೊರೆದು "ಕಾರ್ಯಕ್ರಮ"ಗಳಿಂದ "ಚಟುವಟಿಕೆ"ಗಳ ಕಡೆಗೆ ಶುರುವಾದ ಬೃಂದಾವನ ಕನ್ನಡ ಶಾಲೆ, ಯುವ ಬೃಂದಾವನ, ಬೃಂದಾವನ ಅಕ್ಷರ ಭಂಡಾರ, ಸಾಹಿತ್ಯ ಬೃಂದಾವನ, ಬೃಂದಾವನ ದ್ವೈಮಾಸಿಕ ವಾಹಿನಿ - ಬೃಂದಾವನ ವಾಣಿ ೫ ವರುಷದ ಪುಟ ಪುಟ ನಡೆಯುವ ಬಾಲಕನಾಗಿದೆ, ಕನಸು ಸಾಕಾರಗೊಳ್ಳುತ್ತಿದೆ, ಆಶೋತ್ತರಗಳನ್ನು ಹೆಚ್ಚಿಸಿದೆ ಮತ್ತು ಹಲವಾರು ಕನ್ನಡದ ಕೈಂಕರ್ಯಗಳು ಎದ್ದು ನಿಂತಿದೆ! ನವೆಂಬರ್ ೭, ೨೦೧೫ ಸೌತ್ ಬ್ರನ್ಸ್ವಿಕ್ ನಲ್ಲಿ ಜನಿಸಿದ ಮೊದಲ ಕನ್ನಡ ಶಾಲೆ, ಕರೋನ ಸಂಕಷ್ಟದ ನಡುವೆ ಸೆಪ್ಟೆಂಬರ್ ೧೯, ೨೦೨೦ ರಂದು ೬ನೇ ಕನ್ನಡ ಶಾಲೆ ಉದ್ಘಾಟನೆ ತುಂಬಾ ಸಂತಸ ತಂದಿದೆ ! ಇದರ ಹಿಂದಿರುವ ನಮ್ಮ ಕನ್ನಡ ಶಾಲಾ ಸ್ವಯಂ ಸೇವಕರ ಪರಿಶ್ರಮ ಮತ್ತು ಕೈಂಕರ್ಯ ಶ್ಲಾಘನೀಯ.



ಬೃಂದಾವನದ ಹಲವಾರು ಕಾರ್ಯ ಚಟುವಟಿಕೆಗಳು ನನ್ನ ಅನುಭವದಲ್ಲಿ ಹಾಸು ಹೊಕ್ಕಾಗಿವೆ. ಬೃಂದಾವನ ಕನ್ನಡ ಕಲಿಸೋಣ ಅಭಿಯಾನ ಇಂದು ಬೃಹದಾಕಾರವಾಗಿ ಬೆಳೆದು ನಿಂತಿದೆ. ನ್ಯೂ ಜೆರ್ಸಿಯ 120ಕ್ಕೂ ಹೆಚ್ಚು ಮಕ್ಕಳು ಆರು ಶಾಲೆಗಳಲ್ಲಿ ಕನ್ನಡ ಕಲಿಯುತ್ತಿದ್ದಾರೆ. ನಮ್ಮ ಮಾತೃಭಾಷೆಯನ್ನು ಉಳಿಸಲು, ಬೆಳೆಸಲು ಸ್ವಯಂ ಸೇವಕ ಶಿಕ್ಷಕರು ಮಾಡುತ್ತಿರುವ ಕೊಡುಗೆ ನಮಗೆಲ್ಲ ಹೆಮ್ಮೆ. ಅಭಿಮಾನಿ ತಂಡದ ಅವಧಿಯಲ್ಲಿ ಡಾ. ಎಂ ಜಿ ಪ್ರಸಾದರ ಮಾರ್ಗದರ್ಶನದಲ್ಲಿ ಏರ್ಪಡಿಸಿದ್ದ "ಆಧುನಿಕ ಯುಗಕ್ಕೆ ಪ್ರಾಚೀನ ಭಾರತದ ಜ್ಞಾನದ ಕೊಡುಗೆ" ಕಾರ್ಯಕ್ರಮ ನಮ್ಮ ಯುವ ಪೀಳಿಗೆಗೆ ಸ್ಫೂರ್ತಿ ನೀಡಿತು. ಡಾ. ಪ್ರಸಾದರಿದ್ದಿದ್ದರೆ, ಇನ್ನೂ ಹೆಚ್ಚಿನ ಮಹತ್ವ ಪಡೆಯುತ್ತಿತ್ತೇನೋ. ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮ ಕೊಡುವುದರಲ್ಲಿ ನಾವು ಮಾಡಿದ 'ಸಮ್ಮಿಲನ' ಪ್ರಯೋಗ ಒಂದು ದಿಟ್ಟ ಹೆಜ್ಜೆ. ಬೆಂಗಳೂರಿನ ಪ್ರಖ್ಯಾತ ನೃತ್ಯ ಗುರು ಡಾ. ಸಂಜಯ್ ಶಾಂತಾರಾಮ್‌ರವರೊಂದಿಗೆ ನ್ಯೂ ಜೆರ್ಸಿ ಕಲಾವಿದರು ನೆಡೆಸಿಕೊಟ್ಟ 'ಶಿವ ತಾಂಡವ' ಮತ್ತು 'ಕರ್ನಾಟಕ ವೈಭವ' ನೃತ್ಯ ನಾಟಕಗಳು ಎಂದೆಂದಿಗೂ ನೆನೆಪಿನಲ್ಲಿ ಉಳಿಯುತ್ತವೆ.

ಬೃಂದಾವನದ ಸಾರಥಿಗಳು

ಕರೋನ ದಿಂದ ಬದಲಾದ ಪರಿಸ್ಥಿತಿಯಲ್ಲಿ ಬೃಂದಾವನದ ಜವಬ್ದಾರಿ ಹೆಚ್ಚಾಗಿದೆ. ಅದಕ್ಕೆ ನಿಮ್ಮ ಅನಿಸಿಕೆ ಏನು ? ಮುಂದಿನ ತಂಡಕ್ಕೆ ನಿಮ್ಮ ಸಲಹೆ ಏನು?

ಕರೋನ ಹೆಮ್ಮಾರಿ ಪ್ರಪಂಚಕ್ಕೆ ಒಕ್ಕರಿಸಿದ್ದರಿಂದ ನಮ್ಮ ಬೃಂದಾವನ ಕೂಟದ ಹಲವಾರು ಕಾರ್ಯಕ್ರಮಗಳಿಗೆ ಸಾಕಷ್ಟು ಧಕ್ಕೆ ತರಬಹುದು ಅನ್ನುವ ಆತಂಕ ಎಲ್ಲರಲ್ಲೂ ಇತ್ತು. ಆದರೂ, ಬೃಂದಾವನದ 'ಸೌರಭ' ತಂಡದ ಕಾರ್ಯಕಾರಿ ಸಮಿತಿ ಅಂತರ್ಜಾಲದಲ್ಲಿ ಅತ್ಯದ್ಭುತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ನ ಸದಸ್ಯರು ಮನೆಗಳಲ್ಲೇ ಕುಳಿತು ಮನರಂಜನೆ ಹಾಗು ಮನೋವಿಕಾಸಕ್ಕೆ ಅನುವು ಮಾಡಿಕೊಟ್ಟಿದ್ದು ಶ್ಲಾಘನೀಯ. ಜನವರಿ ೨೦೨೧ ರಲ್ಲಿ ಮುಂಬರುವ ಬೃಂದಾವನದ ನೂತನ ಅಧ್ಯಕ್ಷರು ಹಾಗು ಕಾರ್ಯಕಾರಿ ಸಮಿತಿ, 'ಹೈಬ್ರಿಡ್' ಮಾದರಿಯನ್ನು ಅಳವಡಿಸಿಕೊಂಡು, ಈ ಕರೋನದಿಂದ ಬೆಳೆದ 'ಅನುಕೂಲಕರ' ಸಂಗತಿಗಳನ್ನು ಪರಿಗಣಿಸಿ ಹೊಸ ಸದಸ್ಯರನ್ನು ಬೃಂದಾವನಕ್ಕೆ ಬರುವಂತೆ ಮಾಡಲು ಕೆಲವು 'ಪೆಟ್ಟಿಗೆಯಿಂದ ಹೊರಗಿನ' ಕೆಲವು ನೂತನ ರೀತಿಯ ಮಾರ್ಗಗಳನ್ನು ಕಂಡುಕೊಂಡು ಹಲವು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಖಂಡಿತ ಕರೋನ ನಮಗೆ ನಮ್ಮ ಜವಾಬ್ದಾರಿಯ ಬಗ್ಗೆ ಎಚ್ಚರಿಸಿ ನಮ್ಮ ಜೀವನದಲ್ಲಿ ಮುಖ್ಯವಾದದ್ದು ಯಾವುದು ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳುವಂತೆ ಮಾಡಿದೆ. ಬೃಂದಾವನಕ್ಕೆ ಶುರುವಿನಲ್ಲಿ ಕಷ್ಟವಾದರು, ಜನರನ್ನು ಹೇಗೆ ಅವರಿದ್ದಲ್ಲೇ ರಂಜಿಸುವುದು ಅಂದಾಗ ಟೆಕ್ನಾಲಜಿ ಕೈಬಿಡಲಿಲ್ಲ. ನಿಜ ಈಗ ಜನರ ಜೊತೆ ಬೆರೆಯಲು ಆಗದ್ದಿದ್ದರೂ ಕಂಪ್ಯೂಟರ್ ಮೂಲಕನಾದರು ಕಾರ್ಯಕ್ರಮವನ್ನು ನೋಡುವುದರ ಮೂಲಕ ಹರಟೆ ಹೊಡೆಯುವ ಮೂಲಕ ಜನರ ಮನದಲ್ಲಿ ಮೂಡಿರುವ ಭಯ ಭೀತಿ ಹೋಗಲಾಡಿಸಲು ಯಶಸ್ವಿಯಾದರು. ಸದ್ಯಕ್ಕೆ ಬೃಂದಾವನದವರು ನಮ್ಮ ಸದಸ್ಯರೊಂದಿಗೆ ಎಷ್ಟು ಸಂಪರ್ಕದಲ್ಲಿರುತ್ತಾರೊ ಅಷ್ಟು ಒಳ್ಳೆಯದು. ಈ ನಿಟ್ಟಿನಲ್ಲಿ ನಮ್ಮ ಸೌರಭ ತಂಡ ಅದ್ಭುತವಾದ ಕೆಲಸ ಮಾಡಿದೆ. ಮುಂದಿನ ತಂಡಕ್ಕೆ ಹೇಳುವುದು ಏನೇ ಬರಲಿ ಏನೇ ಆಗಲಿ ಧೃತಿಗೆಡದೆ ಇದ್ದರೆ ಯಾವುದೇ ಕಷ್ಟ ತೊಂದರೆ ಬಂದರೂ ಅದಕ್ಕೊಂದು ಪರಿಹಾರ ಸಿಗುವುದು ಖಂಡಿತ ಹಾಗು ನಮ್ಮ ಬೃಂದಾವನದ ಸದಸ್ಯರು ಎಂದಿಗೂ ಕೈ ಬಿಡೊಲ್ಲ.

ಕರೋನ ವಿಷಮ ಪರಿಸ್ಥಿತಿ ಎಲ್ಲರೂ ಕಷ್ಟ ಪಡುತ್ತಿದ್ದಾರೆ, ಕರೋನ ನಿಮಿತ್ತ ಮನುಜ ಆಶೋತ್ತರಗಳನ್ನು ಬದಿಗಿಟ್ಟು ಜೀವನದಲ್ಲಿ ಅಲ್ಪ ತೃಪ್ತನಾಗಿ ಬಾಳನ್ನು ಸವಿಯಲು ಮತ್ತೊಮ್ಮೆ ನೈಜತೆ ಕಡೆ ದಿಟ್ಟಿಸಿ ನೋಡುವಂತೆ ಮಾಡಿದೆ! ದೈಹಿಕ ಸ್ವಾಸ್ಥ್ಯ ಒಂದು ಕಡೆಯಾದರೆ, ಮಾನಸಿಕ ಸ್ವಾಸ್ಥ್ಯವೂ ತುಂಬಾ ಮುಖ್ಯವಾಗಿದೆ. ಎಲ್ಲರನ್ನೂ ಒಂದುಗೂಡಿಸಿದ ಬೃಂದಾವನ ಸಂಸ್ಥೆಯ ಒಂದು ದೊಡ್ಡ ಪಾತ್ರವಿದೆ. ಇದಲ್ಲದೆ ಸಂಘಟನೆಯ ಶಕ್ತಿಯಿಂದ ನೊಂದ ಮನಸ್ಸಿಗೆ ಧೈರ್ಯ ತುಂಬಿ, ಕಷ್ಟದಲ್ಲಿರುವವರಿಗೆ ನೆರವಿನ ಹಸ್ತ ನೀಡಿ, ಹಲವಾರು ರೀತಿಯಲ್ಲಿ ಪೂರಕ ಪಾತ್ರದೊಂದಿಗೆ ೨೦೨೦ ಮತ್ತು ೨೦೨೧ ದಾಟುವ ಆಶಾ ಭಾವನೆ ಚಿಮ್ಮಿಸುವ ಅವಕಾಶ ನಮ್ಮೆಲ್ಲರ ಮುಂದಿದೆ. ಬೃಂದಾವನ ಮತ್ತು ಅನಿವಾಸಿ ಕನ್ನಡಿರ ಪಾತ್ರ ಖಂಡಿತ ಇದೆ. ಮುಂದಿನ ತಂಡಗಳು ಮುಂದುವರೆಸುವ ಅವಕಾಶಗಳು ತುಂಬಾ ಇದೆ.

ಕರೋನ ನಮಗೆಲ್ಲ ಸಾಕಷ್ಟು ಪಾಠ ಕಲಿಸಿತು. ಇಂತಹ ಸಂದರ್ಭಗಳಲ್ಲಿ ನಾವೆಲ್ಲ ಒಬ್ಬರಿಗೊಬ್ಬರು ಒತ್ತಾಸೆಯಾಗಿ ನಿಲ್ಲುವ ಮಹತ್ವವನ್ನು ಮನವರಿಕೆ ಮಾಡಿ ಕೊಟ್ಟಿತು. ಬೃಂದಾವನ ಸೌರಭ ತಂಡ ಈ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿ ಉತ್ತಮ ಕೊಡುಗೆ ನೀಡಿತು.

ಬೃಂದಾವನದ ಸಾರಥಿಗಳು

ಕರೋನ ದಿಂದ ನೀವು ಕಂಡ "ನವ ಚೇತನದ" ಅನುಭವಗಳೇನು

ಪ್ರಪಂಚವನ್ನೇ ತಲ್ಲಣಗೊಳಿಸಿರುವ ಈ ಕರೋನ ವೈರಸ್‌ನಿಂದ ಪ್ರಾಣಹಾನಿಯಾಗಿ ಜನ ಜೀವನ ಅಸ್ತವ್ಯಸ್ತ ಆಗಿದ್ದರೂ ಕೂಡ ಹಲವಾರು ಕಾರ್ಯಗಳನ್ನು ನೂತನ ದೃಷ್ಟಿಯಿಂದ ನೋಡಲು ಅನುವು ಮಾಡಿಕೊಟ್ಟು 'ನವ ಚೇತನ' ವನ್ನು ತಂದಿದೆ ಎಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಕೆಲವರ ಸೃಜನಶೀಲತೆಗೆ ನಮೋ ನಮಃ. ಉಪನಯನ, ವಿವಾಹ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳ ಆಚರಣೆಯಲ್ಲಿ ಸರಳತೆ, ಮನೆಯಿಂದ ಕಛೇರಿ ಕೆಲಸ ಮಾಡುವ ಒಂದು ಸುಂದರ ವ್ಯವಸ್ಥೆ, ಒಂದೂರಲ್ಲಿ ನಡೆಯುವ ಮನರಂಜನಾ ಕಾರ್ಯಕ್ರಮಗಳನ್ನು ಪ್ರಪಂಚದಾದ್ಯಂತ ಜನರು ಮನೆಯಲ್ಲೇ ಕುಳಿತು ನೋಡುವ ಆದ್ಯತೆ ಹಾಗು ಎಲ್ಲಕ್ಕಿಂತ ಮಿಗಿಲಾಗಿ ಕಳಚಿಕೊಂಡು ಹೋಗಬಹುದೇನೊ ಅಂತಾಗಿದ್ದ ಕೌಟುಂಬಿಕ ಸಂಬಂಧಗಳು ಚಿರಕಾಲ ಉಳಿಯುವಂತೆ ಮಾಡಿದ ಸ್ಥಿರತೆ. ಇವುಗಳು ಕರೋನ ಎಂಬ ಕಪ್ಪು ಮೋಡದ ಅಂಚಿನಲ್ಲಿ ಕಂಡ ನಾಲ್ಕಾರು ಸುವರ್ಣ ರೇಖೆಗಳು!!!

ನನಗಂತು ಕರೋನದಿಂದ ಬಹಳಾನೇ ಒಳ್ಳೆಯದು ಆಗಿದೆ. ಪ್ರಸನ್ನ, ಅವರ ಅಮ್ಮನನ್ನು ನೋಡಿಕೊಳ್ಳಲು ೯ ತಿಂಗಳು ಬೆಂಗಳೂರಿನಲ್ಲಿ ಇದ್ದುದರಿಂದ ನಮ್ಮ ಮಗಳು ಹಾಗು ಅಳಿಯನೊಂದಿಗೆ ಕಳೆದ ಕ್ಷಣಗಳು, ಮಕ್ಕಳ ಜೊತೆ ಆಡಿಗೆ ಮಾಡುವುದು, ಉದ್ಯಾನವನದಲ್ಲಿ ನಡೆಯುವುದು, ವ್ಯಾಯಾಮ, ಮನೆಯಲ್ಲೇ ಕುಳಿತು ಸಿನೆಮಾ ನೋಡುವುದು, ಆಟ ಆಡುವುದು..ಬಹುಶಃ ನಾನು ಈ ತರಹ ಮಕ್ಕಳೊಂದಿಗೆ ಸಮಯ ಕಳೆದು ಬಹಳ ವರುಷಗಳಾಗಿತ್ತು. ದಿನದ ಜಂಜಾಟದಲ್ಲಿ ಈ ತರಹ ಸಣ್ಣ ಸಂಭ್ರಮಕ್ಕೂ ಸಮಯದ ಅಭಾವ. ಕುಟುಂಬದವರೊಡನೆ, ಸ್ನೇಹಿತರೊಡನೆ ಕಳೆಯುವ ಸಮಯ ಅಮೂಲ್ಯ. ಕರೋನ ಇದ್ದರೇನಂತೆ, 'ನವ ಚೇತನ' ವನ್ನು ತುಂಬಿಕೊಂಡು ಕೂರೋಣ 'ಝೂಮ್' ನಲ್ಲಿ ಹರಟೆ ಹೊಡೆಯುತ್ತ ಖುಶಿ ಪಡೋಣ !!

ಕರೋನ ಅದರ ನಿಜವಾದ, ಸರಿಯಾದ ಹೆಸರು ಚೈನಾ ವೈರಾಣು! ಚೀನಾದ ನಾಯಕತ್ವ ಒಂದು ವಿಸ್ತಾರವಾದಿ ಮಾನಸಿಕತೆಯನ್ನು ಹೊಂದಿದೆ. ಕರೋನ ಸಂಕಷ್ಟ ಚೀನಾ ಧೋರಣೆ ಎಲ್ಲಾ ದೇಶಗಳಿಗೂ ಕಾಣತೊಡಗಿದೆ ಮತ್ತು ಅದನ್ನು ಮೆಟ್ಟಿ ನಿಲ್ಲುವ ಹುನ್ನಾರ ಶುರುವಾಗಿದೆ. ಅದರ ಒಂದು ದೊಡ್ಡ ಅಂಶ ಆತ್ಮ ನಿರ್ಭರ ಭಾರತ! ಅಮೇರಿಕಾದ ಉದ್ಯಮಗಳು ವಾಪಸ್ ಅಮೇರಿಕಾಗೆ ಬರಬೇಕು ಎಂಬ ನಿಲುವು. ಐರೋಪ್ಯ ರಾಷ್ಟ್ರಗಳು, ಆಸ್ಟ್ರೇಲಿಯಾ ಮತ್ತು ಇತರ ದೇಶಗಳು ಚೀನಾದ ಅವಲಂಬನೆ ಕಮ್ಮಿ ಮಾಡಿ ಭಾರತ ಸೇರಿ ಇತರ ದೇಶಗಳತ್ತ ಸಪ್ಲೈ - ಚೈನ್ ಹಾರುವಿಕೆ (Supply chain Realignment). ಭಾರತ ಸೇರಿ ಇತರ ರಾಷ್ಟ್ರಗಳಲ್ಲಿ ಬಂಡವಾಳ ಹೂಡಿಕೆ, ಕಾರ್ಖಾನೆ ಮತ್ತು ಕೆಲಸ ಸಿಗುವ ಅವಕಾಶಗಳು ಹೆಚ್ಚಾಗುತ್ತದೆ. ಎರಡು ಮೂರು ದಶಕ ಬರೀ ಚೀನಾ ಬೆಳೆಯುತ್ತಿತ್ತು, ಭಾರತ ಇತರ ದೇಶಗಳು ಬೆಳೆಯುವ ಅವಕಾಶ ಚೈನಾ ವೈರಾಣು ತಂದು ಕೊಡುತ್ತಿದೆ.

ಕರೋನದಿಂದ ಹೊರ ಬರುತ್ತಿರುವುದು ಒಂದು ಪುನರ್ಜನ್ಮವೇ ಸರಿ. ನಾವು ಕಲಿತ ಪಾಠ, ಜೀವಿತದ ಕಡಿಮೆ ಅವಧಿಯಲ್ಲಿ ನಮ್ಮ ಸಂಬಂಧಗಳನ್ನ, ಬಾಂಧವ್ಯಗಳನ್ನ ಎಷ್ಟು ಮುಖ್ಯ ಎನ್ನುವುದು. ಈ ದಿಸೆಯಲ್ಲಿ ಬೃಂದಾವನದ ಕೊಡುಗೆ ಅಪಾರ.

ನಾಗರಾಜ್ ಮಹೇಶ್ವರಪ್ಪ, ನಾರ್ತ್ ಕೆರೊಲೈನಾ

ಆ ಕಂಬನಿ

ನೀ ಖುಷಿಯಿಂದ ಅತ್ತಾಗ
ಬಂದ ಆ ಕಂಬನಿ ...
ಕಂಡಿತ್ತು ನನಗೆ.. ಮುಂಜಾನೆಯ
ಸುಂದರ ಇಬ್ಬನಿಯ ಹಾಗೆ ...!

ನೀ ನೋವಿಂದ ಅತ್ತಾಗ
ಬಂದ ಆ ಕಂಬನಿ,
ಕಂಡಿತ್ತು ನನಗೆ ..ರಾತ್ರಿ ಬಿದ್ದ ಮಳೆಗೆ
ಉಕ್ಕಿ ಹರಿವ ಆ ನದಿಯ ಹಾಗೆ ...!

ಉಸಿರು

ಹುಟ್ಟಿದಾಗ ಜೊತೆಗಿರುವದು ಉಸಿರು,
ಆ ಮೇಲೆ ಬರುವುದು ಹೆಸರು ...!
ಸತ್ತಾಗ ಇರುವುದಿಲ್ಲ ಉಸಿರು,
ಉಳಿಯುವುದು ಬರೀ ಹೆಸರು ...!

ಈ ಉಸಿರು ಹೆಸರು ಮಧ್ಯೆ ರೂಪಿಸಿಕೋ
ನಿನ್ನ ಬದುಕ ಎಲೆ ಮಾನವ ...
ಎರಚದೆ ಅವರಿವರ ಮೇಲೆ ಕೆಸರು...!

ದೀಪ

ಹಚ್ಚಿದರೆ ಸಾಕೆ ದೀಪವ ?
ಬಿಡದಿದ್ದರೆ ಹೇಗೆ ಕೋಪವ...?

ಹಚ್ಚಿದರೆ ಸಾಕೆ ಹಣತೆಯ ?
ತಿದ್ದಿಕೊಳ್ಳದಿದ್ದರೆ ಹೇಗೆ,
ನಿನ್ನ ನಡತೆಯ...?

ದೀಪವ ಬೆಳಗಿಸಿ ಎಲ್ಲೆಡೆ
ಚೆಲ್ಲಿದರೆ ಸಾಕೆ ಬೆಳಕ ...?
ಅದರ ಜೊತೆ ಶುದ್ಧಿಮಾಡಿಕೊ
ಮನದಲ್ಲಿಹ ಕೊಳಕ ...!

ಆಗಲೇ , ಜೀವನ ಸಾರ್ಥಕ...!

ನವಚೇತನ

ಕೆನಡಿ ಕಂಡ ಕನಸು

ಎಂ. ಶಾಂತಾರಾಮ್ ರಾವ್, ಪುತ್ತೂರು

ಅಮೇರಿಕಾದಲ್ಲಿ ಎಷ್ಟೋ ಅಧ್ಯಕ್ಷರು ಬಂದು ಹೋಗಿದ್ದಾರೆ. ವಾಷಿಂಗ್ಟನ್, ಲಿಂಕನ್ ಬಿಟ್ಟರೆ ವಿಶ್ವದ ಜನರಿಗೆ ಇತ್ತೀಚಿನ ದಿನಗಳಲ್ಲಿ ಬಿಲ್ಲ್ ಕ್ಲಿಂಟನ್, ಜಾರ್ಜ್ ಬುಷ್ ಜೂನಿಯರ್, ಒಬಾಮ ಮತ್ತು ಇದೀಗ ಟ್ರಂಪ್ ಹೆಸರು ತಿಳಿದಿದೆ. ಆದರೆ ಅಮೇರಿಕನ್ನರ ಮನಸ್ಸಿನಲ್ಲಿ ಎಂದೆಂದಿಗೂ ಚಿರಸ್ಥಾಯಿಯಾಗಿ ಉಳಿಯುವ ಒಂದು ಹೆಸರೆಂದರೆ ಅದು ಜಾನ್. ಎಫ್. ಕೆನಡಿ. ಅಮೇರಿಕಾಗೆ ತೆರಳುವಾಗ, ಆ ದೇಶದ ಹೆಬ್ಬಾಗಿಲು ಎಂದು ಕರೆಯಲ್ಪಡುವ ನ್ಯೂ ಯಾರ್ಕ್ ನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವನ ಹೆಸರನ್ನೇ ಇಡಲಾಗಿದೆ. ಈತನ ಹೆಗ್ಗಳಿಕೆ ಅಷ್ಟಕ್ಕೇ ಸೀಮಿತವಾದದ್ದಲ್ಲ. ಅವನು ಅತೀ ಕಡಿಮೆ ವಯಸ್ಸಿನಲ್ಲೇ ಚುನಾಯಿತನಾದ ಪ್ರಥಮ ರೋಮನ್ ಕ್ಯಾಥಲಿಕ್ ಅಧ್ಯಕ್ಷ.

ಅವನು ಕೆನಡಿ ಕುಟುಂಬದ ಪ್ರಥಮ ಅಧ್ಯಕ್ಷನಾಗಿದ್ದುದು ಬರೇ ೧೦೩೬ ದಿನಗಳು ಮಾತ್ರ (೧೯೬೧ ಜನವರಿ ೨೦ ರಿಂದ ೧೯೬೩ ನವೆಂಬರ್ ೨೨ರ ವರೆಗೆ). ನಾಲ್ಕು ವರ್ಷಗಳು ಕಳೆಯುವ ಮೊದಲೇ, ಹಿಂದೆ ನೇವಿಯಲ್ಲಿ ನಾವಿಕನಾಗಿದ್ದ ಲೀ ಹಾರ್ವೀ ಓಸ್ವಾಲ್ಡ್ ಎಂಬಾತನಿಂದ ಗುಂಡೇಟಿಗೆ ಬಲಿಯಾಗಿ ಮರಣ ಹೊಂದಿದ. ಅಧ್ಯಕ್ಷನಾದಾಗ ಅವನ ವಯಸ್ಸು ಬರೇ ೪೩ ವರ್ಷ.

ಹಾಗಂತ, ಜೇಕನು ಅಧ್ಯಕ್ಷ ಪದವಿಯನ್ನು ಅರಸಿಕೊಂಡು ಹೋದವನಲ್ಲ. ಅವನ ಅಣ್ಣ ಜೋಸೆಫ್ ಪ್ಯಾಟ್ರಿಕ್ ಕೆನಡಿ ಜೂನಿಯರನು ಎರಡನೆಯ ಮಹಾಯುದ್ಧದಲ್ಲಿ ಮಡಿಯದೇ ಇದ್ದಿದ್ದರೆ, ಅದು ಅವನ ಪಾಲಾಗುತ್ತಿರಲಿಲ್ಲ. ಮಗ ಜೋಸೆಫ್ ಅಧ್ಯಕ್ಷನಾಗಬೇಕೆಂಬುದು ತಂದೆ ಜೋಸೆಫ್ ಪ್ಯಾಟ್ರಿಕ್ ಕೆನಡಿಯ ಅದಮ್ಯ ಇಚ್ಛೆಯಾಗಿತ್ತು. ಆ ಕಾಲದಲ್ಲಿ, ಅಮೇರಿಕಾದಲ್ಲಿ, ಕ್ಯಾಥಲಿಕರಿಗೆ ಎರಡನೇ ದರ್ಜೆಯ ಸ್ಥಾನಮಾನ ದೊರೆಯುತ್ತಿದ್ದರಿಂದ, ತಾವೂ ರಾಜಕೀಯದಲ್ಲಿ ಮುಂದು ಬಂದರೆ ತಮಗೆ ಸ್ಥಾನಮಾನ ದೊರೆಯಬಹುದೆಂಬ ತಂದೆಯ ಉತ್ಕಟಾಕಾಂಕ್ಷೆ ಆಗಿತ್ತು. ತಾನೂ ಅಧ್ಯಕ್ಷನಾಗಬೇಕೆಂಬ ಕನಸು ಕಂಡ ಆತ, ಇಂಗ್ಲೆಂಡಿಗೆ ಅಮೇರಿಕಾದ ರಾಯಭಾರಿಯಾಗಿ ಹೋದ. ಅದಕ್ಕೆ ಕಾರಣವೂ ಇತ್ತು. ಒಮ್ಮೆ ಐರ್ಲೆಂಡ್ ಇಂಗ್ಲೆಂಡಿನ ಅಧಿಪತ್ಯಕ್ಕೆ ಒಳಗಾಗಿತ್ತು. ಜೋಸೆಫ್ ಕೆನಡಿಯ ವಂಶಜರು, ಹಿಂದೆ ಐರ್ಲೆಂಡಿನಲ್ಲಿ ಕ್ಷಾಮಕ್ಕೆ ಒಳಗಾದಾಗ, ಐರ್ಲೆಂಡನ್ನು ತೊರೆದು ಹೊಸನಾಡಾದ ಅಮೇರಿಕಾಗೆ ತೆರಳಿದ್ದರು. ಹಾಗಾಗಿ ಇಂಗ್ಲೆಂಡಿಗೆ ರಾಯಭಾರಿಯಾಗುವುದು ಒಂದು ತರಹದ ಸಂತಸದ ವಿಷಯ.

ಇಂಗ್ಲೆಂಡಿನಲ್ಲಿರುವಾಗ ೨ನೇ ಮಹಾಯುದ್ಧದ ವೇಳೆ, 'ಅಮೇರಿಕಾ ಯುದ್ಧದಲ್ಲಿ ತಟಸ್ಥ ಧೋರಣೆಯನ್ನು ಹೊಂದಬೇಕು' ಎನ್ನುವ ಅವನ ನಿಲುವೇ, ಅವನ ಮುಳುವಿಗೆ ಕಾರಣವಾಯಿತು. ಅಮೇರಿಕಾವು ಯುದ್ಧದಲ್ಲಿ ಭಾಗವಹಿಸಿದರೆ, ತಾನು ಕೂಡಿಟ್ಟ ಸಂಪತ್ತಿಗೆ ಸಂಚಕಾರ ಒದಗುವುದೆಂಬ ಭಯ; ಕಮ್ಯೂನಿಸ್ಟ್ ತತ್ವಗಳು ಎಲ್ಲೆಲ್ಲೂ ಹರಡಿ, ಬಂಡವಾಳಶಾಹಿ ತತ್ವಕ್ಕೆ ಧಕ್ಕೆ ತಗಲಬಹುದೆನ್ನುವ ಆತಂಕದಿಂದ ಅನುಸರಿಸಿದ ನೀತಿಗಳಿಂದ, ಮೊದಲಿದ್ದ ಮನ್ನಣೆಯೂ, ಮಣ್ಣು ಮುಕ್ಕಿ, ಅಮೇರಿಕಾಗೆ ಹಿಂತಿರುಗಿದಾಗ ಅವನು ಹೊಸ ಅವಕಾಶಗಳಿಂದ ವಂಚಿತನಾದ. ಹಾಗಾಗಿ ಆತ ತನ್ನ ಮಕ್ಕಳಿಗೆ ಈ ಅವಕಾಶ ದೊರೆಕಿಸಲು ಹಾತೊರೆಯುತ್ತಿದ್ದನು.

ಅತ್ತ, ಮಗ ಜೋಸೆಫ್ ಕೆನಡಿ ಜೂನಿಯರ್, ತಂದೆಯ ಆಕಾಂಕ್ಷೆಗಳನ್ನು ಪೂರೈಸಲು ಯುದ್ಧ ಸಮಯದಲ್ಲಿ ಜಲ ವಿಮಾನ ಚಾಲಕನಾಗಿ ತರಬೇತಿ ಪಡೆಯಲು ತೆರಳಿದ. ಅದೇ ಸಮಯದಲ್ಲಿ, ಅಮೇರಿಕಾ ಪರ್ಲ್ ಹಾರ್ಬರ್‌ನ ಮೇಲಿನ ಡಿಸೆಂಬರ್ ೭, ೧೯೪೧ರ ಧಾಳಿಯಿಂದ ರಾಷ್ಟ್ರೀಯ ಆಪತ್ತು ಘೋಷಿಸಿದಾಗ, ಜೇಕನು ಅಣ್ಣನಿಗೆ ಪೈಪೋಟಿಯೆನ್ನುವಂತೆ, ತಾನೂ ಯುದ್ಧದಲ್ಲಿ ಭಾಗವಹಿಸುವ ಆಸೆ ತೊಟ್ಟ. ಆದರೆ ಅವನ ಸಣಕಲು ದೇಹ, ಎಂದಿಗೂ ಕೊನೆಗೊಳ್ಳದ ಅವನ ಕಾಯಿಲೆಯ ಪರಿಸ್ಥಿತಿ ಮತ್ತು ಅವನನ್ನು ಸದಾ ಕಾಡುತ್ತಿದ್ದ ಬೆನ್ನಿನ ನೋವು, ಅವನಿಗೆ ಸೈನ್ಯ ಸೇರಲು, ಅರ್ಹನನ್ನಾಗಿಸಲಿಲ್ಲ. ಆದರೂ, ತಂದೆಯ ವಶೀಲಿಯಿಂದ, ತನ್ನ ಕುಟುಂಬದ ವೈದ್ಯರು ಕೊಟ್ಟ ಅರ್ಹತಾ ಪತ್ರದಿಂದ, ನೇವಿಯಲ್ಲಿ ಸೇರಲು ಶಕ್ಯನಾದ. ಅವನನ್ನು ಕ.ಖಿ. ೧೦೯ ಎಂಬ ಯುದ್ಧ ನಾವೆಯ ಸೂತ್ರಧಾರಿಯನ್ನಾಗಿ ಮಾಡಿದರು.

ಜೇಕನು ಮತ್ತು ನಾವೆಯ ಸಂಗಡಿಗರು ಪೆಸಿಫಿಕ್ ಸಾಗರದ ಪಶ್ಚಿಮ ಅಂಚಿನ ಸೋಲೊಮನ್ ದ್ವೀಪಗಳ ಬಳಿ, ಜಪಾನಿನ ಯುದ್ಧ ಹಡಗುಗಳ ಸಂಚಾರದ ಮೇಲೆ ಹೊಂಚು ಹಾಕುತ್ತಿದ್ದಾಗ, ತಟ್ಟನೆ ಎದುರಿನಿಂದ ಜಪಾನಿನ ಯುದ್ಧ ನೌಕೆಯೊಂದು ಧಾಳಿ ಮಾಡಿ, ನಾವೆಯೇ ಇಬ್ಭಾಗವಾಯಿತು. ಅದರಲ್ಲಿ ಈರ್ವರು ಮರಣ ಹೊಂದಿದರು. ಓರ್ವನು ಗಾಯಗೊಂಡನು. ಜೇಕನು ಗಾಯಗೊಂಡವರನ್ನು ತನ್ನೊಂದಿಗೆ ಎಳೆದು ತಂದು, ಅಲ್ಲಿನ ಸ್ಥಳೀಯ ದ್ವೀಪವಾಸಿಗಳ ಮೂಲಕ, ತೆಂಗಿನ ಚಿಪ್ಪನ್ನು ಕೊರೆದು ತಮಗಾದ ಆಘಾತದ ಬಗ್ಗೆ ಸಂದೇಶ ಕಳುಹಿಸಿ ಆಸ್ಟ್ರೇಲಿಯಾದ ಯೋಧರಿಂದ ರಕ್ಷಿಸಲ್ಪಟ್ಟರು. ಜೇಕನು ಅಲ್ಲಿ ತೋರಿದ ಸಾಹಸ ಮತ್ತು ಕರ್ತವ್ಯ ನಿಷ್ಠೆಯು ಜನಜನಿತವಾಗಿ ಅಮೇರಿಕಾದೆಲ್ಲೆಡೆ ಪಸರಿಸಿತು. ಅವನು ಮೊದಮೊದಲಿಗೆ ಠೀಕೆಗೆ ಒಳಗಾದರೂ, ಆ ಸಂದರ್ಭದಲ್ಲಿ, ಅವನು ತೋರಿಸಿದ ಸಮಯಪ್ರಜ್ಞೆಯಿಂದಾಗಿ ಅವನು ಖ್ಯಾತಿಗಳಿಸಿದ. ಇದರ ಹಿಂದೆಯೂ ಅವನ ತಂದೆಯ ಕೈವಾಡವೂ ಇತ್ತು.

ಇತ್ತ, ಇಂಗ್ಲೆಂಡಿನಲ್ಲಿದ್ದ ಅಣ್ಣ ಜೋಸೆಫ್, ತನ್ನ ತಮ್ಮನು ತನ್ನಿಂದ ಮೊದಲೇ ಅಮೇರಿಕಾದಲ್ಲಿ ಮನೆಮಾತಾದದ್ದನ್ನು ಕಂಡು, ಮರುಗಿದ. ಇಂಗ್ಲೆಂಡಿನ ಮೇಲೆ ಅವ್ಯಾಹತ ಬಾಂಬುಗಳ ದಾಳಿ ನಡೆಯುತ್ತಿತ್ತು. ಆದರೆ, ಆ ಮೂಲ ಜಾಗವನ್ನು ಧ್ವಂಸಗೊಳಿಸಲು ಅಸಾಧ್ಯವಾಗಿತ್ತು. ಕೊನೆಯದಾಗಿ, ಒಂದು ಬೃಹತ್ ವಿಮಾನವೊಂದರ ಒಳಭಾಗವನ್ನೆಲ್ಲ ಖಾಲಿ ಮಾಡಿ, ಅದರಲ್ಲೆಲ್ಲ ಬಾಂಬುಗಳನ್ನು ತುಂಬಿಸಿ, ದೂರದರ್ಶಕದ ಮೂಲಕ ಗುರುತಿಸಿ, ಬಾಂಬುಗಳನ್ನು ಮಾತ್ರ ವಿಮಾನದಿಂದ ಬೇರ್ಪಡಿಸಿ, ಅವುಗಳನ್ನು ಗುರಿಯ ಮೇಲೆ ಎರಗಿಸುವ ಮಾರ್ಪಾಡು ಮಾಡಲಾಯಿತು. ಆದರೆ, ವಿಮಾನ ಹಾರಿಸಲು ಅದರಲ್ಲಿ ಕುಂದುಕೊರತೆಗಳಿವೆ ಎಂದು ತಿಳಿದುಬಂತು. ಇದನ್ನಾವುದನ್ನೂ ಪರಿಗಣಿಸದೆ, ನಿಗದಿತ ದಿನದಂದು ಜೋಸೆಫ್ ಜೂನಿಯರ್, ವಿಮಾನ ಹಾರಿಸಿ ೨೦ ನಿಮಿಷಗಳಲ್ಲಿ ಬಾಂಬುಗಳು ಹೊರಬಿದ್ದೊಡನೆ ವಿಮಾನವು ಧರೆಗುರುಳಿತು. ಜೋಸೆಫ್ ಮರಣವನ್ನಪ್ಪಿದ.

ಈಗ ಜೇಕ್‌ನನ್ನು ಅಧ್ಯಕ್ಷನಾಗಿ ಮಾಡಲು ತಯಾರಿ ನಡೆಯಿತು. ಯುದ್ಧದ ವೇಳೆಯಲ್ಲಿ, ಅವನು ಹೊಂದಿದ ಖ್ಯಾತಿಯು ಅವನನ್ನು ಡೆಮೊಕ್ರೆಟಿಕ್ ಪಕ್ಷದ ಅಧ್ಯಕ್ಷ ಪದವಿಯ ಹುರಿಯಾಳಾಗಿ ಆಯ್ಕೆ ಮಾಡಲು ಕಾರಣವಾಯಿತು. ಅವನ ಆಯ್ಕೆಯ ಹಿಂದೆ ತಂದೆಯ ಬೆಂಬಲವೂ ಇತ್ತು; ಹಣದ ಮದ ಬಲವೂ ಇತ್ತು. ಜೊತೆಗೆ, ಅವನು ಬರೆದ, 'ವೈ ಇಂಗ್ಲೆಂಡ್ ಸ್ಲೆಪ್ಟ್' ಎಂಬ ಪ್ರಬಂಧ ಹಾಗೂ 'ಪ್ರೊಫೈಲ್ಸ್ ಇನ್ ಕರೇಜ್' ಪುಸ್ತಕವು ಜನಮನ್ನಣೆಯನ್ನು ದೊರಕಿಸಿತು. ಮುಂದೆ ನಡೆದ ಅಧ್ಯಕ್ಷ ಚುನಾವಣೆಯಲ್ಲಿ, ಜೇಕನು ರಿಪಬ್ಲಿಕನ್ ಪಕ್ಷದ ಹುರಿಯಾಳಾದ ನಿಕ್ಸನ್‌ನನ್ನು ಸೋಲಿಸಿ, ಅಮೇರಿಕಾದ ಚರಿತ್ರೆಯಲ್ಲಿ ರೋಮನ್ ಕ್ಯಾಥಲಿಕ್ ಪಂಗಡಕ್ಕೆ ಸೇರಿದವ ಹಾಗೂ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಆ ಪದಕ್ಕೇರಿದವನು ಎನಿಸಿಕೊಂಡ.

ಅಧ್ಯಕ್ಷ ಪದವಿಗೇರುವ ಮೊದಲು ಸೆನೇಟರ್ನಾಗಿದ್ದ ಜೇಕನು ಪೂರ್ವಪ್ರಾಚ್ಯ ರಾಷ್ಟ್ರಗಳ ಕಾಲೋನಿಗಳಲ್ಲಿ ಕಂಡ ಬಡತನದಿಂದ ಹೇಗೆ ಅವು ಕಮ್ಯೂನಿಸ್ಟ್ ಪ್ರಭಾವಕ್ಕೆ ಒಳಗಾಗುವುದೆಂಬುದನ್ನೂ, ಹಾಗೂ ಕಾಲೋನಿಗಳಲ್ಲಿ ಎದ್ದು ತೋರುತ್ತಿರುವ ರಾಷ್ಟ್ರೀಯತ್ವದ ದನಿಯನ್ನು ಗುರುತಿಸಿದ. ಎರಡನೇ ಮಹಾಯುದ್ಧದ ನಂತರ ಅಮೇರಿಕಾದ ಕುಂದುತ್ತಿರುವ ಪ್ರಭಾವ, ಹಾಗೂ ಅಮೇರಿಕಾದಲ್ಲಿ ಕಮ್ಯೂನಿಸ್ಟ್ ಒಡ್ಡುತ್ತಿರುವ ಪಣವನ್ನು ಹಾಗೂ ಅದನ್ನು ಎದುರಿಸುವ ಅನಿಶ್ಚಿತತೆಯ ಬಗ್ಗೆಯೂ ಕಳವಳವನ್ನು ವ್ಯಕ್ತಪಡಿಸಿದ. ಇವೆಲ್ಲದರಲ್ಲಿ, ಅಂತರಾಷ್ಟ್ರೀಯ ವಿದ್ಯಮಾನಗಳಲ್ಲಿ ಅವನ ಕಾಳಜಿ ವ್ಯಕ್ತವಾಗುತ್ತಿತ್ತು. ಅವನ ಪಯಣದಲ್ಲಿ ಅವನ ತಮ್ಮ ರಾಬರ್ಟ್ ಕೆನಡಿಯೂ ಭಾಗಿಯಾಗಿದ್ದ.

ಈ ಮಧ್ಯೆ, ಜೇಕ್‌ನ ಮದುವೆಯು ಜ್ಯಾಕ್ಲಿನ್ - ಬೋವಿಯರ್‌ಳೊಂದಿಗೆ ನಡೆಯಿತು.

ಜೇಕನು ಅಧ್ಯಕ್ಷನಾದ ಮೇಲೆ ಅವನು ಎದುರಿಸಿದ ಅತ್ಯಂತ ಕಠಿಣ ಸಂದರ್ಭವೆಂದರೆ ರಷ್ಯಾದ ಕ್ಷಿಪಣಿಗಳು, ಅಮೇರಿಕಾದ ಮೇಲೆ ದಾಳಿ ಮಾಡಲು ಸನ್ನದ್ಧವಾದದ್ದು. ಕಮ್ಯೂನಿಸ್ಟರ ನೆಲೆಯಾದ ಫಿಡೆಲ್ ಕ್ಯಾಸ್ಟ್ರೋನ ಕ್ಯೂಬಾದೊಂದಿಗೆ ನಡೆಯುತ್ತಿದ್ದ ಕಲಹದಲ್ಲಿ ಕ್ಯಾಸ್ಟ್ರೋವಿನ ಆಡಳಿತವನ್ನು ಮುರಿಯಲು ಎಷ್ಟು ಸನ್ನಾಹ ಮಾಡಿದರೂ, ಅಮೇರಿಕಾಗೆ ಸಾಧ್ಯವಾಗಲಿಲ್ಲ. ಆದರೂ, ಮುಂದೆ, ರಾಷ್ಟ್ರದ ವಿಪತ್ತಿನಗಳಿಗೆಯಲ್ಲಿ ಅಮೇರಿಕಾವನ್ನು ಯುದ್ಧದ ಭೀತಿಯಿಂದ ಬಿಡುಗಡೆಗೊಳಿಸಿದ ಜೇಕನು ಹೆಚ್ಚು ಕಾಲ ಬಾಳಲಿಲ್ಲ. ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ, ತೆರೆದ ಕಾರಿನ ಮೆರವಣಿಗೆಯು ಮಟ ಮಟ ಮಧ್ಯಾಹ್ನ ಹೋಗುತ್ತಿದ್ದಾಗ, ಹತ್ತಿರದ ಕಟ್ಟಡದ ಮಾಳಿಗೆಯಲ್ಲಿ ಅವಿತುಕೊಂಡಿದ್ದ, ಲೀ ಹಾರ್ವೀ ಓಸ್ವಾಲ್ಡ್ ಎಂಬಾತನು ಜೇಕ್‌ನನ್ನು ನೇರವಾಗಿ ಗುಂಡಿಟ್ಟು ಕೊಂದ. ಅವನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸುವ ಹೊತ್ತಿನಲ್ಲಿ, ಜೇಕ್ ರೂಬಿ ಎಂಬಾತ ಆತನನ್ನು ಗುಂಡಿಟ್ಟು ಸಾಯಿಸಿದ. ಅಂತೂ, ಜಾನ್ ಕೆನಡಿಯ ಹತ್ಯೆಯ ಹಿಂದೆ ಏನು ಕಾರಣವಿತ್ತು ಎಂಬುದು ಕೊನೆಗೂ ಕಗ್ಗಂಟಾಗಿಯೇ ಉಳಿಯಿತು.

ಜೇಕನ ಪಾರ್ಥಿವ ಶರೀರವನ್ನು ವಾಷಿಂಗ್ಟನ್ನಿಗೆ ತರಲಾಯಿತು. ಸಕಲ ಗೌರವಗಳೊಂದಿಗೆ ಅಂತಿಮ ಯಾತ್ರೆ, ಜೇಕ್‌ನ ಮೂರು ವರ್ಷದ ಮಗ ಜೇಕ್ ಜೂನಿಯರ್, ತನ್ನ ತಂದೆಗೆ ಸೆಲ್ಯೂಟ್ ಹೊಡೆಯುವ ದೃಶ್ಯವು ೬೦ ವರ್ಷಗಳ ನಂತರವೂ ಮನ ಮಿಡಿಯುವಂತದ್ದು.

ಜೇಕನ ಮರಣದ ನಂತರ, ಲಾಸ್ ಏಂಜಲೀಸ್ ನಗರದಲ್ಲಿ ನಡೆದ ಡೆಮೋಕ್ರಾಟಿಕ್ ಪಕ್ಷದ ಹುರಿಯಾಳನ್ನಾಗಿ ನಿರ್ಧರಿಸುವ ಸಭೆಯಲ್ಲಿ, ತಮ್ಮ ರಾಬರ್ಟ್ ಕೆನಡಿಯು ಓರ್ವ ಆಸಕ್ತ ಹುರಿಯಾಳಾದ. ಚುನಾವಣೆಯಲ್ಲಿ ವಿಜಯಿಯೂ ಆದ. ಆದರೆ, ಅವನು ಉಳಿದಿದ್ದ ಹೋಟೆಲಿನ ಪಕ್ಕ ಬಂದೂಕು ಹಿಡಿದ ಒಬ್ಬಾತ ಅವನ ಮೇಲೆ ಗುಂಡು ಹಾರಿಸಿ ಅವನ ಹತ್ಯೆ ಮಾಡಿದ. ಅವನ ತಮ್ಮ ಎಡ್ವರ್ಡ್ ಕೆನಡಿಯೂ ಪಕ್ಷದಿಂದ ನಾಮಕರಣಕ್ಕೆ ಹಾತೊರೆಯುತ್ತಿದ್ದ. ಆದರೆ ತಾನು ಚಲಾಯಿಸುತ್ತಿದ್ದ ಕಾರು ದುರಂತಕ್ಕೀಡಾಗಿ, ನೀರಿನಲ್ಲಿ ಮುಳುಗಿ, ತನ್ನೊಂದಿಗೆ ಪಯಣಿಸುತ್ತಿದ್ದ ಮಹಿಳೆಯು ಮರಣ ಹೊಂದಿ, ವಿನಾ ಕಾರಣ ಮುಚ್ಚುಮರೆ ಮಾಡಿದ್ದಕ್ಕಾಗಿ, ಅವನನ್ನು ಆ ಸ್ಥಾನಕ್ಕೆ ನಮೂದಿಸಲು ಯಾರೂ ಒಪ್ಪಲಿಲ್ಲ. ಹೀಗಾಗಿ ಜಾನ್ ಕೆನಡಿಯ ಮರಣದೊಂದಿಗೆ ಕೆನಡಿಯರ ರಾಜಕೀಯ ಆಶೋತ್ತರಗಳೆಲ್ಲ ನುಚ್ಚುನೂರಾಯಿತು.

ಜಾನ್. ಎಫ್. ಕೆನಡಿಯು ಪೆಸಿಫಿಕ್ ಸಾಗರದಲ್ಲಿ ನಡೆಸಿದ ಜೀವ ರಕ್ಷಣೆ ಮತ್ತು ಕ್ಯೂಬಾದ ಬಿಕ್ಕಟ್ಟಿನಲ್ಲಿ ಅವನು ಕ್ರುಶ್ಚೇವ್‌ನೊಂದಿಗೆ ತೋರಿಸಿದ ಎದೆಗಾರಿಕೆಯಿಂದ, ಅವನ ದಿಟ್ಟತನ, ವ್ಯಕ್ತವಾಗುತ್ತದೆ. ಅವನು ಕ್ಷೀಣನಾಗಿದ್ದ, ರೋಗದ ಮುದ್ದೆಯಾಗಿದ್ದ. ಆದರೆ ಅವನ ಅಚಲ ಶ್ರದ್ಧೆ ಮತ್ತು ಹೋರಾಡುವ ಗುಣಗಳಿಂದಾಗಿ, ಅವನನ್ನು ಅಮೇರಿಕಾದ ರಾಜಕೀಯ ಧುರೀಣರಲ್ಲೇ ಶ್ರೇಷ್ಠನನ್ನಾಗಿಸುತ್ತದೆ

ಅವನು ಬರೆದ 'ಪ್ರೊಫೈಲ್ಸ್ ಇನ್ ಕರೇಜ್' ಪುಸ್ತಕಕ್ಕೆ, ಅಮೇರಿಕಾದ ಪ್ರತಿಷ್ಠಿತ ಪುಲಿಟ್ಜರ್ ಬಹುಮಾನ ಬಂದಿತ್ತು. ಆ ಪುಸ್ತಕವನ್ನು ಮುಕ್ತಾಯ - ಗೊಳಿಸುವ ಮೊದಲು ಅವನು ಬರೆದ ಪಂಕ್ತಿಗಳು, ಅವನಲ್ಲಿ ಹುದುಗಿರುವ ಚಿಲುಮೆಯನ್ನು ಹೊರತರುತ್ತದೆ.

"To be courageous requires no exceptional qualifications, no magic formula, no special combination of time, place and circumstance. It is an opportunity that sooner and later is presented to us all... ".

ಜೇಕನು ಚಿಕ್ಕ ವಯಸ್ಸಿನಲ್ಲಿ ಪ್ರಾಣ ತೆತ್ತ. ಆದರೆ ಜನರ ಮನದಾಳದಲ್ಲಿ ಶಾಶ್ವತವಾಗಿ ಉಳಿದ. ೫೭ ವರ್ಷದ ನಂತರವೂ ಜನರು ಅವನ ಸಮಾಧಿಗೆ ತೆರಳಿ ನಮನವನ್ನು ಸಲ್ಲಿಸುತ್ತಾರೆ. ಅವನು ಎಂದೆಂದಿಗೂ ಗೌರವಾನ್ವಿತ. ಅವನು ಸಾಮಾನ್ಯ ಮನುಷ್ಯನಂತಿದ್ದ ಆದರೆ, ಅಸಾಮಾನ್ಯನಾಗಿದ್ದ. ಇನ್ನೇನು ಬೇಕು ?

ನಾವು ಕನ್ನಡಿಗರು!

ಯಶವಂತ್ ಗಡ್ಡಿ, ಕನೆಕ್ಟಿಕಟ್

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಅಂತಾ ತಾನೆ ನಾವು ಕೇಳಿರೋದು, ಅನುಭವಕ್ಕೆ ಬಂದಿರೋದು ಸಹ ಸಾವಿರಾರು ಮೈಲುಗಳಿಂದ ತಾಯ್ನಾಡಿನಿಂದ ದೂರವಿದ್ದರೂ, ಇಲ್ಲಿ ನೆಲೆಸಿ ಇಪ್ಪತ್ತು ವರುಷಗಳ ಮೇಲೆಯೇ ಆಗಿದ್ದರೇನಂತೆ, "ಜನ್ಮ ನೀಡಿದ ಈ ಮಣ್ಣನು ನಾ ಹೇಗೆ ತಾನೆ ಮರೆಯಲಿ..." ಹಾಡಿನಂತೆ ಆ ತಾಯ್ಮಣ್ಣಿನ ಭಾಷೆಯನ್ನು ಮರೆಯಲಾದೀತೆ!? ಹಲವಾರು ಭಾಷೆಗಳನ್ನು ಕಲಿತ ಪಂಡಿತನೊಬ್ಬನ ಮಾತೃಭಾಷೆಯನ್ನು ಗುರುತುಹಿಡಿಯಲು ತೆನಾಲಿ ರಾಮಕೃಷ್ಣ(?), ಅವನಿಗೆ ಪುಷ್ಕಳವಾಗಿ ಊಟಮಾಡಿಸಿ, ಅವನು ಸುಖನಿದ್ರೆಗೈಯುತ್ತಿದ್ದಾಗ ಜೋರಾಗಿ ಒದ್ದಿದ್ದನಂತೆ. ನೋವಿನಿಂದ, ಕೋಪದಿಂದ ಅವನಿಗೆ ತನ್ನ ಮಾತೃಭಾಷೆ ಸಹಜವಾಗಿ ನೆನಪಾಗಿತ್ತು! ನಮಗೂ ಅಷ್ಟೆ! ಸಂತೋಷ, ದುಃಖ, ಕೋಪ ಹೆಚ್ಚಾದಾಗಲೆಲ್ಲಾ ನಾವು ಯಾವ ಪರಿಸರದಲ್ಲಿದ್ದರೂ ಸಹಜವಾಗಿ ಉದ್ಗರಿಸುವುದು ಕನ್ನಡದಲ್ಲೇ! ಎಷ್ಟೋ ಬಾರಿ ಆಫೀಸಿನಲ್ಲೂ ಈ ತರಹದ ಉದ್ಗಾರ ಹೊರಬಂದಿದೆ ನನ್ನಿಂದ! ಯಾವುವು ಆ ಉದ್ಗಾರಗಳು!? ಈಗ ಬೇಡ ಬಿಡಿ, ಮುಂದೆ ಯಾವಾಗಾದರು ಹೇಳೋಣವಂತೆ!

"ಮರೆತೆನೆಂದರ ಮರೆಯಲಿ ಹ್ಯಾಂಗ" ಸವಿಗನ್ನಡವನ್ನ! ಅಮೇರಿಕಾಕ್ಕೆ ಬಂದಾಗಿನಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕನ್ನಡಕೂಟಗಳು, ಅಲ್ಲಿ ನಡೆಯುವ ಯುಗಾದಿ, ದೀಪಾವಳಿ, ರಾಜ್ಯೋತ್ಸವದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು, ಅವುಗಳ ಅಂಗವಾಗಿ ಏರ್ಪಡಿಸುವ ನಾಟಕ, ಸಮೂಹಗಾಯನ, ಇತ್ಯಾದಿ, ಇವುಗಳ ತಾಲೀಮಿನ ನೆಪದಲ್ಲಿ ಸ್ನೇಹಿತರ ಮನೆಗಳಲ್ಲಿ ನಡೆಯುವ "(ಗುಂಡು)ಪಾರ್ಟಿ"ಗಳು, ಕಿಂಚಿತ್ ಪಾನಸೇವೆಯಾದ ಕೂಡಲೆ ಶುರುವಾಗುವ ವಾಗ್ವಾದಗಳು, ಒಂದೇ ಎರಡೇ!? ಜೊತೆಗೆ ಈ 'ಅಕ್ಕ', 'ನಾವಿಕ', 'ಕನ್ನಡ ಸಾಹಿತ್ಯರಂಗ' ಗಳು, ಪ್ರತಿ ತಿಂಗಳೂ ನಡೆಯುವ 'ವಚನಾಮೃತ', ವಾರಕ್ಕೊಮೆಯ 'ಕನ್ನಡ ಪಾಠಶಾಲೆ' ಇವೆಲ್ಲಾ ನಮ್ಮಯ ಇಲ್ಲಿನ ನಡೆ ನುಡಿಗಳನ್ನು ಕನ್ನಡಮಯವಾಗಿಸುತ್ತವೆ. ಇಷ್ಟಲ್ಲದೆ, ೩೦-೪೦ ವರುಷಗಳಿಂದ ಇಲ್ಲಿ ನೆಲೆಸಿರುವ ಕನ್ನಡ ಕುಟುಂಬಗಳು ಸಂಗ್ರಹಿಸಿದ್ದ ಕನ್ನಡಪುಸ್ತಕ ಸಂಗ್ರಹ, ನಾನೂ ಸಂಗ್ರಹಿಸಿದ್ದ ಪುಸ್ತಕಗಳನ್ನು ಸೇರಿ ನಮ್ಮ ಮನೆ ಮಿನಿ ಕನ್ನಡಗ್ರಂಥಾಲಯವಾಗಿದೆ! ಅವುಗಳನ್ನು ಓರಣವಾಗಿಡುವ ನೆಪದಲ್ಲಿ ಒಂದೆರಡು ಪುಟಗಳ ತಿರುಗಿಸುವುದೂ ರೂಢಿಯಾಗಿದೆ (ಹೆಂಡತಿ ಹೇಳುವ ಮನೆಗೆಲಸಗಳಿಂದ ತಪ್ಪಿಸಿಕೊಳ್ಳುವಾಗ!) ಇನ್ನು, ಇ-ಕನ್ನಡಪತ್ರಿಕೆಗಳು, ಯುಟ್ಯೂಬ್, ಕನ್ನಡ ಟಿವಿ ಚಾನೆಲ್‌ಗಳಿಂದಾಗಿ ನಮಗೆ ಅಮೇರಿಕಾ ಸಂಗತಿಗಳಿಗಿಂತ ಕರ್ನಾಟಕದ ವಿದ್ಯಮಾನಗಳ ಬಗ್ಗೆಯೇ ಹೆಚ್ಚು ಗೊತ್ತು. ಕರ್ನಾಟಕದಲ್ಲಿದ್ದು ಯಾವುದಾದರು ದಿನಪತ್ರಿಕೆಗೋ, ಮಾಸಪತ್ರಿಕೆಗೋ ಕಳಿಸಿದ್ದರೆ ಸಂಪಾದಕರ ಕ.ಬು. ಸೇರುತ್ತಿದ್ದ ನನ್ನ ಕನ್ನಡ ಕತೆ, ಕವನಗಳು ವಾಟ್ಸಪ್ ಕನ್ನಡ ಗ್ರೂಪುಗಳ ಕೃಪೆಯಿಂದ, ಅಲ್ಲಿ ದೊರಕುವ ನಾಲ್ಕೈದು ಲೈಕುಗಳ ಉತ್ತೇಜನದಿಂದ ಇನ್ನೂ ಸಕ್ರಿಯವಾಗಿದ್ದು ಕನ್ನಡ ಅಕ್ಷರಗಳನ್ನು ಬರೆಯುವುದಕ್ಕೆ ಕೈಗಳು ಇನ್ನೂ ಆಡುತ್ತಿವೆ!

ಒಟ್ಟಾರೆ, ಎರಡು ದಶಕಗಳಿಂದ ಕರುನಾಡಿನಿಂದ ಸಾವಿರಾರು ಮೈಲು ದೂರವಿದ್ದರೂ "ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ಕನ್ನಡವಾಗಿರೆಂಬ ಕವಿವಾಣಿಯನ್ನು ಕಾಯಾ ವಾಚಾ ಮನಸ ಪಾಲಿಸಿಕೊಂಡು ಬಂದಿದ್ದೇನೆ. ಕನ್ನಡತನವನ್ನು ಬರೀ ಉಳಿಸಿಕೊಳ್ಳದೇ ಮುಂದಿನ ಪೀಳಿಗೆಯಲ್ಲಿಬೆಳೆಸುವಲ್ಲಿಯೂ ಪ್ರಯತ್ನಿಸುತ್ತಿದ್ದೇನೆ! ಹೊರಗಡೆ ಯಾವ ಭಾಷೆಯಲ್ಲಿ ಮಾತಾಡಿದರೂ ಮನೆಯಲ್ಲಿ ಮಕ್ಕಳೆದುರು ಕನ್ನಡದಲ್ಲಿಯೇ ಮಾತಾಡು(ಜಗಳವಾಡು)ತ್ತಿದ್ದ ನನಗೆ ಮತ್ತು ನನ್ನ ಹೆಂಡತಿಗೆ, ಕನ್ನಡಶಾಲೆ ಶುರುವಾದಾಗಿನಿಂದ ಸ್ವಲ್ಪ ಫಜೀತಿಗೂ ಬಂದಿದೆ ಅನ್ನಿ! ನನ್ನ ಮಗಳು ತಾನಷ್ಟೇ ಕನ್ನಡ ಕಲಿಯದೆ, ತನ್ನ ಅಮೇರಿಕನ್ ಸಹಪಾಠಿಗಳಿಗೂ ಕಲಿಸಿದ್ದಾಳೆ! ಮೊನ್ನೆ ಅವಳನ್ನು ಕರೆದುಕೊಂಡು ಬರಲು ಅವಳ ಶಾಲೆಗೆ ಹೋಗಿದ್ದೆ. ಅಲ್ಲಿ ನನ್ನನ್ನು ನೋಡಿದ ಅವಳ ಸ್ನೇಹಿತರು, 'ಇಂಚರಾ, ಯುವರ್ ಕತ್ತೆ ಇಸ್ ಹಿಯರ್' ಅನ್ನಬೇಕೆ?!

ಅಂತೆಯೇ ಹಿರಿನಾಡಿನಲಿ ವಾಸಿಸುವ ಕರುನಾಡಿಗರು ನಾವು!

ನಯಾಗರದಲ್ಲಿ ಜೋಗವನು
ವಿಟ್ನಿಯಲಿ ಮುಳ್ಳಯ್ಯನಗಿರಿಯನು
ಮಿಸ್ಸೌರೀಲಿ ಕೃಷ್ಣೆ ಕಾವೇರಿಯನು
ಕಾಣುವ ಕನ್ನಡಕುವರ ನಾನು!

ನೋಡಿರೆ ಮೆಕ್ಕೆಜೋಳದ ಹೊಲಗಳ
ಕಾಣುವುದು ಕರ್ನಾಟ ಬೆಳ್ಳೊಲ
ಕಾಡಿ ಟೆಕ್ಸಸ್ ಅರಿಜ್ಹೋನದ ಝಳ
ನುಡಿದಿದೆ ಇದು ನಿನ್ನದೇ ನೆಲ!

ಆಲಿಸಿ ಹರ್ಮಿಟ್ ತ್ರಷ್ ಕಲಕಲ
ತೇಲಿದೆ ಮಲೆನಾಡಿಗೆ ಮನಕೋಕಿಲ
ಅಲೆಗಳಾಡಿವೆ ಪಡುವಣದಿ ಹಾಡ -
ತುಳುನಾಡ ರಂಗನು ಇಲ್ಲೇ ನೋಡ!

ಸ್ಕೈಡೈವ್ಗರ್ಗ್, ಫ್ಲಶಿಂಗ್ ಮಂದಿರಗಳೇ
ಶೃಂಗೇರಿ ಗೋಕರ್ಣಗಳು ಎನಗೆ
ಕರುನಾಡ ದೈವಗಳೆಲ್ಲಾ ಈ
ಹಿರಿನಾಡಿನಲಿರುವರೆಂಬ ನಂಬಿಕೆಗೆ !

ಕರ್ಣ ಕೇಳಿದರೂ ಪರಭಾಷೆ,
ಕನ್ನಡಕೆ ತರ್ಜುಮೆ ಮನದೇ
ಇರಲಿ ನಾನು ಎಲ್ಲೇ, ಹೇಗೆ
ಇರುವೆ ತಾಯಿನಾಡನು ಮರೆಯದೆ!

https://youtu.be/3Tf8wdlhPJI

ಶ್ರೀವಿದ್ಯಾ ಪ್ರಶಾಂತ್, ನ್ಯೂ ಜೆರ್ಸಿ

ಕನ್ನಡಾಂಬೆಗೆ ನುಡಿ ನಮನ

ಸಸ್ಯ ಶ್ಯಾಮಲೆಯ ನೆಲೆಬೀಡು
ಶಿಲ್ಪಕಲೆಗಳ ಸಿರಿನಾಡು
ಕವಿಗಳ ಶರಣರ ಗಂಧದ ಗೂಡು
ಸುಂದರ ನಮ್ಮೀ ಕರುನಾಡು

ಸ್ನೇಹ ಸೌಹಾರ್ದತೆಯನು ಮೆರೆದು
ಶಾಂತಿ ಸದ್ಭಾವನೆಯನು ಪೊರೆದು
ದ್ವೇಷ ಅಸೂಯೆಯನು ತೊರೆದು
ಉಳಿಸಿ ಬೆಳೆಸೋಣ ಮುನ್ನಡೆದು

ಕಸ್ತೂರಿಯ ಕಂಪು
ಕೋಗಿಲೆಯ ಇಂಪು
ತುಂಬಿದೆ ಕನ್ನಡ ನುಡಿಯಲ್ಲಿ
ಭವ್ಯ ಪರಂಪರೆಯ
ಗರಿಮೆಯ ಸಾರುವ
ಹಿರಿಮೆಯು ಕನ್ನಡ ನಾಡಿನಲಿ

ಕನ್ನಡವೆಂದರೆ ಅಭಿಮಾನ
ಕನ್ನಡದಿಂದಲೇ ಸನ್ಮಾನ
ಕನ್ನಡಕ್ಕಾಗಿ ಎಂದೂ ದುಡಿಯೋಣ
ಹೆಮ್ಮೆಯಿಂದ ಕನ್ನಡಾಂಬೆಗೆ ನಮಿಸೋಣ

ಮಂಜುಳ ಸಿದ್ದಮಲ್ಲಪ್ಪ,
ಪ್ರಾಧ್ಯಾಪಕಿ, ಚಿಕ್ಕಮಗಳೂರು.

ನನ್ನವ್ವ ಚೆಲುವೆ

ಕಾಸಿನಗಲ ಕುಂಕುಮ ಹಣೆಯಲ್ಲಿ ಇಟ್ಟವಳು,
ಕೈತುಂಬ ಕೆಂಪು ಬಳೆಯ ನಲಿದು ತೊಟ್ಟವಳು,
ಬಾಯಿ ತುಂಬ ತಾಂಬೂಲ ಸವಿಯ ಮೆದ್ದವಳು,
ಕರೆದಾಗಲೆಲ್ಲ ಓ ಎಂದು ಹೂಂಗುಟ್ಟಿದವಳು,
ಎಲ್ಲಿ ಕಣ್ಮರೆಯಾದೆ ಮತ್ತೆ ಬಾರದೆ ಹಿಂದೆ ||ನನ್ನವ್ವ||

ಬಾಳಿನ ಕಹಿ ನುಂಗಿ ಸಿಹಿ ಹಂಚಿದವಳು,
ನೆನೆದಾಗ ಕಣ್ಮುಂದೆ ಬಂದು ನಿಲ್ಲುವವಳು,
ಬಾರದ ಲೋಕಕ್ಕೆ ಮರಳಿ ಹೋದವಳು,
ಮತ್ತೆಂದು ಬರುವಳು ನನ್ನ ಹಡೆದವಳು,
ಎಲ್ಲಿ ಕಣ್ಮರೆಯಾದೆ ಮತ್ತೆ ಬಾರದೆ ಹಿಂದೆ ||ನನ್ನವ್ವ||

ಬದುಕಿಗೆ ದಾರಿ ದೀಪವಾದವಳು,
ಆದರ್ಶ ನಡೆನುಡಿಗೆ ಮಾರ್ಗ ತೋರಿದವಳು,
ಬಾಳ ಪಯಣದಲಿ ನಂದಾದೀಪವಾದವಳು,
ನಮ್ಮನ್ನಗಲಿ ನೋವ ಕೊಟ್ಟು ಹೋದವಳು,
ಎಲ್ಲಿ ಕಣ್ಮರೆಯಾದೆ ಮತ್ತೆ ಬಾರದೆ ಹಿಂದೆ ||ನನ್ನವ್ವ||

ಕರುಣ ಹೃದಯದ ಅಂತರಾಳದಿಂದ ಬರಬೇಕು. ಅದೇ ನಿಜವಾದ ಕರುಣ. —ಮಹಾತ್ಮಾ ಗಾಂಧಿ

ಅಜ್ಜಿ ಮನೆ

ಪಲ್ಲವಿ ಮಂಜುನಾಥ್, ನ್ಯೂ ಜೆರ್ಸಿ

"ಬಾಲ್ಯದ ಆಟ, ಆ ಹುಡುಗಾಟ, ಇನ್ನೂ ಮಾಸಿಲ್ಲ!!" ಅಜ್ಜಿ ಮನೆ ಅಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ??

ನಾವು ಚಿಕ್ಕವರಿದ್ದಾಗ ರಜೆ ಬಂದ ತಕ್ಷಣ ಅಜ್ಜಿ ಮನೆಗೆ ಹೋಗ್ತಿದ್ವಿ. ಅಮ್ಮನ ಮನೆ ಅಜ್ಜಿ ಮನೆ ಒಂದೇ ಊರಲ್ಲಿ ಇದ್ರೂ ಹೋಗೋದು ಮಾತ್ರ ತಪ್ಪಿಸ್ತಿರಲಿಲ್ಲ. ಅಮ್ಮ ಅಜ್ಜಿನ ಅವ್ವ ಅಂತ ಕರಿಯೋದು ನೋಡಿ, ನಾನು ನನ್ನ ತಮ್ಮಾನೂ ಅವ್ವ ಅಂತನೇ ಅಂತಿದ್ವಿ. ನಮ್ಮ ಅಜ್ಜಿ ತಾತನಿಗೆ 6ಜನ ಮಕ್ಕಳು, 17 ಜನ ಮೊಮ್ಮಕ್ಕಳು. ಅಜ್ಜಿ ಮನೆ ಪಕ್ಕದಲ್ಲೇ ಕೊಲ್ಲಾಪುರದಮ್ಮನ ದೇವಸ್ಥಾನ ಇದೆ. ಮೇ ತಿಂಗಳಲ್ಲಿ ದೊಡ್ಡ ಜಾತ್ರೆ ನಡೆಯುತ್ತೆ. ಏಪ್ರಿಲ್-ಮೇ ನಲ್ಲಿ ಬೇಸಿಗೆ ರಜಾ ಇದ್ದದರಿಂದ ನಾವು 12-13 ಮೊಮ್ಮಕ್ಕಳು ಅಜ್ಜಿ ಮನೆಗೆ ಹಾಜರಾಗ್ತಿದ್ವಿ. ನಮ್ಮ ದೊಡ್ಡಮ್ಮನ ಮಗ, ಅಂದ್ರೆ ನಮ್ಮೆಲ್ಲರ ದೊಡ್ಡ ಅಣ್ಣನೇ ನಮ್ಮ ಚಿಲ್ಪಾರಿ ಪಲ್ಟಾರಿಗಳ ಗ್ಯಾಂಗ್ ಲೀಡರ್. ಮನೆ ಹತ್ತಿರದಲ್ಲಿ ತುಂಬಾ ನೇರಳೆ ಹಣ್ಣಿನ ಮರಗಳು ಇದ್ವು. ಅಣ್ಣ ಮರ ಹತ್ತಿ ಹಣ್ಣುಗಳನ್ನು ಬೀಳಿಸ್ತಿದ್ರೆ, ಕೆಳಗಡೆ ನಿಂತ ನಾವುಗಳು ಕ್ಯಾಚ್ ಹಿಡಿದು ಪ್ಲಾಸ್ಟಿಕ್ ಕವರ್‌ಗೆ ತುಂಬಿಕೊಳ್ಳೋದೇ ಒಂದು ದೊಡ್ಡ ಸಡಗರ.

ಇನ್ನು ಜಾತ್ರೆಯ ಎರಡು ದಿನ ನಮ್ಮನ್ನು ಹಿಡಿಯೋರೇ ಇರ್ತಿರಲಿಲ್ಲ. ಮನೆ ಮಂದಿ ಹತ್ತಿರ 10-20ರೂಪಾಯಿ ಇಸ್ಕೊಂಡು ಜಾತ್ರೆ ಬೀದಿಗೆ ದೌಡು. ರಾಟೆ ಗಿರಿಗಿಟ್ಲೆ ಮೇಲೇ ಕೂರೋದು ಬೇಜಾರಾದ್ರೆ ಹೋಗಿ ಐಸ್ ಕ್ಯಾಂಡಿ, ಮಾವಿನಕಾಯಿ, ಸ್ವೀಟ್ಸ್ ತಿನ್ನೋದೇ ಕೆಲಸ. ಅಜ್ಜಿ ಹತ್ತಿರ ದುಡ್ಡು ಕೇಳೋದು, ಪಾಪ ಅವ್ವ ಎಲೆ ಚೀಲದಿಂದ 'ಅಮ್ಮಂಗೆ ಹೇಳ್ಬೇಡ ಬೈತಾಳೆ' ಅಂತ ಕೊಡೋದು. ಜಾತ್ರೆಯ ಮೊದಲ ದಿನ ರಾತ್ರಿ ದೇವರುಗಳ ಉತ್ಸವ ಮೂರ್ತಿನ ಮೆರವಣಿಗೆ ಮಾಡಿಕೊಂಡು ದೇವಸ್ಥಾನಕ್ಕೆ ತರೋರು, ಆವಾಗ ಪಟಾಕಿ ಹೊಡೆದು ಸ್ವಾಗತ ಮಾಡ್ತಿದ್ರು. ನಾವು ನಮ್ಮ ಅಜ್ಜಿ ಮನೆ ಮೇಲೆ ಬಿಡ್ತೀಟ್, ಜಮಖಾನ ಏನೇನು ಸಿಗತ್ತೋ ಅದನ್ನೆಲ್ಲಾ ಹೊದ್ಕೊಂಡು ಕೂತು ನೋಡ್ತಿದ್ವಿ.

ಅದು ಪಟಾಕಿ ಎಲ್ಲಿ ತಲೆ ಮೇಲೆ ಬಂದು ಬೀಳತ್ತೋ ಅಂತ ಭಯಕ್ಕೆ. ದೇವರ ಉತ್ಸವ ಬರ್ತಿದ್ದು ಬೆಳಗ್ಗಿನ ಜಾವಾ 2-3ಗಂಟೆಗೆ, ದೇವ್ರಿಗೆ ನೈವೇದ್ಯ ಮಾಡಿದ ನಂತರ ನಮಗೆಲ್ಲ ಊಟ ಕಾಣಿಸೋರು. ಊಟ ಮಾಡಿ ಮಲಗೋ ಅಷ್ಟರಲ್ಲಿ 5-6ಗಂಟೆ ಆಗಿ, ಅಂದು ಟಿರೇಸ್‌ನಲ್ಲೇ ಮಲಗುತ್ತಿದ್ವಿ. ಬೇಸಿಗೆ ಬೇರೆ ಚಳಿನೂ ಇರ್ತಿರಲಿಲ್ಲ. ಬೆಳಿಗ್ಗೆ ಮುಖ್ಯವಾದ ಸಿಡಿ ದಿನ ದೇವರುಗಳನ್ನು ಸಿಡಿ ಕಂಬಕ್ಕೆ ಕಟ್ಟಿ ಸುತ್ತಿಸೋರು ಅಂದ್ರೆ ಮೈ ಮೇಲೇ ಬರುತ್ತಲ್ಲ ಆ ದೇವರುಗಳನ್ನು. ಅದಕ್ಕೂ ಮುಂಚೆ ಊರ ತುಂಬಾ ಮೆರವಣಿಗೆ ಮಾಡಿಸೋರು, ನಮ್ಮ ಅಜ್ಜಿ ಮನೆನೇ ಕೊನೆಯಲ್ಲಿ ಇದ್ದಿದ್ದು ಅಲ್ಲಿಗೆ ಬಂದಿದ್ದ ದೇವ್ರುಗಳಿಗೆ ಹಾಕಿದ ಹೂವು, ಹಾರಗಳನ್ನು ಪ್ರಸಾದ ಅಂತ ನಮಗೆ ಕೊಟ್ಟು ಹೋಗೋರು. ಜಾತ್ರೆ ಪ್ರಯುಕ್ತ ಮನೇಲಿ ಜೋರು ಹಬ್ಬದ ಊಟ, ಮತ್ತೆ ಜಾತ್ರೆ ಬೀದಿಯಿಂದ ತಂದಿದ್ದ ಕಡ್ಲೆಪುರಿ, ಬೆಂಡು ಬತಾಸು ತಿನ್ನೋ ಸಂಭ್ರಮ. ಈಗ ಅಜ್ಜಿನೂ ಇಲ್ಲ, ಆ ಜಾತ್ರೆ ಸಡಗರನೂ ಇಲ್ಲ. ನಮ್ಮ ಅವ್ವ ಎಲ್ಲರಿಗೂ ಬೈಕೊಂಡು ಕೆಲಸ ಮಾಡ್ತಿದ್ದು ನೆನಪು ಮಾತ್ರ.

ನಿಮಗೆಲ್ಲಾನೂ ನಿಮ್ಮ ಅಜ್ಜಿ ಮನೆ ನೆನಪಾಯ್ತಾ?? ಕೋವಿಡ್ ಬೇರೆ, ಮನೇಲಿ ಕೆಲಸ ಮಾಡಿ ಬೋರ್ ಆಗಿರುತ್ತೆ. ಟೈಮ್ ಸಿಕ್ಕಾಗ ಅಜ್ಜ - ಅಜ್ಜಿ ಮನೆ ನೆನಪಿಸ್ಕೊಳ್ಳಿ!!

http://sivabalan.net/

ದೈವ ಸಹಾಯವಿಲ್ಲದೆ ಜಯವಿಲ್ಲ. ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ಇಲ್ಲ. —ಡಿ.ವಿ.ಜಿ.

ಎಂ.ವಿ.ಸತ್ಯನಾರಾಯಣ ರಾವ್, ಮೈಸೂರು

ಸುರಲೋಕದಾ ಸುಂದರಿ -ಪಾರಿಜಾತ

ಕೃಷ್ಣನ ಕೈ ಹಿಡಿದು ಇಳೆಗಿಳಿದ
ಸುರಲೋಕದಾ ಸುರಸುಂದರಿ
ಶ್ವೇತ ವರ್ಣೆ ಸಿಂಧೂರಧಾರಿಣಿ
ನಿನ್ನೊಡಲು ಮಕಮಲ್ಲು
ನೀ ನಗಲು ಪರಿಮಳ ಎಲ್ಲೆಲ್ಲು !

ಕಲಹಪ್ರಿಯರಿಗೆ ಹೇಳಿದೆ ನೀ ನೀತಿ
ಹೊಂದಿಬಾಳಿದರಲ್ಲಿ ಸುಖ ಶಾಂತಿ
ಎನ್ನುವಾ ನಿತ್ಯ ಸತ್ಯ ಸಾರಿದವಳೆ
ನಾ ಪಾರಿಜಾತ ಎನ್ನುವವಳೆ
ನೀ ಅರಳಿ ನಗಲು ಇಳೆಗೊಂದು ಹೊಸಕಳೆ!!

ಕಳೆದು ಹೋಗುತ್ತಿದ್ದೇವೆ ನಾವು

ಕಳೆದು ಹೋಗುತ್ತಿದ್ದೇವೆ ನಾವು
ಕಳೆದು ಹೋಗುತ್ತಿದ್ದೇವೆ!

ತೋರಿಕೆಯ ಪ್ರೀತಿ ವಿಶ್ವಾಸಗಳಲಿ
ಸ್ವಾರ್ಥ ಮುಸುಕಿದಾ ನೇಹದಲಿ
ಸಿಟ್ಟು ಸೆಡವುಗಳ ಸುಳಿಗಳಲಿ
ಜಗದೆಲ್ಲ ಹೊರೆ ಹೊತ್ತ ಮಸ್ತಕದಲಿ!

ಭಾವನೆಗಳಿಲ್ಲದಾ ಲೋಕದಲಿ
ಬದ್ಧತೆಗಳಿಲ್ಲದಾ ಬದುಕನಲಿ
ಬತ್ತಿಹೋಗುತಿರುವ ಜೀವನದಿಗಳಲಿ
ಮಾನವೀಯತೆ ಮರೆತ ಮನಸುಗಳಲಿ!

ಮೋಸ ಕಪಟ ವಂಚನೆ
ಮಾರುವ ಮಾರುಕಟ್ಟೆಗಳಲಿ
ಲಂಚ ರುಷವತ್ತು ಹೊತ್ತ
ಭ್ರಷ್ಟ ಮೇಜುಗಳ ಅಡಿಯಲ್ಲಿ !

ಕಳೆದ ನೆನ್ನೆಗಳ ಕಹಿ ನೆನಪಿನಲಿ
ನಾಳಿನಾ ಊಹೆ ಆತಂಕದಲಿ
ಇಂದಿನಾ ಸಂತಸವ ವಂಚಿಸುವ ಮನದಲ್ಲಿ
ಎಲ್ಲ ಇದ್ದು ಅನುಭವಿಸದಾ ಬದುಕಲ್ಲಿ!!

ವಿಹರಿಸು ಮನವೇ ವಿಹರಿಸು

ವಿಹರಿಸು ಮನವೇ ವಿಹರಿಸು
ಅತ್ತಿತ್ತ ಎತ್ತಲೋ ಅಲೆಯದೆ
ಚಿಂತೆ ಜಾಡ ಸುಳಿಗೆ ಸಿಲುಕದೆ
ಸವಿ ನೆನಪಿನಾ ಬನದಲ್ಲಿ !

ತಂಪು ಗಾಳಿ ಬೀಸುವಲ್ಲಿ
ಹೂವು ಕಂಪು ಬೀರುವಲ್ಲಿ
ತಳಿರ ತಂಪ ನೆರಳಿನಲ್ಲಿ
ಮಧುರ ಗಾನ ಕೇಳುವಲ್ಲಿ !

ಸವಿ ನುಡಿಯ ಆಡುವಲ್ಲಿ
ಸಂತಸದಾ ಬೀಡಿನಲ್ಲಿ
ಒಂಟಿತನವ ನೀಗುವಲ್ಲಿ
ಗೆಳೆತನವ ಬೆಸೆಯುವಲ್ಲಿ !

ಹೊಸ ಹುರುಪು ತುಂಬುವಲ್ಲಿ
ಚಿತ್ತ ಕ್ಷೋಭೆ ಕಳೆಯುವಲ್ಲಿ
ಮತ್ತೆ ಶೋಭೆ ಬೆಳಗುವಲ್ಲಿ
ಮನದ ತಲ್ಲಣ ತಣಿಯುವಲ್ಲಿ !!

ಗೆಳತಿಯೊಂದಿಗೆ ಬಾಲ್ಯ

ಅನುಪಮಾ ಹೆಗ್ಡೆ, ಕ್ಯಾಲಿಫೋರ್ನಿಯ

ನನ್ನ ಬಾಲ್ಯ ಮರವಂತೆ ಎನ್ನುವ ಪುಟ್ಟ ಹಳ್ಳಿಯಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಕಳೆದಿತ್ತು. ನಮ್ಮ ತಂದೆ ತಾಯಿಗೆ ನಾಲ್ಕು ಹೆಣ್ಣು ಮಕ್ಕಳಾಗಿದ್ದು, ನಾನು ಕಡೆಯ ಮಗಳಾಗಿರುವೆನು. ಆ ಕಾರಣ ನನ್ನಲ್ಲಿ ತುಂಟತನ ತುಂಬಿತ್ತು. ಬರೆಯುವುದು ಎಂದರೆ ಆಗದ ಕೆಲಸ ನನಗೆ, ಆದರೂ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಪ್ರೀತಿಯ ಗೆಳತಿಯೊಂದಿಗೆ ಕಳೆದ ಬಾಲ್ಯದ ಕೆಲವು ಸವಿ ನೆನಪನ್ನು ಹಂಚಿಕೊಳ್ಳಬೇಕೆಂಬ ಆಸೆ ಮನದಲ್ಲಿ ಮೂಡಿದೆ.

ನಮ್ಮ ಊರು ಸಮುದ್ರ ತೀರದಿಂದ ಎರಡು ಕಿ.ಮೀ ದೂರವಿದ್ದು, ನಮ್ಮ ಮನೆ ಮತ್ತು ಶಾಲೆಗೂ ಒಂದು ಫರ್ಲಾಂಗ್ ದೂರವಾಗಿತ್ತು. ಸಂಜೆ ಐದು ಗಂಟೆಯ ಸಮಯ, ಶಾಲೆಯಿಂದ ಗುಂಪು ಗುಂಪಾಗಿ ಮಕ್ಕಳೆಲ್ಲರೂ ಮನೆಯ ಕಡೆ ತೆರಳುತ್ತಿದ್ದರು. ನಾನು ಮತ್ತು ನನ್ನ ಪಕ್ಕದ ಮನೆಯ ಗೆಳತಿ ಮಾಯ ಹರಟೆ ಹೊಡೆಯುತ್ತಾ, ಅಮ್ಮ ಏನು ತಿಂಡಿ ಮಾಡಿರಬಹುದು!! ಎಂದು ಮೆಲುಕು ಹಾಕುತ್ತಾ ಮನೆಗೆ ತೆರಳುತ್ತಿದ್ದೆವು. ನಮ್ಮ ತೋಟದಲ್ಲಿ ಹಲಸಿನ ಹಣ್ಣು ಆಯಿತು ಎಂದರೆ ಬಗೆ ಬಗೆಯ ತಿಂಡಿಗಳು. ಹಲಸಿನ ಹಣ್ಣಿನ ಮುಳುಕದ ಸುವಾಸನೆ ಹೊರ ಬಾಗಿಲಿಗೆ ಬಂತು ಎಂದರೆ ಎಲ್ಲಿಲ್ಲದ ಆನಂದ. ಅಮ್ಮ ಕೊಟ್ಟ ತಿಂಡಿಯನ್ನು ತಿಂದು ತೋಟದ ಕಡೆ ಗೆಳತಿಯೊಂದಿಗೆ ಆಡಲೆಂದು ಓಡುತ್ತಿದ್ದೆ. ಮಾಯಾ ಅವಳಮ್ಮ ಕೊಟ್ಟ ತಿಂಡಿಯನ್ನು ಗಬಗಬನೆ ತಿಂದು ನನ್ನೊಡನೆ ಆಡಲೆಂದು ಓಡಿ ಬರುತ್ತಿದ್ದಳು. ರಾತ್ರಿ ಅವಳಮ್ಮ ಕೂಗಿ ಕರೆಯುವ ತನಕ, ಮಾಯ ಮತ್ತು ನಾನು ತರತರಹದ ಆಟವನ್ನು ಆಡುತ್ತಿದ್ದೆವು. ಓದುವುದೆಂದರೆ ನನಗೆ ಅದೇನೋ ದ್ವೇಷ. ಓದು, ಕಲಿಕೆಯಲ್ಲಿ ಬಲು ಜಾಣೆ ನನ್ನ ಸ್ನೇಹಿತೆ. ಮಾಯಾ ಪರೀಕ್ಷೆಯಲ್ಲಿ ಒಳ್ಳೆಯ ಅಂಕವನ್ನು ಪಡೆಯುತ್ತಿದ್ದಳು. ನನ್ನ ಶಾಲೆಯ ಕೆಲಸವನ್ನು ಅವಳ ಕೈಯಲ್ಲೇ ಮಾಡಿಸುತ್ತಿದ್ದೆ. ಮಾಯ ಓದಲು ಕುಳಿತಳೆಂದರೆ, ನನಗೆ ಎಲ್ಲಿಲ್ಲದ ಕೋಪ ಬರುತ್ತಿತ್ತು. ನನಗೆ ಕೋಪ ಬಂತು ಎಂದರೆ ಓದುವುದನ್ನು ಬಿಟ್ಟು ನನ್ನ ಬಳಿ ಆಡಲೆಂದು ಬರುತ್ತಿದ್ದಳು. ನನಗೆ ಓದುವುದಕ್ಕಿಂತ ಅವಳೊಡನೆ ಆಟ ಆಡುವುದೆಂದರೆ ಬಲು ಖುಷಿ. ಮಾಯ ಮತ್ತು ನಾನು ನಮ್ಮ ಹಿತ್ತಲಿನಲ್ಲಿ ಮಾವಿನ ಮರವಿದ್ದರೂ ಬೇರೆಯವರ ಮನೆಯ ತೋಟದಿಂದ ಮಾವಿನ ಕಾಯಿಯನ್ನು ಕದ್ದು ತಂದು ಅದಕ್ಕೆ ಉಪ್ಪು, ಖಾರ ಮತ್ತು ಎಣ್ಣೆ ಹಾಕಿ ತಿನ್ನುತ್ತಿದ್ದೆವು. ಆ ಮಾವಿನ ಕಾಯಿ ಪಚ್ಚುಟಿಯಲ್ಲಿ ಸಿಕ್ಕುವ ರುಚಿ, ಆನಂದ ವರ್ಣಿಸಲು ಅಸಾಧ್ಯ.

ನೆರೆಮನೆಯವರು ನನ್ನ ಬಗ್ಗೆ ದೂರಿದಾಗ ಅದೆಷ್ಟೋ ಬಾರಿ ಅಪ್ಪನಿಂದ ಬಡಿಗೆಯನ್ನು ತಿಂದಿರುವೆನು. ನಾನು ಓದಲು ಉತ್ಸಾಹ ತೋರಿಸದ ಕಾರಣ ಒಮ್ಮೊಮ್ಮೆ ಅಪ್ಪ ಓದಲೆಂದು ಕೋಣೆಯಲ್ಲಿ ಹಾಕಿ ಬಿಡುತ್ತಿದ್ದರು. ಕೋಣೆಯಿಂದ ಹೊರ ಬರಲಾರದೆ ಸಿಟ್ಟು ಮತ್ತು ದುಃಖದಲ್ಲಿ ಕುಳಿತಿರುವಾಗ ನನ್ನನ್ನು ಅರಸುತ್ತಾ ಬರುತ್ತಿದ್ದಳು ಮಾಯಾ. ನಾನು ಕೋಣೆಯ ಕಿಟಕಿ ಬಳಿ ಕುಳಿತು, ಅವಳು ಅಂಗಳದಲ್ಲಿ ನಿಂತು ಗಂಟೆಗಟ್ಟಲೆ ಹರಟೆಯನ್ನು ಹೊಡೆಯುತ್ತಿದ್ದೆವು. ಓದಲು ಆಸಕ್ತಿ ತೋರಿಸದ ಕಾರಣ ನಮ್ಮ ಅಪ್ಪ ಅಮ್ಮನವರ ಪರಿಚಯದ ಗುರುಗಳ ಬಳಿ ನನ್ನ ಮಗಳಿಗೆ ಶಾಲೆ ಬಿಟ್ಟೊಡನೆ ಹೆಚ್ಚಿಗೆ ಕಲಿಸುವಿರಾ? ಎಂದು ಕೇಳಿದಾಗ, ಗುರುಗಳು ಅಪ್ಪ ಅಮ್ಮನ ಮೇಲೆ ಇಟ್ಟಿರುವ ಗೌರವದಿಂದ ಒಪ್ಪಿಕೊಂಡರು. ಆ ದಿನದಿಂದ ಶುರುವಾಯಿತು ಪಾಠ ಹೇಳಿ ಕೊಡುವ ಕಾರ್ಯಕ್ರಮ. ಸಂಜೆ ಎಲ್ಲಾ ಮಕ್ಕಳು ಶಾಲೆ ಬಿಟ್ಟೊಡನೆ ಮನೆಯ ಕಡೆಗೆ ಓಡಿದರೆ, ನಾನು ಮಾತ್ರ ಶಾಲೆಯಲ್ಲಿ ಕುಳಿತು ಗುರುಗಳೊಡನೆ ಓದುವ ಪ್ರಸಂಗ ಬಂತು. ನನಗೆ ಗುರುಗಳೊಡನೆ ಕುಳಿತು ಓದುವ ಆಸಕ್ತಿ ಚೂರೂ ಇರಲಿಲ್ಲ. ಹಸಿವು ಮತ್ತು ಆಟವಾಡಲು ಇಲ್ಲವೆಂಬ ಸಿಟ್ಟಿನಲ್ಲಿ, ನನಗೆ ಏಕೆ ಈ ಶಿಕ್ಷೆ? ಎಂದು ಮನಸ್ಸಿನಲ್ಲಿ ಪ್ರಶ್ನೆ ಮೂಡುತ್ತಿತ್ತು. ನನ್ನ ಮನದ ಸಂಕಟವನ್ನು ಮನೆಯವರೊಡನೆ ಹೇಳುವ ಧೈರ್ಯ ಇರಲಿಲ್ಲ. ಈ ನನ್ನ ದುಃಖವನ್ನು ಮಾಯಾಳ ಜೊತೆಯಲ್ಲಿ ತೋಡಿಕೊಂಡೆ. ಆ ದಿನದಿಂದ ಮಾಯಾ ನನಗೋಸ್ಕರ ಶಾಲೆ ಮುಗಿದ ಮೇಲೂ, ನನಗಾಗಿ ಕಾಯುತ್ತಿದ್ದಳು. ಅವಳು ನನಗಾಗಿ ಕಾಯುತ್ತಿರುವುದನ್ನು ನೋಡಿ ಮೇಷ್ಟ್ರು ಮಾಯಾನೇ ನನ್ನ ಓದಿಗೆ ಅಡ್ಡಿ ಎಂದು ಅಮ್ಮನಲ್ಲಿ ದೂರಿಟ್ಟರು. ಹೀಗೆ ನನ್ನ ಮನೆಯಲ್ಲಿ ಹಾಗೂ ಮಾಯಾನ ಅಕ್ಕನಿಗೂ ನಮ್ಮ ಸ್ನೇಹದ ಬಗ್ಗೆ ಅಸಮಾಧಾನ ಶುರು ಆಯಿತು. ಹಲವಾರು ಮಂದಿ ನಮ್ಮ ಸ್ನೇಹವನ್ನು ಮುರಿಯಲು ಪ್ರಯತ್ನಿಸಿದ್ದರೂ, ಮುರಿಯಲು ಅಸಾಧ್ಯವಾಗಿತ್ತು ನಮ್ಮ ಸ್ನೇಹ.

ಮಾಯಾಳಿಗೆ ನಾನು ಎಂದರೆ ಅತಿಯಾದ ಪ್ರೀತಿ ಮತ್ತು ನನ್ನ ಮಾತು ಎಂದರೆ ವೇದವಾಕ್ಯ. ಪ್ರೀತಿಯ ಮತ್ತಿನಲ್ಲಿ, ಅಹಂಕಾರದಿಂದ ಮೆರೆಯುತ್ತಿದ್ದೆ. ಅವಳಿಗೆ ನನ್ನಲ್ಲಿ ಮಾತು ಬಿಟ್ಟು ಇರಲು ಆಗುವುದಿಲ್ಲವೆಂದು ಗೊತ್ತಿದ್ದರೂ, ಆಗಾಗ ಮಾತು ಬಿಟ್ಟು ಸತಾಯಿಸುತ್ತಿದ್ದೆ. ಹೀಗೆ ಅವಳನ್ನು ಸತಾಯಿಸಲೆಂದು, ಅವಳೊಡನೆ ಮಾತು ಬಿಟ್ಟೆ. ಎಷ್ಟು ಮಾಯಾ ಕೂಗಿಕೊಂಡರೂ ಕರಗದೆ ಮೌನವಾಗಿದ್ದೆ. ಆ ಸಮಯದಲ್ಲಿ ಸ್ನೇಹಿತೆಯ ಅಕ್ಕ ನನ್ನನ್ನು ಹಿಂಬಾಲಿಸಬೇಡ ಎಂದು ಆದೇಶಿಸಿದಳು. ಅದೇನೋ ನಾ ಕಾಣೆ!! ಮೊದಲ ಬಾರಿ ಅಕ್ಕನ ಮಾತಿನಂತೆ ನನ್ನನ್ನು ಹಿಂಬಾಲಿದೆ ಮೌನಿಯಾದಳು ನನ್ನ ಮಾಯಾ. ಮನದಲ್ಲಿ ಆಶ್ಚರ್ಯವಾದರೂ, ಬಂಡು ಧೈರ್ಯದಿಂದ ಬರುವಳು ಗೆಳತಿಯೆಂದು ನಂಬಿದ್ದೆ. ದಿನ ಕಳೆದಂತೆ ಅವಳ ಮೌನವನ್ನು ನೋಡಿ ಮನದಲ್ಲಿ ಭಯ ಮೂಡಿತು. ಅವಳಿಲ್ಲದೆ ಏನೂ ನಡೆಯದು ನನ್ನ ಬಾಲ್ಯ ಧೈರ್ಯ ಕುಂದುತ್ತಾ, ಅತಿಯಾದ ದುಃಖ ಮತ್ತು ಸಂಕಟದಿಂದ ಬಳಲಿದೆ ಮುರಿದು ಬಿತ್ತು ನನ್ನ ಅಹಂಕಾರ. ಸೋತ ಮನಸ್ಸಿಗೆ ಅರಿವಾಯಿತು. ಮಾಯಾಳ ಪ್ರೀತಿಯ ಬೆಲೆ. ಮಾಯಾಳ ಬಳಿ ಓಡಿ,ಅತ್ತು, ಗೋಗರೆದು ಮನವೊಲಿಸಿ ಕರೆತಂದೆ ನನ್ನ ಬಳಿ. ನನಗೆ ಆ ರಾತ್ರಿ ಎಲ್ಲಿಲ್ಲದ ತೃಪ್ತಿಯ ನಿದ್ದೆ.

ನಾನು ಮನೆಯೊಳಗೆ ಕುಳಿತುಕೊಳ್ಳುವುದು ಬಿಟ್ಟು, ತೋಟದ ಮರದ ಮೇಲೆ, ಇಲ್ಲಾ ಮನೆಯ ಬಾಲ್ಕನಿಯಲ್ಲಿ ಕುಳಿತು ಓದುತ್ತೇನೆಂದು ಮನೆಯವರ ಬಳಿ ಸುಳ್ಳು ಹೇಳಿ ಕಾಲ ಕಳೆಯುತ್ತಿದ್ದೆ ಮಾಯಾಳೊಡನೆ. ಒಮ್ಮೆ, ಅದೇ ತರ ಮಾಯ ಮತ್ತು ನಾನು ಏಣಿಯಿಂದ ಬಾಲ್ಕನಿಯನ್ನು ಹತ್ತಿ, ಓದುತ್ತೇವೆಂದು ಹೇಳಿ ಆಟವಾಡುತ್ತಿದ್ದೆವು. ಅದನ್ನು ನೋಡಿದ ನನ್ನ ಅಪ್ಪ, ಎಲ್ಲಿಲ್ಲದ ಕೋಪದಿಂದ ಏಣಿಯನ್ನು ತೆಗೆದು ಬಿಟ್ಟರು. ಈಗ ಮಾಯ ಮತ್ತು ನಾನು ಕೆಳಗಿಳಿಯಲು ಅಸಾಧ್ಯವಾಗಿತ್ತು. ಆ ಸಮಯದಲ್ಲಿ ಮಾಯಾ ಅಲ್ಲಿಗೆ ಹತ್ತಿರವಿದ್ದ ಹುಲ್ಲು ಕುತ್ತರಿಯ ಮೇಲೆ ಹಾರಿ ಕೆಳಗಿಳಿದು, ಏಣಿಯನ್ನು ತಂದು ನನ್ನನ್ನು ಕೆಳಗಿಳಿಸಿದಳು. ಆ ಪುಟ್ಟ ಹುಡುಗಿ ಮಾಯಾ ತನ್ನ ಬಗ್ಗೆ ಯೋಚಿಸದೆ ಧೈರ್ಯದಿಂದ ಸ್ನೇಹಿತೆಗಾಗಿ ಏನೂ ಮಾಡಲು ತಯಾರಿದ್ದಳು. ಈಗಲೂ ಎಣಿಸಿದರೆ ಮೈ ಜುಂ ಎನಿಸುತ್ತದೆ.

ನಾವಿಬ್ಬರೂ ಅದೆಷ್ಟೋ ಸಲ ಮರದ ಮೇಲೆ ಕುಳಿತು ಓದುತ್ತಿದ್ದೆವು. ನಾನು ಓದುವುದಕ್ಕಿಂತ ಜಾಸ್ತಿ ಹಗಲು ಕನಸು ಕಾಣುತ್ತಿದ್ದೆ. ನನ್ನ ಕನಸನ್ನು ಅವಳೊಡನೆ ಹಂಚಿಕೊಳ್ಳುತ್ತಾ ನನ್ನ ಮಾತಿನ ಕಡೆ ಸೆಳೆಯುತ್ತಿದ್ದೆ. ಒಮ್ಮೆ ಹೀಗೆ ಮಾಯಾ ಮರದ ಕೊಂಬೆ ಮೇಲೆ ಕುಳಿತಿರುವಾಗ ನಾನು ಅವಳನ್ನು ಕೆಣಕಲು ಶುರು ಮಾಡಿದೆ. ಅದೇನೋ ನಾ ಕಾಣೆ!! ಮರದಿಂದ ಹಾರಲೆಂದು

ಪ್ರೀತಿಯು ಒಡತನವನ್ನು ಪ್ರತಿಪಾದಿಸುವುದಿಲ್ಲ. ಸ್ವಾತಂತ್ರ್ಯವನ್ನು ನೀಡುತ್ತದೆ. —ರವೀಂದ್ರನಾಥ್ ಟ್ಯಾಗೋರ್

ಗೆಳತಿಯೊಂದಿಗೆ ಬಾಲ್ಯ

ಹೋಗಿ ಅವಳ ಅಂಗಿ ಮರದ ಕೊಂಬೆಗೆ ಸಿಲುಕಿ ಮಾಯಾ ನೇತಾಡುವಂತಾದಳು. ನನಗೆ ಆ ಸಮಯದಲ್ಲಿ ಏನೂ ಮಾಡಲು ತೋಚದೆ ಅಕ್ಕನನ್ನು ಕೂಗಿ ಕರೆದೆ. ಹೇಗೋ ಮಾಡಿ ಅಕ್ಕ ಮತ್ತು ನಾನು ಅವಳನ್ನು ಮರದ ಕೊಂಬೆಯಿಂದ ಕೆಳಗಿಳಿಸಿದೆವು. ಈಗಲೂ ಆ ಘಟನೆಯನ್ನು ನೆನೆಸಿದರೆ ಅತಿಯಾದ ಭಯವಾಗುತ್ತದೆ.

ನನಗೆ ನೆನಪಿಗೆ ಬರುವ ಮತ್ತೊಂದು ಘಟನೆಯೆಂದರೆ ನನ್ನ ಕಾಲಿನ ಬೆರಳಿನ ಮಧ್ಯದಲ್ಲಿ ಅದೇನೋ ಅಲರ್ಜಿ ಆಗುತ್ತಿತ್ತು. ಮನೆಮಂದಿಯೆಲ್ಲಾ ಅವರವರ ಕೆಲಸದಲ್ಲಿ ಮುಳಗಿರುವಾಗ ನನ್ನ ನೋವಿನ ಕಡೆಗೆ ಗಮನ ಕೊಡಲು ಸಾಧ್ಯವಿರಲಿಲ್ಲ. ನಾನು ನೋವಿನಿಂದ ಬಳಲುತ್ತಿದ್ದಾಗ, ಆ ಪುಟ್ಟ ಹುಡುಗಿ ಮಾಯಾ ನನಗೆ ವಿವಿಧ ತರಹದ ಎಣ್ಣೆಯನ್ನು ಹಚ್ಚಿ ಉಪಚರಿಸುತ್ತಿದ್ದಳು. ಅವಳು ಅಂದು ಮಾಡಿದ ಸೇವೆಯನ್ನು ಎಂದಿಗೂ ಮರೆಯಲಾರೆನು.

ನನಗೆ ನಾಟಕ ಮತ್ತು ಸಿನೆಮಾ ನೋಡುವ ಹುಚ್ಚು. ಆದರೆ ಅಪ್ಪನಿಗೆ ಹೆಣ್ಣು ಮಕ್ಕಳನ್ನು ಅಲ್ಲಿಗೆಲ್ಲಾ ಕಳುಹಿಸುವುದು ಎಂದರೆ ಭಯ. ಅದನ್ನೆಲ್ಲಾ ನೋಡಬೇಕೆಂಬ ಆಸೆ ನನಗೆ. ಹಾಗೆ ಒಮ್ಮೆ ನಮ್ಮ ಊರಿನಲ್ಲಿ ಹೊಸ ಸಿನಿಮಾ ಒಂದು ಬಂದಿತ್ತು. ನಾನು ನೋಡಬೇಕೆಂದು ಅಪ್ಪನಲ್ಲಿ ಹಠ ಹಿಡಿದೆ. ನನ್ನ ಹಠಕ್ಕೆ ಮಣಿದು ಗೆಳತಿಯ ಜೊತೆ ಹೋಗಲು ಅನುಮತಿ ನೀಡಿದರು. ಯಾವುದೋ ಕಾರಣದಿಂದ ಅವಳು ಬರಲು ಸಾಧ್ಯವಿಲ್ಲ ಎಂದು ತಿಳಿದಾಗ, ಅಮ್ಮನ ಸಹಾಯಕ್ಕೆ ಬರುವ ರುಕ್ಮಿಣಿಯ ಜೊತೆ ನೋಡಿ ಬಂದೆ. ಸಿನೆಮಾ ನೋಡಿ ಬಂದ ರಾತ್ರಿ, ಮನೆ ಪದ್ಧತಿಯಂತೆ ಎಲ್ಲಾ ಒಡಗೂಡಿ ಊಟ ಮಾಡುತ್ತಿರುವಾಗ, ಅಪ್ಪ ನನ್ನ ಬಳಿ ಸಿನೆಮಾ ಹೇಗಿದೆ? ಎಂದು ಕೇಳಿದಾಗ ನಾನು ಸಂತೋಷದಿಂದ ನನಗೂ ಮತ್ತು ಮಾಯಾಳಿಗೂ ಬಹಳ ಖುಷಿಯಾಯಿತು ಎಂದು ಉತ್ತರಿಸಿದೆ. ಅದೇನೋ ಕೆಟ್ಟ ಘಳಿಗೆ ನಾ ಕಾಣೆ!! ನನ್ನ ದೊಡ್ಡ ಅಕ್ಕ ಸಿಮೆಮಾಕ್ಕೆ ಹೋದ ಸಮಯದಲ್ಲಿ ಮಾಯಾ ಅವಳ ಮನೆಯ ಅಂಗಳದಲ್ಲಿ ಆಡುವುದನ್ನು ನೋಡಿದ ಸುದ್ದಿಯನ್ನು ಅಪ್ಪನಿಗೆ ತಿಳಿಸಿದಳು. ಅಪ್ಪನಿಗೆ ನಾನು ಸುಳ್ಳು ಹೇಳಿದ ವಿಚಾರ ತಿಳಿದು ಸಿಟ್ಟಿನಿಂದ ಘರ್ಜಿಸುತ್ತಾ, ಹೇಳು "ಯಾರ ಜೊತೆ ನೋಡಿದೆ?" ಎಂದು ಗದರಿಸಿದರು. ನಾನು ನಡುಗುತ್ತಾ ರುಕ್ಮಣಿ - ಯೊಡನೆ ಹೋದ ಸತ್ಯ ಸಂಗತಿಯನ್ನು ಬಾಯಿಬಿಟ್ಟೆ. ನಾನು ಸುಳ್ಳು ಹೇಳಿ ಹೋದನೆಂದು ಕೋಪದಿಂದ ಅಪ್ಪ "ಮನೆಯಿಂದ ಹೊರಗೆ ಹೋಗು" ಎಂದು ಆದೇಶಿಸಿದರು. ದುಃಖ, ಭಯ, ಕೋಪದಿಂದ ಮನೆಯ ಹೊರ ಬಾಗಿಲಿನಲ್ಲಿ ಕುಳಿತೆ. ಆಗ ರಾತ್ರಿ ಒಂಭತ್ತು ಗಂಟೆಯ ಸಮಯ, ಹತ್ತು ನಿಮಿಷ ಕಳೆಯುವುದರಲ್ಲಿ ಭಯವಾಗಲು ಶುರುವಾಯಿತು. ಹೆದರುತ್ತಾ ಮಾಯಾಳ ಮನೆಯ ಬಾಗಿಲನ್ನು ಬಡಿಯಲು ಶುರು ಮಾಡಿದೆ. ಮಾಯಾ ಮತ್ತು ಅವಳ ತಾಯಿ ಬಾಗಿಲು ತೆಗೆದು ನನ್ನನ್ನು ಮನೆಯೊಳಗೆ ಕರೆದೊಯ್ದು ಭಯ ಪಡಬೇಡ, ಈ ರಾತ್ರಿ ಇಲ್ಲಿಯೇ ಮಲಗು ಎಂದು ಉಪಚರಿಸಿದರು. ಆದರೂ ಅವರ ಮನೆಯಲ್ಲಿ ಆ ರಾತ್ರಿ ಕಳೆದರೆ ಅಪ್ಪನ ಕೋಪವು ವಿಕೋಪಕ್ಕೆ ಹೋಗಬಹುದೆಂಬ ಭಯ. ಪುನಃ ನಮ್ಮ ಮನೆಯ ಬಾಗಿಲಿನತ್ತ ಹೋಗಿ ಕುಳಿತೆ. ರಾತ್ರಿ ೯.೩೦ ಕ್ಕೆ ನಮ್ಮಮ್ಮ ಬಾಗಿಲು ತೆಗೆದು ಮನೆಯೊಳಗೆ ಕರೆದೊಯ್ದರು. ನಾನು ಮನೆಯೊಳಗೆ ಹೋದೆನೆಂದು ಖಚಿತ ಆದ ನಂತರ, ಮಾಯಾ ಅವಳ ಮನೆಯೊಳಗೆ ಹೋದಳು. ಹೀಗೆ ಮಾಯಾ ಅದೆಷ್ಟು ಬಾರಿ ನನ್ನ ಬೆನ್ನೆಲುಬು ಆಗಿದ್ದಳು.

ನಾನೂ, ಮಾಯ ದೊಡ್ಡವರಾಗುತ್ತಿದ್ದಂತೆ, ಮಾತಿನ ಗುಂಪು ಕೂಡ ದೊಡ್ಡದಾಯಿತು. ನನ್ನ ಇಬ್ಬರು ಅಕ್ಕಂದಿರು ಲಕ್ಷ್ಮೀ ಮತ್ತು ಪಾರ್ವತಿ ಮತ್ತು ಮಾಯಾನ ಅಕ್ಕ ವಿನಯ ಸೇರಿಕೊಂಡರು.ಪರೀಕ್ಷೆ ಹತ್ತಿರ ಬಂತು ಎಂದರೆ ನಾವು ಐದು ಮಂದಿ ಅಂಗಳದಲ್ಲಿ ಮಾವಿನ ಮರದ ಕೆಳಗೆ, ಅಪ್ಪನಲ್ಲಿ ಓದುತ್ತೇವೆಂದು ಹೇಳಿ ಒಂಭತ್ತು ಗಂಟೆ ರಾತ್ರಿ ಕುಳಿತರೆ ಬೆಳಗ್ಗಿನ ಜಾವ ಮೂರು ಗಂಟೆಯವರೆಗೆ ಪಟ್ಟಾಂಗ ಹೊಡೆಯುತ್ತಿದ್ದೆವು. ನನ್ನ ಮೂರನೇ ಅಕ್ಕ ಲಕ್ಷ್ಮಿ ಅವಳ ಅಂತರಂಗದ ಕನಸುಗಳನ್ನು ಕಥೆಯ ರೂಪದಲ್ಲಿ ಹೇಳುತ್ತಿದ್ದಳು. ನಾವು ಎಲ್ಲರೂ ಅವಳ ಕನಸಿನ ಕಥೆಯನ್ನು ಕೇಳುತ್ತಾ ಮೈ ಮರೆಯುತ್ತಿದ್ದೆವು. ಹೀಗೆ ಹೇಳುತ್ತಾ ಹೋದರೆ ಹಲವಾರು ಮರೆಯಲಾರದ ಘಟನೆಗಳು ಇನ್ನೂ ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ.

ನಾವೆಲ್ಲರೂ ದೊಡ್ಡವರಾದಂತೆ ನನ್ನ ಅಕ್ಕಂದಿರಿಗೆ ಮದುವೆ ಆಯಿತು. ಹಾಗೇ ಗೆಳತಿ ಮಾಯಾಳ ಮದುವೆಯ ದಿನ ಬಂದೇ ಬಿಟ್ಟಿತು. ನನಗೆ ಇನ್ನೂ ನೆನಪಿದೆ, ಮಾಯಾಳ ಮದುವೆ ದಿನ ರಾತ್ರಿ ದುಃಖದಲ್ಲಿ ವಿಪರೀತ ಜ್ವರ ಬಂದಿತ್ತು.

ಹೀಗೆ ಹೇಳುತ್ತಾ ಹೋದರೆ ಮರೆಯಲಾರದ ಘಟನೆಗಳೊಂದಿಗೆ ನಾ ಕಳೆದಿರುವೆನು, ಬಾಲ್ಯವನ್ನು ಮಾಯಾಳ ಜೊತೆ.

ನಾ ಕಳೆದೆ ಬಾಲ್ಯವನ್ನು ಗೆಳತಿಯ ಜೊತೆ
ಕವಲೊಡೆಯಿತು. ನಮ್ಮ ಸ್ನೇಹ
ನಾ ಹಿಡಿದೆ ಬೇರೆ ದಾರಿಯನು
ಎಂದಿಗೂ ಸಿಗಲಾರದು ಆ ಪ್ರೇಮ
ಇಂದಿಗೂ ಹುಡುಕುತ್ತಿರುವೆನು ಆ ಸ್ನೇಹ ||

ಬಾಳು ಇರುವುದು ಬದುಕುವುದಕ್ಕಾಗಿ; ಬದುಕಿನಿಂದ ಬೆಳೆಯುವುದಕ್ಕಾಗಿ.—ತಿವರಾಮ ಕಾರಂತ

A Digital Mortgage Experience

Simple, Fast, and Affordable from Start to Finish

We are proud to offer:

- Historically Low Mortgage Rates
- Purchase, Refinance, and Cash-Out Programs
- In-House Processing and Underwriting
- Superior Customer Experience
- 18 Day Closing Guarantee*

About Us

Kwik Mortgage is a Fannie Mae approved seller licensed in 22 States. We have been in business for over two decades, starting with humble beginnings in our home base of Parsippany, New Jersey and expanding across the country all the way out to California. Though we have grown exponentially in our tenure, we maintain our small business values in everything we do. Becoming a client means becoming a member of the family.

We take you from quote to closing with ease. Let's get started today.

KWIK MORTGAGE

959 US 46 Suite 401, Parsippany, NJ 07054

Punit Shah | NMLS # 225001
Mortgage Loan Originator
732.259.8732
pshah@kwikmtg.com
kwikmtg.com

Licensed Mortgage Banker – NJ Banking and Insurance Department; | NMLS 138075 www.nmlsconsumeraccess.org
NOTICE: Some restrictions may apply. Programs are subject to change.
*Applies to standard purchase loans. Does not include non-agency jumbos, new construction, condos or co-ops. Property must not have any non-permitted improvements and must appraise at or above the sale price. Preliminary title work, CO, Survey should be rec'd within 15 days of initial application and all parties must be willing to schedule the closing at our requested time. A delay by client or any 3rd party scheduling conflict voids the guarantee.

ಪ್ರಾಯೋಜಕರು
ನವಚೇತನ

ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು!

ಬೃಂದಾವನದ ಎಲ್ಲ ಬಂಧು ಬಾಂಧವರಿಗೆ ಹೃತ್ಪೂರ್ವಕ ವಂದನೆಗಳು.

–ಇಂಚರ, ನಿನಾದ್, ಸುಪ್ರಿಯ, ಸತೀಶ್ ಹೊಸನಗರ

Best Wishes from

Satya
Divya
Dhyan
Dhanvi

Babu Rangaiah
Suja Nagappa
Dhanya Babu
Dhanush Babu

ಎಲ್ಲರಿಗೂ ಹೊಸ ವರ್ಷದ
ಶುಭಾಶಯಗಳು 2021

ಸೌರಭ ತಂಡಕ್ಕೆ ಶುಭಾಶಯಗಳು !
ಮಲ್ಲಿಕ್ ಪ್ರಸಾದ್, ಸಂಧ್ಯಾ, ಅನಘ, ಅದಿತಿ

ಗಿರೀಶ್ ಹೊಂಗಲ್, ರೂಪಾ ತೇರದಾಳ, ದಿಯಾ ಹೊಂಗಲ್, ಆದ್ಯಾ ಹೊಂಗಲ್

ಎಲ್ಲರಿಗೂ ಹೊಸವರ್ಷದ ಶುಭಾಶಯಗಳು 2021

ಹದಿನಾರು ತುಂಬಿದ ಷೋಡಶಿ ನಮ್ಮೀ ಬೃಂದಾವನ

ಸೌರಭವ ಸೂಸುತ ಈ ವರುಷ ಆಯ್ತು ನಮಗೆಲ್ಲಾ ಮಧುವನ

ನೂತನ ವರುಷ ತರಲಿ ಸಕಲರಿಗೂ ಆರೋಗ್ಯಕರ ತನುಮನ

ಆಗಲಿ ನಮಗೆಲ್ಲರಿಗೆ ಈ ಬೃಂದಾವನ ನ್ಯೂ ಜೆರ್ಸಿಯ ನಂದನವನ

ಹಾರ್ದಿಕ ಶುಭಾಶಯಗಳನ್ನು ಕೋರುವ "ಸಂತೃಪ್ತಿ" ನಿವಾಸಿಗಳಾದ
ಉಷಾ, ಪ್ರಸನ್ನ, ಸುಹಾಸ್, ಸ್ನೇಹ ಕುಮಾರ್ ಬ್ಯಾರಿ, ಮೈಕ್ ಬ್ಯಾರಿ ಹಾಗು "ಬೆಲ್ಲ"

Roopashi Melkote

Umesh Bhatt

Abhay Bhatt

Ajay Bhatt

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

Best wishes from

Arun Prabhakara

Sahana Arun

Akanksha Arun

Skanda Arun

Spandana Arun

ಬೃಂದಾವನದ ಎಲ್ಲ ಸಹಸದಸ್ಯರಿಗೆ ಹೊಸ ವರ್ಷದ ಶುಭಾಶಯಗಳು

ರಾಮಚಂದ್ರ, ರಾಧಿಕ, ಸುಮನ್ ಮತ್ತು ನಂದನ್ ಶಾಸ್ತ್ರಿ

Subramani Mottana * Usha Ganapathi * Inchara Mottana * Gahan Mottana

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

WISHING YOU AND YOURS A HAPPY, HEALTHY, PROSPEROUS, PEACEFUL NEW YEAR!

With Best Wishes From, Raghu, Asha , Nikhil & Namitha

Vidyadhara
Sangeetha
Saurav
Saanvi

ಎಲ್ಲರಿಗೂ ಹೊಸ ವರ್ಷದ
ಶುಭಾಶಯಗಳು 2021

Best Wishes from :
Shekar Jayaram, Soumya Shekhar
Poorvi Shekhar & Phurushotham Shekar

Best wishes from Sridhara Banavara Family
ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

ಅಶೋಕ್ ● ವನಮಾಲ ● ಅಮೂಲ್ಯ ● ಅನನ್ಯ ● ಆದಿತ್ಯ ಕಟ್ಟಿಮನಿ

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

Best wishes from

Prasanna

Anitha

Dhriti Kori

Best wishes from

Amruta Laxmisan

Ramesh Laxmisan

Uma & Maya

Dear friends: Stay safe, stay healthy & Stay positive...
Srisai & family

ದಾಶರಥಿ ಫಟ್ಟು ● ಸರಯೂ ಫಟ್ಟು ● ಮೇಘನಾ ಫಟ್ಟು
ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

Best Wishes from
Hema ● Dr. Pavan ● Ben Kantharaju

Sachin Murthy, Hemanth Satyamurthy, Padmini Hemanth and Riya Murthy

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

Nidhi, Sachi, Rekha & Girish Nimbekai

Best Wishess and Happy New Year 2021



ರಾಘವೇಂದ್ರ ಕುಂದಲಗುರ್ಕಿ ● ಶ್ರೀಪರ್ಣಿಕ ● ಶ್ರೇಯಾ ● ಸುಪ್ರಿಯಾ

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು 2021

Best Compliments from

Work Hard. Be Rewarded. Make a difference.

For a career opportunity as Financial Advisor or Manager

Thevan Theivakumar, CLF
Executive Partner, New Jersey General Office
Direct: 732-744-3763
Cell : 732-319-8758
ntheivakuma@ft.newyorklife.com

EOE M/F/D/V/SO

NEW YORK LIFE

New York Life Insurance Company 379 Thornall St., 8th Floor, Edison, NJ 08837

BEEKAY FINANCIAL SERVICES

Beekay Financial Services is a full-service firm providing Insurance and Financial Services. Our goal is to provide quality service and make recommendations that provide value to our individual, family and business clients.

BEST WISHES FROM

BEN KANTHARAJU

- *Life Insurance – Whole Life, Term Life & Universal Life insurance*
- *Personal Insurance – Auto, Home, Rental, Umbrella & Landlord*
- *Individual & Group Medical Insurance –Health, Dental & Vision plans*
- *Medicare Supplement and Advantage plans*
- *International Travel Insurance*

Address:
50 Cragwood Road, Suite No. 321, South Plainfield, NJ, 07080
Phone:
908-315-3956; 908-315-3955
Mobile:
732-672-9844
Fax:
908-315-3954
Email:
info@beekayonline.com
Website:
www.beekayonline.com

Best Wishes

NEW JERSEY MEDICAL EXPERTS

1740 Oak Tree Road , Edison, NJ 08820

Phone : 732-494-5000 Fax: 732-494-6698

www. njmedicalexperts.com | Email: expertclinicians@gmail.com

Services Offered :

- Primary care services
- Immunizations
- Employee physicals
- Vaccinations
- Sleep studies
- Blood circulation check
- Heart health studies
- Kidney diseases

Open Six days a week including all Saturdays. (Appointment request can be made through website)



Dr. Ram Bangalore, MD

Board Certified in Internal Medicine &
Pulmonary Sleep Medicine

Dr. Anil K Singh, MD

Board Certified in Internal Medicine &
Nephrology/Hypertension

With a combined experience of more than 30 years, we excel in taking care of all your health care needs. Our courteous staff and Expert physicians wish you a happy and healthy life.